ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 1 ಮಾರ್ಚ್ 2026
ಸಂಪುಟ 15, ಸಂಚಿಕೆ 342, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಕೋಲ್ಕತ್ತಾದಲ್ಲಿ ಇಂದು ವಿಂಡೀಸ್-ಭಾರತ ಕ್ವಾರ್ಟರ್

ಭಾರತಕ್ಕೆ ಮಾಡು ಇಲ್ಲವೇ ಮಡಿ ಪಂದ್ಯ, ಸೋತವರು ಹೊರಕ್ಕೆ

ಪಂದ್ಯ ಆರಂಭ: ಸಂಜೆ 7 ಗಂಟೆ

೧೨

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್: ಮೋದಿ

೦೫



ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ

ದಿನದ ಮಾತು

ಉತ್ತಮರ ನಡವಳಿಕೆ ವಿಚಿತ್ರ! ಅವರು ಸಂಪತ್ತನ್ನು ಹುಲ್ಲಿನಂತೆ ಹಗುರವಾಗಿ ಕಾಣುತ್ತಾರೆ. ಸಂಪತ್ತು ಬಂದಾಗ ಅದರ ಭಾರದಿಂದ ಬಾಗುತ್ತಾರೆ.

▲ಚಾಣಕ್ಯ ನೀತಿ

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ

ವಕ್ರದೃಷ್ಟಿ

◆ಎನ್.ರಾಮನಾಥ್

◆ಪುಟ ೬

ಕಿರುಸುದ್ದಿ

ರಾಗಾ ಜೈಲಲ್ಲಿ ಕೂರಲು ತಯಾರಾ?: ಕೇಜ್ರಿ ಪ್ರಶ್ನೆ

◆ಪುಟ ೩

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

◆ಪುಟ ೩

ಪ.ಬಂಗಾಳದ ಮತ ಪಟ್ಟಿ: 63 ಲಕ್ಷ ಹೆಸರು ಡಿಲೀಟ್

◆ಪುಟ ೩

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

◆ಪುಟ ೩

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿ | ಟೆಹ್ರಾನ್‌ನಿಂದ ಗಲ್ಫ್ ರಾಜಧಾನಿವರೆಗೆ ಕ್ಷಿಪಣಿ ಮಳೆ

ಖಮೇನಿ ನಿವಾಸ ಗುರಿ; ರಕ್ಷಣಾ ಸಚಿವ, ಕಮಾಂಡರ್ ಸಾವು | ಅಮೆರಿಕ ನೆಲೆಗಳ ಮೇಲೆ ಪ್ರತಿದಾಳಿ

ಮಧ್ಯಪ್ರಾಚ್ಯ ಸಮರಾಂಗಣ



◆**ಹೊಸದಿಲ್ಲಿ / ಟೆಹ್ರಾನ್ / ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ವರ್ಷಗಳಲ್ಲೇ ಅತ್ಯಂತ ಗಂಭೀರ ಉಲ್ಬಣ ಸನ್ನಿವೇಶ ನಿರ್ಮಾಣವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇತೃತ್ವದಲ್ಲಿ ಶನಿವಾರ ಇರಾನ್ ವಿರುದ್ಧ ಜಂಟಿ ಸೈನಿಕ ಕಾರ್ಯಾಚರಣೆ ಆರಂಭಗೊಂಡಿದೆ. ಟೆಹ್ರಾನ್ ಡೌನ್‌ಟೌನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ಸಂಭವಿಸಿದ್ದು, ಹೊಗೆಯ ಮೋಡಗಳ ದೃಶ್ಯಗಳು ವರದಿಯಾಗಿವೆ. ಇರಾನ್‌ನ ಶಾಲೆಯೊಂದರ ಮೇಲೆ ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಕನಿಷ್ಠ 51 ಮಕ್ಕಳು ಮೃತಪಟ್ಟಿದ್ದಾರೆ.

ಇಸ್ರೇಲ್ ಸೈನ್ಯವು ತಿಂಗಳುಗಳ ನಿಕಟ ಮತ್ತು ಜಂಟಿ ಯೋಜನೆ ನಂತರ ಈ ದಾಳಿ ನಡೆದಿರುವುದಾಗಿ ತಿಳಿಸಿದೆ. ಪೆಂಟಗನ್ ಕಾರ್ಯಾಚರಣೆಗೆ 'ಆಪರೇಷನ್ ಎಪಿಕ್ ಫ್ಯೂರಿ' ಎಂದು ಹೆಸರಿಟ್ಟಿದ್ದು, ಇಸ್ರೇಲ್ ಇದನ್ನು 'ರೋರಿಂಗ್ ಲಯನ್' ಅಭಿಯಾನವೆಂದು ವಿವರಿಸಿದೆ.

ಖಮೇನಿ ನಿವಾಸ ಗುರಿ: ದಾಳಿಯ ಮೊದಲ ಅಲೆಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಟೆಹ್ರಾನ್ ನಿವಾಸದ ಸಮೀಪದ ಪ್ರದೇಶ ಗುರಿಯಾಗಿತ್ತು. ಅವರು ಆ ವೇಳೆಯಲ್ಲಿ ಅಲ್ಲಿದ್ದರೇ ಎಂಬುದು ಸ್ಪಷ್ಟವಾಗಿಲ್ಲ. ಮಾಧ್ಯಮ ವರದಿಗಳ ಪ್ರಕಾರ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಮತ್ತು ಭದ್ರತಾ ವ್ಯವಸ್ಥೆಯ ಹಿರಿಯ ಅಧಿಕಾರಿಗಳ ಸಭೆ ನಡೆಯುತ್ತಿದ್ದ ಸ್ಥಳಗಳನ್ನೂ ಗುರಿಯಾಗಿಸಲಾಗಿದೆ.

ಕೆಲವು ಮಾಧ್ಯಮಗಳು ವರದಿ ಮಾಡಿರುವ ಪ್ರಕಾರ, ಅಯತೊಲ್ಲಾ ಅಲಿ ಖಮೇನಿ ಅವರು ಮೃತಪಟ್ಟಿದ್ದಾರೆ ಎನ್ನಲಾಗುತ್ತಿದೆ.

➡ಪುಟ ೪

ಅಮೆರಿಕ, ಇಸ್ರೇಲ್ ದಾಳಿ

- ಇರಾನ್ ಸುಪ್ರೀಂ ಲೀಡರ್ ಖಮೇನಿ ಕಚೇರಿ ಸುತ್ತಮುತ್ತ ಪ್ರದೇಶ ಗುರಿಯಾಗಿಸಿ ದಾಳಿ
- ಇರಾನ್‌ನ ವಿವಿಧ ನಗರಗಳಲ್ಲಿ ಭಾರೀ ಸ್ಫೋಟ, ಪಶ್ಚಿಮ ಇರಾನ್ ಸೈನಿಕ ತಾಣಗಳು
- ದಕ್ಷಿಣ ಇರಾನ್‌ನ ಬಾಲಕಿಯರ ಶಾಲೆಯಲ್ಲಿ 57 ಜನ ಸಾವು

ಇರಾನ್ ಪ್ರತಿದಾಳಿ

- ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ
- ಅಮೆರಿಕ ಸೇನಾ ನೆಲೆಗಳಾದ ಬಹ್ರೇನ್, ಕುವೈತ್ ಮತ್ತು ಕತಾರ್ ಸೇರಿ ವಿವಿಧೆಡೆ ದಾಳಿ

ಏನೆಲ್ಲಾ ಪರಿಣಾಮ?

- ಮಧ್ಯಪ್ರಾಚ್ಯದಲ್ಲಿ ವಿಮಾನ ಹಾರಾಟ ವ್ಯತ್ಯಯ
- ತಮ್ಮ ವಾಯುಪ್ರದೇಶ ತಾತ್ಕಾಲಿಕ ಮುಚ್ಚಿದ ಯುಎಇ ಮತ್ತು ಇರಾಕ್
- ಹೋರ್ಮುಜ್ ಜಲಸಂಧಿ ಪ್ರದೇಶದಲ್ಲಿ ಅಸ್ಥಿರತೆ ಉಂಟಾದರೆ ಜಾಗತಿಕ ತೈಲ ಮಾರುಕಟ್ಟೆಗೆ ಪೆಟ್ಟು



ಇರಾನ್ ರಾಜಧಾನಿ ಟೆಹರಾನ್ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ.



ಇಸ್ರೇಲ್, ಬಹ್ರೇನ್, ಕತಾರ್, ಯುಎಇ, ಸೌದಿ ಮೇಲೆ ಇರಾನ್ ದಾಳಿ

ಉದ್ವಿಗ್ನತೆಗೆ ಕಾರಣ?

- ಇತ್ತೀಚಿನ ಅಣು ಮಾತುಕತೆ ವಿಫಲವಾದದ್ದು ದಾಳಿಗೆ ಪ್ರಮುಖ ಕಾರಣ
- ಇರಾನ್ ಅಣು ಕಾರ್ಯಕ್ರಮ ಮತ್ತು ಕ್ಷಿಪಣಿ ಅಭಿವೃದ್ಧಿ ಕುರಿತು ಅಮೆರಿಕ ಆತಂಕ
- ಕಳೆದ ವರ್ಷ ನಡೆದ 12 ದಿನಗಳ ಯುದ್ಧದ ನಂತರವೂ ಮುಂದುವರಿದ ಉದ್ವಿಗ್ನತೆ

ಅಮೆರಿಕದ ಸೇನಾ ನೆಲೆಗಳೇ ಟಾರ್ಗೆಟ್

◆ಪುಟ ೩

ಖಮೇನಿ ನಾಪತ್ತೆ

ಆಯತೊಲ್ಲಾ ಅಲಿ ಖಮೇನಿ ದಾಳಿಗೂ ಮೊದಲು ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ ಮತ್ತು ದಾಳಿಯ ನಂತರವೂ ಕಾಣಿಸಿಲ್ಲ. ಜೂನ್‌ನ 12 ದಿನಗಳ ಯುದ್ಧದ ವೇಳೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ನಂಬಲಾಗಿತ್ತು.

ಬಂಕರ್‌ನಲ್ಲಿ ಭಾರತೀಯರು

ಇಸ್ರೇಲ್ ನಗರಗಳಲ್ಲಿ ಸೈರನ್ ಮೊಳಗುತ್ತಿದ್ದಂತೆ ಭಾರತೀಯ ಕಾರ್ಮಿಕರು ಮತ್ತು ಕುಟುಂಬಗಳು ಭೂಗತ ಬಂಕರ್‌ಗಳಲ್ಲಿ ಆಶ್ರಯ ಪಡೆದಿದ್ದಾರೆ. ಗುಜರಾತಿ ಸಮುದಾಯಕ್ಕೆ ಈವರೆಗೆ ಹಾನಿ ವರದಿಯಾಗಿಲ್ಲ. ಭಾರತ ಗಲ್ಫ್ ಪ್ರದೇಶದ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಸಂಯಮಕ್ಕೆ ಕರೆ ನೀಡಿದೆ.

ಇಂಧನ ಬೆಲೆ ಏರಿಕೆ ಆತಂಕ

ಕ್ರೈಸಿಸ್ ಗ್ರೂಪ್‌ನ ಇರಾನ್ ಪ್ರಾಜೆಕ್ಟ್ ನಿರ್ದೇಶಕ ಅಲಿ ವೈಝ್, ಯುದ್ಧ ವಿಸ್ತರಿಸಬಹುದೆಂದು ಎಚ್ಚರಿಸಿದ್ದಾರೆ. ಹೋರ್ಮುಜ್ ಜಲಸಂಧಿ ಮೂಲಕ ಜಗತ್ತಿನ ತೈಲ ಸರಬರಾಜಿನ ಸುಮಾರು ಐದನೇ ಭಾಗ ಸಾಗುತ್ತದೆ. ಅಲ್ಪ ಅಡಚಣೆ ಕೂಡ ಇಂಧನ ಬೆಲೆ ಏರಿಕೆಗೆ ಕಾರಣವಾಗಬಹುದು ಎಂದು ತಿಳಿಸಿದ್ದಾರೆ.

ಸುರಕ್ಷಿತವಾಗಿರಲು ಸೂಚನೆ

ಅಮೆರಿಕ ದಾಳಿಯ ನಂತರ ಇರಾನ್ ಮತ್ತು ಇಸ್ರೇಲ್‌ನಲ್ಲಿರುವ ಭಾರತೀಯರು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ.

ತಕ್ಷಣ ಉದ್ವಿಗ್ನತೆ ತಿಳಿಗೊಳಿಸಿ: ಭಾರತ

◆ಪುಟ ೪

ವಿಮಾನ ಹಾರಾಟ ವ್ಯತ್ಯಯ

◆ಪುಟ ೪

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ



◆**ಬೆಂಗಳೂರು:** ಶಿಕ್ಷಣಕ್ಷೇತ್ರವನ್ನು ಅವಲೋಕಿಸಿದಾಗ ಗುಣಮಟ್ಟದ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಶಿಕ್ಷಣ ದೊರಕುತ್ತಿದೆಯೇ ಎಂದು ಯೋಚಿಸಬೇಕಿದೆ. ಇದು ಶಿಕ್ಷಕರ ತಪ್ಪಲ್ಲ, ವ್ಯವಸ್ಥೆಯ ಪರಿಣಾಮವಾಗಿ ಜಾತಿ ವ್ಯವಸ್ಥೆ ಸಮಾಜದಲ್ಲಿ ಭದ್ರವಾಗಿ ನೆಲೆಯೂರಿರುವುದರಿಂದ ಶಿಕ್ಷಣದಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆ ಮಾಡಲು ಸಾಧ್ಯವಾಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಶನಿವಾರ ಅರಮನೆ ಮೈದಾನ ತ್ರಿಪುರವಾಸಿನಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ ಮಹಾ ಸಮ್ಮೇಳನದಲ್ಲಿ ಸಿಎಂ

➡ಪುಟ ೪



ಕರುಳು ಕಲಕುವ ಕೇರಳ ಸ್ಟೋರಿ

▶ ವಿನಾಯಕ ಭಟ್ಟ ಮೂರೂರು

ಲವ್ ಜಿಹಾದ್‌ಗೆ ಸಿಲುಕಿದ ಹಿಂದು ಹೆಣ್ಣುಮಕ್ಕಳ ಸ್ಥಿತಿ ಯಾರಿಗೂ ಬೇಡ. ಇತ್ತ ಮನೆಯಲ್ಲೂ ನಂಬಿಕೆ ಕಳೆದುಕೊಂಡು, ಅತ್ತ ಕಟ್ಟಿಕೊಂಡವನೂ ನಂಬಿಕೆ ಉಳಿಸಿಕೊಳ್ಳದೆ, ಅಲ್ಲೂ ಸಲ್ಲಲಾಗದೆ, ಇಲ್ಲೂ ಸಲ್ಲದ ತ್ರಿಶಂಕು ಸ್ಥಿತಿ.

ಆ ಹಿಂಸೆ ಯಾರಿಗೂ ಬೇಡ. ಕೆಲವರು ಅನಿವಾರ್ಯವಾಗಿ ಒಗ್ಗಿ ಕೊಂಡರೆ ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದಿಲ್ಲವಾದರೆ ಕೊಲೆಯಾಗುತ್ತಾರೆ. ಇದ್ಯಾವುದನ್ನೂ ಮಾಡಿಕೊಳ್ಳಲಾಗದವರು ಮಕ್ಕಳನ್ನು ಹೆರುವ ಯಂತ್ರವಾಗುತ್ತಾರೆ. ಲವ್ ಜಿಹಾದ್‌ಗೊಳಗಾದ ಹಿಂದು ಹೆಣ್ಣುಮಕ್ಕಳ ಇಂತಹ ಗೊಂದಲದ ಕರುಣಾಜನಕ ಸ್ಥಿತಿಯನ್ನು ಕೇರಳ ಸ್ಟೋರಿ 2 ಸಿನಿಮಾ ಕಟ್ಟಿಕೊಡುತ್ತದೆ. ಕೇರಳ ಸ್ಟೋರಿ ಸಿನಿಮಾ ಕೇರಳವನ್ನೆ ಗಮನದಲ್ಲಿರಿಸಿಕೊಂಡು, ಲವ್ ಜಿಹಾದ್ ನಡೆಯುವ ಬಗೆಯನ್ನು ತೋರಿಸಿತ್ತು. ಕೇರಳ ಸ್ಟೋರಿ 2 ಸಿನಿಮಾ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಕೇರಳದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಸಿನಿಮಾ ಕತೆ ರೂಪುಗೊಂಡಿದೆ. ಒಬ್ಬ ಮುಸ್ಲಿಂ ಹುಡುಗ ತನ್ನ ಹೆಸರು-ಧರ್ಮವನ್ನು ಸಂಪೂರ್ಣ ಮರೆಮಾಚಿ ಹಿಂದು ಹುಡುಗಿಯನ್ನು ಪ್ರೀತಿಸುತ್ತಾನೆ.

➡ಪುಟ ೪

ಕಿರುಸುದ್ದಿ

ಮ್ಯಾರಥಾನ್ ಓಟ ಇಂದು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ಮತ್ತು ಧಾರವಾಡ ಜಿಲ್ಲಾ ಪೊಲೀಸ್ ಸಹಯೋಗದಲ್ಲಿ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಎಂಬ ಶೀರ್ಷಿಕೆಯಡಿ ಫಿಟ್ನೆಸ್ ಫಾರ್ ಆಲ್, ಡ್ರಗ್ ಮುಕ್ತ ಕರ್ನಾಟಕ ಮತ್ತು ಸೈಬರ್ ಕ್ರೈಂ ಜಾಗೃತಿ ವಿಷಯಗಳ ಧ್ಯೇಯವಾಕ್ಯದೊಂದಿಗೆ ಮಾರ್ಚ್ 1ರಂದು ಬೆಳಗ್ಗೆ 7 ಗಂಟೆಗೆ ಹುಬ್ಬಳ್ಳಿ ತಾಲೂಕಿನಿಂದ 5 K ಮತ್ತು 10 K ಮ್ಯಾರಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದೆ.

ಪಿಎಚ್‌ಡಿ ಪ್ರದಾನ



ಧಾರವಾಡ: ಪತ್ರಿಕೋದ್ಯಮ ವಿಭಾಗದ ಸಂಶೋಧನಾರ್ಥಿ ಸಂದೀಪ ಮಂಡಿಸಿದ ಕವರೇಜ್ ಆಫ್ ಸೈಬರ್ ಕ್ರೈಂ; ಆ ಕಂಪಾರೇಟಿವ್ ಸ್ಟಡಿ ಅಮಂಗ್ ಕನ್ನಡ ಆ್ಯಂಡ್ ಇಂಗ್ಲೀಷ್ ಡೈಲೀಸ್ ಎಂಬ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಪ್ರೊ. ಜೆ.ಎಂ.ಚಂದುನವರ ಮಾರ್ಗದರ್ಶಕರಾಗಿದ್ದರು.

358 ವಿದ್ಯಾರ್ಥಿಗಳು ಗೈರು

ಧಾರವಾಡ: ಪ್ರಸಕ್ತ 2025-26ನೇ ಸಾಲಿನ ಪದವಿಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಜಿಲ್ಲೆಯ 43 ಪರೀಕ್ಷಾ ಕೇಂದ್ರಗಳಲ್ಲಿ ಅತ್ಯಂತ ಶಾಂತಿ ಹಾಗೂ ಸುಗಮವಾಗಿ ಜರುಗಿದವು. ಶನಿವಾರ ನಡೆದ ಕನ್ನಡ ಪರೀಕ್ಷೆಗೆ 17,892 ವಿದ್ಯಾರ್ಥಿಗಳು ನೋಂದಾಯಿಸಿದ್ದು, 17,534 ವಿದ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿ, 358 ವಿದ್ಯಾರ್ಥಿಗಳು ಗೈರು ಉಳಿದ್ದಾರೆ. ಪರೀಕ್ಷೆಯಲ್ಲಿ ಯಾವುದೇ ಅಕ್ರಮ ಹಾಗೂ ನಕಲು ನಡೆದಿಲ್ಲ, ಬಹುಮುಖ್ಯವಾಗಿ ಯಾವುದೇ ವಿದ್ಯಾರ್ಥಿ ಡಿಬಾರ್ ಆಗಿರುವ ಘಟನೆಯೂ ನಡೆದಿಲ್ಲ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಬೆಸ್ಟ್ ಆಫ್ ಇಲೆವನ್ ಪ್ರಶಸ್ತಿ



ಕಲಘಟಗಿ: ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಥಮ ವರ್ಷದ ಕಲಾ ಪದವಿ ವಿದ್ಯಾರ್ಥಿ ಸಚಿನ್ ಬ ದೊಡ್ಡಮನಿ ಅವರು ಇತ್ತೀಚೆಗೆ ಚಾಮರಾಜಪೇಟೆಯ ಕ್ರೀಡಾ ಸಂಕೀರ್ಣದಲ್ಲಿ ನ್ಯೂ ಫ್ರೆಂಡ್ಸ್ ಕ್ಲಾಸಿಕ್ ಇವರು ಸಂಘಟಿಸಿದ ರಾಷ್ಟ್ರೀಯ ದೇಹದಾರ್ಢ್ಯ ಮತ್ತು ಅಂಗಸೌಷ್ಠವ ಸ್ಪರ್ಧೆಯಲ್ಲಿ ಭಾಗವಹಿಸಿ ಬೆಸ್ಟ್ ಆಫ್ ಇಲೆವೆನ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಈ ವಿದ್ಯರ್ಥಿ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ, ಕಾರ್ಮಿಕ ಸಚಿವರಾದ ಸಂತೋಷ್ ಎಸ್. ಲಾಡ್ ಹಾಗೂ ಕಾಲೇಜಿನ ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹರ್ಷವ್ಯಕ್ತಪಡಿಸಿದ್ದಾರೆ.

ಇಂದು ಪ್ರಶಸ್ತಿ ಪ್ರದಾನ

ಧಾರವಾಡ: ನಾಡಿನ ಶ್ರೇಷ್ಠ ಸಂಶೋಧಕ ಡಾ. ಬಿ.ವಿ.ಶಿರೂರ 85ನೇ ಜನ್ಮದಿನ, ದತ್ತಿ ಉಪನ್ಯಾಸ, ಬಿ.ವಿ.ಶಿರೂರ ಸಂಶೋಧನಾ ಪ್ರಶಸ್ತಿ ಪ್ರದಾನ ಹಾಗೂ ಗ್ರಂಥ ಬಿಡುಗಡೆ ಸಮಾರಂಭ ಮಾ.1ರಂದು ಸಂಜೆ 6ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಜರುಗಲಿದೆ. ರಾಯಚೂರಿನ ವಿಶ್ರಾಂತ ಪ್ರಧ್ಯಾಪಕ ಡಾ. ಚನ್ನಬಸಪ್ಪಯ್ಯ ಹಿರೇಮಠ ಅವರಿಗೆ ಡಾ.ಬಿ.ವಿ.ಶಿರೂರ ಅವರಿಗೆ ಸಂಶೋಧನಾ ಪ್ರಶಸ್ತಿ ಡಾ. ಲಕ್ಷ್ಮಣ ತೆಲಗಾವಿ ಪ್ರದಾನ ಮಾಡುವರು. ಕಲಬುರ್ಗಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ ಅಧ್ಯಕ್ಷತೆ ವಹಿಸಲಿದ್ದು, ಪ್ರೊ. ಬಿ.ವಿ.ಶಿರೂರ ಪಾಲ್ಗೊಳ್ಳಲಿದ್ದಾರೆ.

ವಿಜ್ಞಾನ ಪ್ರದರ್ಶನ ಇಂದು

ಧಾರವಾಡ: ಅಂತರಿಕ್ಷ ವಿಜ್ಞಾನ ಕಲಿಕಾ ಸಾಮಗ್ರಿಗಳ ಪ್ರದರ್ಶನ ಮಾ.1ರಿಂದ 3ರವರೆಗೆ ಅರುಣ್ ಚರಂತಿಮಠ ಫೌಂಡೇಶನ್‌ನ ಆರ್ಕಿಡ್ ಇಂಟರ್ ನ್ಯಾಷನ್ ಸ್ಕೂಲ್‌ನಲ್ಲಿ ಹಮ್ಮಿಕೊಂಡಿದ್ದಾಗಿ ಫೌಂಡೇಶನ್ ಅಧ್ಯಕ್ಷ ಅರುಣ್ ಚರಂತಿಮಠ ಹೇಳಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ.1ರಂದು ಮಧ್ಯಾಹ್ನ 3.30ಕ್ಕೆ ಪ್ರದರ್ಶನ ಪ್ರಾರಂಭಗೊಳ್ಳಲಿದ್ದು, ಇಸ್ರೋದ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್ ಉದ್ಘಾಟಿಸಲಿದ್ದು, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಪಾಲ್ಗೊಳ್ಳುವರು. ಮಾ.2ರ ಮಧ್ಯಾಹ್ನ 3ರಿಂದ ಸಂಜೆ 6ರ ವರೆಗೆ, ಮಾ.3ರ ಮಧ್ಯಾಹ್ನ 12 ರಿಂದ ರಾತ್ರಿ 9ರವರೆಗೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ವೀಕ್ಷಣೆಗೆ ಉಚಿತ ಪ್ರವೇಶವಿದೆ ಎಂದರು.

ಆರ್ಕಿಡ್ ಇಂಟರ್ ನ್ಯಾಷನಲ್ ಸ್ಕೂಲ್ ಪ್ರತಿನಿಧಿ ಸೆಬಿನ್ ಸೆಬಾಸ್ಟಿಯನ್ ಮಾತನಾಡಿ, ನೈಜ ಪ್ರಪಂಚದ ಉಪಗ್ರಹ ವಿಜ್ಞಾನ, ಬಾಹ್ಯಾಕಾಶ ಯಾತ್ರೆ, ಚಿಂತನೆ ಪರಿಚಯಿಸಲು ರಚನಾತ್ಮಕ, ಭವಿಷ್ಯ-ಕೇಂದ್ರಿತ ಬಾಹ್ಯಾಕಾಶ ಶಿಕ್ಷಣದ ಪಠ್ಯಕ್ರಮ ಒಳಗೊಂಡಿದೆ ಎಂದರು. ಗ್ರಹಗಳು, ನಕ್ಷತ್ರಗಳು, ನಕ್ಷತ್ರಪುಂಜಗಳ ತಲ್ಲೀನಗೊಳಿಸುವ ಅನುಭವ ನೀಡುವ ಪೋರ್ಟಬಲ್ ತಾರಾಲಯ, ಸಂವಾದಾತ್ಮಕ ವಿಜ್ಞಾನ-ತಂತ್ರಜ್ಞಾನ ಚಟುವಟಿಕೆ, ಖಗೋಳಶಾಸ್ತ್ರ, ಬಾಹ್ಯಾಕಾಶ ಕಲಿಕಾ ಸಾಮಗ್ರಿಗಳ ಪ್ರದರ್ಶನ ಇರಲಿದೆ ಎಂದು ತಿಳಿಸಿದರು.

ಶಂಕರಪ್ಪ ಮೆಟಗೊಡ್ಡಿ ನಿಧನ



ಧಾರವಾಡ: ತಾಲೂಕಿನ ತಡಕೋಡ ಗ್ರಾಮದ ನಿವಾಸಿ ಶಂಕರಪ್ಪ ಶಿವಲಿಂಗಪ್ಪ ಮೆಟಗೊಡ್ಡಿ(78) ಗುರುವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಳಗವಿದೆ.



ಉಪ್ಪಿನಬೆಟಗೇರಿ: ಫೆ 28 ರಿಂದ ಮಾರ್ಚ 17ರವರೆಗೆ ನಡೆಯುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ಉಪ್ಪಿನಬೆಟಗೇರಿ ಶ್ರೀ ಗುರು ವಿರುಪಾಕ್ಷೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಾರಿಗೆ ಇಲಾಖೆ ನೀಡಿದ ಬಸ್‌ನಲ್ಲಿ ಗರಗ ಶ್ರೀ ಗುರು ಮಡಿವಾಳೇಶ್ವರ ಕಾಲೇಜಿನಲ್ಲಿ ನಡೆಯುವ ಪರೀಕ್ಷಾ ಕೇಂದ್ರಕ್ಕೆ ಶನಿವಾರ ತೆರಳಿದರು. ಶಾಲಾ ಮುಖ್ಯ ಶಿಕ್ಷಕ ಎ.ಎಂ. ಮುಲ್ಲಾ, ಉಪನ್ಯಾಸಕಿ ಚೈತ್ರಾ, ಗೊಂಡಗೂವಿ, ವಿದ್ಯಾಶ್ರೀ ಮೇದಾರ ಇತರರಿದ್ದರು.

ಸಿಬ್ಬಂದಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲಿ

ಹುಬ್ಬಳ್ಳಿ: ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಯಾರ ಹಸ್ತಕ್ಷೇಪವನ್ನೂ ಸಹಿಸಲ್ಲ, ಯಾರ ಒತ್ತಡಕ್ಕೆ ಮಣಿಯದೆ ಸಿಬ್ಬಂದಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ ಎಂದು ಸ್ಲಂ ಬೋರ್ಡ್ ಅಧ್ಯಕ್ಷ ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ನಗರದ ಗಣೇಶ ಪೇಟೆಯಲ್ಲಿ ನೂತನ ತಾಲೂಕು ಆರೋಗ್ಯ ಕಚೇರಿ ಉದ್ಘಾಟಿಸಿ ಮಾತನಾಡಿ, ಹುಬ್ಬಳ್ಳಿ ಪೂರ್ವ ಕ್ಷೇತ್ರದಲ್ಲಿ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಈಗಾಗಲೇ 6 ನಮ್ಮ ಕ್ಲಿನಿಕ್, 4 ನಗರ ಆರೋಗ್ಯ ಕೇಂದ್ರ, 2 ಪಾಲಿಕೆ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ಮತ್ತೆ ಇನ್ನೂ 5 ನಮ್ಮ ಕ್ಲಿನಿಕ್ ಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರವೇ ತಾಲೂಕು ಆಸ್ಪತ್ರೆ ಕೂಡ ಘೋಷಣೆ ಆಗಲಿದೆ ಈ ಎಲ್ಲಾ ಆಸ್ಪತ್ರೆಗಳಿಂದ ಬಡ ಜನರಿಗೆ ಆರೋಗ್ಯಕರ ಚಿಕಿತ್ಸೆ ನೀಡಲು ಸಹಾಯವಾಗುತ್ತಿದೆ ಎಂದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್.ಎಂ. ಹೊನಕೇರಿ ಮಾತನಾಡಿದರು. ಪಾಲಿಕೆ ಸದಸ್ಯ ಇಲಿಯಾಸ್ ಮನೀಯಾರ, ಆಸೀಫ್ ಬಳ್ಳಾರಿ, ರಶೀದ್ ಭೋಲಾಬಾಯಿ, ನಾಸೀರ್ ಅಸುಂಡಿ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ, ಡಾ. ಪರಶುರಾಮ, ಡಾ. ಮಹೇಶ್ ಚಿತ್ತರಗಿ, ಡಾ. ಮಹಾಂತೇಶ ಅಡ್ವಾಣಿ, ಡಾ. ಫಾರುಕ್, ಡಾ. ಶ್ರೀಕಾಂತ್ ಅನೇಕರು ಇದ್ದರು. ತಾಲೂಕು ಆರೋಗ್ಯಾಧಿಕಾರಿ ಡಾ. ಹುಲಗಣ್ಣ ಇಂಜಗನರಿ ಪ್ರಾಸ್ತಾವಿಸಿದರು. ಡಾ. ಬಸವರಾಜ ಕಮಡೊಳ್ಳಿ ಸ್ವಾಗತಿಸಿದರು. ಆರ್‌ಬಿಎಸ್‌ಕೆ ತಂಡ, ಪಿಎಚ್ಸಿಒ, ಸಿಎಚ್‌ಒ, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ನಗರದ ಗಣೇಶ ಪೇಟೆಯಲ್ಲಿ ನೂತನ ತಾಲೂಕು ಆರೋಗ್ಯ ಕಚೇರಿ ಉದ್ಘಾಟನೆ ನಡೆಯಿತು.

ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಎಂ.ಆರ್. ಪಾಟೀಲ

ಗ್ರಾಮೀಣ ರಸ್ತೆ ಅಭಿವೃದ್ಧಿಗೆ ವೇಗ

ಕುಂದಗೋಳ: ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತಷ್ಟು ವೇಗ ನೀಡುವ ನಿಟ್ಟಿನಲ್ಲಿ ವಿವಿಧ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಶಾಸಕ ಎಂ.ಆರ್. ಪಾಟೀಲ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಅವರು ಶನಿವಾರ ತಾಲೂಕಿನ ಹಿರೇಗುಂಜಳ, ಕೊಡ್ಲಿವಾಡ, ಯರೇಬೂದಿಹಾಳ, ಬಾಗವಾಡ, ಹೊಸಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ನಡೆದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಲೆಕ್ಕಶೀರ್ಷಿಕೆ 5054ರ ಅಡಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಒಂದು ಕೋಟಿ ರೂ. ವೆಚ್ಚದಲ್ಲಿ ಹಿರೇಗುಂಜಳ-ಲಕ್ಷೇಶ್ವರ ರಸ್ತೆ ,ಒಂದು ಕೋಟಿ ವೆಚ್ಚದಲ್ಲಿ ಕೊಡ್ಲಿವಾಡ-ಕೋಳಿವಾಡ ರಸ್ತೆ ಅಭಿವೃದ್ಧಿ ಕಾಮಗಾರಿ, 25 ಲಕ್ಷ ರೂ. ವೆಚ್ಚದಲ್ಲಿ ಬಾಗವಾಡ-ಮಾಡೊಳ್ಳಿ ಸೇತುವೆ ನಿರ್ಮಾಣ, 30 ಲಕ್ಷ ರೂ. ವೆಚ್ಚದಲ್ಲಿ ಯರೇಬೂದಿಹಾಳ-ಸಂಶಿ ರಸ್ತೆ ಕೂಡುವಲ್ಲಿ ಸಿಡಿ ನಿರ್ಮಾಣ ಹಾಗೂ ಹೊಸಳ್ಳಿ ಗ್ರಾಮದಲ್ಲಿ 6 ಲಕ್ಷ ರೂ. ಅನುದಾನದಲ್ಲಿ ಸಿಸಿ ರಸ್ತೆ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ ಎಂದು ವಿವರಿಸಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಸಹಕಾರದಿಂದ ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದು, ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಲಾಗುತ್ತದೆ ಎಂದರು.

ತಾಲೂಕಿನ ಸಮಗ್ರ ಅಭಿವೃದ್ಧಿಯೇ ನನ್ನ ಗುರಿಯಾಗಿದ್ದು, ಸಂಪೂರ್ಣ ಕಾಮಗಾರಿ ಪೂರ್ಣಗೊಳ್ಳಲಿವೆ. ಎಲ್ಲ ಮೂಲಭೂತ ಸೌಕರ್ಯಗಳನ್ನು ಹಂತವಾಗಿ ಒದಗಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಮುಂಖಡರಾದ ಮಾಲತೇಶ ಶ್ಯಾಗೋಟಿ, ನಾಗನಗೌಡ ಸಾತ್ಮಾರ, ಪಿ. ಎಂ. ಕೊಟ್ರಶೇಟ್ಟರ, ಈರಣ್ಣ ಗೌಡನಾಯ್ಕರ, ಶರಣಪ್ಪ ಶರೆಗಾರ, ಗಂಗಾಧರಯ್ಯ ಹಿರೇಮಠ, ಬಸವರಾಜ ಗಂಭೀರ, ಸತೀಶ ಶ್ಯಾಗೋಟಿ, ನಿಂಗಪ್ಪ ನಡುವಿನಹಳ್ಳಿ,ದೇವಪ್ಪ ಅಣ್ಣಿಗೇರಿ, ಚಂದ್ರಶೇಖರ ಬಿಸರೊಟ್ಟಿ,ಅಣ್ಣಪ್ಪಗೌಡ ಪಾಟೀಲ, ಗಂಗಾಧರ ದೊಡ್ಡಮನಿ, ಶಶಿಧರ ಸಣ್ಣಲಿಂಗಣ್ಣವರ, ವೀರಪ್ಪಶೆಟ್ರ ಕಡಕೋಳ ಶೇಖಪ್ಪ ಕಮಡೊಳ್ಳಿ, ಚನ್ನಬಸಪ್ಪ ಹೂಂಬಿ, ಭರಮರಡ್ಡಿ ಗೋವಣ್ಣವರ, ಗಿರೀಶ ಮಲ್ಲಾಪೂರ, ಮುತ್ತಪ್ಪ ಬಳಿಗೇರ, ಶಾಂತಯ್ಯ ಹಿರೇಮಠ, ಶಂಕರಗೌಡ ಮರಿಗೌಡ್ರ, ಚನ್ನಬಸನಗೌಡ ಪಾಟೀಲ, ಬಾಬುಗೌಡ ಯರಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಾಮಗಾರಿ ಶೀಘ್ರ ಆರಂಭ

ಗ್ರಾಮಸ್ಥರ ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸಿ ರಸ್ತೆ ಹಾಗೂ ಬ್ರಿಜ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಕೇಂದ್ರ ಸರ್ಕಾರದ 33 ಕೋಟಿ ರೂ. ಅನುದಾನದಲ್ಲಿ 20 ಸೇತುವೆಗಳ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ. ಜೊತೆಗೆ ಕೇಂದ್ರ ರಸ್ತೆ ನಿಧಿ ಯೋಜನೆಯಡಿ 25 ಕೋಟಿ ರೂ. ಅನುದಾನ ತರಲಾಗಿದ್ದು, ಇನ್ನೂ ಹಲವು ಗ್ರಾಮಗಳ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ವೈಜ್ಞಾನಿಕ ಬೆಳವಣಿಗೆಗಳ ಕಾರ್ಯಾಗಾರ ಉದ್ಘಾಟನೆ

ಹುಬ್ಬಳ್ಳಿ: ನ್ಯಾನೊತಂತ್ರಜ್ಞಾನದಲ್ಲಿನ ಇತ್ತೀಚಿನ ಆವಿಷ್ಕಾರಗಳು ಮತ್ತು ವೈಜ್ಞಾನಿಕ ಬೆಳವಣಿಗೆಗಳ ಕುರಿತಾಗಿ ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಅಡ್ವಾನ್ಸಡ್ ಸೈನ್ಸ್ ಸಹಯೋಗದಲ್ಲಿ ಬಯೋಟೆಕ್ನಾಲಜಿ ಸೆಮಿನಾರ್ ಸಭಾಂಗಣದಲ್ಲಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಾಧ್ಯಾಪಕ ಹಾಗೂ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಸಾಮರ್ಥ್ಯ ಮತ್ತು ಅಂತರ್ ಶಿಸ್ತೀಯ ಸಹಯೋಗವನ್ನು ಬಲಪಡಿಸುವ ಉದ್ದೇಶದೊಂದಿಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಭಾರತ ರತ್ನ ಪ್ರೊ. ಸಿ. ವಿ. ರಾಮನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು. ಡಾ. ರಾಜಶ್ರೀ ಹೊದ್ದೂರ್ ಸ್ವಾಗತಿಸಿದರು. ಕಾರ್ಯಾಗಾರದಲ್ಲಿ ಬೆಂಗಳೂರಿನ ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸಡ್ ಸೈಂಟಿಫಿಕ್ ರಿಸರ್ಚ್ (ಜೆಎನ್ ಸಿಎಎಸ್‌ಆರ್) ಸಂಸ್ಥೆಯ ವಿಜ್ಞಾನಿಗಳು ಉಪನ್ಯಾಸಕರಾಗಿ ಭಾಗವಹಿಸಿದ್ದರು. ಹುಬ್ಬಳ್ಳಿಯಕೆಎಲ್‌ಇತಾಂತ್ರಿಕವಿಶ್ವವಿದ್ಯಾಲಯ ಬೆಂಗಳೂರಿನ ಜೆಎನ್‌ಸಿಎಎಸ್‌ಆರ್‌ನೊಂದಿಗೆ ಶಿಕ್ಷಣ ಮತ್ತು ಸಂಶೋಧನೆ ಕುರಿತು ಒಡಂಬಡಿಕೆಯನ್ನು ಹೊಂದಿದೆ. ಜೆಎನ್ ಸಿಎಎಸ್‌ಆರ್‌ನ ಪ್ರಾಧ್ಯಾಪಕ ಪ್ರೊ. ಗಿರಿಧರ್ ಕುಲಕರ್ಣಿ ಅವರು ಆರೋಗ್ಯ ರಕ್ಷಣೆಗಾಗಿ ಸುಧಾರಿತ ನ್ಯಾನೋ -ಆಧಾರಿತ ಸಾಧನಗಳು ಕುರಿತು ಮಾತನಾಡಿದರು. ಆರೋಗ್ಯ ರಕ್ಷಣೆ ಮತ್ತು ರೋಗನಿರ್ಣಯದಲ್ಲಿ ಸಂವೇದಕಗಳ ಪಾತ್ರ ಕುರಿತು ಉಪನ್ಯಾಸ ನೀಡಿದರು. ಜೆಎನ್ ಸಿಎಎಸ್‌ಆರ್‌ನ ಇನ್ನೊರ್ವ ಪ್ರಾಧ್ಯಾಪಕ ಪ್ರೊ. ಈಶ್ವರಮೂರ್ತಿ ಮುತ್ತುಸಾಮಿ, ನ್ಯಾನೋ ಔಷಧ ವಿತರಣಾ ವ್ಯವಸ್ಥೆಗಳ ಕುರಿತು ಚರ್ಚಿಸಿದರು . ಪರಿಣಾಮಕಾರಿ ಔಷಧ ವಿತರಣಾ ವಾಹನಗಳಾಗಿ ನ್ಯಾನೊಮೆಟೀರಿಯಲ್‌ಗಳ ಹೆಚ್ಚುತ್ತಿರುವ ಮಹತ್ವವನ್ನು ವಿವರಿಸಿದರು. ಪ್ರೊ. ಸುಬಿ ಜಾಕೋಬ್ ಜಾರ್ಜ್, ಅಣುವಿನ ಆಚೆಗಿನ ರಸಾಯನಶಾಸ್ತ್ರ: ಸುಪ್ರಾಮೋಲಿಕ್ಯುಲರ್ ರಸಾಯನಶಾಸ್ತ್ರದ ಕುರಿತು ಮಾತನಾಡಿದರು. ನ್ಯಾನೋ ಸಾಮಗ್ರಿಗಳ ಸಂಕೀರ್ಣತೆ ಮತ್ತು ಸುಧಾರಿತ ನ್ಯಾನೋ ವಸ್ತುಗಳನ್ನು ವಿನ್ಯಾಸಗೊಳಿಸುವ ವಿಧಾನ ಮತ್ತು ಮಹತ್ವ ಕುರಿತು ಮಾತನಾಡಿದರು. ವಿವಿಧ ಸಂಸ್ಥೆಗಳ ಹಲವಾರು ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಶಿಕ್ಷಣ ತಜ್ಞರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು . ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಡೀನ್ ಪ್ರೊ. ಎನ್. ಎಚ್. ಅಯಾಚಿತ್ ಮತ್ತು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕ ಪ್ರೊ. ಎಸ್. ಎಂ. ಶಿವಪ್ರಸಾದ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಡಾ. ಜಬಿನ್ ಬಾಗೇವಾಡಿ ಮತ್ತು ಡಾ. ರಾಜಶ್ರೀ ಹೊದ್ದೂರು ಸಂಯೋಜಿಸಿದರು. ಡಾ. ಎಸ್. ಎನ್. ಮಠದ ವಂದಿಸಿದರು.



ಶ್ರೇಷ್ಠ ಭಾರತ ನಿರ್ಮಾಣಕ್ಕೆ ಸಂಕಲ್ಪಿಸಿ: ಸ್ವಾಮೀಜಿ

ಉಪ್ಪಿನಬೆಟಗೇರಿ: ಎಲ್ಲಾ ಕ್ಷೇತ್ರಗಳಲ್ಲಿ ಮೇರು ಸಾಧನೆಯನ್ನು ಸಾಧಿಸಿ ವಿಶ್ವದ ಸಮಸ್ತ ರಾಷ್ಟ್ರಗಳಿಗೂ ಮೀರಿದ ಅಗ್ರಸ್ಥಾನ ಪಡೆಯುವಂತೆ ಶ್ರೇಷ್ಠ ಭಾರತ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಸಂಕಲ್ಪ ಮಾಡಬೇಕೆಂದು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಬಾಳೆಹೊನ್ನೂರಿನ ಶ್ರೀಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ ಹಾಗೂ ಅಮ್ಮಿನಬಾವಿಯ ಗುರುಶಾಂತಲಿಂಗ ಶಿವಾಚಾರ್ಯ ಶಿಕ್ಷಣ ಪ್ರತಿಷ್ಠಾನಗಳ ಜಂಟಿ ಆಶ್ರಯದಲ್ಲಿ ಅಮ್ಮಿನಬಾವಿ ಗ್ರಾಮದ ಸುಶಿಲಾತಾಯಿ ಅಜ್ಜಯ್ಯ ಹಿರೇಮಠ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಚಿಣ್ಣರ ಸಾಂಸ್ಕೃತಿಕ ಹಬ್ಬ ಉದ್ಘಾಟಿಸಿ ಮಾತನಾಡಿದರು. ಭ್ರಷ್ಟಾಚಾರವು ನಿರ್ಮೂಲನೆಯಾದಾಗ ಮಾತ್ರ ಶ್ರೇಷ್ಠ ಭಾರತ ನಿರ್ಮಾಣದ ಕೆಲಸ ಅತ್ಯಂತ ಸುಲಭವಾಗುತ್ತಿದ್ದು, ಭವಿಷ್ಯದಲ್ಲಿ ರಾಷ್ಟ್ರವನ್ನು ಮುನ್ನಡೆಸಲಿರುವ ವಿದ್ಯಾರ್ಥಿಗಳೆಲ್ಲರೂ ಉತ್ಕೃಷ್ಟ ಮಾನವ ಸಂಪನ್ಮೂಲವಾಗಬೇಕಾದ ಅಗತ್ಯತೆಯಿದೆ ಎಂದರು.

ಅಂಕಗಳ ಬೆನ್ನುಹತ್ತಿ ಕೇವಲ ಪರೀಕ್ಷಾ ದೃಷ್ಟಿಯಿಂದ ಮಾತ್ರ ಪಠ್ಯದ ವಿಷಯಗಳನ್ನು ಅಧ್ಯಯನ ಮಾಡದೇ ಆಳವಾದ ಜ್ಞಾನಾರ್ಜನೆಯ ದೃಷ್ಟಿಕೋನದಿಂದ ಎಲ್ಲಾ ವಿಷಯಗಳ ವ್ಯಾಸಂಗವನ್ನು ಮಾಡಬೇಕು ಎಂದರು.

ಮಾಜಿ ಮಂಡಳ ಪಂಚಾಯತಿಯ ಪ್ರಧಾನ ಎಂ.ಸಿ.ಹುಲ್ಲೂರ, ನಿವೃತ್ತ ಅಧ್ಯಾಪಕ ವಿ. ಬಿ. ಕೆಂಚನಗೌಡರ ಹಾಗೂ ಹಿರಿಯ ಪತ್ರಕರ್ತ ಗುರುಮೂರ್ತಿ ಯರಗಂಬಳಿಮಠ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ನಿರ್ದೇಶಕ ಬಿ.ಸಿ. ಕೊಳ್ಳಿ, ಚಂದ್ರು ಶೆಟ್ಟರ, ಸೋಮಲಿಂಗಯ್ಯ ಗುಡ್ಡದಮಠ, ಮುಖ್ಯಾಧ್ಯಾಪಕಿ ಮಂಜುಳಾ ದೊಡಮನಿ, ಸಂಚಾಲಕ ಟಿ.ಎಂ.ದೇಸಾಯಿ ಸೇರಿದಂತೆ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಎಂ.ಎನ್. ಆಲದಕಟ್ಟಿ ಸ್ವಾಗತಿಸಿದರು. ಮಹೇಶ್ವರಿ ಹಳ್ಳಿಗೇರಿಮಠ ನಿರೂಪಿಸಿದರು. ವಿನಾಯಕ ಹಿರೇಮಠ ವಂದಿಸಿದರು. ಎಂ.ಆಂಜನೇಯ, ಅನುಸೂಯಾ ಅನಿಗೋಳ, ಲೀಲಾವತಿ ಅಣ್ಣಿಗೇರಿ, ವಿಜಯಲಕ್ಷ್ಮೀ ಇದ್ನಿ, ಶೋಭಾ ಗಾಣಿಗೇರ, ಶಕೀಲಾ ನದಾಫ್, ಅನಿತಾ ಬೆಟಗೇರಿ, ಜ್ಯೋತಿ ವಿಠ್ಠೋಜಿ, ಸರಿತಾ ಸುಣಗಾರ, ಆರತಿ ಹರಿಜನ ಅವರು ಮಕ್ಕಳ ಗುಂಪು ನೃತ್ಯ, ಜಾನಪದ ಕುಣಿತ, ಹಳ್ಳಿ ಸೊಬಗಿನ ಕೋಲಾಟ, ಏಕಪಾತ್ರಾಭಿನಯ, ಕಿರು ನಾಟಕ, ಹಾಡುಗಾರಿಕೆ ಸೇರಿದಂತೆ 35 ವಿಧದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟರು.



ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಮನವಿ

ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಪದಾಧಿಕಾರಿಗಳು ನೂತನ ಜಿಲ್ಲಾಧಿಕಾರಿ ಸ್ನೇಹಲ್ ಅವರನ್ನು ಭೇಟಿಯಾಗಿ ''ಇನ್‌ಕಾಮೆಕ್ಸ್-2026'' ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದ ಸಹಕಾರ ನೀಡಲು ಮನವಿ ಮಾಡಿದರು. ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಅವರ ನೇತೃತ್ವದಲ್ಲಿ ಉಪಾಧ್ಯಕ್ಷ ಪ್ರವೀಣ ಆಗಡಿ, ವೀರಣ್ಣ ಕಲ್ಲೂರ ಗೌರವ ಕಾರ್ಯದರ್ಶಿ ಉದಯ ರೇವಣಕರ ಹಾಗೂ ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಇದ್ದರು.

ಈ ಸಂದರ್ಭದಲ್ಲಿ ಇನ್‌ಕಾಮೆಕ್ಸ್-2026ರ ಉದ್ದೇಶ, ಕಾರ್ಯಕ್ರಮದ ವೈಶಿಷ್ಟ್ಯಗಳು ಹಾಗೂ ಕೈಗಾರಿಕೆ-ವಾಣಿಜ್ಯ ಕ್ಷೇತ್ರಗಳಿಗೆ ದೊರೆಯುವ ಲಾಭಗಳ ಕುರಿತು ವಿವರವಾದ ಮಾಹಿತಿ ನೀಡಿದರು. ರಾಜ್ಯದ ವಿವಿಧ ಭಾಗಗಳಿಂದ ಹಾಗೂ ದೇಶದ ನಾನಾ ರಾಜ್ಯಗಳಿಂದ ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ಹೂಡಿಕೆದಾರರು ಮತ್ತು ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆಯಿದ್ದು, ಉತ್ತರ ಕರ್ನಾಟಕದ ಕೈಗಾರಿಕಾ ಬೆಳವಣಿಗೆಗೆಇದು ಮಹತ್ವದವೇದಿಕೆಯಾಗಲಿದೆಎಂದು ತಿಳಿಸಲಾಯಿತು. ಜಿಲ್ಲಾಡಳಿತದ ಸಹಕಾರ, ಮೂಲಸೌಕರ್ಯ ವ್ಯವಸ್ಥೆ, ಭದ್ರತೆ ಮತ್ತು ವಿವಿಧ ಇಲಾಖೆಗಳ ಸಮನ್ವಯದ ಅಗತ್ಯವಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಿಂದ ಅಗತ್ಯ ಮಾರ್ಗದರ್ಶನ ಹಾಗೂ ಬೆಂಬಲವನ್ನು ಕೋರಿ ಮನವಿ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯ ನೂತನ ಜಿಲ್ಲಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಸ್ನೇಹಲ್ ಅವರನ್ನು ಸಂಸ್ಥೆಯ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸಿ, ಅವರ ಆಡಳಿತಾವಧಿಯಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ವಿಶ್ವಾಸವನ್ನು ವ್ಯಕ್ತಪಡಿಸಲಾಯಿತು. ಜಿಲ್ಲಾಧಿಕಾರಿಗಳೂ ಸಹ ಕಾರ್ಯಕ್ರಮದ ಮಹತ್ವವನ್ನು ಮೆಚ್ಚಿ, ನಿಯಮಾನುಸಾರ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರೆಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಉದಯ ರೇವಣಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆಐಎಡಿಬಿ ಕಚೇರಿ ಸ್ಥಳಾಂತರ ಖಂಡಿಸಿ ಅನಿರ್ದಿಷ್ಟ ಅಹೋರಾತ್ರಿ ಧರಣಿ

ಧಾರವಾಡ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ಕೆಐಎಡಿಬಿ) ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ ದಾವಣಗೇರಿಗೆ ಸ್ಥಳಾಂತರ ವಿರೋಧಿಸಿ ವಿವಿಧ ರೈತರು, ಕೆಐಎಡಿಬಿ ಕಚೇರಿ ಮುಂಭಾಗ ಅನಿರ್ದಿಷ್ಟ ಅಹೋರಾತ್ರಿ ಧರಣಿ ಕೈಗೊಂಡಿದ್ದಾರೆ.

ಯಾವುದೇ ಕಾರಣಕ್ಕೂ ಕಚೇರಿ ದಾವರನಗೇರಿಗೆ ಸ್ಥಳಾಂತರ ಮಾಡಬಾರದು. ಧಾರವಾಡದಲ್ಲಿಯೇಮುಂದುವರೆಸಬೇಕು. ಈ ಕಚೇರಿ ಧಾರವಾಡ, ಬೆಳಗಾವಿ, ಗದಗ, ಉತ್ತರಕನ್ನಡ ಜಿಲ್ಲೆಗಳ ರೈತರಿಗೆ, ಉದ್ಯಮಿದಾರರಿಗೆ ಅನುಕೂಲವಾಗಿದೆ. ಕಚೇರಿ ಸ್ಥಳಾಂತರದಿಂದ ಸಣ್ಣ ರೈತರು ತಮ್ಮ ಕೆಲಸಕ್ಕೆ ದಾವಣಗೇರಿಗೆ ಪ್ರಯಾಣಿಸಬೇಕಾಗಲಿದೆ ಎಂದು ರೈತರು ಅಳಲು ತೋಡಿಕೊಂಡರು. ಧಾರವಾಡ ಜಿಲ್ಲೆ ಕೈಗಾರಿಕಾ ಹಬ್ ಆಗಿ ಬೆಳೆಯುತ್ತಿದೆ. ಸುಸಜ್ಜಿತವಾದ ಕಚೇರಿ ಸ್ಥಳಾಂತರದಿಂದ ಈ ಭಾಗದ ಅಭಿವೃದ್ಧಿಗೆ ಮಾರಕವಾಗಲಿದೆ. ಇದು ಸರ್ಕಾರದ ಉತ್ತರ ಕರ್ನಾಟಕ ಹಿತಾಸಕ್ತಿಗೆ ವಿರುದ್ಧವಾದ ನಡೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ಭೂಮಿ ಕೈಗಾರಿಕೆಗೆ ನೀಡಿದ್ದೇವೆ. ಈಗ ಕನಿಷ್ಠ ಸೌಲಭ್ಯಕ್ಕೆ ಬೇರೆ ಜಿಲ್ಲೆಗೆ ಅಲೆಯಬೇಕೇ? ರಾಜ್ಯ ಸರ್ಕಾರ ತಕ್ಷಣ ಆದೇಶ ಹಿಂಪಡೆಯದಿದ್ದರೆ, ತೀವ್ರ ಸ್ವರೂಪದ ಹೋರಾಟ ಮಾಡುವುದಾಗಿಯೂ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಶ್ರೀಶೈಲಗೌಡ ಕಮತರ, ಕುಮಾರಗೌಡ ಪಾಟೀಲ್, ಶ್ರೀಕಾಂತ್ ಕ್ಯಾತಪ್ಪನವರ, ಶಿವು ಬೆಳಾರದ, ವಿಠಲ ಪಿರಗಾರ, ನೇತಾಜಿ ಪಾಟೀಲ, ಗಂಗಪ್ಪ ಗಾಯಕವಾಡ, ಮಡಿವಾಳಪ್ಪ ಏಣಗಿ, ಬಸವರಾಜ ಚಳಗೇರಿ, ವಿಜಯ ಮಾದರ, ಪುಂಡಲೀಕಪ್ಪ ದೊಡ್ಡಮನಿ, ಹನುಮಂತಪ್ಪ ಬೋಗೂರ ಪಾಲ್ಗೊಂಡಿದ್ದರು.



ರಾಮಲಿಂಗ ಕಾಮಣ್ಣನ ದರ್ಶನ



ನವಲಗುಂದ: ಕಲಿಯುಗದ ಕಾಮದೇನು ಬೇಡಿದ ವರ ದಯಪಾಲಿಸುವಂತಹ ಶ್ರೀ ರಾಮಲಿಂಗ ಕಾಮಣ್ಣನ ದರ್ಶನಕ್ಕೆ ಮೊದಲ ದಿನವೇ ಲಕ್ಷಾಂತರ ಭಕ್ತರ ಗಣ ಹರಿದು ಬಂದಿತು.

ಹೋಳಿ ಹಬ್ಬದ ಪ್ರಯುಕ್ತ ಪಟ್ಟಣದ ಶ್ರೀ ರಾಮಲಿಂಗ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀ ರಾಮಲಿಂಗ ಕಾಮದೇವ ಭಕ್ತರ ಕಾಮದೇನು. ಶ್ರೀ ರಾಮಲಿಂಗ ಕಾಮಣ್ಣನು ಇಷ್ಟಾರ್ಥ ಸಿದ್ಧಿ ಪುರುಷನಾಗಿ ಪೂಜೆಗೊಳ್ಳುತ್ತಿರುವಂತಹ ಕಾಮದೇವರಾಗಿದ್ದಾರೆ. ಸರ್ವಧರ್ಮದವರುಸೇರಿಕೊಂಡುಹೋಳಿ ಹಬ್ಬವನ್ನು ಅತೀ ವಿಜೃಂಭಣೆಯಿಂದ ಆಚರಣೆ ಮಾಡುತ್ತಾರೆ. ಮಕ್ಕಳಿಗಾಗಿ ಬೆಳ್ಳಿ ತೊಟ್ಟಿಲು, ಮದುವೆ ಅಥವಾ ಕಂಕಣ ಭಾಗ್ಯಕ್ಕಾಗಿ ಬೆಳ್ಳಿ ಬಾಸಿಂಗ್, ಮನೆ, ನಿವೇಶನಕ್ಕೆ ಛತ್ರಿ ಆರೋಗ್ಯಕ್ಕೆ ಕುದುರೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೆಳ್ಳಿ ಪಾದುಕೆ ಹಾಗೂ ಹಸ್ತ ಸಾಮಗ್ರಿಗಳನ್ನು ಪಡೆದು ಪೂಜಿಸಿದರೆ ಬೇಡಿಕೆ ಈಡೇರುತ್ತದೆ ಎನ್ನುವುದು ಭಕ್ತರ ನಂಬಿಕೆಯಾಗಿದೆ.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಧಾರವಾಡ: ಸ್ಥಳೀಯ ಸತ್ತೂರಿನ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಶನಿವಾರ ನಡೆಯಿತು.

ದಿನಾಚರಣೆನಿಮಿತ್ತಎಸ್‌ಡಿಎಂವಿಶ್ವವಿದ್ಯಾಲಯ, ಎಸ್‌ಡಿಎಂಎಂಜಿನಿಯರಿಂಗ್ ಕಾಲೇಜಿನಪ್ರಾಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳಿಗೆ ಪೋಸ್ಟರ್, ಐಡಿಯಾಥಾನ್ ಸ್ಪರ್ಧೆ ಜರುಗಿದವು. ಈ ವಿಜ್ಞಾನ ದಿನಾಚಣೆ ಸ್ಪರ್ಧೆಯಲ್ಲಿ ಸುಮಾರು 101 ತಂಡಗಳಿಂದ ವೈಜ್ಞಾನಿಕ ಪೋಸ್ಟರ್‌ಗಳು ಮತ್ತು 36 ಮಾಡಲ್‌ಗಳನ್ನು ತಯಾರಿಸುವ ಜೊತೆ ಪ್ರದರ್ಶನ ಮಾಡಲಾಯಿತು. ಪೋಸ್ಟರ್ ವಿಭಾಗದಲ್ಲಿ ಪವಿತ್ರಾ ಜೈನ್ ತಂಡ ಪ್ರಥಮ, ಮಾಡಲ್ ವಿಭಾಗದಲ್ಲಿ ಸೃಷ್ಟಿ ತಂಡ ಪ್ರಥಮ, ಬೋಧಕೇತರ ವಿಭಾಗದಲ್ಲಿ ಬಸವರಾಜ ಕಣವಿ-ತಂಡ ಪ್ರಥಮ ಸ್ಥಾನ ಪಡೆದವು. ಒಂದು ವಾರಗಳು ಸಂಶೋಧನೆ ಹಾಗೂ ನಾವಿನ್ಯತೆ ತರಬೇತಿ ಪಡೆದ ಜೆಎಸ್ಸೆಸ್ ವಿಜ್ಞಾನ ಕಾಲೇಜಿನ 15 ಮಕ್ಕಳಿಗೆ ಪ್ರಶಂಸನಾ ಪತ್ರ ವಿತರನೆ ಮಾಡಲಾಯಿತು. ಡಾ. ಪ್ರಾಂಥರ್ ಚಕ್ರಬರ್ತಿ, ಸಹ ಉಪಕುಲಪತಿ ಡಾ. ವಿ.ಜೀವಂದರಕುಮಾರ್, ಕುಲಸಚಿವ ಡಾ.ಚಿದೇಂದ್ರ ಶೆಟ್ಟರ್ ಹಾಗೂ ಸಂಶೋಧನಾ ನಿರ್ದೇಶಕ ಡಾ ಕೆ.ಸತ್ಯಮೂರ್ತಿ, ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಹಾಗೂ ಅಂಜಿತಾ ಜಿ.ಎಸ್. ಇದ್ದರು. ವೈದ್ಯೆ ಡಾ.ರಮ್ಯಶ್ರೀ ಪ್ರಾರ್ಥಿಸಿದರು. ಡಾ. ಟಿ.ಜಿ.ವಾಸುದೇವನ್ ಪರಿಚಯಿಸಿದರು. ಪಿಆರ್‌ಒ ಬಾಬಣ್ಣ ಶೆಟ್ಟಿಗಾರ ಮತ್ತು ಡಾ. ವಸೀಂ ಅಹ್ಮದ್ ವಿಜೇತ ತಂಡಗಳ ಒಪಟ್ಟಿ ವಾಚಿಸಿದರು. ಡಾ. ರೇಣುಕಾ ಮಠ ನಿರೂಪಿಸಿದರು. ಸತ್ಯಬೋಧ ಗುತ್ತಲ್ ವಂದಿಸಿದರು.



ಸದಾ ಶ್ರಮಿಸುವ ಕಾರ್ಮಿಕರು



ಅಳ್ನಾವರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾ ಭವನದಲ್ಲಿ ಶುಕ್ರವಾರ ಕಾಲೇಜಿನ ಸಾಂಸ್ಕೃತಿಕ ಒಕ್ಕೂಟ ಅಡಿಯಲ್ಲಿ ಕಾರ್ಮಿಕರ ಸವಾಲುಗಳು ಮತ್ತು ಪರಿಹಾರ ಎಂಬ ವಿಷಯ ಕುರಿತು ಭಾಷಣ ಸ್ಪರ್ಧೆ ನಡೆಯಿತು.

ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿನಾಯಕಕುರುಬರಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಿಮಾತನಾಡಿ, ಕಾರ್ಮಿಕರ ಬದುಕು ಸದಾ ಶ್ರಮದಿಂದ ಕೂಡಿದೆ. ಅವರ ಸಮಸ್ಯೆಗಳನ್ನು ಮನಗಂಡು ಸಚಿವ ಸಂತೋಷ್ ಲಾಡ್ ಅವರು ಕಾರ್ಮಿಕ ಇಲಾಖೆಯ ಜವಾಬ್ದಾರಿ ಹೊತ್ತ ಮೇಲೆ ಸಾಕಷ್ಟು ಬದಲಾವಣೆ, ಬಡ ಕಾರ್ಮಿಕರ ಪಾಲಿಗೆ ಉಪಯುಕ್ತ ಯೋಜನೆ ಜಾರಿಮಾಡಿದ್ದಾರೆ ಎಂದರು.

ಪ್ರಾಚಾರ್ಯ ಡಾ. ಉಮಾ ಪೂಜಾರ ಅಧ್ಯಕ್ಷತೆ ವಹಿಸಿದ್ದರು. ಹಿರಿಯರಾದ ಪರಮೇಶ್ವರ ತೇಗೂರ, ಅರ್ಜುನ ಅಷ್ಟೇಕರ, ತಮೀಮ ತೇರಗಾಂವ, ಸಾಜಿದ್ ಅವರಾದಿ, ರಾಯಪ್ಪ ಹುಡೇದ, ಪರಶುರಾಮ ಬೇಕನೇಕರ, ನಾಗೇಂದ್ರ ಶಿಂದೆ,ಪರಶುರಾಮ ಮಿಂಡೋಳ್ಕರ್, ಸಲೀಂ ತಡಕೋಡ, ಹರೀಶ ಚಲವಾದಿ, ಇದ್ದರು.

ಶಿಗ್ಗಾವಿ ಸ್ವಸ್ತಿಕ್ ತಂಡ ಚಾಂಪಿಯನ್

ಧಾರವಾಡ: ಸಂಸದರ ಕ್ರೀಡಾ ಮಹೋತ್ಸವದ ಪುರುಷರ ವಿಭಾಗದ ಕಬಡ್ಡಿ ಪಂದ್ಯದಲ್ಲಿ ಶಿಗ್ಗಾವಿ ಸ್ವಸ್ತಿಕ್ ತಂಡ ಚಾಂಪಿಯನ್ ಆಗಿದೆ. ಪುರುಷರ ಖೋಖೋ ಪಂದ್ಯದಲ್ಲಿ ಸಂಶಿಯ ನ್ಯೂ ಸ್ಪೋರ್ಟ್ ಕ್ಲಬ್ ತಂಡ ಟ್ರೋಫಿ ಗೆದ್ದುಕೊಂಡಿದೆ.

ಮಹಿಳಾ ವಿಭಾಗದ ಕಬಡ್ಡಿಯಲ್ಲಿ ನವರಂಗ ಹೊಸಳ್ಳಿ, ಶಿಗ್ಗಾವಿ ತಂಡ ಹಾಗೂ ಖೋ-ಖೋದಲ್ಲಿ ಎಸ್‌ಜೆಎಸ್‌ಎಸ್ ಬೈರಿದೇವರಕೊಪ್ಪ, ಹುಬ್ಬಳ್ಳಿ ತಂಡ ಮತ್ತು ವಾಲಿಬಾಲ್ ನಲ್ಲಿ ಬ್ಯಾಹಟ್ಟಿ ತಂಡಗಳು ಚಾಂಪಿಯನ್ ಪಟ್ಟ ಅಲಂಕರಿಸಿವೆ.

ಟ್ರೋಫಿ ವಿತರಿಸಿ ಮಾತನಾಡಿದ ಪ್ರಹ್ಲಾದ ಜ್ಯೋಶಿ, ಸಂಸದರ ಕ್ರೀಡಾ ಮಹೋತ್ಸವದಲ್ಲಿ ಆಯೋಜಿಸಿದ್ದ ಕ್ರೀಡಾಕೂಟ ಯುವ ಕ್ರೀಡಾಪಟುಗಳಿಗೆ, ಯುವಶಕ್ತಿಗೆ ಪ್ರೇರಣೆಯಾಗಲಿದ್ದು, ಕ್ರೀಡಾಪಟುಗಳು ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಮಹೇಶ್ ಟೆಂಗಿನಕಾಯಿ, ಎಂ.ಆರ್ .ಪಾಟೀಲ, ಬಿಜೆಪಿ ಮುಖಂಡ ಭರತ ಬೊಮ್ಮಾಯಿ, ಮೇಯರ್ ಜ್ಯೋತಿ ಪಾಟೀಲ, ವಿಪ ಮಾಜಿ ಸದಸ್ಯ ನಾಗರಾಜ ಛಬ್ಬಿ, ನಿಂಗಪ್ಪ ಸುತಗಟ್ಟಿ, ಪಕ್ಷದ ಪದಾಧಿಕಾರಿಗಳು ಇದ್ದರು.



ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದ ಕೆಎಸ್‌ಸಿಎ ಮೈದಾನ | 25 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಪಂದ್ಯ ವೀಕ್ಷಣೆ

ಧಾರವಾಡ ವಲಯದ ಕಾರ್ಯಕ್ಕೆ ಶ್ಲಾಘನೆ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ : ಇಲ್ಲಿಯ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರದ ಕೆಎಸ್ ಸಿಎ ಕ್ರಿಕೆಟ್ ಮೈದಾನ ಶನಿವಾರ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಿತು. ಏಳು ದಶಕಗಳಿಂದ ರಣಜಿ ಟ್ರೋಫಿ ಪ್ರಶಸ್ತಿಯ ಸನಿಹಕ್ಕೂ ಬರದೆ ತೀವ್ರ ಬರ ಎದುರಿಸುತ್ತಿದ್ದ ಕಣಿವೆ ರಾಜ್ಯ ಜಮ್ಮು-ಕಾಶ್ಮೀರ ಆತಿಥೇಯ ಕರ್ನಾಟಕ ತಂಡದ ವಿರುದ್ಧ ಜಯಗಳಿಸಿ ಇತಿಹಾಸ ಸೃಷ್ಟಿಸಿತು.

ಬಿಸಿಸಿಐ ಇದೇ ಮೊದಲ ಬಾರಿಗೆ ಕೆಎಸ್‌ಸಿಎ ಧಾರವಾಡ ವಲಯದ ಸಹಯೋಗದೊಂದಿಗೆ ಈ ಮೈದಾನದಲ್ಲಿ ಆಯೋಜಿಸಿದ್ದ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಸೋತ ಬೇಸರ ಸ್ಥಳೀಯ ಪ್ರೇಕ್ಷಕರಲ್ಲಿ ಮೂಡಿತ್ತಾದರೂ ಒಟ್ಟಾರೆ ಪಂದ್ಯ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಧಾರವಾಡ ವಲಯದ ನಿಮಂತ್ರಕ ವೀರಣ್ಣ ಸವಡಿ ಹಾಗೂ ಅಧ್ಯಕ್ಷ ಅಲ್ತಾಫ್ ಕಿತ್ತೂರ ಅವರ ಸಂಘಟಿತ ಕಾರ್ಯಕ್ಕೆ ಬಿಬಿಸಿಐ ಹಾಗೂ ಕೆಎಸ್ ಸಿಎ ರಾಜ್ಯ ಸಮಿತಿಗಳೂ ಶ್ಲಾಘನೆ ವ್ಯಕ್ತಪಡಿಸಿವೆ.

ಈವರೆಗೆ ರಣಜಿ ಲೀಗ್ ಹಂತದ ಒಟ್ಟು 9 ಪಂದ್ಯಗಳನ್ನು ಬಿಟ್ಟರೆ ನಾಕೌಟ್ ಹಂತದ ಯಾವುದೇ ಪಂದ್ಯಗಳೂ ಇಲ್ಲಿ ನಡೆದಿರಲಿಲ್ಲ. ಬೆಂಗಳೂರಿನಲ್ಲಿರುವ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹುಬ್ಬಳ್ಳಿ ಮೈದಾನಕ್ಕೆ ಕರ್ನಾಟಕ ಹಾಗೂ ಜಮ್ಮು- ಕಾಶ್ಮೀರ ತಂಡಗಳ ನಡುವಣ ಫೈನಲ್ ಪಂದ್ಯದ ಆತಿಥ್ಯದ ಅವಕಾಶ ದೊರೆಯಿತು. ಲಭ್ಯವಿದ್ದ ಕಡಿಮೆ ಅವಧಿಯಲ್ಲಿ ಪ್ರತಿಷ್ಠಿತ ಪಂದ್ಯ ಆಯೋಜಿಸುವುದು ಸವಾಲಾಗಿತ್ತು. ಆದರೂ, ಕೆಎಸ್ ಸಿಎ ಧಾರವಾಡ ವಲಯ ಅದನ್ನು ಅಚ್ಚುಕಟ್ಟಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗಿದೆ.

ಸಿಬ್ಬಂದಿ ಪರಿಶ್ರಮ: ಪಂದ್ಯ ನಡೆಯುವುದು ನಿಶ್ಚಯವಾದ ಬಳಿಕ ಕೆಎಸ್ ಸಿಎ ಸಿಬ್ಬಂದಿ ಹಗಲು ರಾತ್ರಿ ಎನ್ನದೇ ಶ್ರಮಿಸಿದರು.



ಜೋಶಿ ಹೆಸರು ಪೆವಿಲಿಯನ್ ಗೆ: ಇಲ್ಲಿಯ ಕೆಎಸ್ ಸಿಎ ಮೈದಾನದ ಪೆವಿಲಿಯನ್ ಬ್ಲಾಕ್ ವೊಂದಕ್ಕೆ ಹಿರಿಯ ಕ್ರಿಕೆಟಿಗ, ಗದುಗಿನ ಎಡಗೈ ಸ್ಪಿನ್ನರ್, ಅಂತರರಾಷ್ಟ್ರೀಯ ಮಾಜಿ ಆಟಗಾರ, ಕೋಚ್ ಸುನೀಲ್ ಜೋಶಿ ಅವರ ಹೆಸರನ್ನು ಇರಿಸಲಾಯಿತು. ಪ್ರಸ್ತುತ ರಣಜಿ ಟ್ರೋಫಿ ಮುಡಿಗೇರಿಸಿಕೊಂಡ ಜಮ್ಮು ಕಾಶ್ಮೀರ ತಂಡದ ಕೋಚ್ ಆಗಿಯೂ ಸಹ ಸುನೀಲ್ ಜೋಶಿ ಈ ಹಿಂದೆ ಕಾರ್ಯ ನಿರ್ವಹಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಹುಬ್ಬಳ್ಳಿಯಲ್ಲಿನ ಎಂಟು ಜನ ಸಿಬ್ಬಂದಿಯ ಜೊತೆ ಬೆಳಗಾವಿಯ ಐವರು ಸಿಬ್ಬಂದಿ ಮೈದಾನ, ಪಿಚ್ ಸಿದ್ಧಪಡಿಸಿದರು. ಇನ್ನಿತರ ಕಾರ್ಯಗಳಿಗೆ ನೂರಾರು ಜನ ವ್ಯವಸ್ಥಿತ ಆಯೋಜನೆಗೆ ದುಡಿದಿದ್ದಾರೆ. 5 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಕುಳಿತು ನೋಡಲು ವ್ಯವಸ್ಥೆ ಇರುವ ಐದು ಗ್ಯಾಲರಿಗಳನ್ನು ಸಿದ್ಧಪಡಿಸಲಾಗಿತ್ತು. ಇದೇ ಮೊದಲ ಬಾರಿಗೆ

ಪಾರಸ್ ಡೋಗ್ರಾ ಡಿಚ್ಚಿ ವಿವಾದ: ಫೈನಲ್ ಪಂದ್ಯದ ಎರಡನೇ ದಿನದಾಟದಲ್ಲಿ ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಅವರು ಕರ್ನಾಟಕದ ಬದಲಿ ಫೀಲ್ಡರ್ ಕೆ.ವಿ. ಅನೀಶ್ ಅವರಿಗೆ ಡಿಚ್ಚಿ ಹೊಡೆದಿದ್ದು ದೊಡ್ಡ ಸುದ್ದಿಯಾಗಿತ್ತು. ಇದು ಹುಬ್ಬಳ್ಳಿ ಕ್ರಿಕೆಟ್ ಅಭಿಮಾನಿಗಳಲ್ಲಿ ಎಂದೂ ಮರೆಯದ ಘಟನೆಯಾಗಿ ಉಳಿಯಿತು.ನಾಲ್ಕನೇ ದಿನ ಎರಡನೇ ಇನಿಂಗ್ಸ್ ಆಡಿದ ಜಮ್ಮು, ಕಾಶ್ಮೀರ ತಂಡದ ಬ್ಯಾಟರ್ ಕಮ್ರಾನ್ ಇಕ್ಬಾಲ್ ಹಾಗೂ ವೇಗಿ ವೈಶಾಖ್ ವಿಜಯಕುಮಾರ್ ಅವರ ನಡುವೆ ಜಟಾಪಟಿ ನಡೆಯಿತು. ವೈಶಾಖ್ ಬೌಲಿಂಗ್ ಬಹಳ ಕುತೂಹಲಕ್ಕೆ ಕಾರಣವಾಗಿತ್ತು.

> **ರಣಜಿ ಟೂರ್ನಿ ಫೈನಲ್ ಪಂದ್ಯದ ನಡೆಸಲು ಅವಕಾಶ ಸಿಕ್ಕಿರುವುದನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ. 200 ಕ್ಕೂ ಹೆಚ್ಚು ಸಿಬ್ಬಂದಿ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿ ಯಾವುದೇ ಪಂದ್ಯ ನೀಡಿದರೂ ನಿಭಾಯಿಸುತ್ತೇವೆ.**
>
> ■ **ವೀರಣ್ಣ ಸವಡಿ, ನಿಮಂತ್ರಕ ಕೆಎಸ್‌ಸಿಎ ಧಾರವಾಡ ವಲಯ**

ಪ್ರೇಕ್ಷಕರಿಗೂ ಪ್ರವೇಶ ಶುಲ್ಕ ನಿಗದಿ ಮಾಡಲಾಗಿತ್ತು. ಐದು ದಿನಗಳ ಕಾಲ ನಡೆದ ರಣಜಿ ಪಂದ್ಯವನ್ನು 25 ಸಾವಿರಕ್ಕೂ ಹೆಚ್ಚು ಕ್ರಿಕೆಟ್ ಅಭಿಮಾನಿಗಳು ವೀಕ್ಷಿಸಿ ಸಂಭ್ರಮಿಸಿದರು. ತಾತ್ಕಾಲಿಕ ಪೆವಿಲಿಯನ್ ಕಟ್ಟಡ, ಸ್ಪೋರ್ಟ್ಸ್ ಸೆಂಟರ್ ನಿರ್ಮಿಸಲಾಗಿತ್ತು. 200 ಜನ ಗಣ್ಯರಿಗೆ ಆಸನ, ಕಟ್ಟಡದ ಮೊದಲ ಮಹಡಿಯಲ್ಲಿ ಕರ್ನಾಟಕ ಮತ್ತು ಜಮ್ಮು, ಕಾಶ್ಮೀರ ತಂಡಕ್ಕೆ ಪ್ರತ್ಯೇಕ ಡ್ರೆಸ್ಸಿಂಗ್ ರೂಮ್ ಹಾಗೂ ಕಾಮನ್ ಕಿಚನ್ ರೂಮ್, ಡೈನಿಂಗ್ ಕೊಠಡಿಯನ್ನು ಅಚ್ಚುಕಟ್ಟಾಗಿ ಒದಗಿಸಲಾಗಿತ್ತು.

ಮೇಲ್ದರ್ಜೆಗೇರಿದ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಕಲ ಸೌಲಭ್ಯ ಶೀಘ್ರ

ಸಿದ್ದಾಪುರ: ಕರ್ನಾಟಕ ಸರ್ಕಾರ ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ತಂದಿದೆ. ಉತ್ತರ ಕನ್ನಡ ಜಿಲ್ಲೆಯ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಅವುಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಶೀಘ್ರದಲ್ಲಿಯೇ ಪೂರೈಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ತಾಲೂಕಿನ ಕ್ಯಾದಗಿಯಲ್ಲಿ 9 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡವನ್ನು ಶನಿವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕೇವಲ ಕಟ್ಟಡಗಳಿಂದ ಜನರಿಗೆ ಆರೋಗ್ಯ ಸಿಗಲು ಸಾಧ್ಯವಿಲ್ಲ, ಉತ್ತಮ ವೈದ್ಯರು ಮತ್ತು ಸಿಬ್ಬಂದಿ ವರ್ಗ ಇದ್ದಾಗ ಮಾತ್ರ ಆರೋಗ್ಯ ವ್ಯವಸ್ಥೆ ಕಾಪಾಡಲು ಸಾಧ್ಯ. ಶಿರಸಿಯ ಆಸ್ಪತ್ರೆಗೆ ಜಿಲ್ಲಾ ಆಸ್ಪತ್ರೆಯಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ಭರವಸೆಯನ್ನು



ನೀಡುತ್ತಿದ್ದೇನೆ. ರೋಗ ಉಲ್ಬಣಗೊಂಡ ನಂತರ ಚಿಕಿತ್ಸೆ ಪಡೆಯುವ ಬದಲು ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಹಚ್ಚಿ ಸೂಕ್ತ ಮಾರ್ಗದರ್ಶನ ಪಡೆಯುವ ಉದ್ದೇಶದಿಂದ ಗೃಹ ಆರೋಗ್ಯ ಯೋಜನೆಯನ್ನು ಜಾರಿ ಮಾಡಲಾಗಿದೆ. ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇಲ್ಲಿಯ ವೈದ್ಯಾಧಿಕಾರಿಗಳು, ಸಿಬ್ಬಂದಿಗಳ ವಸತಿ ಗೃಹ ಶಿಥಿಲಗೊಂಡಿದ್ದು, ಹೊಸ ಕಟ್ಟಡ ನಿರ್ಮಿಸಬೇಕು. ಆ ಕುರಿತು ಹಿರಿಯ ಆರೋಗ್ಯಾಧಿಕಾರಿಗಳು ಗಮನಹರಿಸಿ ಕಾರ್ಯರೂಪಕ್ಕೆ ಬರುವಂತೆ ಮಾಡಬೇಕು ಎಂದು ಸಚಿವರು ಸೂಚಿಸಿದರು. ಶಾಸಕ ಭೀಮಣ್ಣ ನಾಯ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಂಗನ ಕಾಯಿಲೆ ತಪಾಸಣೆಗಾಗಿ 40 ಲಕ್ಷ ಹಣ ನೀಡಿ ಶಿರಸಿಯಲ್ಲಿ ತಪಾಸಣಾ ಕೇಂದ್ರ ತೆರೆಯಲು ಆರೋಗ್ಯ ಸಚಿವರು ಸಹಕರಿಸಿದ್ದಾರೆ ಎಂದರು. ವೇದಿಕೆಯಲ್ಲಿ ಆರೋಗ್ಯ ಇಲಾಖೆಯ ಬೆಳಗಾವಿ ವಿಭಾಗದ ಸಹ ನಿರ್ದೇಶಕಿ ಡಾ. ಪುಷ್ಪಾ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ

> **398 ಆಶಾಕಿರಣ ಕೇಂದ್ರದ ಮೂಲಕ ಕಣ್ಣಿನ ತಪಾಸಣೆ, ಅಗತ್ಯ ಚಿಕಿತ್ಸೆ, ಉಚಿತ ಕನ್ನಡಕ ಪೂರೈಕೆ ಕಾರ್ಯ ಪ್ರಾರಂಭಿಸಲಾಗಿದೆ.**
>
> ■ **ದಿನೇಶ ಗುಂಡೂರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ**

ಕೆ.ಜಿ.ನಾಗರಾಜ, ತಹಶೀಲ್ದಾರ ಎಂ.ಆರ್.ಕುಲಕರ್ಣಿ, ತಾಲ್ಲೂಕು ಪಂಚಾಯತ ಕಾರ್ಯನಿರ್ವಹಣಾಧಿಕಾರಿ ದೇವರಾಜ ಹಿತ್ತಲಕೊಪ್ಪ, ಕ್ಯಾದಗಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕುಸುಮಾ ಇತರರು ಇದ್ದರು. ತಾಲೂಕು ಆರೋಗ್ಯಾಧಿಕಾರಿ ಡಾ. ಲಕ್ಷ್ಮೀಕಾಂತ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಂಕರ ರಾವ್ ಸ್ವಾಗತಿಸಿದರು. ರಜನಿ ಪ್ರಶಾಂತ ನಾಯ್ಕ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಮಮತಾ ಕೊಡಿಯಾ ನಿರೂಪಿಸಿದರು.

ಆಕಸ್ಮಿಕ ಬೆಂಕಿ:ಅಪಾರ ಪ್ರಮಾಣದ ಬೆಳೆ ಹಾನಿ



ಗದಗ: ಆಕಸ್ಮಿಕವಾಗಿ ಬೆಂಕಿ ತಗುಲಿ ಅಪಾರ ಪ್ರಮಾಣದ ತೊಗರೆ ಬೆಳೆ ಹಾನಿಯಾದ ಘಟನೆ ತಾಲೂಕಿನ ಶಿರುಂಜ ಗ್ರಾಮದಲ್ಲಿ ನಡೆದಿದೆ.

ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿಯು ಕ್ಷಣಾರ್ಧದಲ್ಲಿ ವ್ಯಾಪಿಸಿ ಗೌರವ್ವ ಕೊಂಡಿಕೊಪ್ಪದ ಅವರಿಗೆ ಸೇರಿದ ಅಂದಾಜು 3 ಎಕರೆಯಲ್ಲಿ ಬೆಳೆದಿದ್ದ ತೊಗರೆ ಬೆಳೆ ಸಂಪೂರ್ಣ ಸುಟ್ಟು ಕರಕಲಾಗಿ ಅಪಾರ ಪ್ರಮಾಣದ ಹಾನಿಯಾಗಿದೆ.

ಅದೇ ರೀತಿ ಗಂಗವ್ವ ಗೌಳೇರ ಅವರು ತಮ್ಮ 7 ಎಕರೆ ಹೊಲದಲ್ಲಿ ಬೆಳೆದ ತೊಗರಿ ಬೆಳೆಯನ್ನ ಕಟಾವು ಮಾಡಿ, ಒಕ್ಕಣೆ ಮಾಡಲು ಕಣದಲ್ಲಿ ತಂದು ಹಾಕಿದ್ದ ತೊಗರೆ ಬೆಳೆ ಸೇರಿ, 15 ಚೀಲ ಜೋಳದ ತೆನೆ ರಾಶಿ, 2 ಟ್ರ್ಯಾಕ್ಟರ್ ಕಡ್ಲಿ ಹೊಟ್ಟು, 2 ಟ್ರ್ಯಾಕ್ಟರ್ ಶೇಂಗಾ ಹೊಟ್ಟು, ತಾಡಪತ್ರಿಗಳು ಸುಟ್ಟು ಕರಕಲಾಗಿ ಲಕ್ಷಾಂತರ ರುಪಾಯಿ ಹಾನಿಯಾಗಿದೆ.ಸ್ಥಳೀಯರ ಪ್ರಕಾರ, ಗಾಳಿಯ ತೀವ್ರತೆಗೆ ಬೆಂಕಿ ವೇಗವಾಗಿ ಹರಡಿದ್ದು, ರೈತರು ಮತ್ತು ಗ್ರಾಮಸ್ಥರು ತಕ್ಷಣವೇ ನೀರು ಹಾಗೂ ಮಣ್ಣಿನ ಸಹಾಯದಿಂದ ಬೆಂಕಿ ಆರಿಸಲು ಪ್ರಯತ್ನಿಸಿದರು. ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಅದಾಗಲೇ ಅಪಾರ ಪ್ರಮಾಣದ ರೈತರ ಬೆಳೆ ನಾಶವಾಗಿದೆ.ಈ ಘಟನೆಯಿಂದ ಲಕ್ಷಾಂತರ ರುಪಾಯಿ ಮೌಲ್ಯದ ನಷ್ಟ ಸಂಭವಿಸಿರುವುದಾಗಿ ಅಂದಾಜಿಸಲಾಗಿದೆ. ಬೆಳೆ ಕಟಾವು ಹಂತದಲ್ಲಿದ್ದ ಕಾರಣ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಹಾನಿಗೊಳಗಾದ ರೈತರು ಸರ್ಕಾರದಿಂದ ತಕ್ಷಣ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ. ಈ ಕುರಿತು ಮುಳಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಲ್ಲಾ ಗಲ್ಲಿಯ ಹಿಂದೂ ಮಹಿಳೆಯರಿಂದ ಎಸ್ಪಿಗೆ ಒತ್ತಾಯ

ವಿನಾಕಾರಣ ಹಿಂದೂಗಳ ಬಂಧನ ಮಾಡಬೇಡಿ

ಬಾಗಲಕೋಟೆ: ವಿನಾಕಾರಣ ಹಿಂದೂಗಳನ್ನು ಬಂಧನ ಮಾಡಬಾರದು. ಹೋಳಿ ಹಬ್ಬದ ಸಂಭ್ರಮಕ್ಕೆ ತೊಂದರೆ ಮಾಡಬಾರದು, ಕಿಲ್ಲಾ ಗಲ್ಲಿಯಲ್ಲಿ ಮಹಿಳೆಯರನ್ನು ತಳ್ಳಾಟ, ನೂಕಾಟ ನಡೆಸಿರುವ ಪೊಲೀಸ್ ಇಲಾಖೆ ಅಧಿಕಾರಿ, ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕಿಲ್ಲಾಗಲ್ಲಿಯಲ್ಲಿ ಎಸ್ಪಿಯವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮಹಿಳೆಯರು ಒತ್ತಾಯಿಸಿದರು.

ನಮ್ಮಿಂದ ಶಾಂತಿ ಕದಡುವ ಕೆಲಸ ನಡೆಯುತ್ತಿಲ್ಲ, ಹಿಂದೂಗಳು ಶಾಂತರೀತಿಯಿಂದ ಇದ್ದಾರೆ. ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು ಎಂದು ಇದ್ದರೆ ಕಾರಣ ಇಲ್ಲದೇ ಹಿಂದೂಗಳನ್ನು ಬಂಧನ ಮಾಡುವುದು ಸರಿಯಲ್ಲ ಎಂದು ಸಭೆಯಲ್ಲಿ ಹೇಳಲಾಯಿತು.

ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲು ಆಲಿಸಿದ ಬಳಿಕ ಮಾತನಾಡಿದ ಎಸ್ಪಿ ಸಿದ್ದಾರ್ಥ ಗೋಯಲ್, ಹಳೆ ಬಾಗಲಕೋಟೆ, ಕಿಲ್ಲಾ ಸೇರಿದಂತೆ ಎಲ್ಲ ಕಡೆ ಶಾಂತಿ ಸುವ್ಯವಸ್ಥೆ ಇರಬೇಕು ಎಂದು ಪೊಲೀಸ್ ಇಲಾಖೆ ಕ್ರಮ ವಹಿಸಿದೆ. ಯಾರಿಗೂ ತೊಂದರೆಯಾಗಬಾರದೆಂದು ಪೊಲೀಸ್ ಇಲಾಖೆ ಕೆಲಸ ಮಾಡುತ್ತಿದೆ. ಶಿವಾಜಿ ಮೆರವಣಿಗೆ ಸಂದರ್ಭದಲ್ಲಿ ಆದಂತಹ ಘಟನೆ ಇಲ್ಲಿಯವರೆಗೆ ಆದ ಘಟನೆ ಕುರಿತು ಪೊಲೀಸ್ ಇಲಾಖೆಯಿಂದ ತನಿಖೆ ನಡೆಯುತ್ತಿದೆ. ತಪ್ಪು ಯಾರೇ ಮಾಡಿರಲಿ ಕ್ರಮ ಕೈಗೊಳ್ಳುತ್ತೇವೆ. ಮೊದಲು ನೋಟಿಸ್ ಕೊಟ್ಟು ಅವರಿಗೆ ತಿಳಿಸುತ್ತೇವೆ. ನಮ್ಮಲ್ಲಿ ತಪ್ಪು ಮಾಡಿದ ಕುರಿತು ಸಾಕ್ಷ್ಯ ದೊರೆತಾಗ ಮಾತ್ರ ಕ್ರಮ ವಹಿಸುತ್ತೇವೆ ಎಂದರು.

ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ವೀರಣ್ಣ ಚರಂತಿಮಠ, ಹಿಂದೂಗಳು ಏನಾದರೂ ತಪ್ಪು ಮಾಡಿದ್ದರೆ ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. ತಪ್ಪು ಮಾಡಿದರೆ ಸಾಕ್ಷ್ಯ ಒದಗಿಸಿ ನಾವೇ ಕರೆದುಕೊಂಡು ಬರುತ್ತೇವೆ. ನಾಲ್ಕು ದಿನ ಬಾಗಲಕೋಟೆಯಲ್ಲಿ ಹೋಳಿ ಹಬ್ಬ ಇದೆ. ಭಾನುವಾರ ಹಿಂದೂ ಸಮಾಜೋತ್ಸವ ಇದೆ ತೊಂದರೆ ಮಾಡಬೇಡಿ ಎಂದು ಪೊಲೀಸ್ ಇಲಾಖೆಯವರಿಗೆ ತಿಳಿಸಿದರು.

ಬಾಗಲಕೋಟೆಯಲ್ಲಿ ಪಕ್ಷಬ್ಧ ವಾತಾವರಣ ಇತ್ತು, ನಂತರ ಶಾಂತಿ ಸುವ್ಯವಸ್ಥೆ ಚೆನ್ನಾಗಿಯೇ ಇತ್ತು ಇಬ್ಬರು ಪೊಲೀಸ್ ಅಧಿಕಾರಿಗಳು ಮಾಡಿದ ತಪ್ಪಿನಿಂದ ಇಂತಹ ಘಟನೆ ಆಗಿದೆ. ಹಿಂದೂ ಹುಡಗನನ್ನು ಬಂಧನ ಮಾಡಲು ಮನೆಹೊಕ್ಕು ಪೊಲೀಸ್ ಅಧಿಕಾರಿಗಳು ನಡೆಸಿದ ಘಟನೆಗೆ ಮಹಿಳೆಯರು ವಿರೋಧ



> **ಪೊಲೀಸ್ ಇಲಾಖೆಯವರು ಶಾಂತಿ ಸುವ್ಯವಸ್ಥೆ ಹಾಳು ಮಾಡಲು ಬಯಸುವುದಿಲ್ಲ. ಸರ್ಕಾರ ನಡೆಸುವವರು ಪೊಲೀಸ್ ಇಲಾಖೆಯವರ ಮೇಲೆ ಒತ್ತಡ ಹಾಕಿ ಹಿಂದೂಗಳ ಬಂಧನ ಮಾಡಲು ಹೇಳುತ್ತಿದ್ದಾರೆ. ತಮ್ಮ ಬ್ಯಾಳಿಯನ್ನು ಬೇಯಿಸಿಕೊಳ್ಳಲು ಜನಪ್ರತಿನಿಧಿಗಳು ಆದವರು ಒತ್ತಡ ಹಾಕಿ ಇಂತಹ ಘಟನೆಗಳನ್ನು ಮಾಡಿಸುತ್ತಾರೆ. ಹಿಂದೆ ಆ್ಯಸಿಡ್ ಹಾಕಿದವರು, ಇಂತಹ ಘಟನೆಗೆ ಪ್ರಚೋದನೆ ನೀಡುತ್ತಿದಾರೆ. ಪೊಲೀಸರು ಅಸಹಾಯಕರಾಗಬಾರದು. ಶಾಂತಿ ಕದಡಲು ಕುಮ್ಮಕ್ಕು ನೀಡುವವರ ಮೇಲೆ ಕ್ರಮ ವಹಿಸಬೇಕು.**
>
> ■ **ವೀರಣ್ಣ ಚರಂತಿಮಠ, ಮಾಜಿ ಶಾಸಕರು, ಬಾಗಲಕೋಟೆ**

ವ್ಯಕ್ತಪಡಿಸಿದ್ದಾರೆ. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಎಸ್ಪಿಯವರು ಗಮನಕ್ಕೆ ತಂದರು. ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಬಾಗಲಕೋಟೆಯಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ತಿಳಿಸಿದೆ. ಜನರು ಕೂಡ ಒಪ್ಪಿದ್ದಾರೆ. ಪೊಲೀಸ್ ಇಲಾಖೆಯವರು ಕೂಡ ಹಿಂದೂಗಳ ಮೇಲೆ ವಿನ: ಕಾರಣವಿಲ್ಲದೇ ಬಂಧನ ಮಾಡಬಾರದೆಂದು ಹೇಳಿದ್ದು ಆ ರೀತಿ ಆಗದಂತೆ ಎಸ್ಪಿಯವರು ತಿಳಿಸಿದ್ದಾರೆ ಎಂದರು.

ಆಕ್ರಮಣ ಮೆಟ್ಟಿ ನಿಂತ ಹಿಂದೂ ಧರ್ಮ: ಕಾರಂತ

ಗದಗ: ಜಗತ್ತಿನ ಎಲ್ಲ ಸಂಸ್ಕೃತಿಗಳು ನಾಶವಾದರೂ ಹಿಂದೂ ಸಂಸ್ಕೃತಿ ಮಾತ್ರ ತಲೆ ಎತ್ತಿ ನಿಂತಿದೆ. ಸಾವಿರಾರು ವರ್ಷಗಳ ಆಕ್ರಮಣವನ್ನು ಎದುರಿಸಿದರೂ ಹಿಂದೂ ಧರ್ಮ ಜೀವಂತವಾಗಿ ಉಳಿದಿದೆ ಎಂದು ಹಿಂದೂ ಜಾಗರಣಾ ವೇದಿಕೆ ದಕ್ಷಿಣ ಮಧ್ಯ ಕ್ಷೇತ್ರಿಯ ಸಂಯೋಜಕ ಜಗದೀಶ್ ಕಾರಂತ್ ಹೇಳಿದರು.

ನಗರದ ವೀರಶೈವ ಜನರಲ್ ಲೈಬ್ರರಿ ಆವರಣದಲ್ಲಿ ಶನಿವಾರ ನಡೆದ ಹಿಂದೂ ಸಮ್ಮೇಳನದಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನಲ್ಲಿ ಹಿಂದೂ ಎನ್ನುವ ಧರ್ಮ ಇದೆ. ಜಗತ್ತಿನಲ್ಲಿ 100 ಕೋಟಿ ಜನರು ಹಿಂದೂ ಧರ್ಮವನ್ನು ಒಪ್ಪಿಕೊಂಡಿದ್ದಾರೆ. ಜಗತ್ತಿನಲ್ಲಿ ಅನೇಕ ನಾಗರಿಕತೆಗಳು ಉದಯಿಸಿ ನಶಿಸಿ ಹೋಗಿವೆ. ಆದರೆ, ಜಗತ್ತಿನ ಏಕೈಕ ಪ್ರಾಚೀನ ಸಿಂಧೂ ನಾಗರಿಕತೆ ಇನ್ನೂ ಉಳಿದಿದೆ.

ಕೆಲವು ಹತಾಶ ಶಕ್ತಿಗಳು ಇಂದಿಗೂ ನಮ್ಮ ಧರ್ಮ, ಸಮಾಜ, ಸಂಸ್ಕೃತಿಯನ್ನು ಕೊಲ್ಲಲು ಕತ್ತಿ ಮಸಿಯುತ್ತಿವೆ. ಆದರೆ, ಅದು ಸಾಧ್ಯವಾಗುತ್ತಿಲ್ಲ. ಹಿಂದೂ ಎನ್ನುವ ಭಾವನೆ ನಮ್ಮಲ್ಲಿರುವವರೆಗೂ ಹಿಂದೂತ್ವ ಅಲುಗಾಡಿಸಲು ಸಾಧ್ಯವಿಲ್ಲ. ಹಿಂದೂ ಸತ್ತಾಗ ಭಾರತ ಸಾಯುತ್ತದೆ. 600 ವರ್ಷ ಭಾರತವನ್ನು ಇಸ್ಲಾಂ ಆಳಿತು. ಬಾಬರ್, ಟಿಪ್ಪು ಸುಲ್ತಾನ್ ಸೇರಿದಂತೆ ಹಲವರ ಆಕ್ರಮಣ ಎದುರಿಸಿ



ಮೆಟ್ಟಿ ನಿಂತ ಪರಾಕ್ರಮಿ ನಮ್ಮ ಹಿಂದೂ ಸಮಾಜ ಎಂದು ಹೆಮ್ಮೆಯಿಂದ ಎದೆ ತಟ್ಟಿ ಹೇಳಿದರು.

ಜಾತಿಯ ಸಮ್ಮೇಳನ, ಭಾಷಾ ಸಮ್ಮೇಳನ, ರಾಜಕೀಯ ಸಭೆ-ಸಮಾರಂಭ ನೋಡಿದ್ದೇವೆ. ಆದರೆ, ಹಿಂದೂ ಸಮಾವೇಶದಲ್ಲಿ ಭಾಗವಹಿಸುವುದು ಪ್ರಮುಖವಾಗಿದೆ. ನಾವು ಹುಟ್ಟಿದ ಜಾತಿ, ಕಾಯಕ ಯಾವುದಾದರೇನು ನಾವೆಲ್ಲರೂ ಹಿಂದೂವಾಗಿ ಬದುಕಬೇಕು. ಜಗತ್ತಿನ 60 ಮುಸ್ಲಿಂ ರಾಷ್ಟ್ರಗಳು ಸೇರಿದಂತೆ ಬಹುತೇಕ ರಾಷ್ಟ್ರಗಳು ಭಾರತವನ್ನು ಹಿಂದೂಸ್ಥಾನ ಎಂದು ಅಂತ ಗುರುತಿಸುತ್ತವೆ ಎಂದು ಹೇಳಿದರು.

ಛತ್ರಪತಿ ಶಿವಾಜಿ ಮಹಾರಾಜ, ರಾಣಾಪ್ರತಾಪ್ ಸಿಂಹನಂತ ಅನೇಕ ಶೂರರು ಹಿಂದೂ ಧರ್ಮಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ಹಿಂದೂತ್ವ ಭಾರತದ ಆತ್ಮ, ಹಿಂದೂತ್ವ ಭಾರತದ ಉಸಿರು ಎಂದು ವೀರಾವೇಶದಿಂದ ಹೋರಾಡಿದ್ದಾರೆ. ಇಂದಿಗೂ ಭಾರತವನ್ನು ಕೊಲ್ಲಬೇಕು, ಹಿಂದೂತ್ವ ಕೊಲ್ಲಬೇಕು ಎನ್ನುವ ಮನಸ್ಥಿತಿಗಳು ಇವೆ. ಇದಕ್ಕಾಗಿ ಹಿಂದೂ ಸಮಾವೇಶದ ಅವಶ್ಯಕತೆ ಇದೆ ಎಂದರು.

ಸಮ್ಮೇಳನದ ಸಾನ್ನಿಧ್ಯ ಡಾ.ನೀಲಮ್ಮತಾಯಿ ಅಸುಂಡಿ ವಹಿಸಿಕೊಂಡಿದ್ದರು. ರಾಘವೇಂದ್ರ ಹಬೀಬ, ಅಶ್ವಿನಿ ಜಗತಾಪ, ರಾಣಿ ಚಂದಾವರಿ, ಪರಮೇಶ ನಾಯಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಆರೋಪಿ ಧನಂಜಯ ಬಂಧನ

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ ಖಾಸಗಿ ಎಸ್ಎಲ್ಎಸ್ ವಸತಿ ಶಾಲೆ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಮತ್ತೊಬ್ಬ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಯತ್ನ ನಡೆಸಿರುವ ಆರೋಪದಲ್ಲಿ ಶಾಲೆಯ ಮಾಲೀಕ , ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಈತನ ಪತ್ನಿಯನ್ನು ಇಲ್ಲಿನ ಪೊಲೀಸರು ಬಂಧಿಸಿದಾರೆ.

ವಸತಿ ಶಾಲಾ ಮಾಲೀಕ ಡಿ.ಎಸ್.ಧನಂಜಯ ಹಾಗೂ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಆರೋಪದಲ್ಲಿ ಆರೋಪಿ ಪತ್ನಿ ಶಾಲೆಯ ಪ್ರಾಂಶುಪಾಲೆ ಶೈಲಜಾ ಬಂಧಿತರು. ಇವರ ವಿರುದ್ಧ ದೇವನಹಳ್ಳಿ ಠಾಣೆಯಲ್ಲಿ ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ ಕಾಯ್ದೆ, 2012 ಪೋಕ್ಸೋ ಪ್ರಕರಣ ದಾಖಲಾಗಿದೆ. ಇಬ್ಬರನ್ನೂ ಬಂಧಿಸಲಾಗಿದೆ.

ಫೆ.9 ರಂದು ಪ್ರಕರಣ: ಬೆಂಗಳೂರು ಮೂಲದ ಅಕ್ಕ ತಂಗಿಯಾಗಿರುವ ಇಬ್ಬರು ವಿದ್ಯಾರ್ಥಿನಿಯರು ವಸತಿ ಶಾಲೆಯಲ್ಲಿ ಏಳು ಮತ್ತು ಎಂಟನೇ ತರಗತಿಯಲ್ಲಿ ಓದುತ್ತಿದ್ದರು. ಫೆ.9ರಂದು ಆರೋಪಿ ಪುಸಲಾಯಿಸಿ ಅದೇ ಶಾಲೆಯ ಕೊಠಡಿಯೊಂದರಲ್ಲಿ ಅಕ್ಕನ ಮೇಲೆ ಎರಡು ಬಾರಿ ಅತ್ಯಾಚಾರ ಎಸಗಿದ್ದಾನೆ. ನಂತರದಲ್ಲಿ ತಂಗಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆಂದು ದೂರಲಾಗಿದೆ. ಈ ವೇಳೆ ವಿದ್ಯಾರ್ಥಿನಿ ತಪ್ಪಿಸಿಕೊಂಡು ಬಾತ್ ರೂಂನಲ್ಲಿ ಅವಿತುಕೊಂಡಿದ್ದರಿಂದ ಈತನ ಪೈಶಾಚಿಕ ಕೃತ್ಯದಿಂದ ಬಚಾವಾಗಿದ್ದಾಳೆ. ನಂತರ ಮತ್ತೆ ಮೇಲೆ ಅತ್ಯಾಚಾರ ನಡೆಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಬಳಿಕ ಎಸಿಪಿ ಶ್ರೀಹರ್ಷ, ಪಿಐ ಉಮೇಶ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನೇಯ ಇದ್ದರು.

ರಾಮ ಬಾಣ



ಸಂಕೇತ್ ಕುಟುಂಬಕ್ಕೆ ಉದ್ಯೋಗ ನೀಡಿ: ಬಿವೈವಿ

ಶಿವಮೊಗ್ಗ: ಹತ್ಯೆಯಾದ ಎಸ್ಎಸ್ಎಲ್ ವಿದ್ಯಾರ್ಥಿ ಊರುಗಡೂರಿನ ಸಂಕೇತ್ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ ಚರ್ಚಿಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಶನಿವಾರ ಊರುಗಡೂರಿನ ಸಂಕೇತ್ ಮನೆಗೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೆಚ್ಚಿನ ಪರಿಹಾರ ಹಾಗೂ ಸರ್ಕಾರಿ ನೌಕರಿಗೆ ಕುಟುಂಬ ಬೇಡಿಕೆ ಇಟ್ಟಿದೆ. ಅದನ್ನು ಸಿಎಂ ಗಮನಕ್ಕೆ ತರಲಾಗುತ್ತದೆ ಎಂದರು.

ಮಂಗಳೂರಿನಲ್ಲಿ ಅನ್ಯಕೋಮಿನವರು ಹತ್ಯೆ ಯಾದಾಗ 25ರಿಂದ 50 ಲಕ್ಷ ರೂ.ವರೆಗೆ ಸರ್ಕಾರ ಪರಿಹಾರ ನೀಡಿದೆ. ಆದರೆ ಯಲ್ಲಾಪುರದಲ್ಲಿ ನಡೆದ ಘಟನೆಯಲ್ಲೂ ಹೆಚ್ಚಿನ ಪರಿಹಾರ ನೀಡಿಲ್ಲ. ಇಲ್ಲಿ ಹತ್ಯೆಯಾದ ಸಂಕೇತ್ ಕುಟುಂಬಕ್ಕೆ ಸೂಕ್ತ ಪರಿಹಾರ ಸಿಕ್ಕಿಲ್ಲ ಎಂದರು. ವಿದ್ಯಾರ್ಥಿಗಳ ಮನಸ್ಥಿತಿ ಹತ್ಯೆ ಮಾಡುವ ಹಂತಕ್ಕೆ ತಲುಪಿರುವುದು ಆತಂಕಕಾರಿಯಾಗಿದೆ. ಈ ಬಗ್ಗೆ ಸಮಾಜ, ಪಾಲಕರು, ಶಿಕ್ಷಕರು ಚಿಂತಿಸುವ ಅಗತ್ಯವಿದೆ. ಇಂತಹ ಮನಸ್ಥಿತಿಗೆ ಸೂಕ್ತ ಕಾರಣ ತಿಳಿದು ಪರಿಹಾರ ಕಂಡುಕೊಳ್ಳಬೇಕಿದೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಗೃಹಸಚಿವರಿದ್ದಾರೆ. ಕೊಡಗಿನಲ್ಲಿ ಅನ್ಯ ಕೋಮಿನವರಿಂದ ಹಿಂದೂ ಯುವಕನ ಮೇಲೆ ಹಲ್ಲೆ ನಡೆದಿದೆ. ಬಾಗಲಕೋಟೆ ಯಲ್ಲೂ ಗಲಾಟೆ ಆಗಿದೆ. ಆದರೂ ಗೃಹ ಸಚಿವರು ಗಟ್ಟಿ ನಿರ್ಧಾರ ಕೈಗೊಂಡಿಲ್ಲ ಎಂದರು.



ಹತ್ಯೆಯಾದ ವಿದ್ಯಾರ್ಥಿ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವರು ಇಂದಿಗೂ ಬಂದಿಲ್ಲ. ಸಾಂತ್ವನ ಹೇಳುವ ಮನಸ್ಥಿತಿಯೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಮನುಷ್ಯತ್ವ ಇರುವ ಯಾವುದೇ ಸರ್ಕಾರ ಹೀಗೆ ನಡೆದುಕೊಳ್ಳುವುದಿಲ್ಲ. ಪರಿಹಾರ ನೀಡುವುದು ದೂರದ ಮಾತು. ಕೊನೆ ಪಕ್ಷ ಸಾಂತ್ವನವಾದರೂ ಹೇಳಬೇಕಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾರತ ಎಂದೊಡನೆ ನೆನೆಪಾಗುವುದು ಧಾರ್ಮಿಕತೆಯೇ ಹೊರತು ಯುದ್ಧ, ಅರಾಜಕತೆ ಅಲ್ಲ - ಪಿ. ಎಸ್. ಪ್ರಕಾಶ್
- ರಷ್ಯಾ ಎಂದೊಡನೆ ಕಮ್ಯೂನಿಸಂ, ಇಂಡೋನೇಷ್ಯಾ ಎಂದೊಡನೆ ರಾಮಾಯಣ , ಸ್ವಿಜರ್ಲೆಂಡ್ ಎಂದೊಡನೆ ಸ್ವಿಸ್ ಬ್ಯಾಂಕ್ ನೆನೆಪಾಗುತ್ತೆ ಮತ್ತು ಪಾಕಿಸ್ತಾನ ಎಂದೊಡನೆ ನೆನೆಪಾಗುವುದು ಭಯೋತ್ಪಾದನೆಯೇ ಹೊರತು ಶಾಂತಿ ಸೌಹಾರ್ದತೆ ಅಲ್ಲ, ನಿಜ ತಾನೆ?

ದಿನ ಭವಿಷ್ಯ

ಮೇಷ ಇತರರ ಜತೆ ವ್ಯವಹರಿಸುವಲ್ಲಿ ಸಫಲತೆ ಕಾಣುವಿರಿ. ಕೌಟುಂಬಿಕ ಸಂಬಂಧ ಕೆಡದಂತೆ ನೋಡಿಕೊಳ್ಳಿ. ಲಘು ಅನಾರೋಗ್ಯವಾದೀತು.

ವೃಷಭ ಸಂಬಂಧದಲ್ಲಿ ನಿಮ್ಮ ತಾಳ್ಮೆ ಪರೀಕ್ಷಿಸುವ ಬೆಳವಣಿಗೆ. ಕ್ಷುಲ್ಲಕ ವಿಷಯವೆಂದು ಕಡೆಗಣನೆ ಬೇಡ. ಸಂಘರ್ಷಕ್ಕೆ ಇಳಿಯಬೇಡಿ.

ಮಿಥುನ ವೈಯಕ್ತಿಕ ಗುರಿ ಸಾಧಿಸಲು ಹೆಚ್ಚು ಶ್ರಮ ಹಾಕುವಿರಿ. ಸ್ವಲ್ಪ ಮಟ್ಟಿನ ಹತಾಶೆ, ಅಸಹನೆ ಉಂಟಾದೀತು. ಹಣದ ಕೊರತೆ ಕಾಡಬಹುದು.

ಕಟಕ ಸಾಧನೆಯ ದಿನ. ಕೆಲಸದಲ್ಲಿ ಪರಿಪೂರ್ಣತೆ. ಒತ್ತಡ ನಿವಾರಣೆ. ಯೋಚಿಸಿದ ಕಾರ್ಯದಲ್ಲಿ ಸಫಲತೆ. ಕೌಟುಂಬಿಕ ಇಷ್ಟಾರ್ಥ ಪೂರೈಸಲಿದೆ.

ಸಿಂಹ ಸಂತೋಷದ ದಿನ. ಖಾಸಗಿ ಬದುಕಿನಲ್ಲಿ ಪ್ರೀತಿ, ಸಾಮರಸ್ಯ. ವೃತ್ತಿ ವ್ಯವಹಾರ ಸುಲಲಿತ. ಕೇಳಿದವರಿಗೆ ಸಾಲ ಕೊಡಲು ಹೋಗಬೇಡಿ.

ಕನ್ಯಾ ಕ್ಲಿಷ್ಟಕರ ಪರಿಸ್ಥಿತಿ ಉದ್ಭವಿಸಿದರೂ ಬಳಿಕ ಶಮನವಾಗಲಿದೆ. ಕೆಲಸದಲ್ಲಿ ನಿಮ್ಮ ಕೌಶಲ್ಯ ಅನಾವರಣ. ಶ್ಲಾಘನೆ ಪಡೆಯುವಿರಿ. ಪ್ರೀತಿಯಲ್ಲಿ ಯಶಸ್ಸು.

ತುಲಾ ದಿನವಿಡೀ ಕೆಲಸದ ಒತ್ತಡ. ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ಸಣ್ಣ ಲೋಪ ಗಂಭೀರ ಪರಿಣಾಮ ಬೀರೀತು. ಕೌಟುಂಬಿಕ ಒತ್ತಡ.

ವೃಶ್ಚಿಕ ಖಾಸಗಿ ಬದುಕಲ್ಲಿ ಒತ್ತಡ ನಿವಾರಣೆ. ಯಾವುದೇ ಸಮಸ್ಯೆ ತಾತ್ಕಾಲಿಕ ಎಂಬುದು ಅರಿವಿರಲಿ. ಮುಖದಲ್ಲಿ ಸದಾ ನಗುವಿರಲಿ.

ಧನು ಕೆಲಸ ಸುಗಮವಾಗಿ ಸಾಗದು. ಅಡ್ಡಿಗಳು, ಮಾನಸಿಕ ಒತ್ತಡ, ಅಸಹನೆ ಕಾಡುವುದು. ಹಣದ ವಿಷಯದಲ್ಲಿ ಪ್ರಮುಖ ನಿರ್ಧಾರ ತಾಳದಿರಿ.

ಮಕರ ಕೆಲಸದ ಪ್ರಗತಿ ಬಗ್ಗೆ ಕೆಲವು ಚಿಂತೆ ಕಾಡುವುದು. ಬೆಂಬಲದ ಕೊರತೆ. ಅನ್ಯರ ಮೇಲಿನ ದ್ವೇಷ ಬಿಡಿ, ಸಹಕಾರಕ್ಕೆ ಮನ ಮಾಡಿ. ಕೌಟುಂಬಿಕ ಉದ್ವಿಗ್ನತೆ.

ಕುಂಭ ನಿರಾಳ ಮನಸ್ಸು. ಹೊಸ ಯೋಜನೆಗೆ ಕೈಹಚ್ಚಲು ಕಾಲ ಸೂಕ್ತ. ಕೆಲಸದಲ್ಲಿ ಬಡ್ತಿ ಸಂಭವ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ.

ಮೀನ ಗುಣಾತ್ಮಕ ಬೆಳವಣಿಗೆಯ ದಿನ. ಖಾಸಗಿ ಬದುಕಲ್ಲಿ ನೀವು ಇಚ್ಛಿಸಿದ ಕಾರ್ಯ ಸಿದ್ಧಿ. ವೃತ್ತಿಯಲ್ಲೂ ಸಫಲತೆ. ಇಷ್ಟ ವಸ್ತು ಖರೀದಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 0,3,7,2

ಮಂಗಳೂರಿನಿಂದ ನೇರ ಸಂಚಾರ ಬಂದ್ | ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ವಾಪಸ್

ಗಲ್ಫ್ ರಾಷ್ಟ್ರಗಳಿಗೆ ವಿಮಾನ ಹಾರಾಟ ವ್ಯತ್ಯಯ

ಮಂಗಳೂರು: ಇಸ್ರೇಲ್- ಇರಾನ್ ನಡುವಿನ ಯುದ್ಧದ ಬಿಸಿ ವಿಮಾನ ಪ್ರಯಾಣಿಕರಿಗೂ ತಟ್ಟಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳಿಗೆ ತೆರಳುವ ವಿಮಾನಗಳು ತಮ್ಮ ಹಾರಾಟ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ತೀವ್ರ ಬವಣೆಪಟ್ಟರು.

ಮಧ್ಯಪ್ರಾಚ್ಯದ ಕಡೆಗೆ ಹೋಗುವ ವಿಮಾನಗಳಿಗೆ ಮಂಗಳೂರಿನಿಂದ ನೇರ ಮಾರ್ಗವಿಲ್ಲ. ಆದ ಕಾರಣ ಗಲ್ಫ್ ರಾಷ್ಟ್ರಗಳಿಗೆ ತೆರಳಿ ನಂತರ ಸಂಚಾರ ಮುಂದುವರಿಸಬೇಕಿತ್ತು. ಹೀಗಾಗಿ ಮಂಗಳೂರು ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳತ್ತ ಹೊರಟ ಕೆಲವು ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದ್ದರೆ, ಇನ್ನೂ ಕೆಲವು ವಿಮಾನಗಳು ಮಂಗಳೂರಿಗೆ ಮರಳಿವೆ. ಅದೇ ರೀತಿ ಗಲ್ಫ್ ರಾಷ್ಟ್ರಗಳಿಂದ ಮಂಗಳೂರಿಗೆ ಆಗಮಿಸಬೇಕಿದ್ದ ಕೆಲವು ವಿಮಾನಗಳ ಸಂಚಾರವನ್ನೂ ರದ್ದು ಮಾಡಲಾಗಿದೆ.

ಯಾವೆಲ್ಲಾ ವಿಮಾನ ರದ್ದು? ಮಂಗಳೂರಿನಿಂದ ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ಟೇಕಾಫ್ ಆದ ಕೆಲ ಹೊತ್ತಿನಲ್ಲಿ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ. ಮಂಗಳೂರು- ದೋಹಾ ನಡುವಿನ ಐಎಕ್ಸ್ 821 ವಿಮಾನವನ್ನು ಮುಂಬೈ ಏರ್ ಪೋರ್ಟ್‌ನಲ್ಲಿ ಇಳಿಸಲಾಯಿತು. ರಾತ್ರಿ 8.45ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ದೋಹಾ- ಮಂಗಳೂರು ನಡುವಿನ ಐಎಕ್ಸ್ 822 ಸಂಖ್ಯೆಯ ವಿಮಾನ, ದುಬೈನಿಂದ 10.10ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ಐಎಕ್ಸ್ 832 ಸಂಖ್ಯೆಯ ವಿಮಾನ ಸಂಚಾರ ರದ್ದಾಗಿತ್ತು.

ಮಂಗಳೂರಿನಿಂದ ಹೊರಡದೇ ನಿಂತ ವಿಮಾನಗಳು! ಮಂಗಳೂರು ವಿಮಾನ ನಿಲ್ದಾಣದಿಂದ 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 831 ಮಂಗಳೂರು- ದುಬೈ ವಿಮಾನ, 11.10ಕ್ಕೆ ಹೊರಡಬೇಕಿದ್ದ ಐಎಕ್ಸ್ 847 ಮಂಗಳೂರು- ದಮ್ಮಾಮ್ ವಿಮಾನ, 8.15ಕ್ಕೆ ಹೊರಡಬೇಕಿದ್ದ ಐಎಕ್ಸ್ 813 ಮಂಗಳೂರು- ದುಬೈ ವಿಮಾನ, 2.05ಕ್ಕೆ ಹೊರಡಬೇಕಿದ್ದ ಐಎಕ್ಸ್ 851 ಮಂಗಳೂರು- ಕುವೈಟ್ ವಿಮಾನ, 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 815 ಮಂಗಳೂರು- ಅಬುಧಾಬಿ ವಿಮಾನ, 7.15ಕ್ಕೆ ಹೊರಡಬೇಕಿದ್ದ 6ಇ 1467 ಮಂಗಳೂರು- ದುಬೈ ವಿಮಾನ ಸಂಚಾರವನ್ನು ರದ್ದು ಮಾಡಲಾಗಿದೆ.



ಮಧ್ಯಪ್ರಾಚ್ಯ ಸಮರಾಂಗಣ

ಪುಟ 1ರಿಂದ ಆದರೆ, ಇರಾನ್ ಮಾಧ್ಯಮಗಳು ಇದನ್ನು ನಿರಾಕರಿಸಿವೆ.

ಇರಾನ್ ರಕ್ಷಣಾ ಸಚಿವ ಸಾವು: ಇರಾನ್ ರಕ್ಷಣಾ ಸಚಿವ ಅಮೀರ್ ನಾಸಿರ್ ಜಾದೆಹ್ ದಾಳಿಯಲ್ಲಿ ಮೃತರಾಗಿರುವುದಾಗಿ ವರದಿಯಾಗಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕಮಾಂಡರ್ ಮೊಹಮ್ಮದ್ ಪಕ್ಪೋರ್ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಕ್ಷಿಪಣಿ ಪ್ರತೀಕಾರ- ಇಸ್ರೇಲ್, ಗಲ್ಫ್ ರಾಜಧಾನಿಗಳು ನಡುಗು: ದಾಳಿಯ ಕೆಲವೇ ಗಂಟೆಗಳಲ್ಲಿ ಇರಾನ್ ಇಸ್ರೇಲ್ ಕಡೆಗೆ 'ಕ್ಷಿಪಣಿಗಳ ಬ್ಯಾರೇಜ್' ಉಡಾಯಿಸಿದೆ. ಜೆರುಸಲೇಮ್ ಹಾಗೂ ಟೆಲ್ ಅವೀವ್‌ನಲ್ಲಿ ಸೈರನ್ ಮೊಳಗಿದವು. ಕೆಲವು ನಾಗರಿಕರು ಸುರಕ್ಷಿತ ತಾಣಗಳಿಗೆ ತೆರಳಿದ್ದಾರೆ. ಬಳಿಕ ಗಲ್ಫ್ ಪ್ರದೇಶದ ಅಮೆರಿಕ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಮತ್ತು ಡ್ರೋನ್ ಮೂಲಕ ಇರಾನ್ ದಾಳಿ ನಡೆಸಿತು. ಅಬುಧಾಬಿಯಲ್ಲಿ ಕ್ಷಿಪಣಿ ಅವಶೇಷ ಬಿದ್ದು ಏಷ್ಯನ್ ನಾಗರಿಕನೊಬ್ಬ ಸಾವನ್ನಪ್ಪಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ತಿಳಿಸಿದೆ.

ಇರಾನ್ ಕಿಡಿ: ಇರಾನ್ ವಿದೇಶಾಂಗ ಸಚಿವ ಸಯೀದ್ ಅಬ್ಬಾಸ್ ಅರಘ್ಚಿ ದಾಳಿಯನ್ನು 'ಕ್ರಿಮಿನಲ್ ಮಿಲಿಟರಿ ಆಕ್ರಮಣ' ಎಂದು ಖಂಡಿಸಿದರು. ಟ್ರಂಪ್ ಅವರು ಅಮೆರಿಕ ಫಸ್ಟ್ ಅನ್ನು ಇಸ್ರೇಲ್ ಫಸ್ಟ್ ಆಗಿ ಪರಿವರ್ತಿಸಿದ್ದಾರೆ. ಅದೇ ಅಮೆರಿಕ ಕೊನೆಯದು ಎಂದರ್ಥ. ಏಕೆಂದರೆ ನಮ್ಮ ಸಶಸ್ತ್ರ ಪಡೆಗಳು ಸಜ್ಜಾಗಿವೆ ಎಂದು ಹೇಳಿದರು. ಇರಾನ್ ಮಾತುಕತೆಗೂ ಸಿದ್ಧವಿದ್ದರೂ ರಕ್ಷಣೆಗೆ ಇನ್ನಷ್ಟು ಸಜ್ಜಾಗಿದೆ ಎಂದು ಸಚಿವಾಲಯ ಹೇಳಿದೆ. ವಿಶ್ವಸಂಸ್ಥೆ ಹಾಗೂ ಅಂತಾರಾಷ್ಟ್ರೀಯ ಸಮುದಾಯ ತುರ್ತು ಕ್ರಮ ಕೈಗೊಳ್ಳಬೇಕೆಂದು ಟೆಹ್ರಾನ್ ಮನವಿ ಮಾಡಿದೆ.

ಟ್ರಂಪ್-ನೆತನ್ಯಾಹು ಹೇಳಿಕೆ: ಇದರ ಮಧ್ಯೆ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 1979ರಿಂದ ದೇಶವನ್ನು ಆಡಳಿತ ನಡೆಸುತ್ತಿರುವ ಇಸ್ಲಾಮಿಕ್ ನಾಯಕತ್ವದ ವಿರುದ್ಧ ಎದ್ದು ನಿಲ್ಲುವಂತೆ ಇರಾನ್ ಜನತೆಗೆ ಕರೆ ನೀಡಿದ್ದಾರೆ. ಈ ಮೂಲಕ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ ಎಂದಿದ್ದಾರೆ. ನಾವು ಕಾರ್ಯಾಚರಣೆ ಮುಗಿಸಿದ ನಂತರ ನಿಮ್ಮ ಸರ್ಕಾರವನ್ನು ನೀವು ಮಾಡಿಕೊಳ್ಳಿ. ಇದು ಪೀಳಿಗೆಗಳ ಮಟ್ಟಿಗೆ ನಿಮ್ಮ ಏಕೈಕ ಅವಕಾಶವಾಗಿರಬಹುದು. ಅನೇಕ ವರ್ಷಗಳಿಂದ ನೀವು ಅಮೆರಿಕದ ನೆರವಿಗಾಗಿ ಕೇಳಿದ್ದೀರಿ, ಆದರೆ ಅದು ಸಿಗಲಿಲ್ಲ ಎಂದು ಪ್ರಮುಖ ಯುದ್ಧ ಕಾರ್ಯಾಚರಣೆಗಳು ಆರಂಭವಾಗಿವೆ ಎಂದು ಘೋಷಿಸಿದ ವಿಡಿಯೋ ಸಂದೇಶದಲ್ಲಿ ಟ್ರಂಪ್ ಹೇಳಿದರು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಇದೇ ಗುರಿಯನ್ನು ಪ್ರತಿಧ್ವನಿಸಿದರು. ನಮ್ಮ ಜಂಟಿ ಕಾರ್ಯಾಚರಣೆ ಧೈರ್ಯಶಾಲಿ ಇರಾನ್ ಜನತೆಗೆ ತಮ್ಮ ಭವಿಷ್ಯವನ್ನು ತಮ್ಮ ಕೈಗೆತ್ತಿಕೊಳ್ಳಲು ಅಗತ್ಯ ಪರಿಸ್ಥಿತಿಗಳನ್ನು ಸೃಷ್ಟಿಸಲಿದೆ ಎಂದು ಅವರು ಹೇಳಿದರು.

ಬುರ್ಜ್ ಖಲೀಫಾದಿಂದ ಸ್ಥಳಾಂತರ: ಯುಎಇ, ಅಬುಧಾಬಿ, ದುಬೈ, ಕತಾರ್‌ನ ದೋಹಾ ಮತ್ತು ಸೌದಿ ಅರೇಬಿಯಾದ ರಿಯಾದ್ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದರಿಂದ ದುಬೈನ ಬುರ್ಜ್ ಖಲೀಫಾದಿಂದ ಜನರನ್ನು ಸ್ಥಳಾಂತರಿಸಲಾಗಿದೆ. ಸ್ಥಳೀಯರ ಪ್ರಕಾರ, ಅಲ್ಲಲ್ಲಿ ಸ್ಫೋಟಗಳಾಗುತ್ತಿರುವುದು ಗೊತ್ತಾಗುತ್ತಿದೆ.

ರಾಜಕೀಯ ಹಿನ್ನೆಲೆ

- ಟ್ರಂಪ್ ಆಡಳಿತವು ಕಳೆದ 8 ತಿಂಗಳಲ್ಲಿ 2ನೇ ಬಾರಿ ಇರಾನ್ ವಿರುದ್ಧ ಸೇನಾ ಕ್ರಮ
- ಇರಾನ್ ನೌಕಾಪಡೆಯನ್ನು ನಾಶಮಾಡುತ್ತೇವೆ ಎಂಬ ಟ್ರಂಪ್ ಎಚ್ಚರಿಕೆ
- ಶರಣಾದರೆ ರಕ್ಷಣೆ ನೀಡುತ್ತೇವೆ ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ ಸದಸ್ಯರಿಗೆ ಕರೆ

ಎಲ್ಲೆಲ್ಲಿ ದಾಳಿ?

ಬಹ್ರೇನ್: ಮನಾಮಾದಲ್ಲಿರುವ ಯುಎಸ್ ಐದನೇ ಫ್ಲೀಟ್ ಸಂಪರ್ಕಿತ ಸೌಲಭ್ಯ ಗುರಿ.
ಕತಾರ್: ಅಲ್ ಉದೈದ್ ವಾಯುನೆಲೆ ಬಳಿ ಸ್ಫೋಟ; ವಾಯು ರಕ್ಷಣಾ ವ್ಯವಸ್ಥೆ ಸಕ್ರಿಯ.
ಯುಎಇ: ಅಬುಧಾಬಿ, ದುಬೈನಲ್ಲಿ ಭಾರೀ ಸ್ಫೋಟಗಳ ಶಬ್ದ; ಬುರ್ಜ್ ಖಲೀಫಾ ಸ್ಥಳಾಂತರ.
ಸೌದಿ ಅರೇಬಿಯಾ: ರಿಯಾದ್‌ನಲ್ಲಿ ಸ್ಫೋಟಗಳ ವರದಿ; ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ರಕ್ಷಣಾ ವ್ಯವಸ್ಥೆ ಸಕ್ರಿಯ.
ಕುವೈತ್: ವಾಯುಪ್ರದೇಶ ಮುಚ್ಚುವಿಕೆ ಘೋಷಣೆ.
ಇರಾಕ್: ಜುರ್ಫ್ ಅಲ್-ಸುಖರ್ ನೆಲೆಯ ಮೇಲೆ ಬಾಂಬ್ ದಾಳಿ; ಕತೇಬ್ ಹಿಜ್ಬುಲ್ಲಾ 47ನೇ ಬ್ರಿಗೇಡ್ ಗುರಿ.
ಜೋರ್ಡಾನ್: ಸೌದಿ ಗುರಿಯಾಗಿದ್ದ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿತು.

ಗಲ್ಫ್ ಪ್ರದೇಶದ ಅಮೆರಿಕ ನೆಲೆ

- ಅಲ್ ಉದೈದ್ (ಕತಾರ್) ಯುಎಸ್ ಸೆಂಟ್ಕಾಮ್ ಪ್ರಧಾನ ಕಚೇರಿ
- ಐದನೇ ಫ್ಲೀಟ್ (ಬಹ್ರೇನ್)
- ಅಲ್ ದಫ್ರಾ (ಯುಎಇ)
- ಪ್ರಿನ್ಸ್ ಸುಲ್ತಾನ್ ವಾಯುನೆಲೆ (ಸೌದಿ)
- ಕ್ಯಾಂಪ್ ಅರಿಫ್ಜಾನ್, ಅಲಿ ಅಲ್ ಸಲೇಮ್ (ಕುವೈತ್)
- ಐನ್ ಅಲ್-ಅಸಾದ್ (ಇರಾಕ್)

ಕೆಂಪೇಗೌಡ ವಿಮಾನ ಸಂಚಾರ ರದ್ದು

ಬೆಂಗಳೂರು: ಅಮೆರಿಕ ಮತ್ತು ಇಸ್ರೇಲ್ ಸೇರಿಕೊಂಡು ಇರಾನ್ ಮೇಲೆ ದಾಳಿ ಮಾಡಲು ಆರಂಭಿಸಿದ್ದು, ಈ ಹಿನ್ನೆಲೆ ಮುಂಜಾಗ್ರತಾ ಕ್ರಮವಾಗಿ ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿದೆ. ಕೆಂಪೇಗೌಡ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ ವಿಮಾನಗಳು ಸೇರಿದಂತೆ ವಿದೇಶದಿಂದ ಬೆಂಗಳೂರಿಗೆ ಬರಬೇಕಿದ್ದ ಕೆಲ ವಿಮಾನಗಳನ್ನು ರದ್ದಾಗಿದೆ. ಅದರಲ್ಲೂ ಪ್ರಮುಖವಾಗಿ ದುಬೈ, ಜೋರ್ಡಾನ್, ದೋಹಾ, ದಮ್ಮಮ್, ಬಹ್ರೈನ್, ಶರ್ಜಾ, ಕುವೈತ್, ರಾಸ್ ಅಲ್-ಖೈಮಾ ದೇಶಗಳಿಗೆ ವಿಮಾನ ಹಾರಾಟ ಸೇವೆ ರದ್ದಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡ ಇಂಡಿಗೋ, ಇರಾನ್ ಮತ್ತು ಮಧ್ಯಪ್ರಾಚ್ಯದಲ್ಲಿನ ವಾಯು ಪ್ರದೇಶ ನಿರ್ಬಂಧ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಮಧ್ಯಪ್ರಾಚ್ಯಕ್ಕೆ ಪ್ರಯಾಣ ನಡೆಸುವ ಎಲ್ಲಾ ವಿಮಾನಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು. ಪ್ರಯಾಣಿಕರು ಮತ್ತು ಸಿಬ್ಬಂದಿಗಳ ಭದ್ರತೆ ಮತ್ತು ಸುರಕ್ಷತೆಯು ಪ್ರಮುಖವಾಗಿದ್ದು, ಈ ಹಿನ್ನೆಲೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ತಮ್ಮ ತಂಡವು ಅಲ್ಲಿನ ಪರಿಸ್ಥಿತಿಗಳ ಸೂಕ್ಷ್ಮ ಅವಲೋಕನ ನಡೆಸಿದೆ. ವಿಮಾನ ಹಾರಾಟದಲ್ಲಿ ಅಡ್ಡಿಯುಂಟಾಗಲಿದೆ ಎಂದಿದೆ. ಈ ಕುರಿತು ಮಾಹಿತಿ ಹಂಚಿಕೊಂಡ ಏರ್ ಇಂಡಿಯಾ, ಮಧ್ಯಪ್ರದೇಶದ ಹಲವು ಭಾಗದಲ್ಲಿ ಉಂಟಾಗುತ್ತಿರುವ ಬೆಳವಣಿಗೆ ಹಿನ್ನೆಲೆ ಮಧ್ಯಪ್ರಾಚ್ಯದ ಎಲ್ಲಾ ಪ್ರದೇಶಗಳ ಎಲ್ಲಾ ಏರ್ ಇಂಡಿಯಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ಪ್ರಯಾಣಿಕರ ಸುರಕ್ಷತೆಗಾಗಿ ಎಲ್ಲಾ ಅಗತ್ಯ ಕ್ರಮ ನಿರ್ವಹಣೆಗೆ ನಾವು ಬದ್ಧರಾಗಿರುವುದಾಗಿ ತಿಳಿಸಿದೆ.

ಸ್ವಾಯತ್ತತೆ, ಪ್ರಾದೇಶಿಕ ಅಖಂಡತೆ ಗೌರವಿಸಿ: ಭಾರತ

ಹೊಸದಿಲ್ಲಿ: ಅಮೆರಿಕ- ಇಸ್ರೇಲ್ ಜಂಟಿ ದಾಳಿಯಿಂದ ಇರಾನ್‌ನಲ್ಲಿ ಉದ್ಭವಿಸಿದ ಭಾರೀ ಸೈನಿಕ ಸಂಘರ್ಷದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ತೀವ್ರ ಸಂಘರ್ಷವನ್ನು ತಿಳಿಗೊಳಿಸುವಂತೆ ಭಾರತ ವಿದೇಶಾಂಗ ಇಲಾಖೆ ಕರೆ ನೀಡಿದೆ. ಜತೆಗೆ ಎಲ್ಲ ದೇಶಗಳ ಸ್ವಾಯತ್ತತೆ ಹಾಗೂ ಪ್ರಾದೇಶಿಕ ಅಖಂಡತೆಯನ್ನು ಗೌರವಿಸಬೇಕು ಎಂದು ಸ್ಪಷ್ಟ ಸಂದೇಶ ರವಾನಿಸಿದೆ. ಈ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ(ಎಂಇಎ), ಎಲ್ಲರೂ ತಾಳ್ಮೆ ವಹಿಸಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದೆ. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಮಧ್ಯಪ್ರಾಚ್ಯದ ಹಲವು ಅಮೆರಿಕನ್ ಸೈನಿಕ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದೆ. ಕತಾರ್, ಕುವೈತ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಪ್ರದೇಶಗಳಲ್ಲಿನ ತಾಣಗಳು ಗುರಿಯಾಗಿರುವುದಾಗಿ ವರದಿಯಾಗಿದೆ. ಇದರಿಂದ ಪ್ರದೇಶದಲ್ಲಿ ಯುದ್ಧದ ಆತಂಕ ಮತ್ತಷ್ಟು ಗಾಢವಾಗಿದೆ. ಎಂದು ಎಂಇಎ ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಅಪಘಾತ: ಮೂವರು ಸಾವು

ರಾಯಚೂರು: ನಗರದಲ್ಲಿ ಶನಿವಾರ ಬೆಳಿಗ್ಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೂರು ಯುವಕರು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಮೃತರನ್ನು ನಗರದ ಸುಕಾಣಿ ಕಾಲೋನಿಯ ಮೊಹಮ್ಮದ್ ಅಲಿ ಪಾಷಾ (24), ನೂರ್ ಮಹಮ್ಮದ್ (19) ಹಾಗೂ ಫಯಾಜ್ (26) ಎಂದು ಗುರುತಿಸಲಾಗಿದೆ. ರಾತ್ರಿ 1/15 ನಿಮಿಷದ ಸಮಯದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಲಿಂಗಸುಗೂರು ರಸ್ತೆಯಲ್ಲಿ ಅಸ್ಕಿಹಾಳ ಕಡೆಯಿಂದ ಎಸ್.ಎನ್.ಟಿ ರಸ್ತೆ ಕಡೆಗೆ ಫಯಾಜ್ ಮೋಟಾರ ಸೈಕಲ್ ದಲ್ಲಿ ತನ್ನ ಸ್ನೇಹಿತರಾದ ಮೊಹಮ್ಮದ್ ಅಲಿ ಪಾಷ ಮತ್ತು ನೂರ ಮಹಮ್ಮದ್ ನನ್ನು ಕೂಡಿಸಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ.

ವೃತ್ತದ ಕೋರ್ಟ್ ಮಾರ್ಗವಾಗಿ ಅಶೋಕ ಲೈಲಂಡ್ ಗೂಡ್ಸ್ ಗಾಡಿ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ ಈ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೂಡ್ಸ್ ಗಾಡಿ ಅಹಮದಾಬಾದ್ ನಿಂದ ಚೆನ್ನೈಗೆ ತೆರಳುತ್ತಿತ್ತು. ಟ್ರಕ್ ಮತ್ತು ಚಾಲಕನನ್ನು ವಶಕ್ಕೆ ಪಡೆದಿದ್ದು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದುಬೈನಲ್ಲಿ ಸಿಲುಕಿದ ಎಂಎಲ್ಸಿ ಭೋಜೇಗೌಡ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಭೋಜೇಗೌಡ ಅವರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲಿಕಿಕೊಂಡಿದ್ದು, ಬೆಂಗಳೂರಿಗೆ ಆಗಮಿಸಲು ವಿಮಾನ ಇಲ್ಲದೇ ಪರದಾಡುವಂತಾಗಿದೆ. ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಪಡೆಗಳು ದಾಳಿ ನಡೆಸುತ್ತಿರುವ ಸಂದರ್ಭದಲ್ಲಿ ದುಬೈಯಿಂದ ಬೆಂಗಳೂರಿಗೆ ಪ್ರಯಾಣಿಸಲು ವಿಮಾನ ಇಲ್ಲದ ಕಾರಣ ದುಬೈನಲ್ಲೇ ಉಳಿದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾಗೆ ತೆರಳಿದ್ದ ಭೋಜೇಗೌಡ ಅವರು ದುಬೈನ ವಿಮಾನ ನಿಲ್ದಾಣದಲ್ಲಿ ಇರುವ ವೀಡಿಯೊ ಹಂಚಿಕೊಂಡಿದ್ದಾರೆ.

ಮಂಡಳಿ ಅಧ್ಯಕ್ಷರ ಅವಧಿ ಮುಂದುವರಿಕೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳ ಅಧೀನದಲ್ಲಿ ಬರುವ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ನಾಮನಿರ್ದೇಶನಗೊಂಡ ಅಧ್ಯಕ್ಷರ ಮುಕ್ತಾಯಗೊಂಡ, ಮುಕ್ತಾಯಗೊಳ್ಳಲಿರುವ ಅವಧಿಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ. ಕೆಲವು ಕಾಡಾ ಅಭಿವೃದ್ಧಿ ಪ್ರಾಧಿಕಾರ ಹಾಗೂ ಯೋಜನಾ ಪ್ರಾಧಿಕಾರದ ಅಧ್ಯಕ್ಷರ ಅವಧಿಯನ್ನು ಮುಂದುವರೆಸಿ ಆದೇಶ ಹೊರಡಿಸುವಂತೆ ಕೋರಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದರು. ಈ ಪತ್ರವನ್ನು ಆಧರಿಸಿ ಮುಖ್ಯಮಂತ್ರಿಗಳ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ ಅಧ್ಯಕ್ಷರ ಅವಧಿಯನ್ನು ವಿಸ್ತರಿಸಲಾಗಿದೆ. ಆಡಳಿತ ಇಲಾಖೆಯ ಸಂಬಂಧಿಸಿದ ಅಧಿನಿಯಮ, ನಿಯಮಗಳ ರೀತ್ಯಾ ತಕ್ಷಣದಿಂದ ಅಧ್ಯಕ್ಷರು ಕಾರ್ಯನಿರ್ವಹಿಸಲು ಸೂಕ್ತ ಅಧಿಸೂಚನೆ ಹೊರಡಿಸುವಂತೆ ಆಡಳಿತ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸೂಚನೆ ನೀಡಿದೆ.

ಪಿಯುಸಿ ಪರೀಕ್ಷೆ: 15,953 ವಿದ್ಯಾರ್ಥಿಗಳು ಗೈರು

ಬೆಂಗಳೂರು: ರಾಜ್ಯದಲ್ಲಿ ದ್ವಿತೀಯ ಪಿಯು ಪರೀಕ್ಷೆ-1 ಶನಿವಾರದಿಂದ ಆರಂಭವಾಗಿದ್ದು, ಪರೀಕ್ಷೆಯ ಮೊದಲ ದಿನದ ಕನ್ನಡ ಮತ್ತು ಅರೇಬಿಕ್ ಭಾಷಾ ಪರೀಕ್ಷೆಗೆ 15,953 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಈ ಪರೀಕ್ಷೆಗೆ ಒಟ್ಟು 5,09,085 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಇವರಲ್ಲಿ 9,93,132 (ಶೇ.96.87) ಪರೀಕ್ಷೆಗೆ ಹಾಜರಾಗಿದ್ದಾರೆ. ವಿಜಯಪುರದಲ್ಲಿ ಗರಿಷ್ಠ 2,370 ವಿದ್ಯಾರ್ಥಿಗಳು ಗೈರಾಗಿದ್ದು, ರಾಯಚೂರು - 1,139, ಬೀದರ್ -1,087, ಕಲಬುರಗಿ - 1,071 ವಿದ್ಯಾರ್ಥಿಗಳು ಗೈರಾಗಿದ್ದಾರೆ.



ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಹೃದಯಘಾತದಿಂದ ಸಾವು: ಚಿಕ್ಕೋಡಿಯ ಸಿಎಸ್ಎಸ್ ಪಿಯು ಕಾಲೇಜಿನ ಕಲಾ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಭೂಮಿಕಾ ಕರೆಪ್ಪ ಮಾಳಿಂಗೆ (17) ಹೃದಯಘಾತದಿಂದ ಮೃತ ಘಟನೆ ಶನಿವಾರ ನಡೆದಿದೆ. ತಾಲೂಕಿನ ಬಂಬಲವಾಡ ಗ್ರಾಮದ ನಿವಾಸಿ ಭೂಮಿಕಾ ಅಭ್ಯಾಸ ಪೂರ್ಣಗೊಳಿಸಿ ಸ್ನಾನ ಮಾಡುವ ಸಂದರ್ಭದಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ತೆರಳುವ ಮುನ್ನ ಸಾವನ್ನಪ್ಪಿದ್ದು, ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ

ಪುಟ 1ರಿಂದ ಸಂವಿಧಾನವು ಒಬ್ಬ ವ್ಯಕ್ತಿ ಜವಾಬ್ದಾರಿಯುತವಾಗಿ ವಿಕಾಸವಾಗಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ಮೌಢ್ಯ, ಕಂದಾಚಾರಗಳಿಂದ ಸಮಾಜ ಕೂಡಿದ್ದು, ಇವುಗಳನ್ನು ದೂರ ಮಾಡುವ ಶಿಕ್ಷಣ ಪಡೆಯುವುದು ಅತ್ಯಂತ ಅಗತ್ಯ ಎಂದರು.

ಶಿಕ್ಷಕರು ಸಂವಿಧಾನಬದ್ಧ ಕರ್ತವ್ಯವನ್ನು ನಿರ್ವಹಿಸಬೇಕು. ವಿಷಯಗಳನ್ನು ತರ್ಕ, ಪ್ರಶ್ನೆ ಮಾಡಿ ಒಪ್ಪಿಕೊಳ್ಳಬೇಕು. ಮಕ್ಕಳಿಗೂ ಅದನ್ನೇ ಕಲಿಸಬೇಕು. ಶಿಕ್ಷಕರಿಗೆ ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವ ಶಕ್ತಿ ಇದೆ. ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆಯಬೇಕು. ವೈಚಾರಿಕತೆ ಮತ್ತು ವೈಜ್ಞಾನಿಕ ಶಿಕ್ಷಣ ಶಿಕ್ಷರಿಂದ ಮಾತ್ರ ನೀಡಲು ಸಾಧ್ಯ ಎಂದು ತಿಳಿಸಿದರು. ಶಿಕ್ಷಕ ನಡವಳಿಕೆ ಉತ್ತಮವಾಗಿರಬೇಕು. ಎಲ್ಲ ಮಕ್ಕಳಿಗೂ ವೈಚಾರಿಕತೆ, ವೈಜ್ಞಾನಿಕತೆಯುಳ್ಳ ಶಿಕ್ಷಣ ನೀಡಿದರೆ ಸುಭದ್ರ, ಸುಂದರ ಸಮಾಜ ಕಟ್ಟಬಹುದು. ಭವಿಷ್ಯ ರೂಪಿಸುವಂತಹ ಮಕ್ಕಳನ್ನು ತಯಾರು ಮಾಡಿ ಎಂದು ಶಿಕ್ಷಕರಿಗೆ ಮುಖ್ಯಮಂತ್ರಿಗಳು ಕರೆ ನೀಡಿದರು.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಕ್ಷಣ ರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಂಘಮಿತ್ರ, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರಿಗೆ ಶಿಕ್ಷಕ ಸೈನಿಕ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಗುರುಕುಲ ಬಿರುದನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ, ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ, ಎಐಪಿಟಿಎಫ್ ರಾಷ್ಟ್ರಾಧ್ಯಕ್ಷ ಬಸವರಾಜ ಗುರಿಕಾರ, ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಸೇರಿದಂತೆ ಇತರರಿದ್ದರು.



ಬೇಡಿಕೆಗಳ ಈಡೇರಿಸಲು ಪ್ರಯತ್ನ

ಶಿಕ್ಷಕರ ಹಲವಾರು ಬೇಡಿಕೆಗಳನ್ನು ಹಂತ-ಹಂತವಾಗಿ ಈಡೇರಿಸಲಾಗುವುದು. 6 ಮತ್ತು 7ನೇ ವೇತನ ಆಯೋಗವನ್ನು ಜಾರಿ ಮಾಡಿದ್ದು, ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಒಪಿಎಸ್ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರುತ್ತೇವೆ. ವೇತನ ಬಡ್ತಿ ನೀಡಲು ಪ್ರಯತ್ನ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.



ಈ ನಾಡಿನ ಮಕ್ಕಳ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ಶಿಕ್ಷಕರಿಗೆ ನೀಡಲಾಗಿದೆ. ಅವರನ್ನು ಓಡುವ ಕುದುರೆಗಳಂತೆ ತಯಾರು ಮಾಡಬೇಕು. ಬೆಂಗಳೂರಿನಲ್ಲಿ ಸಿಗುವ ಗುಣಮಟ್ಟದ ಶಿಕ್ಷಣ ಪ್ರತಿಯೊಂದು ಶಾಲೆಯಲ್ಲೂ ದೊರೆಯುವಂತೆ ಶಿಕ್ಷಕರು ಶ್ರಮಿಸಬೇಕು.

■ ಡಿ.ಕೆ. ಶಿವಕುಮಾರ್, ಡಿಸಿಎಂ

ಕರುಳು ಕಲಕುವ ಕೇರಳ ಸ್ಟೋರಿ

ಪುಟ 1ರಿಂದ ಹಿಂದು ಪದ್ಧತಿಯಂತೆ ಮದುವೆಯನ್ನೂ ಆಗುತ್ತಾನೆ. ಅದಾದ ನಂತರ ನಿಧಾನವಾಗಿ ತನ್ನ ನಿಜ ಹೆಸರು, ಸ್ವರೂಪ ಪ್ರಕಟಿಸುತ್ತಾನೆ. ನಂತರ ಆತನ ಮನೆಯವರು ಆಕೆಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಾರೆ. ನಂತರ ಆಕೆಯೇ ಹೇಗೋ ತಪ್ಪಿಸಿಕೊಂಡುಬಂದು ಪೊಲೀಸರಿಗೆ ದೂರು ನೀಡುತ್ತಾಳೆ.

ಇದರಜತೆಗೇಇನ್ನೆರಡುಹುಡುಗಿಯರಕತೆಗಳೂ ಸಾಗುತ್ತವೆ. ಇದರಲ್ಲಿ ಒಬ್ಬಳು ಹುಡುಗಿ ಮನೆಯವರು ತನಗೆ ಬೇಕಾದ ಹಾಗೆ ರೀಲ್ಸ್ ಮಾಡಲು ಬಿಡುತ್ತಿಲ್ಲ ಎಂಬ ಕಾರಣಕ್ಕೆ ಬೇಸರಗೊಂಡಿದ್ದಳು. ಅದನ್ನು ದಾಳವಾಗಿ ಬಳಸಿಕೊಂಡ ಮುಸ್ಲಿಂ ಯುವಕ, ನಾವು ಮದುವೆಯಾದರೆ ನೀನು ಇಷ್ಟ ಬಂದ ಹಾಗೆ ರೀಲ್ಸ್ ಮಾಡಿ ಪ್ರಸಿದ್ಧಿಗಳಿಸಬಹುದು ಎಂದು ಆಕೆಯನ್ನು ಪುಸಲಾಯಿಸಿ ಮದುವೆಯಾಗಿ, ನಂತರ ಅವಳಿಗೆ ಬುರ್ಖಾ ಹಾಕಿಸುತ್ತಾನೆ. ರೀಲ್ಸ್ ಮಾಡುವುದು ನಮ್ಮ ಧರ್ಮದಲ್ಲಿ ಹರಾಮ್ (ಕೆಟ್ಟದ್ದು) ಅನ್ನುತ್ತಾನೆ.

ಇನ್ನೊಂದು ಹುಡುಗಿಯ ಕತೆ ಇನ್ನೂ ಭೀಕರ. ಆಕೆಯನ್ನು ಪ್ರೀತಿಸಿದ ಹುಡುಗ ಸಲೀಂ ಭಾರೀ ಪ್ರಗತಿಪರನಂತೆ ಆಕೆಯ ಬಳಿ ಮಾತನಾಡುತ್ತಾನೆ. ಆಕೆ ಯಾವ ಕಾರಣಕ್ಕೂ ಮತಾಂತರ ಆಗುವುದಿಲ್ಲ ಎಂದು ಹುಡುಗಿ ಸ್ಪಷ್ಟಪಡಿಸಿರುತ್ತಾಳೆ. ಮೊದಲು ಒಪ್ಪಿ ಆಕೆಯೊಂದಿಗೆ ಲಿವ್‌ಇನ್‌ನಲ್ಲಿರುವ ಆತ, ನಿಧಾನವಾಗಿ ಒಂದೊಂದೇ ಕಾರಣಗಳನ್ನು ಮುಂದಿಟ್ಟು ಈಕೆಯನ್ನು ಹಿಂಸಿಸಲಾರಂಭಿಸುತ್ತಾನೆ. ಹೀಗೆ ಲವ್ ಜಿಹಾದ್‌ನ ವಿವಿಧ ಸ್ವರೂಪಗಳನ್ನು ಸಿನಿಮಾ ತೆರೆದಿಡುತ್ತ ಸಾಗುತ್ತದೆ.

ಮುಸ್ಲಿಮರನ್ನು ಮದುವೆಯಾಗುತ್ತಿದ್ದಂತೆ ಮನೆಯವರು ಅವರನ್ನು ದೂರ ಮಾಡುತ್ತಾರೆ. ಅತ್ತ ಮದುವೆಯಾದವನೂ ಮೋಸ ಮಾಡುತ್ತಾನೆ. ಇದನ್ನು ಮನೆಯವರ ಬಳಿಯೂ ಹೇಳಿಕೊಳ್ಳಲಾಗದೆ, ಅನುಭವಿಸಲೂ ಆಗದೆ ತೊಳಲಾಡುವ ಸ್ಥಿತಿಯನ್ನು ಸಿನಿಮಾ ನೋಡುಗರ ಕರುಳು ಕಿವುಚುವಂತೆ ಮಾಡುತ್ತದೆ. ಆಮೇಲೆ ಈ ಹೆಣ್ಣುಮಕ್ಕಳು ಏನಾದರು? ಸಮಾಜ, ಸರ್ಕಾರ ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ಸಿನಿಮಾ ನೋಡಿಯೆ ತಿಳಿದುಕೊಳ್ಳಿ.

ಲವ್ ಜಿಹಾದ್ ಹೇಗೆ ಹಿಂದು ಹೆಣ್ಣುಮಕ್ಕಳನ್ನು ಆವರಿಸುತ್ತದೆ, ಅದರ ಹಿಂದೆ ಎಂತಹ ಜಾಲವಿದೆ ಎಂಬುದನ್ನು ಸಿನಿಮಾ ತೋರಿಸಿಕೊಡುತ್ತದೆ. ಇಂತಹ ದುರುಳರ ಕೃತ್ಯಗಳನ್ನು ಅರ್ಥಮಾಡಿಕೊಳ್ಳಲು ನೀವು ಕೇರಳ ಸ್ಟೋರಿ 2 ಸಿನಿಮಾನಾ ನೋಡಬೇಕು.

ಇಸ್ಲಾಮಿಕ್ ಆಡಳಿತವನ್ನೇ ಗುರಿಯಾಗಿಸಿ ಅಮೆರಿಕ-ಇಸ್ರೇಲ್ ಜಂಟಿ ದಾಳಿ | ಇಸ್ಲಾಮಿಕ್ ರಾಷ್ಟ್ರಗಳ ಮೇಲೆಯೇ ಇರಾನ್ ದಾಳಿ
ಇಂಡಿಗೋ, ಏರ್ ಇಂಡಿಯಾ ಮಧ್ಯಪ್ರಾಚ್ಯ ಹಾರಾಟ ರದ್ದು | ಭಾರತೀಯರಿಗೆ ಕೇಂದ್ರದ ಸುರಕ್ಷತಾ ಸಲಹೆ | ದಾಳಿ ಖಂಡಿಸಿದ ರಷ್ಯಾ

ಅಮೆರಿಕ ಸೇನಾನೆಲೆಗಳೇ ಟಾರ್ಗೆಟ್

ದೋಹಾ: ಇಸ್ರೇಲ್ ಮತ್ತು ಅಮೆರಿಕ ಶನಿವಾರ ಇರಾನ್ ಮೇಲೆ ಜಂಟಿ ವಾಯು ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ದುಬೈ, ಅಬು ಧಾಬಿ, ಕತಾರ್ ಸೇರಿದಂತೆ ಅಮೆರಿಕದ ಸೇನಾ ನೆಲೆಗಳು, ರಾಯಭಾರ ಕಚೇರಿಗಳು ಮತ್ತು ಇಸ್ರೇಲ್ ಮೇಲೆ ಪ್ರತಿದಾಳಿ ನಡೆಸಿದೆ.

ಇರಾನ್ ಪ್ರತಿದಾಳಿ ನಡೆಸಿದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿರುವ ತನ್ನ ಮಿಲಿಟರಿ ನೆಲೆಗಳಲ್ಲಿ ಅಮೆರಿಕ ಕಟ್ಟೆಚ್ಚರದಲ್ಲಿ ಹೆಚ್ಚಿಸಿದೆ. ಟೆಹ್ರಾನ್ ಪ್ರತಿದಾಳಿ ನಡೆಸಿದ್ದು, ಅಮೆರಿಕದ ನಿರ್ದಿಷ್ಟ ಸೇನಾನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ರಕ್ಷಣಾ ಇಲಾಖೆ (ಡಿಒಡಿ) ವ್ಯೂಹಾತ್ಮಕ ಉಪಸ್ಥಿತಿ ಜಾಗತಿಕ ಗಮನ ಸೆಳೆದಿದೆ.

ಶಾಶ್ವತ ನೆಲೆಗಳು ಮತ್ತು ವ್ಯಾಪ್ತಿ: ಜುಲೈ 2024ರ ಕಾಂಗ್ರೆಷನಲ್ ರಿಸರ್ಚ್ ಸರ್ವಿಸ್(ಸಿಆರ್‌ಎಸ್) ವರದಿಯ ಪ್ರಕಾರ, ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಸೆಂಟ್ರಲ್ ಕಮಾಂಡ್(ಸೆಂಟ್‌ಕಾಮ್) ಅನ್ವಯದಲ್ಲಿ ಕನಿಷ್ಠ 8 ಶಾಶ್ವತ ನೆಲೆಗಳು ಮತ್ತು 11 ಹೆಚ್ಚುವರಿ ಮಿಲಿಟರಿ ತಾಣಗಳನ್ನು ನಿರ್ವಹಿಸಲಾಗುತ್ತಿದೆ.

ಪ್ರಮುಖ ಕೇಂದ್ರಗಳು: ಕತಾರ್‌ನಲ್ಲಿರುವ 24 ಹೆಕ್ಟೇರ್ ವಿಸ್ತೀರ್ಣದ ಅಲ್ ಉದ್ಯೆದ್ ವಾಯು ನೆಲೆಯನ್ನು ಸುಮಾರು 10,000 ಸಿಬ್ಬಂದಿ ಬಳಸುತ್ತಿದ್ದಾರೆ. ಇಲ್ಲಿ ಕಣ್ಗಾವಲು ವಿಮಾನಗಳು, ಕ್ಷಿಪಣಿ ರಕ್ಷಣಾ ವ್ಯವಸ್ಥೆ ಮತ್ತು ಇಂಧನ ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದೆ.

ಕತಾರ್‌ನಲ್ಲಿರುವ ಅಲ್ ಉದ್ಯೆದ್ ವಾಯುನೆಲೆಯಿಂದ ಎಲ್ಲಾ ಸೇನಾ ಕಾರ್ಯಾಚರಣೆಗಳಿಗೆ ಅಮೆರಿಕ ನಿರ್ದೇಶ ನೀಡುತ್ತದೆ. ಇದು ಮಧ್ಯಪ್ರಾಚ್ಯದಲ್ಲಿ ಅಮೆರಿಕ ಹೊಂದಿರುವ ಅತಿದೊಡ್ಡ ವಾಯುನೆಲೆ ಎನಿಸಿಕೊಂಡಿದೆ.

ಮುಂಚೂಣಿ ನೆಲೆಗಳು

ಇರಾಕ್ ಮೇಲಿನ ಆಕ್ರಮಣ 2011ರಲ್ಲಿ ಅಧಿಕೃತವಾಗಿ ಕೊನೆಗೊಂಡಿದ್ದರೂ, ಬಂಡಾಯ ನಿಗ್ರಹಕ್ಕಾಗಿ ಅಲ್-ಅಸಾದ್ ಮತ್ತು ಎರ್ಬಿಲ್‌ನಂತಹ ನೆಲೆಗಳಲ್ಲಿ ಸುಮಾರು 2,500 ಸೈನಿಕರನ್ನು ನಿಯೋಜಿಸಲಾಗಿದೆ. ಇದಲ್ಲದೆ, ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯಲ್ಲಿ 2,300ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಪ್ಯಾಟ್ರಿಯಟ್ ಮತ್ತು ಥಾಡ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ನಿರ್ವಹಿಸಲಾಗುತ್ತಿದೆ. ಜೋರ್ಡಾನ್, ಸಿರಿಯಾ ಮತ್ತು ಈಜಿಪ್ಟ್‌ನಲ್ಲಿಯೂ ಅಂತರರಾಷ್ಟ್ರೀಯ ಶಾಂತಿ ಪಾಲನೆಗಾಗಿ ಸಣ್ಣ ಮಟ್ಟದ ಪಡೆಗಳನ್ನು ಉಳಿಸಿಕೊಳ್ಳಲಾಗಿದೆ.

ಇಂಡಿಗೋ ವಿಮಾನಗಳು ಸ್ಥಗಿತ

ಇರಾನ್ ಮತ್ತು ಮಧ್ಯಪ್ರಾಚ್ಯದ ವಾಯುಪ್ರದೇಶ ನಿರ್ಬಂಧಗಳನ್ನು ಗಮನಿಸಿ ಇಂಡಿಗೋ ಮಧ್ಯಪ್ರಾಚ್ಯಕ್ಕೆ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ಅನಿರ್ದಿಷ್ಟಾವಧಿಗೆ ರದ್ದುಪಡಿಸಿದೆ. ದುಬೈ, ಜೆಡ್ಡಾ, ದೋಹಾ, ಅಬುಧಾಬಿ, ದಮ್ಮಾಮ್, ಬಹ್ರೈನ್, ಶಾರ್ಜಾ, ಕುವೈತ್ ಮತ್ತು ರಾಸ್ ಅಲ್ ಖೈಮಾ ಮಾರ್ಗಗಳಲ್ಲಿ ಸೇವೆಗಳು ಸ್ಥಗಿತಗೊಂಡಿವೆ.ಹಾಗೆಯೇ, ಏರ್ ಇಂಡಿಯಾ ಪಶ್ಚಿಮ ಏಷ್ಯಾ ಗಮ್ಯಸ್ಥಾನಗಳಿಗೆ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಿದೆ. ದೆಹಲಿ-ತೆಲ್ ಅವೀವ್ ವಿಮಾನವನ್ನು ಮುಂಬೈಗೆ ತಿರುಗಿಸಲಾಗಿದೆ.



ಇಸ್ಲಾಮಿಕ್ ಆಡಳಿತದ ಅಂತ್ಯವೇ ನಮ್ಮ ಗುರಿ!

ಇರಾನ್‌ನಲ್ಲಿ ಆಯತುಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಮೂಲಭೂತವಾದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದೇ ನಮ್ಮ ಗುರಿಯೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟವಾಗಿ ಹೇಳಿದ್ದಾರೆ.

ಕುವೈತ್ ಮತ್ತು ಯುಎಇ

ಕುವೈತ್ ಯುಎಸ್‌ಗೆ ಈ ಭಾಗದ ಪ್ರಮುಖ ಸರಕು ಸಾಗಣೆಗೆ ಪ್ರವೇಶದ್ವಾರವಾಗಿ ಕಾರ್ಯನಿರ್ವಹಿಸುತ್ತದೆ. ಇಲ್ಲಿನ ಕ್ಯಾಂಪ್ ಅರಿಫ್ಜನ್ ಮತ್ತು ಅಲಿ ಅಲ್-ಸೇಲಮ್ ವಾಯು ನೆಲೆಗಳನ್ನು ಜಂಟಿ ಪಡೆಗಳಿಗೆ ಯುದ್ಧ ಸಾಮಗ್ರಿ ತಲುಪಿಸಲು ಬಳಸಲಾಗುತ್ತಿದೆ. ಯುಎಇನಲ್ಲಿ ಅಲ್ ಧಫ್ರಾ ವಾಯುನೆಲೆಯನ್ನು ಸ್ಥಳೀಯ ವಾಯುಪಡೆಯೊಂದಿಗೆ ಹಂಚಿಕೊಳ್ಳಲಾಗಿದ್ದು, ಇಲ್ಲಿ ಎಂಕ್ಯೂ-9 ರೀಪರ್ ಡ್ರೋನ್‌ಗಳನ್ನು ನಿಯೋಜಿಸಲಾಗಿದೆ.

ಬಹ್ರೇನ್

ಬಹ್ರೇನ್‌ನ ನೇವಲ್ ಸಪೋರ್ಟ್ ಆಕ್ಟಿವಿಟಿ ಎಂಬ ವಾಯು ನೆಲೆಯಲ್ಲಿ ಅಮೆರಿಕ ನೌಕಾಪಡೆಯ ಐದನೇ ಫ್ಲೀಟ್ ಅನ್ನು ಸ್ಥಾಪಿಸಲಾಗಿದೆ. ಪರ್ಷಿಯನ್ ಗಲ್ಫ್, ಕೆಂಪು ಸಮುದ್ರ, ಅರಬ್ಬಿ ಸಮುದ್ರ, ಮತ್ತು ಹಿಂದೂ ಮಹಾಸಾಗರದ ಕೆಲವು ಭಾಗಗಳನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯ ಮೇಲೆ ಇದು ಕಣ್ಣಿಡುತ್ತದೆ. ಸಿಆರ್‌ಎಸ್ ವರದಿ ಪ್ರಕಾರ, ಈ ಸಂಬಂಧ 1948 ರಿಂದಲೇ ಅಸ್ತಿತ್ವದಲ್ಲಿದೆ. ಆಗ ಈ ನೆಲೆ ಬ್ರಿಟಿಷ್ ರಾಯಲ್ ನೌಕಾಪಡೆಯ ನಿಯಂತ್ರಣದಲ್ಲಿತ್ತು. ವಿಮಾನವಾಹಕ ನೌಕೆಗಳು ಮತ್ತು ಉಭಯಚರ ದಾಳಿ ಹಡಗುಗಳನ್ನು ನಿಲ್ಲಿಸುವ ಸಾಮರ್ಥ್ಯವಿರುವ ಈ ಪ್ರದೇಶದ ಕೆಲವೇ ಸ್ಥಳಗಳಲ್ಲಿ ಈ ಬಂದರು ಕೂಡ ಒಂದಾಗಿದೆ.

ಇಸ್ರೇಲ್ ಅಧ್ಯಕ್ಷ ಹೆರ್ಜೋಗ್ ಸ್ವಾಗತ



ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅಮೆರಿಕಾ-ಇಸ್ರೇಲ್ ಜಂಟಿ ಕಾರ್ಯಾಚರಣೆಯನ್ನು ಸ್ವಾಗತಿಸಿದ್ದಾರೆ. ಇದು ಮಧ್ಯಪ್ರಾಚ್ಯ ಹಾಗೂ ವಿಶ್ವಕ್ಕೆ ಉತ್ತಮ ಭವಿಷ್ಯ ತರುತ್ತದೆ ಎಂದು ಹೇಳಿದ್ದಾರೆ.

ಅಮೆರಿಕದ ದಾಳಿ ಖಂಡಿಸಿದ ರಷ್ಯಾ

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ಜಂಟಿ ದಾಳಿಯನ್ನು ಅಪ್ರಚೋದಿತ ದಾಳಿ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯೆಂದು ರಷ್ಯಾ ಖಂಡಿಸಿದ್ದು, ತಕ್ಷಣ ದಾಳಿ ನಿಲ್ಲಿಸಬೇಕೆಂದು ಕರೆ ನೀಡಿದೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವೊಂದರ ಮೇಲೆ ಈ ರೀತಿ ಪೂರ್ವನಿಯೋಜಿತ ದಾಳಿ ನಡೆಸುವುದು ಆಕ್ರಮಣಕಾರಿ ನಡೆಯೆಂದು ರಷ್ಯಾ ಆರೋಪಿಸಿದೆ. ಶಾಂತಿದೂತನು ಮತ್ತೆ ಕಾರ್ಯನಿರ್ವಹಿಸುತ್ತಿದ್ದಾನೆ. ಅಮೆರಿಕಾ ಕೇವಲ 249 ವರ್ಷ ಹಳೆಯದು. ಪರ್ಷಿಯನ್ ಸಾಮ್ರಾಜ್ಯವು 2500 ವರ್ಷಗಳ ಹಿಂದೆ ಸ್ಥಾಪನೆಯಾಯಿತು. ಇನ್ನೂ 100 ವರ್ಷಗಳ ಬಳಿಕ ಏನಾಗುತ್ತದೆ ನೋಡೋಣ ಎಂದು ರಷ್ಯಾ ಫೆಡರೇಶನ್ ಭದ್ರತಾ ಮಂಡಳಿ ಉಪಾಧ್ಯಕ್ಷ ಮೆಡ್ವೆಡೆವ್ ಎಚ್ಚರಿಕೆ ನೀಡಿದ್ದಾರೆ.




ಅಣು ಒಪ್ಪಂದ ತಿರಸ್ಕರಿಸಿದ್ದೇ ದಾಳಿಗೆ ಕಾರಣ?

ಇರಾನ್ ತನ್ನ ಪರಮಾಣು ಯೋಜನೆಯಲ್ಲಿ ಅಮೆರಿಕ ಜತೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದ ಕೆಲವು ದಿನಗಳ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಾಳಿ ಆದೇಶ ನೀಡಿದ್ದಾರೆ. ಇರಾನ್ ಮತ್ತದರ ದೀರ್ಘಕಾಲದ ಶತ್ರುಗಳ ನಡುವೆ ಪುನಃ ಸಂಘರ್ಷ ಉದ್ಭವಿಸಿದ್ದು, ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಟೆಹ್ರಾನ್‌ನ ಅಣು ವಿವಾದಕ್ಕೆ ರಾಜತಾಂತ್ರಿಕ ಪರಿಹಾರ ಸಿಗುವ ಸಾಧ್ಯತೆ ಇನ್ನಷ್ಟು ಕ್ಷೀಣಗೊಳಿಸಿದೆ. ಈ ವಾರ ಅಮೆರಿಕಾ ಮತ್ತು ಇರಾನ್ ನಡುವಿನ ಮೂರನೇ ಸುತ್ತಿನ ಪರೋಕ್ಷ ಮಾತುಕತೆ ಯಾವುದೇ ಮಹತ್ವದ ಮುನ್ನಡೆ ಕಂಡುಬರಲಿಲ್ಲ. ಇದು ಹೊಸ ಯುದ್ಧವನ್ನು ತಪ್ಪಿಸಬಹುದಾದ ಅವಕಾಶವನ್ನು ಕಡಿಮೆಗೊಳಿಸಿದೆ. ಇರಾನ್ ಪಡೆಗಳು ಇಸ್ರೇಲ್ ವಿರುದ್ಧ ಪ್ರತೀಕಾರವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಪ್ರಾರಂಭಿಸಿರುವುದಾಗಿ ತಿಳಿಸಿವೆ. ಪ್ರಾದೇಶಿಕ ಪ್ರದೇಶದಲ್ಲಿರುವ ಎಲ್ಲಾ ಅಮೆರಿಕಾ ನೆಲೆಗಳು ಮತ್ತು ಹಿತಾಸಕ್ತಿಗಳು ಇರಾನ್‌ನ ವ್ಯಾಪ್ತಿಯಲ್ಲಿವೆ ಎಂದು ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಹ್ರೈನ್ ಅಮೆರಿಕದ ಐದನೇ ನೌಕಾಪಡೆಯ ಸೇವಾ ಕೇಂದ್ರದ ಮೇಲೆ ಕ್ಷಿಪಣಿ ದಾಳಿ ನಡೆದಿರುವುದಾಗಿ ತಿಳಿಸಿದೆ. ಸಾಕ್ಷಿದಾರರು ತೆಗೆದ ವಿಡಿಯೋ ದೃಶ್ಯಗಳಲ್ಲಿ, ಸಣ್ಣ ದ್ವೀಪ ರಾಷ್ಟ್ರವಾದ ಬಹ್ರೈನ್ ಕರಾವಳಿಯ ಸಮೀಪದಿಂದ ದಟ್ಟವಾದ ಹೊಗೆ ಏರುತ್ತಿರುವುದು ಮತ್ತು ಸೈರನ್‌ಗಳು ಮೊಳಗಿರುವುದು ಕಂಡುಬಂದಿದೆ. ಪ್ರಮುಖ ತೈಲ ರಾಷ್ಟ್ರ ಹಾಗೂ ಅಮೆರಿಕದ ಮಿತ್ರ ರಾಷ್ಟ್ರ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಾಜಧಾನಿ ಅಬು ಧಾಬಿಯ ವಿವಿಧ ಭಾಗಗಳಲ್ಲಿ ಭಾರೀ ಸ್ಫೋಟಗಳ ಶಬ್ದ ಕೇಳಿಬಂದಿರುವುದು ವರದಿಯಾಗಿದೆ.

ಇರಾನ್ ಖಾರ ಪ್ರತಿಕ್ರಿಯೆ

ಟೆಹ್ರಾನ್ ಮೇಲಿನ ದಾಳಿಗೆ ಖಾರವಾಗಿ ಪ್ರತಿಕ್ರಿಯಿಸಿದ ಇರಾನ್, ಇಸ್ರೇಲ್‌ನ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಸಾರ್ವಜನಿಕರು ಹೊರಬಾರದಂತೆ ಇಸ್ರೇಲ್‌ನ ಸಚಿವಾಲಯವು ಮನವಿ ಮಾಡಿಕೊಂಡಿದೆ. ಪ್ರಬಲ ಪ್ರತಿಕ್ರಿಯೆ ನೀಡುವುದಾಗಿ ಇರಾನ್ ರಾಷ್ಟ್ರೀಯ ಭದ್ರತಾ ಆಯೋಗದ ಮುಖ್ಯಸ್ಥ ಇಬ್ರಾಹಿಂ ಅಜೀಜಿ ಎಚ್ಚರಿಕೆ ನೀಡಿದ್ದರು. ಪ್ರತಿದಾಳಿ ಬಳಿಕ ಅಜೀಜಿ, ನಾವು ಎಚ್ಚರಿಕೆ ನೀಡಿದ್ದೆವು. ನೀವು ಯುದ್ಧ ಆರಂಭಿಸಿದ್ದೀರಿ, ಇದನ್ನು ನಿಲ್ಲಿಸುವುದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿನ ಅಮೆರಿಕ ಸೇನಾ ನೆಲೆಗಳು



ಇರಾನ್‌ನ ದಾಳಿಗೊಳಗಾದ ಅಮೆರಿಕ ವಾಯುನೆಲೆಗಳು

1. ಅಲ್-ಉದ್ಯೆದ್ ವಾಯುನೆಲೆ, ಕತಾರ್
2. ಅಲ್-ಸಲೇಮ್ ವಾಯುನೆಲೆ, ಕುವೈತ್
3. ಅಲ್-ಧಫ್ರಾ ವಾಯುನೆಲೆ, ಯುಎಇ
4. ಯು.ಎಸ್ ಫಿಫ್ತ್ ಫ್ಲೀಟ್ ಪ್ರಧಾನ ಕಚೇರಿ, ಬಹ್ರೈನ್

ಯುರೋಪ್‌ನ ಸಂದಿಗ್ಧತೆ

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ನಡೆಸಿದ ದಾಳಿಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು? ಮತ್ತು ಮಧ್ಯಪ್ರಾಚ್ಯದಲ್ಲಿರುವ ತಮ್ಮ ನಾಗರಿಕರನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ವಿಚಾರದಲ್ಲಿ ಐರೋಪ್ಯ ದೇಶಗಳು ಸಂದಿಗ್ಧತೆಗೆ ಸಿಲುಕಿದವು. ಜರ್ಮನಿ ಇರಾನ್ ಪರಿಸ್ಥಿತಿಯನ್ನು ಚರ್ಚಿಸಲು ತುರ್ತು ಸಭೆ ಕರೆದು, ಐರೋಪ್ಯ ಒಕ್ಕೂಟ ಪ್ರದೇಶದಿಂದ ಕೆಲವು ಸಿಬ್ಬಂದಿಯನ್ನು ತೆರವುಗೊಳಿಸುತ್ತಿದೆ. ಇನ್ನೊಂದೆಡೆ, ಈ ದಾಳಿ ನಡೆಸುವ ಕುರಿತಂತೆ ಅಮೆರಿಕ, ಮೈತ್ರಿ ದೇಶಗಳಿಗೆ ಮುಂಚಿತವಾಗಿಯೇ ಎಚ್ಚರಿಕೆ ನೀಡಿತ್ತೇ ಎಂಬುದು ಗೊತ್ತಾಗಿಲ್ಲ, ಅಲ್ಲದೆ, ಜರ್ಮನಿಗೆ ಶನಿವಾರ ಬೆಳಗ್ಗೆಯಷ್ಟೇ ಮಾಹಿತಿ ನೀಡಲಾಗಿದೆ. ಫ್ರಾನ್ಸ್ ಮಾತ್ರ, ಇರಾನ್ ವಿರುದ್ಧ ಯುದ್ಧವಾಗುವುದು ಗೊತ್ತಿತ್ತು, ಆದರೆ, ಶನಿವಾರವೇ ಆಗುತ್ತೆ ಎಂಬುದು ಗೊತ್ತಿರಲಿಲ್ಲ ಎಂದು ಹೇಳಿದೆ. ಈ ಮಧ್ಯೆ, ಐರೋಪ್ಯ ಒಕ್ಕೂಟದ ಉನ್ನತ ರಾಜತಾಂತ್ರಿಕರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಇದನ್ನು ಅಪಾಯಕಾರಿ ಎಂದು ಕರೆದದ್ದು ಅಲ್ಲದೆ, ಸಂಘರ್ಷವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಸಂಬಂಧ ಇಸ್ರೇಲ್ ಮತ್ತು ಅರಬ್ ದೇಶಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸುತ್ತಿರುವುದಾಗಿ ಹೇಳಿದ್ದಾರೆ. ಅಲ್ಲದೆ ಇರಾನ್ ನಡೆ ಖಂಡಿಸಿರುವ ಅದು, ಅಲ್ಲಿನ ಆಡಳಿತ ಸಾವಿರಾರು ಜನರನ್ನು ಕೊಂದಿದೆ. ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು ಅಣು ಕಾರ್ಯಕ್ರಮಗಳು, ಭಯೋತ್ಪಾದಕ ಗುಂಪುಗಳಿಗೆ ನೀಡುತ್ತಿರುವ ಬೆಂಬಲ, ಜಾಗತಿಕ ಭದ್ರತೆಗೆ ಗಂಭೀರ ಬೆದರಿಕೆ ಉಂಟುಮಾಡುತ್ತವೆ ಎಂದು ವಿದೇಶಾಂಗ ನೀತಿ ಮುಖ್ಯಸ್ಥ ಕಾಜಾ ಕಾಲ್ಲಾಸ್ ಹೇಳಿದ್ದಾರೆ. ಜರ್ಮನ್ ಸರ್ಕಾರವು ಇರಾನ್, ಇಸ್ರೇಲ್ ಮತ್ತು ಇತರೆ ಪ್ರದೇಶದಲ್ಲಿರುವ ಜರ್ಮನ್ ನಾಗರಿಕರು ರಾಯಭಾರ ಕಚೇರಿಗಳಲ್ಲಿ ನೋಂದಾಯಿಸಿಕೊಂಡು ಸ್ಥಳೀಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸಬೇಕು ಎಂದು ಮನವಿ ಮಾಡಿದೆ.ಫ್ರಾನ್ಸ್, ಮಧ್ಯಪ್ರಾಚ್ಯದಲ್ಲಿ ಸೈನಿಕ ನೆಲೆಗಳನ್ನು ಹೊಂದಿರುವ ಜರ್ಮನಿ, ತನ್ನ ನಾಗರಿಕರಿಗೆ ಅತ್ಯಂತ ಎಚ್ಚರಿಕೆಯಿಂದ ಇರಲು ಕರೆ ನೀಡಿದೆ.

ಕಿರುಸುದ್ದಿ

ಸಂಸ್ಕೃತ ಭಾಷೆ ಅವಹೇಳನ: ಕ್ಷಮೆಯಾಚಿಸಿದ ಹಾರ್ವರ್ಡ್

ವಾಷಿಂಗ್ಟನ್: ಹಾರ್ವರ್ಡ್ ವಿಶ್ವವಿದ್ಯಾಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗ, ತನ್ನ ಸಂಸ್ಕೃತ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಿದ್ದ ಪೋಸ್ಟ್ ಒಂದು ವಿವಾದಕ್ಕೆ ಕಾರಣವಾಗಿದ್ದು, ಇದೀಗ ವಿಶ್ವವಿದ್ಯಾಲಯ ಅಧಿಕೃತವಾಗಿ ಕ್ಷಮೆಯಾಚಿಸಿದೆ. ಈ ಪೋಸ್ಟ್‌ನಲ್ಲಿ ಬಳಸಲಾದ ಚಿತ್ರ, ಹಿಂದೂ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಉತ್ತರ ಅಮೆರಿಕಾದ ಹಿಂದೂ ಒಕ್ಕೂಟ ಸೇರಿದಂತೆ ಹಲವು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದವು. ವಿಶ್ವವಿದ್ಯಾಲಯ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ್ದು, ನಡೆದ ಘಟನೆಗೆ ನಾವು ವಿಷಾದಿಸುತ್ತೇವೆ ಮತ್ತು ಸಂಸ್ಕೃತ ಭಾಷೆಯ ಸಾಂಸ್ಕೃತಿಕ ಪರಂಪರೆಯನ್ನು ಕಲಿಸಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದೆ. ಈ ವಿವಾದಕ್ಕೂ ಲಕ್ಷ್ಮಿ ಮಿತ್ತಲ್ ದಕ್ಷಿಣ ಏಷ್ಯಾ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ, ಇನ್ನು ಮುಂದೆ ಇಂತಹ ತಪ್ಪುಗಳು ನಡೆಯದಂತೆ ಸಾಮಾಜಿಕ ಜಾಲತಾಣದ ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸುವುದಾಗಿ ಹಾರ್ವರ್ಡ್ ಹೇಳಿದೆ. ಸಂಘಟನೆಗಳು ಈ ಅಪರೂಪದ ಕ್ಷಮೆಯಾಚನೆಯನ್ನು ಸ್ವಾಗತಿಸಿವೆ.

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

ಹೊಸದಿಲ್ಲಿ: ಮಾರ್ಚ್‌ನಿಂದ ಮೇ ತಿಂಗಳವರೆಗೆ ದೇಶದ ಹೆಚ್ಚಿನ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ತಾಪಮಾನದ ಅಲೆಗಳು (ಹೀಟ್ ವೇವ್) ಇರಲಿವೆಯೆಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ಎಚ್ಚರಿಕೆ ನೀಡಿದೆ. ರಾಜಸ್ಥಾನ, ಗುಜರಾತ್, ಪಂಜಾಬ್ ಮತ್ತು ಮಹಾರಾಷ್ಟ್ರ ಸೇರಿದಂತೆ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ತಾಪಮಾನ ಏರಿಕೆಯಾಗುವ ನಿರೀಕ್ಷೆಯಿದೆ. ಕರ್ನಾಟಕದ ಉತ್ತರ ಭಾಗಗಳಲ್ಲಿಯೂ ಹೆಚ್ಚಿನ ಶಾಖ ಕಂಡುಬರಲಿದೆ ಎಂದು ಅಂದಾಜಿಸಲಾಗಿದೆ. ಈ ಪರಿಸ್ಥಿತಿ, ಸಾರ್ವಜನಿಕರ ಆರೋಗ್ಯದ ಮೇಲೆ ಮಾತ್ರವಲ್ಲದೆ, ಕುಡಿಯುವ ನೀರಿನ ಲಭ್ಯತೆ ಮತ್ತು ವಿದ್ಯುತ್ ಬೇಡಿಕೆಯ ಮೇಲೂ ಕೆಟ್ಟ ಪರಿಣಾಮ ಬೀರಲಿದೆ ಎಂದು ಇಲಾಖೆ ತಿಳಿಸಿದೆ.

ಪಾಕ್ ಆಪರೇಷನ್‌ನಲ್ಲಿ 331 ಅಫ್ಘನ್ನರ ಸಾವು?

ಇಸ್ಲಾಮಾಬಾದ್: ಗಡಿ ಭಾಗದಲ್ಲಿ ಅಫ್ಘಾನ್ ತಾಲಿಬಾನ್ ಮತ್ತು ಇತರ ಉಗ್ರಗಾಮಿ ಗುಂಪುಗಳ ವಿರುದ್ಧ ಪಾಕಿಸ್ತಾನ ನಡೆಸುತ್ತಿರುವ ಆಪರೇಷನ್ ಘಜಬ್ ಲಿಲ್ ಹಕ್ ಸೇನಾ ಕಾರ್ಯಾಚರಣೆಯಲ್ಲಿ ಇದುವರೆಗೆ 331 ತಾಲಿಬಾನ್ ಸೈನಿಕರು ಹತರಾಗಿದ್ದಾರೆ ಎಂದು ಪಾಕಿಸ್ತಾನ ಶನಿವಾರ ಘೋಷಿಸಿದೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

ವೆಟ್ಲಪಲೇಮ್(ಆಂಧ್ರ): ಕಾಕಿನಾಡ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ 21 ಮಂದಿ ಸಾವಿಗೀಡಾಗಿದ್ದು, 8 ಮಂದಿ ಗಂಭೀರ ಗಾಯಗೊಂಡಿದ್ದಾರೆ.

ದುರಂತ ಜಾಗದಲ್ಲಿ ಕಾರ್ಮಿಕರ ಸಹಿತ ಒಟ್ಟು 30 ಮಂದಿ ಇದ್ದರು. ರಾಜ್ಯದಲ್ಲಿ ಬಲು ದೊಡ್ಡ ಸ್ಫೋಟ ಇದಾಗಿದ್ದು, ಸ್ಫೋಟಕ ಮಾದರಿಯ ಪಟಾಕಿಗಳು ಸ್ಫೋಟವಾಗಿವೆ ಎಂದು ಆಂಧ್ರ ಸಚಿವ ಕಂಡುಲ ದುರ್ಗೇಶ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಭಯಾನಕ ಸ್ಫೋಟಕ್ಕೆ 21 ಮಂದಿ ಕಾರ್ಮಿಕರು ಆಹುತಿಯಾದ ದುರಂತ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ತಲಾ 2 ಲಕ್ಷ ರೂ. ತುರ್ತು ಪರಿಹಾರ ಘೋಷಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಂಕಿ ಹಬ್ಬಿದ ಬಗ್ಗೆ ತನಿಖೆ: ಭೀಕರ ಸ್ಫೋಟದಿಂದ ಬೆಂಕಿ ಹಬ್ಬಿಕೊಂಡದ್ದು ಹೇಗೆಂದು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸಂತ್ರಸ್ತ ಕುಟುಂಬಗಳ ಬೆಂಬಲಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಸಚಿವ ದುರ್ಗೇಶ್ ವಿವರಿಸಿದ್ದಾರೆ.

ಗದ್ದೆಗೆ ಹಾರಿದ ಶವಗಳು: ಸ್ಫೋಟದ ತೀವ್ರತೆ ಅದೆಷ್ಟಿತ್ತೆಂದರೆ ಕಾರ್ಮಿಕರ ಶವಗಳು ಸಮೀಪದ ಭತ್ತದ ಗದ್ದೆಗಳಿಗೆ ಎಸೆಯಲ್ಪಟ್ಟಿದ್ದವು. ಛಿದ್ರವಾಗಿದ್ದ ದೇಹಗಳನ್ನು ರಸಗೊಬ್ಬರ ಚೀಲದ ಶೀಟ್‌ಗಳಿಗೆ ಸ್ಥಳಾಂತರಿಸುತ್ತಿದ್ದ ದೃಶ್ಯ ಘೋರ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ರಾಗಾ ಜೈಲಲ್ಲಿ ಕೂರಲು ತಯಾರಾ?

ಹೊಸದಿಲ್ಲಿ: ಅರವಿಂದ ಕೇಜ್ರಿವಾಲ್ ಜೈಲಿಗೆ ಹೋದರು, ರಾಬರ್ಟ್ ವಾದ್ರಾ ಜೈಲಿಗೆ ಹೋಗ್ತಾರಾ? ಸಂಜಯ್ ಸಿಂಗ್ ಸೆರೆಮನೆವಾಸ ಅನುಭವಿಸಿದ್ದರು. ರಾಹುಲ್ ಗಾಂಧಿ ಜೈಲೊಳಗೆ ಕೂರಲು ತಯಾರಿದ್ದಾರೆಯೇ? ಮನೀಶ್ ಸಿಸೋಡಿಯಾ ಜೈಲುಶಿಕ್ಷೆ ಅನುಭವಿಸಿದಂತೆ ಸೋನಿಯಾ ಗಾಂಧಿ ಅನುಭವಿಸುವರೇ? ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆ ಎಂಬುದೇ ಇಲ್ಲವೇ? ಎಂದು ದಿಲ್ಲಿ ಅಬಕಾರಿ ನೀತಿ ಪ್ರಕರಣದಲ್ಲಿ ಸಿಬಿಐ ಕೋರ್ಟ್‌ನಲ್ಲಿ ಖುಲಾಸೆಗೊಂಡ ಆಮ್ ಆದ್ಮಿ ನಾಯಕ ಅರವಿಂದ ಕೇಜ್ರಿವಾಲ್, ಒಂದು ಕಾಲದಲ್ಲಿ ಮಿತ್ರಪಕ್ಷವಾಗಿದ್ದ ಕಾಂಗ್ರೆಸ್‌ನ ನಾಯಕರಿಗೆ ಈ ತೆರ ಸವಾಲೆಸೆದಿದ್ದಾರೆ.

ಯೋಜಿತ ಪ್ರಹಸನ: ಸಿಬಿಐ ನ್ಯಾಯಾಲಯದಲ್ಲಿ ಆಪ್ ನಾಯಕರ ಖುಲಾಸೆ ಯೋಜಿತ ಪ್ರಹಸನದ ಭಾಗವಾಗಿದೆ. ಚುನಾವಣೆಗಳು ಸನ್ನಿಹಿತವಿರುವ ಕಾರಣ ಈ ತೆರ ಪ್ರಹಸನ ನಿರೀಕ್ಷಣೀಯ. ಕಾಂಗ್ರೆಸ್ ನಾಯಕರ ವಿರುದ್ಧ ಪ್ರಕರಣಗಳ ಸಂಖ್ಯೆ ದಿಢೀರ್ ಏರುತ್ತೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಟೀಕಿಸಿದ್ದಾರೆ. ತಮಿಳುನಾಡಿನಲ್ಲಿ ಚುನಾವಣೆ ಸಮೀಪಿಸಿರುವ ಹಿನ್ನೆಲೆ ಪಿ.ಚಿದಂಬರಂರನ್ನು ಈಗಾಗಲೆ ಮರಳಿ ಸ್ಪಾಟ್‌ಲೈಟ್‌ಗೆ ಎಳೆಯಲಾಗಿದೆ. ಗುಜರಾತ್, ಪಂಜಾಬ್ ಚುನಾವಣೆ ಹಿನ್ನೆಲೆಯಲ್ಲಿ ಆಪ್ ಮತ್ತಿತರರ ವಿರುದ್ಧದ ಕೇಸ್‌ಗಳು ಮಾಯವಾಗುವುದು ಎಂದು ಖೇರಾ ಎಕ್ಸ್ ಗೆ ಹಾಕಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

ಸಿಸೋಡಿಯಾ ರೀತಿ ಸೋನಿಯಾ ಶಿಕ್ಷೆ ಅನುಭವಿಸುವರೇ?: ಕೇಜ್ರಿ



ನನಗಿಲ್ಲ ಭಯ: ತೀರ್ಪಿನ ನಂತರ ಕೇಜ್ರಿವಾಲ್ ಕಣ್ಣೀರು ಹಾಕುತ್ತಿರುವ ಕ್ಲಿಪ್ ಅನ್ನು ಕಾಂಗ್ರೆಸ್‌ನ ಹಲವು ನಾಯಕರು ಎಕ್ಸ್‌ಗೆ ಹಾಕಿದ್ದಾರೆ. ನನ್ನ ವಿರುದ್ಧ 32 ಕೇಸುಗಳಿವೆ. ಆದರೂ ತಾನು ಎಂದಿನಂತೆ ಧೈರ್ಯವಾಗಿದ್ದೇನೆ ಎಂಬ ಕಾಂಗ್ರೆಸ್‌ನ ರಾಹುಲ್ ಗಾಂಧಿಯ ಹೇಳಿಕೆಯನ್ನೂ ಕ್ಲಿಪ್‌ಗೆ ಜೋಡಿಸಲಾಗಿದೆ.

ಹೈಕೋರ್ಟ್, ಸುಪ್ರೀಂ ತೀರ್ಪು ಮುಖ್ಯ: ಕೆಳ ನ್ಯಾಯಾಲಯ ಕೊಟ್ಟ ತೀರ್ಪಿದು. ಪ್ರಸ್ತುತ ಪ್ರಕರಣಗಳಿಗೆ ಸಂಬಂಧಿಸಿ ಈ ಹಿಂದೆ ದಿಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಂಭೀರ ಅಭಿಮತಗಳ ವ್ಯಕ್ತಪಡಿಸಿದ್ದವು. ಅಧೀನ ನ್ಯಾಯಾಲಯದ ನಿರ್ಧಾರವನ್ನು ಉಚ್ಚ ನ್ಯಾಯಾಲಯಗಳು ಅದ್ಯಾವ ರೀತಿ ಪರಿಗಣಿಸಲಿವೆ ಎಂಬುದು ಮುಖ್ಯ. ಕಾನೂನು ಪ್ರಕ್ರಿಯೆ ಇನ್ನೂ ಮುಗಿದಿಲ್ಲ ಎಂದು ದಿಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಮುಖ್ಯಸ್ಥ ದೇವೇಂದರ್ ಯಾದವ್ ಕುಟುಕಿದ್ದಾರೆ.

ಬಂಗಾಳದ ಮತದಾರರ ಪಟ್ಟಿ ಪ್ರಕಟ: 63 ಲಕ್ಷ ಹೆಸರು ಕಡಿತ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ನಡೆದ ವಿಶೇಷ ತೀವ್ರ ಪರಿಷ್ಕರಣೆಯ (ಎಸ್ಐಆರ್) ನಂತರ ಸಿದ್ಧಪಡಿಸಲಾದ ಅಂತಿಮ ಮತದಾರರ ಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಶನಿವಾರ ಬಿಡುಗಡೆ ಮಾಡಿದೆ. ಈ ಹೊಸ ಪಟ್ಟಿಯ ಪ್ರಕಾರ ರಾಜ್ಯದ ಒಟ್ಟು ಮತದಾರರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದ್ದು, ಪ್ರಸ್ತುತ 7,04,59,284 ಮತದಾರರು ಇದ್ದಾರೆ.

ಪ್ರಮುಖ ಅಂಕಿ-ಅಂಶಗಳು: ಈ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಬರೋಬ್ಬರಿ 63,66,952 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ, ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಹೇಳಿದ್ದಾರೆ. ಇದೇ ವೇಳೆ 1.88 ಲಕ್ಷಕ್ಕೂ ಹೆಚ್ಚು ಹೊಸ ಮತದಾರರನ್ನು ಸೇರಿಸಲಾಗಿದೆ. ಅಂತಿಮ ಪಟ್ಟಿಯಲ್ಲಿ 3,60,22,642 ಪುರುಷ, 3,44,35,260 ಮಹಿಳಾ ಮತ್ತು 1,382 ತೃತೀಯ ಲಿಂಗಿ ಮತದಾರರು ಇದ್ದಾರೆ. ಸುಮಾರು 60 ಲಕ್ಷ ಮತದಾರರ ಹೆಸರುಗಳು ಇನ್ನೂ ಪರಿಶೀಲನಾ ಹಂತದಲ್ಲಿವೆ ಎಂದು ಆಯೋಗ ತಿಳಿಸಿದೆ. ಪ್ರತಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ಪ್ರತಿಗಳನ್ನು ವಿತರಿಸಲಾಗುತ್ತಿದೆ. ಈ ಪಟ್ಟಿಯನ್ನು ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್ ಮತ್ತು ಇಸಿಐ ನೆಟ್ ಆ್ಯಪ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಮತದಾರರು ತಮ್ಮ ವೋಟರ್ ಐಡಿ (ಎಪಿಕ್) ಸಂಖ್ಯೆ ಬಳಸಿ ಈ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ತಮ್ಮ ಹೆಸರು ಇದೆಯೇ ಎಂದು ಖಚಿತಪಡಿಸಿಕೊಳ್ಳಬಹುದು.

ಫಾರ್ಮ್ - IV
ಹೊಸದಿಗಂತ ದಿನಪತ್ರಿಕೆ
ಹೊಸದಿಗಂತ ಪತ್ರಿಕೆಯ ಒಡೆತನ ಮತ್ತಿತರ ವಿವರಗಳು
ಪ್ರೆಸ್ ಮತ್ತು ಪುಸ್ತಕ ದಾಖಲಾತಿ ಕಾಯ್ದೆಯ 19ಡಿ
ಉಪನಿಯಮ ಬಿ ಕಾಯ್ದೆ 8 ಪತ್ರಿಕೆಗಳ ದಾಖಲಾತಿ
(ಕೇಂದ್ರ ಕಾಯ್ದೆ) 1956 ರ ಪ್ರಕಾರ

ಪ್ರಕಾಶಿಸಲ್ಪಡುವ ಸ್ಥಳ	:	ಹುಬ್ಬಳ್ಳಿ
ಪ್ರಕಾಶನದ ಅವಧಿ	:	ದಿನಪತ್ರಿಕೆ
ಪ್ರಕಾಶಕ	:	ಪಿ. ಎಸ್. ಪ್ರಕಾಶ್ ಜ್ಞಾನಭಾರತಿ ಪ್ರಕಾಶನ (ಲಿ.) 5/120/2,ಅರುಣೋದಯ,ನಂ.18, ಬೋಳ್ಪುಗುಡ್ಡೆ, ಕಾವೂರ್, ಮಂಗಳೂರು
ಮುದ್ರಕರು	:	ಪಿ. ಎಸ್. ಪ್ರಕಾಶ್ 5/120/2,ಅರುಣೋದಯ,ನಂ.18, ಬೋಳ್ಪುಗುಡ್ಡೆ, ಕಾವೂರ್, ಮಂಗಳೂರು
ರಾಷ್ಟ್ರೀಯತೆ	:	ಭಾರತೀಯ
ಮುದ್ರಣಾಲಯ	:	ಮೆ॥ ಎಲೆಗಂಟ್ ಆಫ್‌ಸೆಟ್ ಪ್ರಿಂಟರ್ಸ್, ಪ್ರೈ.ಲಿ., ಪ್ಲಾಟ್ ನಂ.33/1, 15/1 (ಈಸ್ಟರ್ನ್ ಪಾರ್ಟ್), ಎಂ.ಟಿ.ಸಾಗರ, ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ ರೋಡ್, ಹುಬ್ಬಳ್ಳಿ - 580030
ಸಂಪಾದಕ	:	ಪಿ. ಎಸ್. ಪ್ರಕಾಶ್ 5/120/2, ಅರುಣೋದಯ, ನಂ.18, ಬೋಳ್ಪುಗುಡ್ಡೆ, ಕಾವೂರ್, ಮಂಗಳೂರು.
ಒಡೆತನ ಮತ್ತು ಮಾಲಿಕತ್ವ	:	ಜ್ಞಾನಭಾರತಿ ಪ್ರಕಾಶನ (ಲಿ.) ಹೊಸದಿಗಂತ, 2ನೇ ಮಹಡಿ, ಮಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ ಮಂಗಳೂರು - 575004
ಆಡಳಿತ ಕಚೇರಿ	:	2ನೇ ಮಹಡಿ, ಮಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ, ಮಂಗಳೂರು - 575004

ನಾನು ಪಿ. ಎಸ್. ಪ್ರಕಾಶ್ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಮೇಲ್ಕಾಣಿಸಿದ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ಅನುಸಾರವಾಗಿ ಸತ್ಯವಾಗಿರುತ್ತವೆ.

01.03.2026
ಹುಬ್ಬಳ್ಳಿ

ಪಿ.ಎಸ್. ಪ್ರಕಾಶ್
ಪ್ರಕಾಶಕ

ದೇಶವನ್ನು ಅಪಮಾನಿಸುವ ಅವಕಾಶಕ್ಕೆ ಕೈ ಕಾಯುತ್ತಿದೆ: ಪ್ರಧಾನಿ ಮೋದಿ

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್

ಜೈಪುರ: ವಿಪಕ್ಷ ಕಾಂಗ್ರೆಸ್ ಇಂದು ಮುಸ್ಲಿಂ ಲೀಗ್-ಮಾವೋವಾದಿ ಕಾಂಗ್ರೆಸ್ ಆಗಿ ಮಾರ್ಪಾಡಾಗಿದ್ದು, ದೇಶವನ್ನು ಅಪಮಾನಿಸುವ ಅವಕಾಶಕ್ಕಾಗಿ ಕಾಂಗ್ರೆಸ್ ಚಾತಕಪಕ್ಷಿಯಂತೆ ಕಾಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಛೀಮಾರಿ ಹಾಕಿದ್ದಾರೆ. ಈಚಿನ ಜಾಗತಿಕ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸಿಗರ ಶರ್ಟ್‌ರಹಿತ ಪ್ರತಿಭಟನೆಗೆ ಪ್ರಧಾನಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮುಸ್ಲಿಂ ಲೀಗ್‌ಗೆ ಭಾರತದ ಬಗ್ಗೆ ಇದ್ದ ದ್ವೇಷಾಸೂಯೆಗಳಿಂದಾಗಿ ಅಖಂಡ ಭಾರತ ವಿಭಜನೆಯಾಯಿತು. ಇಂದೀಗ ಕಾಂಗ್ರೆಸ್ ಕೂಡ ಲೀಗ್ ಹಾದಿಯನ್ನೇ ತುಳಿದಿದೆ. ಇಡೀ ಜಗತ್ತು ಭಾರತವನ್ನು ಪ್ರಶಂಸಿಸುವಾಗ ಭಾರತೀಯರಿಗೆ ಸಹಜವಾಗೇ ಹೆಮ್ಮೆಯಾಗುತ್ತೆ. ಆದರೆ ಕಾಂಗ್ರೆಸ್ ಮಾತ್ರ ಜಾಗತಿಕ ವೇದಿಕೆಗಳಲ್ಲಿ ಪ್ರಹಸನ ಸೃಜಿಸಿ ವಿದೇಶಿ ಗಣ್ಯರ ಸಮಕ್ಷಮ ಭಾರತವನ್ನು ಅಪಮಾನಿಸುವುದು ತೀರಾ ಸರಿಯಲ್ಲ ಎಂದು ಪ್ರಧಾನಿ ಮೋದಿ ಆರೋಪಿಸಿದರು. ರಾಜಸ್ಥಾನದ ಅಜ್ಮೇರ್‌ನಲ್ಲಿ ಬರೋಬ್ಬರಿ 16,600 ಕೋಟಿ ರೂ. ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದ ಬಳಿಕ, ಕಯಾದ್ ವಿಶ್ರಾಮ್ ಸ್ಥಳದಲ್ಲಿ ಸಾರ್ವಜನಿಕ ರ‍್ಯಾಲಿಯಲ್ಲಿ ಪ್ರಧಾನಿ ಪಾಲ್ಗೊಂಡರು.

ಅದೊಂದು ಕಾಲದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಥವಾ ಐಎನ್‌ಸಿ ಹೆಸರು ಅರ್ಥಪೂರ್ಣವಾಗಿತ್ತು. ಆದರೆ ಐಎನ್‌ಸಿ ಇಂದು ಆ ಸ್ವರೂಪದಲ್ಲಿ ಉಳಿದಿಲ್ಲ, ಇಂದೀಗ ಅದು ಎಂಎಂಸಿ-ಮುಸ್ಲಿಂಲೀಗ್ ಮಾವೋವಾದಿ ಕಾಂಗ್ರೆಸ್ ಆಗಿ ಪರಿವರ್ತಿತವಾಗಿದೆ ಎಂದು ಹೇಳಿದರು.

ಹಾರ್ಡ್‌ವೇರ್ ರಂಗದಲ್ಲೂ ಪ್ರಗತಿ

ಸಾನಂದ್(ಗುಜರಾತ್): ಸಾಫ್ಟ್‌ವೇರ್ ರಂಗದಲ್ಲಿ ಬಲಿಷ್ಠವಾಗಿರುವ ರಾಷ್ಟ್ರವು, ಹಾರ್ಡ್‌ವೇರ್ ರಂಗದಲ್ಲೂ ತನ್ನ ಅಸ್ಮಿತೆಯನ್ನು ದೃಢವಾಗಿ ರೂಪಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗುಜರಾತಿನ ಸಾನಂದ್‌ನಲ್ಲಿ ಮೈಕ್ರಾನ್ ಟೆಕ್ನಾಲಜಿಯ ಸೆಮಿಕಂಡಕ್ಟರ್ ಸ್ಥಾವರವನ್ನು ಪ್ರಧಾನಿ ಮೋದಿ ಶನಿವಾರ ಲೋಕಾರ್ಪಣೆಗೈದರು. ಉದ್ಘಾಟನೆಗೊಂಡ, ಅಮೆರಿಕ ಮೂಲದ ಕಂಪನಿಯ ಎಟಿಎಂಪಿ ಸ್ಥಾವರವು ದೇಶದಲ್ಲೇ ಪ್ರಥಮ ಸೌಲಭ್ಯವಾಗಿದೆ. ಇದು ಭಾರತ ಮತ್ತು ಅಮೆರಿಕ ನಡುವಣ ಗಾಢ ಪಾಲುದಾರಿಕೆಯನ್ನು ಪ್ರತಿಫಲಿಸಿದೆ ಎಂದರು.

ಎಚ್‌ಪಿವಿ ಲಸಿಕೆ ಅಭಿಯಾನಕ್ಕೆ ಚಾಲನೆ

ಜೈಪುರ: 9 ರಿಂದ 14 ವರ್ಷದೊಳಗಿನ ಬಾಲಕಿಯರು ಎದುರಿಸುವ ಗರ್ಭಕಂಠ ಕ್ಯಾನ್ಸರ್ ತಡೆಯುವ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ಲಸಿಕೆ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು. ಅಜ್ಮೇರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಲವು ಬಾಲಕಿಯರಿಗೆ ಲಸಿಕೆ ಹಾಕುವ ಮೂಲಕ ರಾಷ್ಟ್ರವ್ಯಾಪಿ ನಡೆಸಲಾಗುವ ಅಭಿಯಾನಕ್ಕೆ ಔಪಚಾರಿಕವಾಗಿ ಉದ್ಘಾಟಿಸಿದರು.



• ವಿದ್ವಾನ್ ನರಸಿಂಹ ಭಟ್

ಮಿಂಚಿನಂತೆ ಚಪಲವಾದುದು ಯಾವುದು?

ದುರ್ಜನಸಂಗ ಮತ್ತು ಯುವತಿ

ಈ ಉತ್ತರದಲ್ಲಿ ಹೇಳಿರುವ ದುರ್ಜನಸಂಗ ಮತ್ತು ಯುವತಿ ಎರಡು ವಿಷಯಗಳು ಎಷ್ಟು ಚಪಲ ಎಂಬುದನ್ನು ತಿಳಿಯಬಹುದಾಗಿದೆ. ಮಿಂಚು ಎಲ್ಲರಿಗೂ ತಿಳಿದಿದೆ. ಒಂದು ಕ್ಷಣ ಆಕಾಶದಲ್ಲಿ ನಮ್ಮ ಕಣ್ಣಿಗೆ ಗೋಚರಿಸಿ ಮರೆಯಾಗುವ ವಿಷಯವಾಗಿದೆ. ಅಂತೆಯೇ ಈ ದುರ್ಜನಸಂಗ ಮತ್ತು ಯುವತಿಯ ಸಂಗವು ಕೂಡ ನಮ್ಮ ಜೀವನದಲ್ಲಿ ಅಷ್ಟು ಕ್ಷಣಿಕವಾದವುಗಳು. ಮಿಂಚು ಹೇಗೆ ಕಣ್ಣಿಗೆ ಕ್ಷಣಿಕ ಆನಂದವನ್ನು ಕೊಟ್ಟು ಮರೆಯಾಗುತ್ತದೆಯೋ ಅಂತೆಯೇ ಈ ಎರಡು ಸಂಗತಿಗಳು ಕೂಡ ಎಂಬ ಮಾರ್ಮಿಕ ವಿಷಯವನ್ನು ಈ ಪ್ರಶ್ನೋತ್ತರ ಸಾರುತ್ತದೆ. ದುರ್ಜನರ ಸಂಗ ಮತ್ತು ಯುವತಿಯರ ಸಂಗ ಇವೆರಡೂ ನಮ್ಮನ್ನು ಸನ್ಮಾರ್ಗದಿಂದ ಭ್ರಷ್ಟಗೊಳಿಸುವ ವಿಧಾನವಾಗಿದೆ. ಹಾಗಾಗಿ ಇವೆರಡು ದೂರದಲ್ಲಿರಲು ಯೋಗ್ಯವಾದ ವಿಷಯಗಳು ಎಂಬುದನ್ನು ಅರಿಯಬೇಕಾಗಿದೆ. ನಮ್ಮ ಜೀವನವು ಹೇಗೆ ಸಾಗಬೇಕಾಗಿದೆ ಎಂಬುದನ್ನು ತಿಳಿದಾಗ, ಆ ಜೀವನಕ್ಕೆ ಎರಡು ಸಂಗತಿಗಳು ಎಷ್ಟು ವಿರೋಧವಾದವುಗಳು ಎಂಬುದನ್ನು ತಿಳಿಯಬಹುದು. ಅಂದರೆ ದುರ್ಜನರ ಸಂಪರ್ಕ ಮತ್ತು ಯುವತಿಯ ಸಾಂಗತ್ಯವು ಅತ್ಯಂತ ಚಂಚಲವಾಗಿದ್ದು, ಅವು ನಮ್ಮ ಜೀವನದಲ್ಲಿ ಮಿಂಚಿನಂತೆ ಬಂದುಹೋಗುತ್ತವೆ. ಶಾಶ್ವತವಾದವುಗಳಲ್ಲ. ಅವುಗಳನ್ನೇ ನೆಚ್ಚಿ ಕೂತರೆ ಬದುಕು ಅಸಾಧ್ಯ. ಹಾಗಾಗಿ ಇವೆರಡು ಕೂಡ ತ್ಯಾಜ್ಯ ಎಂಬುದು ಇದರ ಅರ್ಥ.

ವಯಸ್ಸಿಗೆ ಬಂದ ಯುವಕನಿಗೆ ಯುವತಿಯ ಸೆಳೆತ, ಹಾಗೆ ಯುವತಿಗೆ ಯುವಕನ ಸೆಳೆತ. ಈ ಎರಡು ಸೆಳೆತಗಳು ಆ ವಯಸ್ಸಿನಲ್ಲಿ ಅತ್ಯಂತ ಸಹಜವಾದವುಗಳು. ಅಕಾಲದಲ್ಲಿ ಬರುವ ಈ ಯುವಕ ಯುವತಿಯರ ಸೆಳೆತವು ಜೀವನದ ಉದ್ದೇಶವನ್ನು ಮರೆಸಬಹುದು. ವಿವೇಕಪ್ರಜ್ಞೆಯನ್ನೂ ಸಹ ನಷ್ಟವಾಗಿಸಬಹುದು. ಇದನ್ನೇ ಸಾಮಾನ್ಯವಾಗಿ 'ರತಿ, ಪ್ರೀತಿ, ಕಾಮ' ಇತ್ಯಾದಿಯಾಗಿ ಹೇಳುವುದುಂಟು. ರತಿ ಅಥವಾ ಪ್ರೀತಿಯಲ್ಲಿ ಮುಳುಗಿದ ವ್ಯಕ್ತಿಗೆ ಯಾವ ಪ್ರಪಂಚವು ಕೂಡ ಕಾಣಿಸದು. ಈ ಕಾರಣವಾಗಿ ತನ್ನ ಜೀವಿತದ ಉತ್ಕೃಷ್ಟ ಉದ್ದಿಶ್ಯವನ್ನು ಅವನು ಮರೆಯುವ ಸಂದರ್ಭ ಬರುತ್ತದೆ. ಹಾಗಾಗಿ ಯುವಕ ಯುವತಿಯರ ಆಕರ್ಷಣೆ ಎಂಬುದು ಮಿತಿಯಲ್ಲಿ ಇರಬೇಕು. ಅಂದರೆ ಯಾವ ಕಾಲದಲ್ಲಿ ಬರಬೇಕು ಎಂಬುದಕ್ಕೆ ಒಂದು ನಿಯಮ ಇದೆ. ಅವರ ಪರಸ್ಪರ ಆಕರ್ಷಣೆಯು ಕೇವಲ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವಾಗಿರಬೇಕು. ಹಾಗಿಲ್ಲದ ಆಕರ್ಷಣೆಯು ಅವರ ಮನಸ್ಸಿನ ಏಕಾಗ್ರತೆಯನ್ನು ಭಂಗಗೊಳಿಸಬಹುದು. ಆದ್ದರಿಂದ ಅಕಾಲದ ಆಕರ್ಷಣೆಯು ಅತ್ಯಂತ ಅಪಾಯವಾದುದು. ಅದರಂತೆಯೇ ದುರ್ಜನರ ಸಂಗವೂ ಕೂಡ ಅತ್ಯಂತ ಅಪಾಯಕಾರಿ. ದುರ್ಜನರು ಎಂದರೆ ಧರ್ಮಪ್ರೀತಿ ಇಲ್ಲದ, ಧರ್ಮಕ್ಕೆ ವಿರೋಧವಾದ ನಡೆಯನ್ನು ಉಳ್ಳವರು. ಅವರ ಸಂಗವು ನಮ್ಮನ್ನು ಧರ್ಮದಿಂದ ಚ್ಯುತವಾಗಿಸುತ್ತದೆ. ಮತ್ತು ತತ್ಕಾಲದಲ್ಲಿ ಅದು ಬಹಳ ಅಪ್ಯಾಯಮಾನವಾಗಿ ಕಂಡುಬರುತ್ತದೆ. ಈ ಎರಡು ಸಂಗತಿಗಳು ಕೂಡ ತತ್ಕಾಲದಲ್ಲಿ ಆಕರ್ಷಕವಾಗಿಯೇ ಕಂಡು ಬರುತ್ತವೆ. ಆದರೆ ಪರಿಣಾಮದಲ್ಲಿ ಅವು ವಿಷಮತೆಯನ್ನು ಉಂಟುಮಾಡುತ್ತವೆ. ಆದ್ದರಿಂದ ಇವೆರಡನ್ನು 'ಮಿಂಚಿನಂತೆ ಅತ್ಯಂತ ಚಂಚಲವಾದವುಗಳು' ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.



• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಕೃಷ್ಣಾರ್ಜುನ-ಭೀಮರ ಮಾಗಧ ಪ್ರಯಾಣ

ಜರಾಸಂಧ ವಧೆಯನ್ನು ಮಾಡುವಲ್ಲಿ ಕೃಷ್ಣನಿತ್ತ ಸಲಹೆ ಅಮೂಲ್ಯವಾದುದೆಂದೂ, ನೀತಿ-ಬಲ-ಕ್ರಿಯೆಗಳ ಸಂಗಮವೇ ಕಾರ್ಯಸಾಧಕವೆಂದೂ ಯುಧಿಷ್ಠಿರನು ಮನಗಂಡನು. ಅರ್ಜುನನ ದಶನಾಮಗಳಲ್ಲಿ ಕೃಷ್ಣನೆಂಬುದೂ ಒಂದಾದ್ದರಿಂದ, ಯುಧಿಷ್ಠಿರನ ಮಾತು ಹೀಗೆ ಸಾಗಿತು:

"ಈ ಇಬ್ಬರು ಕೃಷ್ಣರಿಗೆ, ಎಂದರೆ ಕೃಷ್ಣಾರ್ಜುನರಿಗೆ, ಅಜೇಯನಾದವನೇ ಇಲ್ಲ ಮತ್ತು ಈ ವೃಕೋದರ ಭೀಮನಾದರೂ ಬಲಶಾಲಿಗಳಲ್ಲೇ ಶ್ರೇಷ್ಠನಾದವನು. ನಿಮ್ಮಿಬ್ಬರೊಂದಿಗೆ ಸೇರಿದ ಈ ಮಹಾಕೀರ್ತಿ ಸಂಪನ್ನನಾದ ವೀರನು ಏನನ್ನು ತಾನೆ ಸಾಧಿಸಲಾರ? ಸೈನ್ಯ-ಸ್ತೋಮವು ಉತ್ತಮ ಕಾರ್ಯವನ್ನು ಸಾಧಿಸುವುದು ಯಾವಾಗ? ನೇತಾರನಿಂದ ಸರಿಯಾಗಿ ಸಂಚಾಲಿತವಾದಾಗ. ಬಲವೆಂಬುದು ತನ್ನಷ್ಟಕ್ಕೆ ಕುರುಡೆಂದೂ, ಜಡವೆಂದೂ ಹೇಳುವರು. ವಿಚಕ್ಷಣರೇ ಅದನ್ನು ಮುನ್ನಡೆಸಬೇಕು.

ಹೀಗೆ, ಕಾರ್ಯವು ಸಿದ್ಧಿಸಬೇಕೆಂದರೆ ಪ್ರಜ್ಞೆ-ರಾಜ-ನೀತಿಗಳೆಂಬ ಬಲಗಳಿಂದ ಕೂಡಿರುವವನೂ, ಕ್ರಿಯೆಯ ಉಪಾಯವನ್ನು ಹೊಂದಿರುವವನೂ ಆದ ಶ್ರೀಕೃಷ್ಣನನ್ನೇ ಮುಂದಿಟ್ಟುಕೊಂಡು ಹೊರಡಬೇಕು. ಯದುಶ್ರೇಷ್ಠನಾದ ಕೃಷ್ಣನೇ, ಕಾರ್ಯಸಿದ್ಧಿ ಪರ್ಯಂತವೂ ಅರ್ಜುನನು ಕೃಷ್ಣನನ್ನು ಅನುಸರಿಸಲಿ ಹಾಗೂ ಭೀಮನು ಅರ್ಜುನನನ್ನು ಅನುಸರಿಸಲಿ. ನಯ-ಜಯ-ಬಲ - ಇವುಗಳು ಸೇರಿ, ವಿಕ್ರಮದಲ್ಲಿ ತಮ್ಮ ಸಿದ್ಧಿಯನ್ನು ಹೊಂದುವುವು ಎಂದು ಆತನು ತನ್ನ ಮಾತನ್ನು ಮುಗಿಸಿದನು. ಯುಧಿಷ್ಠಿರನು ಹೀಗೆಂದು ಹೇಳಲಾಗಿ, ಮಹಾತೇಜಸ್ವಿಗಳೆನಿಸಿದ ಕೃಷ್ಣ-ಅರ್ಜುನ-ಭೀಮಸೇನರು ಜರಾಸಂಧನ ರಾಜಧಾನಿಯತ್ತ ಸಾಗಿದರು. ವರ್ಚಸ್ವಿಗಳಾದ ಸ್ನಾತಕ ಬ್ರಾಹ್ಮಣರ ಪರಿಚ್ಛದವನ್ನು, ಎಂದರೆ ವೇಷ-ಭೂಷಣಗಳನ್ನು ಅವರು ಧರಿಸಿಕೊಂಡರು. ಈ ಮೂಲಕ ತಮ್ಮನ್ನೇ ಮರೆಮಾಚಿಕೊಂಡರು. ಆ ಸಂದರ್ಭದಲ್ಲಿ ಅವರ ಸ್ನೇಹಿತರು ತಮ್ಮ ಮನೋಹರವಾದ ಮಾತುಗಳಿಂದ ಅವರನ್ನು ಅಭಿನಂದಿಸಿದರು.

ಈ ಮೂವರೂ ಜರಾಸಂಧನ ವಿಷಯಕ್ಕೆ ರೋಷದಿಂದ ಕುದಿಯುತ್ತಿದ್ದರು. ಎಂದೇ ಸೂರ್ಯ-ಚಂದ್ರ-ಅಗ್ನಿಗಳಂತೆ ಅವರ ಶರೀರವು ಜ್ವಲಿಸುತ್ತಿತ್ತು. ಯುದ್ಧದಲ್ಲಿ ಎಂದೂ ಸೋಲನ್ನೇ ಕಂಡಿರದ ಹಾಗೂ ಒಂದೇ ಕಾರ್ಯಕ್ಕಾಗಿಯೇ ಸಮುದ್ಯತರಾಗಿದ್ದ ಹಾಗೂ ಭೀಮನನ್ನು ಮುಂದಿಟ್ಟುಕೊಂಡು ಹೊರಟಿದ್ದ, ಆ ಕೃಷ್ಣರಿಬ್ಬರನ್ನು ಹಾಗೆ ಕಂಡ ಯುಧಿಷ್ಠಿರನು, ಜರಾಸಂಧನು ಹತನಾದನೆಂದೇ ಭಾವಿಸಿದನು. ಎಷ್ಟಾದರೂ ಅವರಿಬ್ಬರೂ ಎಂತಹವರು? ಧರ್ಮ-ಕಾಮ-ಅರ್ಥ ಇವುಗಳನ್ನು ಸಾಧಿಸುವ ಲೋಗರನ್ನು ತೊಡಗಿಸುವವರು! ಅವರು ನರ-ನಾರಾಯಣರೇ ಸರಿ.

ಕುರು ಪ್ರದೇಶದಿಂದ ಹೊರಟ ಅವರು, ದಾರಿಯಲ್ಲಿ ನಾನಾ-ಪ್ರದೇಶಗಳನ್ನು ಕಂಡರು. ಕುರು-ಜಾಂಗಲ ಪ್ರದೇಶ, ಅಲ್ಲಿ ರಮಣೀಯವಾದ ಪದ್ಮ-ಸರಸ್ಸು, ಮುಂದಕ್ಕೆ ಕಾಲಕೂಟ-ಪರ್ವತ, ಅದನ್ನೂ ದಾಟಿದ ಮೇಲೆ ಗಂಡಕಿ, ಮಹಾ ಶೋಣ, ಸದಾ ನೀರಾ ನದಿಗಳು, ಬಳಿಕ ಏಕಪರ್ವತಕ-ಪ್ರದೇಶದ ನದಿಗಳು - ಇವೆಲ್ಲವನ್ನೂ ಮೀರಿ ನಡೆದರು. ಆಮೇಲೆ ರಮ್ಯವಾದ ಸರಯೂ ನದಿ, ಪೂರ್ವಕೋಸಲ ದೇಶ, ಬಳಿಕ ಮಿಥಿಲೆ. ಅಲ್ಲಿ ವಿಪುಲವಾದ ನದಿಗಳನ್ನು ಕಾಣುತ್ತಾ ಗಂಗೆ-ಶೋಣಭದ್ರಾ ನದಿಗಳನ್ನು ದಾಟಿದರು. ಮುಂದಕ್ಕೆ ಪೂರ್ವಾಭಿಮುಖವಾಗಿ ಹೊರಟರು. ಕುಶ-ಚೀರವಸ್ತ್ರಗಳನ್ನು ಧರಿಸಿದ್ದ ಅವರು, ಮುಂದೆ ಮಾಗಧ ಸೀಮೆಯನ್ನು ಸೇರಿದರು. ಅಲ್ಲಿ ಗೋಧನದಿಂದ ತುಂಬಿತುಳುಕಿದ್ದುದೂ, ಜಲಸಮೃದ್ಧಿ-ಸಸ್ಯಸಮೃದ್ಧಿಗಳನ್ನುಳ್ಳದ್ದೂ ಆದ ಗೋರಥ-ಗಿರಿಯನ್ನು ತಲುಪಿ, ಅಲ್ಲಿ ಮಾಗಧ ಪುರವನ್ನು ಕಂಡರು. ಆಗ ವಾಸುದೇವನೇ ಮಾಗಧ ದೇಶವನ್ನು ಪ್ರಶಂಸಿಸಿದನು. ಗೋಸಂಪತ್ತು, ನಿತ್ಯ-ಜಲಸಮೃದ್ಧಿಗಳನ್ನುಳ್ಳ ದೇಶವಿದಲ್ಲವೇ? ಇಲ್ಲಿನ ಜನಗಳಾದರೂ ವ್ಯಾಧಿಗಳಿಲ್ಲದಿರುವರು. ಮನೆಗಳು ಸೊಗಸಾಗಿವೆ. ಹೀಗಾಗಿ, ಈ ಮಾಗಧ-ದೇಶವೇ ಮನೋಹರವಾಗಿದೆ. ವಿಪುಲ, ವರಾಹ, ವೃಷಭ, ಋಷಿಗಿರಿ ಹಾಗೂ ಚೈತ್ಯಕ ಎಂಬ ಹೆಸರಿನ ಐದು ವಿಹಾರ ಯೋಗ್ಯವಾದ ಪರ್ವತಗಳಿಲ್ಲಿವೆ.

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ



• ಎನ್.ರಾಮನಾಥ್
anakuramanath@gmail.com

ಎಂಟನೆಯ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಅಧ್ಯಾಯವೊಂದು ಇದ್ದುದನ್ನು ಖಂಡಿಸಿದ ನ್ಯಾಯಾಲಯವು ಆ ಪಠ್ಯ ಪುಸ್ತಕವನ್ನು ನಿಷೇಧಿಸಿದುದರ ಹಿನ್ನೆಲೆಯಲ್ಲಿ ಇತರ ವಿಷಯಗಳಲ್ಲಿಯೂ ಯಾವ್ಯಾವ ಅಧ್ಯಾಯಗಳನ್ನು ನಿಷೇಧಿಸಬೇಕೆಂದು ಚರ್ಚಿಸಲು ಹಾ.ತ.ಸಂ. (ಹಾದಿಬದಿ ತರಲೆಗಳ ಸಂಘ)ನ ಸ್ಟ್ಯಾಂಡಿಂಗ್ ಕಮಿಟಿಯು (ಹಾದಿಬದಿಯಲ್ಲೇ ಸೇರುತ್ತಿದ್ದುದರಿಂದಲೂ, ಅಲ್ಲಿ ಕುಳಿತುಕೊಳ್ಳಲು ಇದ್ದ ಸೋಮಾರಿಕಟ್ಟೆಯನ್ನು ಪಾನಿಪುರಿ ಮಾರುವವನು ಪೊಲೀಸರಿಂದ ಅನಧಿಕೃತವಾಗಿ ಭೋಗ್ಯಕ್ಕೆ ಪಡೆದಿದ್ದುದರಿಂದಲೂ ಇವರದು ಸಿಟಿಂಗ್ ಕಮಿಟಿ ಆಗಲು ಸಾಧ್ಯವಿಲ್ಲದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯೇ ಆಗಿದ್ದಿತು) ಮೆಜೆಸ್ಟಿಕ್ಕಿನ ಫುಟ್ಪಾತಿನಲ್ಲಿ ಸಭೆ ಸೇರಿತು.

"ಚರಿತ್ರೆಯಲ್ಲಿ ಯುದ್ಧಗಳಿವೆ. ಚರಿತ್ರೆಯಲ್ಲಿ ಗಾಂಧೀಜಿಯೂ ಇದ್ದಾರೆ. ಎರಡರಲ್ಲಿ ಒಂದನ್ನು ಇಟ್ಟುಕೊಳ್ಳಬೇಕು" ಎಂದ ಹಾತಸಂ ಅಧ್ಯಕ್ಷನಾದ ತರಲೆ ತಮ್ಮಣ್ಣ.

"ಏಕೆ?"

"ಗಾಂಧೀಜಿ ಅಹಿಂಸಾವಾದಿ. ಯುದ್ಧ ಹಿಂಸಾಕಾಂಡ. ಹರ್ಷನು ಅನೇಕ ಯುದ್ಧಗಳನ್ನು ಗೆದ್ದನು ಎಂದು ಪಾಠ ಮಾಡಿದ ಮರುದಿನವೇ ಗಾಂಧಿಯು ಅಹಿಂಸಾ ತತ್ವವನ್ನು ಸಾರಿದರು ಎಂದರೆ ಹರ್ಷನ ಬಗ್ಗೆ ಹರ್ಷ ಪಡಬೇಕೋ, ಗಾಂಧಿಯನ್ನು ಮೆಚ್ಚಬೇಕೋ ಎಂಬ ಗೊಂದಲ ಉಂಟಾಗುತ್ತದೆ. ಎರಡರಲ್ಲಿ ಒಂದು ಧೋರಣೆಯಿರುವ ಪಾಠವನ್ನಷ್ಟೇ ಬೋಧಿಸುವುದೇ ಗೊಂದಲ ನಿವಾರಣೆಗೆ ಉಪಾಯ" ನುಡಿದ ತ.ತ.

"ಚರಕದ ಬಗ್ಗೆಯೂ ಗೊಂದಲವಿದೆ" ಕೊರಳೆತ್ತಿದ ಹಾತಸಂ ಕಾರ್ಯದರ್ಶಿಯಾದ ಕಿತಾಪತಿ ಕಿಟ್ಟಣ್ಣ.

"ಏನು ಗೊಂದಲ?" ಸಂಶಯವನ್ನು ಮುಂದಿರಿಸಿದ ಡೌಟೇಶ.

"ಚರಕ ಎಂದರೆ ವೈದ್ಯ. ಅವನು ಡಾಕ್ಟರ್ ಶುಶ್ರುತನ ಕಸಿನ್ ಎಂದೂ ನಂಬಲನರ್ಹವಾದ ಮೂಲಗಳು ತಿಳಿಸಿವೆ. ಗಾಂಧೀಜಿಯ ಚರಕ ಒಂದು ಯಂತ್ರ. ಈ ಚರಕ ನೇಯ್ಗೆಗೆ ಬೇಕಾದ ನೂಲನ್ನು ನೀಡಿದರೆ ಆ ಚರಕ ನೂಲನ್ನು ಬಳಸಿ ಶಸ್ತ್ರಚಿಕಿತ್ಸೆಗೆ ಹೊಲಿಗೆ ಹಾಕುತ್ತಿದ್ದನಂತೆ. ವಿದ್ಯಾರ್ಥಿಗಳಿಗೆ ಚರಕ ಎಂದ ಕೂಡಲೆ ವ್ಯಕ್ತಿಯೋ, ಶಕ್ತಿಯೋ ಎಂಬ ಅನುಮಾನ ಮೂಡುವುದರಿಂದ ಎರಡೂ ಚರಕಗಳನ್ನು ಪುಸ್ತಕದಿಂದ ಹೊರಗಿಡುವುದು ಕ್ಷೇಮ" ಎಂದ ಕಿ.ಕಿ.

"ವಿಜ್ಞಾನವು ಮುಂದುವರಿದು ಆಮ್ಲಜನಕವನ್ನು ಇಲ್ಲವಾಗಿಸಿದರೆ ರಾಜಕೀಯ ವಿಜ್ಞಾನದವರು ನೆಮ್ಮದಿಯಿಂದ ಉಸಿರಾಡಬಹುದು" ಎಂದ ಇಂಪರ್ಟಿನೆಂಟ್ ಇಳಂಗೋವನ್.

"ಆಮ್ಲಜನಕವೇ ಇಲ್ಲವಾದರೆ ಉಸಿರಾಡುವುದು ಹೇಗೆ?" ಡೌಟೇಶ ಉವಾಚ.

"ಇಲ್ಲವಾದರೆ ಎಂದರೆ ವ್ಯಾನಿಶ್ ಆಗಬೇಕೆಂದು ಅರ್ಥವಲ್ಲ. ಉದಾಹರಣೆಗೆ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವಿಲ್ಲ ಎಂದು ನ್ಯಾಯಾಲಯವು ಹೇಳಿದಾಕ್ಷಣ ಸಿಗ್ನಲ್ ಲೈಟಿನ ಕಂಬದ ಹಿಂದೆ ಕಳ್ಳನಂತೆ ಅಡಗಿ ನಿಂತ ಪೊಲೀಸನು ಸಿಗ್ನಲ್ ಜಂಪಿನತ್ತ ಕುರುಡುನೋಟ ಬೀರಲು ಕೈಬಿಸಿಮಾಡಿಕೊಳ್ಳುವುದಿಲ್ಲ ಎಂದೇನಿಲ್ಲ. ಆಮ್ಲಜನಕ ಇರಕೂಡದು ಎಂದರೆ ಪುಸ್ತಕದಲ್ಲಿ ಇರಕೂಡದು ಎಂದಷ್ಟೇ ಅರ್ಥ" ದನಿಯೇರಿಸಿದ ಇಂ.ಇ.

"ವಿಜ್ಞಾನದ ಆಮ್ಲಜನಕವು ರಾಜಕೀಯ ವಿದ್ಯಾರ್ಥಿಗೆ ಹೇಗೆ ಗೊಂದಲ ಉಂಟಾಗಿಸುತ್ತದೆ?" ಕೇಳಿದ ಅನುಮಾನಂ ಅಯ್ಯಂಗಾರ್.

"ರಸಾಯನಶಾಸ್ತ್ರದಲ್ಲಿ ಆಮ್ಲಜನಕವನ್ನು ಓ-ಟೂ ಎನ್ನುತ್ತಾರೆ. ರಾಜಕೀಯದಲ್ಲಿ ಓಟು ಎಂದರೆ ಬೇರೆಯದೇ ಅರ್ಥ. ಆಮ್ಲಜನಕವನ್ನು ಬೇರೆ ಅಕ್ಷರದಿಂದ ಗುರುತಿಸಿದರೆ ಮತದ ಛಾಯೆ ಕಳೆದು ಗೊಂದಲ ತಪ್ಪುತ್ತದೆ."

"ಆಕ್ಸಿಜನ್ ಓ ಎಂದಲೇ ಆರಂಭವಾಗುವುದರಿಂದ ಬೇರೆ ಅಕ್ಷರದಿಂದ ಗುರುತಿಸುವುದು ಸೂಕ್ತವಲ್ಲ" ಎಂದ ಅ.ಅ.

"ಪೊಟಾಶಿಯಮ್‌ಗೆ ಪಿ ಎನ್ನುವುದಿಲ್ಲ, ಕೆ ಎನ್ನುತ್ತೇವೆ. ಗೋಲ್ಡ್‌ಗೆ ಜಿ ಎನ್ನುವುದಿಲ್ಲ, ಎಯು ಎನ್ನುತ್ತೇವೆ. ಹಾಗೆಯೇ ಆಮ್ಲಜನಕಕ್ಕೆ ಮರುನಾಮಕರಣ ಮಾಡುವುದು ಅತ್ಯವಶ್ಯ" ಘಂಟಾಘೋಷಿಸಿದ ಇಂ.ಇ.

"ಬೀಜಗಣಿತ ಎಂದು ಆಲ್‌ಜೀಬ್ರಾವನ್ನು ಕರೆಯುವುದು ನನಗೆ ಇನಿತೂ ಸರಿಬರುವುದಿಲ್ಲ" ಎಂದ ಸಿನಿಕ್ ಸಿದ್ದಯ್ಯ.

"ಏಕೆ?"

"ಸರ್ಕಾರವು ರೈತರಿಗೆ ಬಿತ್ತನೆಗೆಂದು ಕೊಡುವ ಬೀಜಗಳ ಲೆಕ್ಕವನ್ನು ಬೀಜಗಣಿತ ಎನ್ನಬೇಕು. ಕೃಷಿಗೆ ಸಂಬಂಧಿಸಿದ ಈ ಲೆಕ್ಕವನ್ನು ಎ+ಬಿ ವಿಧದಲ್ಲಿ ಬೋಧಿಸುವುದು ಸರಿಯಲ್ಲ. ಹಾಗೆ ನೋಡಿದರೆ ಆಲ್ಜೀಬ್ರಾ ಸಹ ಸರಿಯಾದ ಹೆಸರಲ್ಲ. ಎಲ್ಲಾ ಪ್ರಾಣಿಗಳೂ ಜೀಬ್ರಾಗಳಾಗಲು ಹೇಗೆ ಸಾಧ್ಯ?" ಕೊಶ್ಚನಿಸಿದ ಸಿ.ಸಿ.

"ನನ್ನದು ಬೀಜಗಣಿತ ಎಂಬ ಪದದ ಬಗ್ಗೆ ತಕರಾರಿಲ್ಲ. ಆದರೆ ಎಕ್ಸ್ ಅಕ್ಷರವನ್ನು ಬೀಜಗಣಿತದಿಂದ ಹೊರಗಿಡುವುದು ಸೂಕ್ತ" ಎಂದ ಶಕುನಿ ಶಾಮಣ್ಣ.

"ಏಕೆ?" ಎಂದ ಸಿ.ಸಿ.

"ಎಕ್ಸ್ ಎನ್ನುವುದು ಮಾಜಿ ಟ್ವಿಟರ್‌ನ ಹಾಲಿ ಹೆಸರು. ನಾವು ಆಲ್ಜೀಬ್ರಾದಲ್ಲಿ ಎಕ್ಸ್+ಎ, ಎಕ್ಸ್ ಸ್ಕ್ವೇರ್ ಎಂದೆಲ್ಲ ಹೇಳುವಾಗ ಝುಕರ್‌ಬರ್ಗನು 'ನಮ್ಮ ಫೇಸ್‌ಬುಕ್ಕಿನ ಸಿಂಬಲ್ಲಾದ ಎಫ್‌ಗೂ ಪ್ರಾಮುಖ್ಯತೆ ಕೊಡಿ. ಎಫ್+ಎ, ಎಫ್+ಬಿ ಎಂದೆಲ್ಲ ಲೆಕ್ಕ ಹೇಳಿಕೊಡಿ' ಎಂದೂ, 'ಟಂಬ್ಲರ್ ಅನ್ನು ಕಡೆಗಣಿಸುವುದು ತರವಲ್ಲ. ಮುಂದಿನ ದಿನಗಳಲ್ಲಿ ಕೆಲವೆಡೆ ಎಫ್ ಬಳಸಿ, ಕೆಲವೆಡೆ ನನ್ನ ಸೂಚಕವಾದ ಟಿ ಅನ್ನು ಬಳಸಿ' ಎಂದು ಟಂಬ್ಲರೂ ಕೂಗೆಬ್ಬಿಸಬಹುದು. 'ದೊಡ್ಡ ಟಿ ಅಕ್ಷರವು ನನ್ನ ಮೊದಲ ಅಕ್ಷರವನ್ನೂ, ಎಕ್ಸ್ ಅಕ್ಷರವು ನನ್ನ ಕೊನೆಯ ಅಕ್ಷರವನ್ನೂ ಸೂಚಿಸುವುದರಿಂದ ಎರಡೂ ಇರಲಿ" ಎಂದು ಟೆಲಿಗ್ರಾಮ್ ಎಕ್ಸ್ ಆಪ್ ಸಹ ದನಿಯೇರಿಸಬಹುದು. ಒಂದು ಆಪ್‌ಗೆ ಬೆಣ್ಣೆ, ಮತ್ತೊಂದು ಆಪ್‌ಗೆ ಸುಣ್ಣ ಬಳಿಯಬಾರದೆಂದಿದ್ದರೆ ಬೀಜಗಣಿತದಲ್ಲಿ ಎಕ್ಸ್ ಅಕ್ಷರದ ಬಳಕೆಯನ್ನು ಈ ದಿನದಿಂದಲೇ ನಿಷೇಧಿಸಬೇಕು" ಎಂದ ಶ.ಶಾ.

"ಬೀಜಗಣಿತದಲ್ಲಿ ಬರುವ ಸೈನ್ ತೀಟಾ, ಕಾಟ್ ತೀಟಾಗಳ ಹೆಸರನ್ನು ಬದಲಿಸಬೇಕು ಅಥವಾ ಬೀಜಗಣಿತವನ್ನೇ ಸಿಲಬಸ್‌ನಿಂದ ಹೊರಗಿಡಬೇಕು" ಎಂದ ಕಾಮ್ರೇಡ್ ಕಾಮಣ್ಣ.

"ಏಕೆ?"

"ಸೈನ್ ತೀಟಾ ಎಂದು ಬಾಯಲ್ಲಿ ಹೇಳಿದರೂ ಅದನ್ನು ಬರೆಯುವುದು ಸಿನ್ (sin) ಎಂದೇ. ಪಾಪವನ್ನು ಸೂಚಿಸುವ ಈ ಪದವು ಗಣಿತಕ್ಕೆ ಹೊಂದುವಂತಹದ್ದಲ್ಲ. ಅದೇನಿದ್ದರೂ ಧರ್ಮದ ಬಾಬತ್ತು. ಧರ್ಮಬೋಧನೆಯು ಟಿಆರ್‌ಪಿಗೆಂದು ವಾಹಿನಿಗಳು ಬಳಸುವ ವಿಷಯವೇ ಹೊರತು ಶಾಲೆಯ ಪಠ್ಯ ವಿಷಯವಲ್ಲ. ಕಾಟ್ ತೀಟಾದ ಪೂರ್ಣ ಹೆಸರು ಕೊಟ್ಯಾನ್-ಜೆಂಟ್ ಎಂದಿದ್ದು, ಕೊಟ್ಯಾನ್-ಲೇಡಿ ಇಲ್ಲದ ಕಾರಣ ಅದು ಪುರುಷಪ್ರಧಾನ ಸಮಾಜವನ್ನು ಬಿಂಬಿಸುತ್ತದೆ, ತತ್ಕಾರಣ ಸ್ತ್ರೀಯರಿಗೆ ಅನ್ಯಾಯವಾದಂತೆ. ಮಕ್ಕಳಲ್ಲಿ ಈ ರೀತಿಯ ಭೇದಭಾವಗಳನ್ನು ಬಿತ್ತುವುದು ಅಕ್ಷಮ್ಯ ಅಪರಾಧ. ಕೊಟ್ಯಾಂಜೆಂಟನ್ನು ಕಾಟ್ ಎಂದು ಬಳಸುವುದೂ ಸಹ ಮಂಚವನ್ನು ನೆನಪಿಸುವುದರಿಂದಲೂ, ಅನೇಕ ಜಗದ್ಗುರುಗಳು, ದೊಡ್ಡ ಕುಳಗಳು ಕಾಟ್‌ನಲ್ಲೇ ಕಾಟ್ (caught) ಆಗುವುದು ಹನಿ ಟ್ರ್ಯಾಪ್ ಆದುದರಿಂದಲೂ ಅದು ಕ್ರೈಮ್ ಲೈಫನ್ನು ಬಿಂಬಿಸುತ್ತದೆ. ಕ್ರೈಮ್ ತರಗತಿಗಳ ಪಠ್ಯವಾದರೆ ವಿದ್ಯಾರ್ಥಿಗಳ ಜೀವನದ ಗತಿಯೇ ಬದಲಾಗುತ್ತದೆ. ಇದನ್ನು ಹಾತಸಂ ಉಗ್ರವಾಗಿ ಖಂಡಿಸಲೇಬೇಕು" ಎಂದು ಗುಡುಗಿದ ಕಾ.ಕಾ.

"ಬಯಾಲಜಿಯಲ್ಲಿ ಹೃದಯದ ಬಗ್ಗೆ ತಿಳಿಸಿಕೊಡುವುದು ಸಮಂಜಸವೇ ಆದರೂ ಹೃದಯದ ಚಿತ್ರವನ್ನು ಬ್ಯಾನ್ ಮಾಡಲೇಬೇಕು" ಎಂದ ಸನಾತನಿ ಸರವಣ.

"ಏಕೆ?"

"ಹೃದಯದ ಚಿತ್ರವನ್ನು ಲವ್ ಸಿಂಬಲ್ ಆಗಿ ಬಳಸುತ್ತಾರೆ. ಆ ಸಿಂಬಲ್ಲು ಫೆಬ್ರವರಿ 14ಕ್ಕೆ ಸಂಬಂಧಿಸಿದ್ದೆಂದು ಇಂದಿನ ಪಡ್ಡೆಗಳ ಅಭಿಪ್ರಾಯ. ವ್ಯಾಲೆಂಟೈನ್ ವಿದೇಶಿ ಪದ್ಧತಿ. ನಮ್ಮದು ಪ್ರೇಮಕಾಮಗಳಿಗೆ ಫುಲ್‌ಸ್ಟಾಪ್ ಇಡುವ ಪದ್ಧತಿ. ವಿದೇಶೀಯರದು ಕಾಮಪ್ರೇಮಗಳಿಗೆ ಕಾಮಾ ಹಾಕುವ ಇರಾದೆ. ಪ್ರೇಮಕಾಮಗಳು ಬದುಕಿನಲ್ಲಿ ತಪ್ಪಲ್ಲವಾದರೂ ಹೈಸ್ಕೂಲಿನಲ್ಲಿಯೇ ಅದರ ವಾಸನೆಯನ್ನು ಹರಡುವುದು ತಪ್ಪು. ಆದ್ದರಿಂದ ಹೃದಯದ ಚಿತ್ರವಿಲ್ಲದೆಯೇ ಹೃದಯದ ಬಗ್ಗೆ ಪಾಠವನ್ನು ಮಾಡಲೆಂದು ಹಾತಸಂ ಆಗ್ರಹಿಸಲಿ" ಎಂದ ಸ.ಸ.

"ನಿಮ್ಮದು ಶುದ್ಧ ಹುಚ್ಚುಮಾತು ಸರವಣ. ಚಿತ್ರವೇ ಇಲ್ಲದೆ ಹೃತ್ಕರ್ಣ, ಹೃತ್ಕುಕ್ಷಿಗಳನ್ನು ಸೂಚಿಸುವುದು ಹೇಗೆ?" ಎಂದ ಕಾ.ಕಾ.

"ಆ ಹೆಸರುಗಳೂ ಸರಿಯಿಲ್ಲ. ಕುಕ್ಷಿ ಎನ್ನುವುದು ನಿರಕ್ಷರಕುಕ್ಷಿ ಎನ್ನುವುದನ್ನೇ ನೆನಪಿಗೆ ತರುತ್ತದೆ. ಅದು ಅನಕ್ಷರಸ್ಥರ ಬಗ್ಗೆ ಸಮಾಜವು ತೋರುವ ಕೀಳುಭಾವವನ್ನು ಬಿಂಬಿಸುತ್ತದೆ. ಹೃತ್ಕರ್ಣದಲ್ಲಿರುವ ಕರ್ಣವೂ ಮಹಾಭಾರತದ ಕರ್ಣನನ್ನು ಬಿಂಬಿಸುವುದೆಂದು ನನ್ನ ಅಭಿಮತ. ಮದುವೆಗೆ ಮುಂಚೆಯೇ ಹುಟ್ಟಿದ ಮಗುವಿನ ಹೆಸರನ್ನು ಹೈಸ್ಕೂಲಿನ ಹುಡುಗರ ಕಿವಿಯ ಮೇಲೆ ಹಾಕುವುದು ನನಗಂತೂ ಸರಿಕಾಣದು. ಹೃದಯದ ಈ ಭಾಗಗಳಿಗೂ ಬೇರೆ ಹೆಸರಿಡದಿದ್ದರೆ ಈ ಅಧ್ಯಾಯವನ್ನೂ ನಿಷೇಧಿಸುವುದೇ ಉತ್ತಮ." ಅಭಿಪ್ರಾಯಿಸಿದ ಸ.ಸ.

"ಕರ್ಣನ ಹೆಸರೆತ್ತಿದರೆ ನನಗೆ ರಸಾಯನದ್ದೇ ನೆನಪು. ಪಂಪನು ಭಾರತವನ್ನು 'ಕರ್ಣರಸಾಯನಮಲ್ತೇ' ಎಂದಿರುವುದೇ ಇದರ ಹಿನ್ನೆಲೆ. ಅಲ್ಲದೆ ಕೆಮಿಸ್ಟ್ರಿಯ ಬಗ್ಗೆ ಮಾತನಾಡಿದವರೂ ಅದನ್ನು ರಸಾಯನಶಾಸ್ತ್ರ ಎಂದರು. ರಸಾಯನ ಎಂದರೆ ಪಂಚಾಮೃತ. ಫಲಾಮೃತಗಳು ನೆನಪಾಗುತ್ತವೆ. ಅವೆರಡು ನೆನಪಾದಾಗ ಮಠಗಳ ನೆನಪಾಗುತ್ತದೆ. ಹೀಗೆ ಒಂದು ಧರ್ಮಕ್ಕೆ ಸೇರಿದ ಪೂಜಾಗೃಹವನ್ನು ನೆನಪಿಸುವ ರಸಾಯನ ಎಂಬ ಪದವು ಜಾತ್ಯತೀತತೆಯನ್ನು ಬಿಂಬಿಸುವುದಕ್ಕೆ ಅಡಚಣೆ ಉಂಟುಮಾಡೀತೆಂದು ನನ್ನ ಮನ ಅಂಜುತ್ತಿದೆ. ತತ್ಕಾರಣ ಕೆಮಿಸ್ಟ್ರಿಗೆ ಕನ್ನಡದಲ್ಲಿ ಹೊಸ ಹೆಸರಿಡಬೇಕು, ಅದುವರೆಗೆ ಆ ವಿಷಯವನ್ನೇ ಬ್ಯಾನ್ ಮಾಡಬೇಕು" ಎಂದ ಪ್ರಾಚೀನಂ ಪಾಪಯ್ಯ.

"ಹಾಗೆ ನೋಡಿದರೆ ಸಮಾಜ ವಿಜ್ಞಾನ ಎನ್ನುವ ವಿಷಯವೇ ನಮಗೆ ಅನ್ವಯವಾಗದು. ಜಾತ್ಯಾಧಾರಿತವಾಗಿ ಓಟ್ ಮಾಡುವ, ಸಂಘ ಕಟ್ಟುವ, ಮೀಸಲು ಬೇಡುವ ನಾವು ವಿಜ್ಞಾನದಿಂದ ಬಹಳ ದೂರ ಇದ್ದೇವೆ. ಆದ್ದರಿಂದ ಸಮಾಜವೇ ಬೇರೆ, ವಿಜ್ಞಾನವೇ ಬೇರೆ" ಎಂದು ಆರಂಭಿಸಿದ ಕಾ.ಕಾ.

ಅಷ್ಟರಲ್ಲಿ ಸಮೀಪದ ಸಿನೆಮಾ ಮಂದಿರವು ಬಿಟ್ಟ ಕಾರಣ ಜನಸಮೂಹವು ಫುಟ್ಪಾತಿನಲ್ಲಿ ನುಗ್ಗಿಬಂದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯು ಸ್ಥಾನಪಲ್ಲಟವಾಗಿ ಸಭೆ ಬರ್ಖಾಸ್ತಾಯಿತು.

ಮತಾಂತರ: ಛತ್ತೀಸ್‌ಗಢ ಹೈಕೋರ್ಟಿನ ಮಹತ್ವದ ತೀರ್ಪು

ಅರವಿಂದ ತೆಕ್ಕೆ

ಮತಾಂತರಕ್ಕೆ ಸಂಬಂಧಿಸಿ ಛತ್ತೀಸ್‌ಗಢ ಹೈಕೋರ್ಟ್ ನೀಡಿದ ಮಹತ್ವದ ತೀರ್ಪೊಂದಕ್ಕೆ ತಡೆಯಾಜ್ಞೆ ನೀಡಲು ಕೆಲದಿನಗಳ ಹಿಂದೆ ಸುಪ್ರೀಂಕೋರ್ಟ್ ನಿರಾಕರಿಸಿದ್ದು ಒಂದು ಮಹತ್ವದ ಬೆಳವಣಿಗೆ. ಇದು ಛತ್ತೀಸ್‌ಗಢದ ಕೆಲವು ಗ್ರಾಮ ಪಂಚಾಯತ್‌ಗಳು ಗ್ರಾಮದ ಪ್ರವೇಶದ್ವಾರಗಳಲ್ಲಿ ಭಿತ್ತಿಪತ್ರಗಳನ್ನು ಹಾಕಿದ್ದರ ವಿರುದ್ಧವಾಗಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪಾಗಿತ್ತು. ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳಲ್ಲಿರುವ ಹಲವು ಗ್ರಾಮ ಪಂಚಾಯತ್‌ಗಳು "ಕ್ರೈಸ್ತ ಮಿಷನರಿಗಳಿಗೆ ಮತ್ತು ಧರ್ಮಗುರುಗಳಿಗೆ ಪ್ರವೇಶವಿಲ್ಲ" ಎಂಬ ಭಿತ್ತಿಪತ್ರಗಳನ್ನು ಗ್ರಾಮದ ಪ್ರವೇಶದ್ವಾರದಲ್ಲಿ ಹಾಕಿದ್ದವು. ಕ್ರೈಸ್ತ ಮಿಷನರಿಗಳು ಆದಿವಾಸಿ ಜನಾಂಗದವರನ್ನು ಮತಾಂತರ ಮಾಡುತ್ತಾರೆ ಎಂಬ ಭೀತಿಯಿಂದ ಅದನ್ನು ತಡೆಯುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಈ ರೀತಿಯ ಭಿತ್ತಿಪತ್ರ ಹಾಕಿದ್ದವು. ಇದೀಗ ಈ ವಿಷಯವು ಧಾರ್ಮಿಕ ಮತಾಂತರದ ವಿಷಯದ ಕುರಿತಾದ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ದಿಗ್ಬಾಲ್ ತಂಡಿ ಎಂಬಾತ ಇಂತಹ ಭಿತ್ತಿಪತ್ರಗಳನ್ನು ತೆಗೆಸಬೇಕೆಂದು ಕೋರಿ ಛತ್ತೀಸ್‌ಗಢ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಆದರೆ ಹೈಕೋರ್ಟ್ ಅದನ್ನು ನಿರಾಕರಿಸಿ ತೀರ್ಪು ನೀಡಿತ್ತು. ಆ ಬಳಿಕ ಆತ ಸುಪ್ರೀಂಕೋರ್ಟ್‌ನ ಮೊರೆ ಹೋಗಿದ್ದ. ಸುಪ್ರೀಂಕೋರ್ಟ್ ಕೂಡಾ ಈಗ ಆತನ ಮನವಿಯನ್ನು ತಿರಸ್ಕರಿಸಿದೆ. ತಂಡಿಯ ಮೂಲ ಅರ್ಜಿಯನ್ನು 2025ರ ಅಕ್ಟೋಬರ್‌ನಲ್ಲಿ ತಿರಸ್ಕರಿಸಿ ತೀರ್ಪು ನೀಡಿದ್ದ ಹೈಕೋರ್ಟ್, ಮತಾಂತರದ ಕುರಿತಂತೆ ಕೆಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಿದೆ. ಇಬ್ಬರು ಸದಸ್ಯರನ್ನೊಳಗೊಂಡ ನ್ಯಾಯಪೀಠವು ತನ್ನ ಆದೇಶದಲ್ಲಿ "ಆದಿವಾಸಿ ಜನಾಂಗದವರನ್ನು ಬಲವಂತದಿಂದ ಅಥವಾ ಆಮಿಷದಿಂದ ಮತಾಂತರ ಮಾಡದಂತೆ ತಡೆಯುವ ಉದ್ದೇಶದಿಂದ ಗ್ರಾಮಪಂಚಾಯತ್‌ಗಳು ಹಾಕಿರುವಂತಹ ಭಿತ್ತಿಪತ್ರಗಳನ್ನು ಅಸಾಂವಿಧಾನಿಕ ಎಂದು ಹೇಳುವಂತಿಲ್ಲ. ದೇಶೀ ಆದಿವಾಸಿ ಪಂಗಡಗಳ ಹಿತಾಸಕ್ತಿಯನ್ನು ಮತ್ತು ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಇಂತಹ ಭಿತ್ತಿಪತ್ರಗಳನ್ನು ಹಾಕಿರುವಂತೆ ತೋರುತ್ತದೆ" ಎಂದು ಹೇಳಿತು.

ಮತಾಂತರದ ಕುರಿತಂತೆಯೂ ಹೈಕೋರ್ಟ್ ಹಲವು ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. "ಧಾರ್ಮಿಕ ಮತಾಂತರಗಳು ಬಹುಕಾಲದಿಂದಲೇ ಭಾರತದ ಸಾಮಾಜಿಕ-ರಾಜಕೀಯ ಪರಿಸರದಲ್ಲಿ ಅತ್ಯಂತ ಸೂಕ್ಷ್ಮಸಂವೇದಿ ವಿಷಯಗಳಾಗಿವೆ. ಕ್ರೈಸ್ತ ಮಿಷನರಿಗಳು ಬಡ ಮತ್ತು ಅನಕ್ಷರಸ್ಥ ಆದಿವಾಸಿಗಳನ್ನು ಮತ್ತು ಗ್ರಾಮೀಣ ಪ್ರದೇಶದ ಜನರನ್ನು ಮತಾಂತರ ಮಾಡುವ ವಿಷಯಗಳು ಬಹಳಷ್ಟು ವಿವಾದಗಳನ್ನು ಸೃಷ್ಟಿಸಿದೆ. ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಧರ್ಮವನ್ನು ಆಚರಿಸುವ ಮತ್ತು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನೀಡಿದೆಯಾದರೂ ಈ ಸ್ವಾತಂತ್ರ್ಯವನ್ನು ಬಲಪ್ರಯೋಗ, ಆಮಿಷ ಮತ್ತು ವಂಚನೆಯಿಂದ ದುರುಪಯೋಗ ಮಾಡುತ್ತಿರುವ ಬಹಳಷ್ಟು ಪ್ರಸಂಗಗಳು ಸಂಭವಿಸಿವೆ. ಇದು

> ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಎಂದರೆ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವೆಂದು ಅರ್ಥವಲ್ಲ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

ಅತ್ಯಂತ ಕಳವಳಕಾರಿ ವಿಷಯವಾಗಿದೆ. ಸಾಮೂಹಿಕ ಮತಾಂತರ ಅಥವಾ ಉದ್ದೇಶಪೂರಿತ ಮತಾಂತರ ಕಾರ್ಯಗಳು ಸಾಮಾಜಿಕ ಸೌಹಾರ್ದತೆಯನ್ನು ಹಾಳುಗೆಡಹುವುದಷ್ಟೇ ಅಲ್ಲದೇ ದೇಶೀ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಗೆ ದೊಡ್ಡ ಸವಾಲೂ ಆಗಿದೆ" ಎಂದು ಹೈಕೋರ್ಟ್ ಅಭಿಪ್ರಾಯಿಸಿದೆ.

"ಭಾರತದಲ್ಲಿ ವಸಹಾತುಶಾಹಿ ಕಾಲದಿಂದಲೇ ಮಿಷನರಿ ಚಟುವಟಿಕೆಗಳು ನಡೆಯುತ್ತಿವೆ. ಕ್ರೈಸ್ತ ಸಂಘಟನೆಗಳು ಶಾಲೆ, ಆಸ್ಪತ್ರೆ ಸ್ಥಾಪಿಸಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವನ್ನು ಆರಂಭದಲ್ಲಿ ಸಾಮಾಜಿಕ ಏಳಿಗೆ, ಸಾಕ್ಷರತೆ ಉದ್ದೇಶಕ್ಕಾಗಿ ಬಳಸಿಕೊಂಡರೂ ನಂತರ ಕಾಲಕ್ರಮೇಣ ಇದೇ ವೇದಿಕೆಯನ್ನು ಮತಾಂತರ ಉದ್ದೇಶಗಳಿಗಾಗಿ ಬಳಸಿಕೊಂಡಿವೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳು, ಅದರಲ್ಲಿಯೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಉತ್ತಮ ಜೀವನ ನಿರ್ವಹಣೆ ಮತ್ತು ಸಮಾನತೆಯ ಆಮಿಷಕ್ಕೊಳಗಾಗಿ ದೊಡ್ಡ ಪ್ರಮಾಣದಲ್ಲಿ ಮತಾಂತರಗೊಂಡಿದ್ದಾರೆ. ಒಂದು ಕಾಲದಲ್ಲಿ ಸೇವೆಯೆಂದು ಕಂಡು ಬಂದ ಮಿಷನರಿಗಳ ಕಾರ್ಯಗಳು ಬಳಿಕ ಧಾರ್ಮಿಕ ಮತಾಂತರ ಮತ್ತು ಧಾರ್ಮಿಕ ವಿಸ್ತರಣೆಗೆ ಸಾಧನವಾಗಿ ಬಳಸಲ್ಪಟ್ಟಿವೆ" ಎಂದು ನ್ಯಾಯಾಲಯ ಹೇಳಿತ್ತು.

"ಮತಾಂತರವೆಂಬುದು ಒಬ್ಬನ ವೈಯಕ್ತಿಕ ನಂಬಿಕೆಯಿಂದ ನಡೆಯುವ ಬದಲಾಗಿ, ಆಮಿಷ, ಶೋಷಣೆ ಮತ್ತು ಆತನ ದೌರ್ಬಲ್ಯದ ದುರುಪಯೋಗದಿಂದ ನಡೆಯುವಾಗ ಅದು ಪಿಡುಗಾಗಿ ಬದಲಾಗುತ್ತದೆ. ಕೆಲವು ಆದಿವಾಸಿ ಪ್ರದೇಶಗಳಲ್ಲಿ ಮಿಷನರಿಗಳು ಅನಕ್ಷರಸ್ಥ ಮತ್ತು ಬಡ ಕುಟುಂಬಗಳನ್ನೇ ಗುರಿಯಾಗಿಸಿಕೊಂಡು ಅವರಿಗೆ ಹಣದ ಮತ್ತು ಉಚಿತ ಶಿಕ್ಷಣದ ಆಮಿಷವೊಡ್ಡಿ ಅವರನ್ನು ಮತಾಂತರಗೊಳಿಸಿದ್ದಾರೆ. ಮತಾಂತರವಾದರೆ ಮಾತ್ರ ಇಂತಹ ಸೌಲಭ್ಯ ನೀಡುವುದಾಗಿ ಅವರು ಹೇಳುತ್ತಿದ್ದಾರೆ. ಇಂತಹ ಕ್ರಮಗಳು ಇಚ್ಛಿತ ಧಾರ್ಮಿಕ ನಂಬಿಕೆಯನ್ನು ಅನುಸರಿಸುವ ಸ್ಫೂರ್ತಿಗೆ ವಿರುದ್ಧವಾಗಿವೆ ಹಾಗೂ ಇದು ಸಾಂಸ್ಕೃತಿಕ ಬಲಪ್ರಯೋಗವೆಂದೇ ಭಾವಿಸಬೇಕಾಗುತ್ತದೆ. ಈ ಪ್ರಕ್ರಿಯೆಗಳು ಆದಿವಾಸಿ ಪಂಗಡಗಳೊಳಗೇ ಸಾಮಾಜಿಕ ವಿಭಜನೆಗಳಿಗೆ ಕಾರಣವಾಗಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಆದಿವಾಸಿಗಳು ನೂತನ ಸಾಂಸ್ಕೃತಿಕ ಆಚರಣೆಗಳಲ್ಲಿ ತೊಡಗಿಕೊಂಡಿರುವ ಹಾಗೂ ತಮ್ಮ ಮೂಲ ಪಾರಂಪರಿಕ ಆಚರಣೆಗಳಿಂದ ಮತ್ತು ಉತ್ಸವಗಳಿಂದ ದೂರ ಸರಿದಿರುವ ನಿದರ್ಶನಗಳು ಕಂಡುಬಂದಿವೆ. ಈ ಕಾರಣದಿಂದಾಗಿ ಗ್ರಾಮಗಳು ಎರಡು ವರ್ಗಗಳಾಗಿ ಧ್ರುವೀಕರಣಗೊಂಡಿವೆ. ಇಂತಹ ಗ್ರಾಮಗಳಲ್ಲಿ ಉದ್ವಿಗ್ನತೆ ಹೆಚ್ಚಿದೆ. ಸಾಮಾಜಿಕ ಬಹಿಷ್ಕಾರ, ಸಂಘರ್ಷಗಳೂ ನಡೆದಿವೆ" ಎಂದು ನ್ಯಾಯಾಲಯವು ನುಡಿದಿದೆ.

25ನೇ ವಿಧಿ ಮತ್ತು ಮತಾಂತರ

ಮತಾಂತರ ವಿರೋಧಿ ಕಾನೂನುಗಳನ್ನು ಟೀಕಿಸುವ ಜನರು ಇದು ಸಂವಿಧಾನದ 25ನೇ ವಿಧಿಯ ಉಲ್ಲಂಘನೆ ಎಂದು ವಾದಿಸುತ್ತಾರೆ. ಸಂವಿಧಾನದ ಪ್ರಕಾರ ಪ್ರತಿಯೊಬ್ಬರಿಗೂ ತಮ್ಮದೇ ಆದ ಧಾರ್ಮಿಕ ವಿಧಿಗಳನ್ನು ಅನುಸರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವಿದೆಯೆಂದು ಅವರು ಪ್ರತಿಪಾದಿಸುತ್ತಾರೆ. ಆದರೆ ಈ ವಿಷಯವನ್ನು 5 ದಶಕಗಳ ಹಿಂದೆಯೇ ಸುಪ್ರೀಂಕೋರ್ಟ್ ಇತ್ಯರ್ಥಪಡಿಸಿದೆ. ಛತ್ತೀಸ್‌ಗಢ ಹೈಕೋರ್ಟ್ ಕೂಡಾ ಈ ವಿಷಯದಲ್ಲಿ ಕೆಲವು ಉಲ್ಲೇಖಗಳನ್ನು ಮಾಡಿದ್ದು, ರೆವರೆಂಡ್ ಸ್ಟಾನಿಸ್ ಲಾಸ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಅಂಶಗಳನ್ನು ಉಲ್ಲೇಖಿಸಿದೆ. ಈ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಧಾರ್ಮಿಕ ಮತಾಂತರದ ಹಕ್ಕು ಒಂದು ಮೂಲಭೂತ ಹಕ್ಕು ಹೌದೇ ಎಂಬುದನ್ನು ವಿವೇಚಿಸಿತ್ತು.

ಸು.ಕೋರ್ಟ್ ರೆ. ಸ್ಟಾನಿಸ್‌ಲಾಸ್ ಮತ್ತು ಮಧ್ಯಪ್ರದೇಶ ಸರಕಾರದ ನಡುವಿನ ಪ್ರಕರಣದಲ್ಲಿ ಈ ತೀರ್ಪು ನೀಡಿತ್ತು. 1977ರಲ್ಲಿ ರೆ. ಸ್ಟಾನಿಸ್ ಲಾಸ್ ಅವರು ಮಧ್ಯಪ್ರದೇಶ ಮತ್ತು ಒಡಿಸ್ಸಾದ 'ಮತಾಂತರ ನಿಷೇಧ ಕಾನೂನ'ನ್ನು ಪ್ರಶ್ನಿಸಿ ಕೋರ್ಟಿಗೆ ಹೋಗಿದ್ದರು. ಈ ಕಾನೂನು ಸಂವಿಧಾನದ 25ನೇ ವಿಧಿಯಲ್ಲಿ ಕೊಡಮಾಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸುತ್ತದೆ ಎಂಬುದು ಅವರ ವಾದವಾಗಿತ್ತು. ಇದಕ್ಕುತ್ತರವಾಗಿ ಸುಪ್ರೀಂಕೋರ್ಟ್ "ಧಾರ್ಮಿಕತೆಯನ್ನು ಪ್ರಚುರಪಡಿಸುವ ಹಕ್ಕು ಎಂದರೆ ಒಬ್ಬನನ್ನು ತನ್ನ ಧರ್ಮಕ್ಕೆ ಮತಾಂತರ ಮಾಡಲು ಇರುವ ಹಕ್ಕು ಎಂಬುದಾಗಿ ಅರ್ಜಿದಾರರು ವಾದಿಸುತ್ತಿದ್ದಾರೆ. ಆ ಮೂಲಕ ಅವರು ಮತಾಂತರ ಮಾಡುವುದು ಸಂವಿಧಾನದ 25ನೇ ವಿಧಿ ನೀಡಿರುವ ಸ್ವಾತಂತ್ರ್ಯ ಎಂಬುದಾಗಿಯೂ ವಾದಿಸುತ್ತಿದ್ದಾರೆ. ಈ ವಿಷಯದಲ್ಲಿ ನಾವು ಸ್ಪಷ್ಟಪಡಿಸುವುದೇನೆಂದರೆ ಸಂವಿಧಾನದ 25ನೇ ವಿಧಿಯಲ್ಲಿ ನೀಡಲಾಗಿರುವ 'ಧಾರ್ಮಿಕತೆ ಪ್ರಚುರಪಡಿಸುವ ಹಕ್ಕು' ಎಂದರೆ ಅದು ಇನ್ನೊಬ್ಬರನ್ನು ಮತಾಂತರ ಮಾಡಲು ನೀಡಲಾಗಿರುವ ಸ್ವಾತಂತ್ರ್ಯ ಎಂದಲ್ಲ. ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬರಿಗೂ ಅವರ 'ಅಸ್ಮಿತೆಯ ಸ್ವಾತಂತ್ರ್ಯ'ವನ್ನು ನೀಡಿದೆಯೇ ಹೊರತು, ಕೇವಲ ಒಂದು ಧರ್ಮವನ್ನು ಅನುಸರಿಸುವುದಷ್ಟೇ ಒಬ್ಬಾತನ ಹಕ್ಕಲ್ಲ. ಆದ್ದರಿಂದ ಒಬ್ಬ ವ್ಯಕ್ತಿ ತಾನಾಗಿ ಬೇರೆ ಧರ್ಮಕ್ಕೆ ಮತಾಂತರ ಮಾಡುವುದನ್ನು ಸಮರ್ಥಿಸಬಹುದಾದರೂ, ಇನ್ನೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ತನ್ನ ಧರ್ಮಕ್ಕೆ ಮತಾಂತರವಾಗುವಂತೆ ಪ್ರೇರೇಪಿಸುವಂತಿಲ್ಲ. ಹಾಗಾಗಿ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವನ್ನು ಸಂವಿಧಾನವು ನೀಡಿಲ್ಲ. ಹಾಗೆ ಮಾಡುವುದು ಒಬ್ಬಾತನ ಅಸ್ಮಿತೆಯ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಂತೆ" ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿತ್ತು.

ಈ ಹಿನ್ನೆಲೆಯಲ್ಲಿ ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳ ಗ್ರಾಮಗಳು ತಮ್ಮ ಧಾರ್ಮಿಕ ಮತ್ತು ಪಾರಂಪರಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಕ್ರೈಸ್ತ ಮಿಷನರಿಗಳು ತಮ್ಮ ಗ್ರಾಮಗಳಿಗೆ ಪ್ರವೇಶಿಸದಂತೆ ನಿರ್ಬಂಧ ಹೇರುವ ಭಿತ್ತಿಪತ್ರಗಳನ್ನು ಹಾಕಿರುವುದು ಸರಿಯಾಗಿಯೇ ಇದೆ. ಆಮಿಷ ಮತ್ತು ಬಲಾತ್ಕಾರದಿಂದ ಮತಾಂತರ ಮಾಡುವುದು ತಪ್ಪೆಂಬುದನ್ನು ಈಗ ನ್ಯಾಯಾಲಯವೂ ಎತ್ತಿ ಹಿಡಿದಂತಾಗಿದೆ.

ನೌಕರಿ ಕ್ರಾಂತಿಗೆ ಸಿಕ್ಕ ದೊಡ್ಡ ಜಯ

ಪೃಥ್ವಿ ರಾಜ್ ಕುಲಕರ್ಣಿ

ಧಾರವಾಡದಲ್ಲಿ ನಿಬ್ಬೆರಗಾಗಿಸುವ ಪ್ರತಿಭಟನೆಯೊಂದು ನಡೆದಿದೆ. ದೇಶದ ವ್ಯವಸ್ಥೆಯನ್ನೇ ಗಾಬರಿಗೊಳಿಸಿದೆ. ಇದು ಒಂದು ಧರ್ಮಕ್ಕೆ, ಜಾತಿಗೆ ಅಥವಾ ಪ್ರಾಂತ್ಯಕ್ಕೆ ಸೀಮಿತವಾಗಿರದ ಹೋರಾಟವಾಗಿದ್ದು ರಾಜಕಾರಣಕ್ಕೆ ದೊಡ್ಡ ಪ್ರಶ್ನೆಯಾಗಿದೆ. ಇಷ್ಟು ದಿನ ತಮ್ಮ ಮೀಸಲಾತಿಗಾಗಿಯೋ, ತಮ್ಮ ಧರ್ಮದ ಹೋರಾಟದಲ್ಲೋ ಇದೇ ಯುವಕರು ಕಾಣಿಸಿಕೊಳ್ಳುತ್ತಿರುವಾಗ ಅವರ ಬಾಯಿ ಮುಚ್ಚಿಸಲು ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳುತ್ತಿತ್ತು. ಆಶ್ವಾಸನೆ, ಭರವಸೆಗಳನ್ನು ನೀಡುತ್ತಿತ್ತು. ಈಗ ಅವರ ಹೋರಾಟದ ಬಳಿಕ, ಸರ್ಕಾರ ಎಚ್ಚೆತ್ತು ಇತ್ತೀಚೆಗಷ್ಟೇ ನಡೆದ ಸಚಿವ ಸಂಪುಟ ಸಭೆಯಲ್ಲಿ 52 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಿರ್ಧಾರ ತೆಗೆದುಕೊಂಡು ಘೋಷಣೆಯನ್ನೂ ಮಾಡಿದೆ. ಹೀಗಾಗಿ, ಯುವಕರ ಹೋರಾಟಕ್ಕೆ ಒಂದು ಬಲ ಬಂದಂತಾಗಿದೆ.

ನಮ್ಮ ಶಾಲೆಗಳಲ್ಲಿ ಸರ್ಕಾರಿ ಹುದ್ದೆಗಳ ಬಗ್ಗೆ ಅಚ್ಚುಕಟ್ಟಾಗಿ ಅರಿವು ಮೂಡಿಸಲಾಗಿದೆ. ಸರ್ಕಾರಿ ನೌಕರರಿಗೆ ದೇಶದಲ್ಲಿ ಸಿಗುವ ಗೌರವ, ಘನತೆ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಆ ಹುದ್ದೆಗೆ ಸರಿಸಾಟಿಯೇ ಇಲ್ಲ, ಯಾವ ದುಡ್ಡಿನಿಂದಲೂ ತುಲನೆ ಮಾಡಲಾಗದ ಶಕ್ತಿ ಸರ್ಕಾರಿ ಅಧಿಕಾರಿಗಳಿಗಿದೆ. ನೌಕರಿ ಪಡೆದುಕೊಂಡರೆ ಅದೇ ಜೀವನದಲ್ಲಿ ಮಾಡಬಹುದಾದ ದೊಡ್ಡ ಸಾಧನೆ ಎಂದು ಹೇಳಲಾಗಿತ್ತು. ಆದರೆ ಸರ್ಕಾರ ಅಂತಹ ಹುದ್ದೆಗಳನ್ನು ಮುಚ್ಚಿಟ್ಟುಕೊಂಡಿರುವ ವಿಚಾರ ಬಹಿರಂಗವಾಗಿ ಹೊರಬೀಳುತ್ತಿದೆ. ಇದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ.

ಸರ್ಕಾರಿ ಪರೀಕ್ಷೆ ಮತ್ತು ಭರ್ತಿ ಮಾಡಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ದೊಡ್ಡ ಕತೆಗಳಿವೆ. ಆ ಕತೆಗಳಿಗೆ ಪಿಎಸ್ಐ ಹಗರಣದಂತಹ ದೊಡ್ಡ ತಿರುವುಗಳಿವೆ. ಕರಾರುವಕ್ಕಾಗಿ ನಮಗೆ ಸರ್ಕಾರಿ ಹುದ್ದೆಗಳೇ ಬೇಕು, ಬೇರೆ ಪ್ರಯತ್ನಗಳನ್ನೇ ನಾವು ಮಾಡಲ್ಲ ಎಂಬುವವರು ಕರ್ನಾಟಕದಲ್ಲಿ ತುಂಬಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕಕ್ಕೆ ಹೋದರೆ ಅಂಥವರು ಮನೆಗೊಬ್ಬರು ಸಿಗುತ್ತಾರೆ. ಧಾರವಾಡದಂತಹ ನಗರಗಳಲ್ಲಿ ಸ್ಪರ್ಧಾತ್ಮಕ ಸಂಸ್ಥೆಗಳ ಭರಾಟೆಯೇ ಇದೆ.

ಆದರೆ ಮತ್ತೊಂದು ದಿಕ್ಕಿನಲ್ಲಿ ನೋಡಿದರೆ ವರ್ಷಾನುಗಟ್ಟಲೆ ಅಧಿಸೂಚನೆಗಳೇ ಬರುತ್ತಿಲ್ಲ, ಭರ್ತಿಯಾಗುತ್ತಿಲ್ಲ ಎಂಬ ಆರೋಪಗಳಿದ್ದವು. ಹೀಗಾಗಿ ನಮ್ಮಲ್ಲಿ ನೌಕರಿ ಕ್ರಾಂತಿಯಾಗುವುದು ಅನಿವಾರ್ಯವಾಗಿತ್ತು. ಸರ್ಕಾರಿ ನೌಕರಿಯನ್ನು ಹುಡುಕಿಕೊಂಡು ಹೋಗುವವರ ಸಂಖ್ಯೆ ನಮ್ಮಲ್ಲಿ ಜಾಸ್ತಿ. ಉತ್ತರ ಕರ್ನಾಟಕದಲ್ಲಿ ತೀರಾ ಹೆಚ್ಚು. ನಮ್ಮೂರಿನವ ಸಾಹೇಬನಾದನಂತೆ ಎಂಬುದೇ ಅವರಿಗೆ ದೊಡ್ಡ ಸಂಭ್ರಮ. ಅಂತಹ ದೊಡ್ಡ ಕನಸು ಮುರಿದು ಬಿದ್ದಾಗ ಅಲ್ಲಿ ಹತಾಶೆ ಸೃಷ್ಟಿಯಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ಸಾಹ, ರೂಢಿ ಮತ್ತು ಕ್ರಿಯಾಶೀಲತೆ ಅಂಥವರನ್ನು ಬೇರೊಂದು ಉದ್ಯೋಗ ಮಾಡಲು ಮನಸ್ಸಿಲ್ಲದಂತೆ ಮಾಡುತ್ತದೆ. ಹೀಗಾದಾಗ ಸಹಜವಾಗಿ ಅಲ್ಲಿ ನಿರುದ್ಯೋಗ ಹುಟ್ಟುತ್ತದೆ. ಇದೇ ನಿರುದ್ಯೋಗವೇ ಆ ಆಕಾಂಕ್ಷಿಗಳ ಮೂಲಕ ಧರ್ಮದ ಹೆಸರಲ್ಲೋ, ಜಾತಿಯ ಹೆಸರಲ್ಲೋ ಅಥವಾ ಇನ್ನ್ಯಾವುದೋ ವಿಚಾರಗಳಲ್ಲಿ ಗದ್ದಲಗಳನ್ನು ಮಾಡುವವರನ್ನು ಹುಟ್ಟಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಡಿಗ್ರಿ ಮುಗಿಸಿಕೊಂಡು ಕೂತ ವಿದ್ಯಾರ್ಥಿಗಳ ಮುಂದೆ ಎರಡು ಆಯ್ಕೆಗಳಿರುತ್ತವೆ. ಸರ್ಕಾರಿ ನೌಕರಿಗಾಗಿ ಓದಿಕೊಳ್ಳುವುದು, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವುದು. ಡಿಗ್ರಿ ಮುಗಿಸಿ, ಕೆಎಎಸ್, ಐಎಎಸ್ ಮುಂತಾದ ಕುರಿತ ಕೋಚಿಂಗ್ ಮುಗಿಸಿಕೊಂಡು ತಮ್ಮ ಮನೆಯಲ್ಲಿ ಓದಿಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ವರ್ಷಾನುಗಟ್ಟಲೇ ಭರ್ತಿಗಾಗೇ ಕಾಯುವುದು ದೊಡ್ಡ ಸವಾಲು. ನೋಟಿಫಿಕೇಶನ್‌ಗಳು ಬಂದಾಗ, ವಿದ್ಯಾರ್ಥಿಗಳಿಗೆ ಮೀಸಲಾತಿ ಅಡ್ಡಗೋಡೆಯಾಗಿ ತಡೆಯೊಡ್ಡುತ್ತದೆ. ಅಂತಹದ್ದೇ ಕೆಲವು ವಿದ್ಯಾರ್ಥಿಗಳು ತಮ್ಮ ಕುಟುಂಬಕ್ಕೆ ಸಂಬಂಧಿಸಿದ ವ್ಯಾಪಾರಕ್ಕೆ ಬೀಳುತ್ತಾರೆ. ಕೆಲಸ-ಮನೆ ಮಾಡುವಷ್ಟರಲ್ಲಿ ರಾಜಕೀಯ ಲಾಭಗಳು ಅವರನ್ನು ಸೆಳೆಯುತ್ತವೆ. ಇದು ನಿರುದ್ಯೋಗ ಹೆಚ್ಚಿಸುತ್ತದೆ, ದಾಂದಲೆಗಳನ್ನು ಹೆಚ್ಚಿಸುತ್ತದೆ. ಅಂಥವರನ್ನು ನಮ್ಮ ರಾಜಕಾರಣಿಗಳು ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಾರೆ.

ಇನ್ನು ಖಾಸಗಿ ನೌಕರಿಯ ವಿಚಾರಕ್ಕೆ ಬಂದರೆ, ಮಧ್ಯಮ ವರ್ಗದ ಯುವಕರು ತಮ್ಮ ಡಿಗ್ರಿ ಮುಗಿಸಿಕೊಂಡ ತಕ್ಷಣಕ್ಕೆ ಬೆಂಗಳೂರಿಗೆ ಹೊರಟುತ್ತಾರೆ. ನ ಖಾಸಗಿ ಉದ್ಯೋಗ ಮಾಡುವುದಕ್ಕಾಗಿ ತನ್ನೊಂದಿಗೆ ಡಿಗ್ರಿ ಸರ್ಟಿಫಿಕೇಟ್ ತರುವ ಆ ಯುವಕರಿಗೆ ಬೆಂಗಳೂರಿನ ತುಂಬಾ ಆವರಿಸಿಕೊಂಡಿರುವ ಉತ್ತರ ಭಾರತೀಯರು ತೀರಾ ತಲೆ ಕೆಡಿಸುತ್ತಾರೆ. ನಮ್ಮ ಯುವಕರ ನೌಕರಿ ನುಂಗಿ ಹಾಕಿದ್ದಾರೆ. ಅದಕ್ಕೊಂದು ಮಿತಿಯೇ ಇಲ್ಲ, ಅದರ ಬಗ್ಗೆ ದನಿ ಎತ್ತುವವರೂ ಇಲ್ಲ. ಇದೆ ಕಾರಣದಿಂದ ಯಾವುದೋ ಒಂದು ಕಂಪನಿಯ (ಸಾಹೇಬ್) ಆಗಬೇಕೆಂಬ ಯುವಕರ ಕನಸು ಬೆಂಗಳೂರಿನಲ್ಲಿ ತಲೆಗೂದಲಿನ ಜತೆಗೆ ಉದುರಿ ಹೋಗುತ್ತದೆ. ಸ್ವಂತ ರಾಜ್ಯದ ಕಂಪನಿಯನ್ನು ಆಳುವ ಕನ್ನಡಿಗರಿಗಿಂತ ಹಿಂದಿ ಮಾತನಾಡುವ ನಾರ್ತಿಗಳ ಕೆಳಗೆ ದುಡಿಯುವವರೇ ಹೆಚ್ಚಾಗಿದ್ದಾರೆ. ದೊಡ್ಡ ಕಂಪನಿಗಳಲ್ಲಿ ಕೆಲಸ ಬೇಕಾದರೆ ರೆಫರನ್ಸ್ ಬೇಕೇಬೇಕು. ರೆಫರನ್ಸ್ ನಮ್ಮವರಿಗೆ ಬೇರೆ ರಾಜ್ಯದವರಿಗೆ ಯಾಕೆ ಕೊಟ್ಟಾರು? ಹಾಗೆಯೇ ಕ್ಯಾಂಪಸ್‌ನಲ್ಲಿ ಅವಕಾಶ ಸಿಗುವುದು ತೀರಾ ಕಷ್ಟ. ವಾಕಿನ್ ಮೂಲಕ ನೌಕರಿ ಪಡೆಯಲಿಕ್ಕೆ ಬೆಂಗಳೂರಿಗೆ ಬಂದವರಿದ್ದಾರೆ. ಆದರೆ ಅಲ್ಲಿ ಸಂದರ್ಶನ ತೆಗೆದುಕೊಳ್ಳುವವರು ನಾರ್ತಿಗಳು!. ಕರವೇ ಅಂತಹ ಕನ್ನಡ ಪರ ಸಂಘಟನೆಗಳು ಕನ್ನಡ ಮಾತನಾಡದಿರುವುದಕ್ಕೆ ಅವರನ್ನು ಥಳಿಸಿರುತ್ತಾರೆ. ಇದೆ ಸಿಟ್ಟು ಇಟ್ಟುಕೊಂಡ ಅವರು ಕನ್ನಡ ಮಾತನಾಡುವ ಅಭ್ಯರ್ಥಿಗಳು ಕಾಣಿಸಿಕೊಂಡರೆ ಸಾಕು ತಳ್ಳಿ ಹಾಕುತ್ತಾರೆ. ಥಳಿಸಲು ಬರುವ ಕನ್ನಡಪರ ಸಂಘಟನೆಗಳು ನೌಕರಿ ಕ್ರಾಂತಿಗೆ ಬಂದರಾ? ಊಹುಂ ಇಲ್ಲ!.

ಬೆಂಗಳೂರಿನಲ್ಲಿರುವ ಐಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು ಎನ್ನುವ ವಿಚಾರ ಹೊಸದೇನಲ್ಲ. ಹಿಂದೆ ನಮ್ಮ ಸರ್ಕಾರ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗಾಗಿ ಮೀಸಲಾತಿ ನೀಡುತ್ತೇವೆ ಎಂಬ ಘೋಷಣೆ ಮಾಡಿದ್ದರು. ಆದರೆ ಹಠಾತ್ ನಿಲುವು ಬದಲಿಸಿ ಕೆಲವು ದಿನಗಳಲ್ಲಿ ಚರ್ಚಿಸಿ ಮಾತನಾಡುತ್ತೇವೆ ಎಂದು ಸಮಯ ಕೇಳಿತ್ತು. ದುರಾದೃಷ್ಟವಶಾತ್ 2 ವರ್ಷವಾದರೂ ಆ ಸಮಯ ಮುಗಿದೆ ಇಲ್ಲ! ನೌಕರಿ ಕ್ರಾಂತಿಯಾಗಬೇಕಿರುವುದಕ್ಕೆ ಹತ್ತಾರು ಕಾರಣಗಳಿವೆ. ಧಾರವಾಡದ ಪ್ರತಿಭಟನೆ ಸರ್ಕಾರಿ ಹುದ್ದೆಗಳಿಗಷ್ಟೇ ಸೀಮಿತವಾಗದೆ ಖಾಸಗಿ ವಿಚಾರದಲ್ಲೂ ದನಿಯಾಗಬೇಕು. ಒಟ್ಟಿನಲ್ಲಿ ನಮ್ಮ ಯುವಕರಿಗೆ ನೌಕರಿ ಸಿಗಬೇಕು. ಇಲ್ಲವಾದರೆ ಅನಾಹುತವಾದೀತು.

ವಚನ ಭಾಷಾಂತರ: ಸುತ್ತೂರು ಶ್ರೀ ಶ್ಲಾಘನೆ



ಬೆಂಗಳೂರು: ಅಲ್ಲಮನ ವಚನಗಳು ತುಂಬಾ ಸಂಕೀರ್ಣವಾಗಿದ್ದು, ಇಂತಹ ಕೃತಿಗಳು ಅನುವಾದಕ್ಕೆ ನಿಲುಕುವುದಿಲ್ಲ. ಆದರೂ ಈ ಸವಾಲನ್ನು ಸ್ವೀಕರಿಸಿ, ಇಂಗ್ಲಿಷ್ ಭಾಷಾಂತರವನ್ನು ಮಾಡಿರುವುದು ಶ್ಲಾಘನೀಯ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು ಇಲ್ಲಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಶನಿವಾರ ಏರ್ಪಡಿಸಿದ್ದ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕನ್ನಡದ ಸಹಜತೆಯಲ್ಲಿ ಮೂಡಿಬಂದಿರುವ ವಚನಗಳು ಇಂಗ್ಲಿಷ್‌ಗೆ ಅನುವಾದಗೊಳ್ಳುವುದರಿಂದ ಅದು ಜಾಗತಿಕ ಸ್ತರದಲ್ಲಿ ಪರಿಚಯವಾಗುತ್ತದೆ. ಇದರಿಂದ ಕರ್ನಾಟಕಕ್ಕೂ ನೆಲೆ-ಬೆಲೆಗಳು ಪ್ರಾಪ್ತವಾಗುತ್ತವೆ.

ವಿಜಯಪುರದಲ್ಲಿ ಜ್ಞಾನ ಯೋಗಾಶ್ರಮ ಕಟ್ಟಿ, ಆ ಊರನ್ನೇ ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದ ಶ್ರೀಸಿದ್ದೇಶ್ವರ ಸ್ವಾಮಿಗಳು ವಚನಕಾರ ಅಲ್ಲಮಪ್ರಭುವನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಂಡಿದ್ದರು. ಅಲ್ಲದೆ, ತಮ್ಮ ಅಂತಿಮ ಇಚ್ಛಾಪತ್ರದಲ್ಲೂ ಆತನ ವಚನವನ್ನೇ ಬರೆದಿದ್ದರು. ಅಂಥ ಜ್ಞಾನಿಗಳು ಅವರ ಬಗ್ಗೆ ಬರೆದಿರುವ ಕೃತಿಯು ಈಗ ಇಂಗ್ಲೀಷಿಗೆ ಭಾಷಾಂತರವಾಗಿರುವುದು ಕನ್ನಡ ಸಂಸ್ಕೃತಿಯ ವಿಸ್ತರಣೆಯ ಭಾಗವಾಗಿದೆ ಎಂದರು.

ಸಿದ್ದೇಶ್ವರ ಸ್ವಾಮೀಜಿಗಳು ಅಧ್ಯಯನ, ಆಧ್ಯಾತ್ಮಿಕತೆ ಮತ್ತು ವಸ್ತುನಿಷ್ಠ ನಿಲುವುಗಳಿಗೆ ಹೆಸರಾಗಿದ್ದರು. ಅವರು ಜೊತೆಯಲ್ಲೇ ಸುತ್ತೂರಿನ ಪರಂಪರೆಯನ್ನು ಕೂಡ ಅಗಾಧವಾಗಿ ಪ್ರೀತಿಸುತ್ತಿದ್ದರು. ಅವರು ಅಲ್ಲಮನ ವಚನಗಳನ್ನು ತುಂಬಾ ವಿಭಿನ್ನವಾಗಿ ವ್ಯಾಖ್ಯಾನಿಸುತ್ತಿದ್ದರು. ಇಂಗ್ಲಿಷ್ ಮೇಲೆ ಅಗಾಧ ಹಿಡಿತ ಹೊಂದಿದ್ದ ಅವರು, ವಚನ ಸಂಸ್ಕೃತಿಯನ್ನು ಹೊಸ ಬಗೆಯ ಅರ್ಥವಿಸ್ತಾರಕ್ಕೆ ಕೊಂಡೊಯ್ದಿದ್ದರು ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀಬಸವಲಿಂಗ ಸ್ವಾಮಿಗಳು, ನ್ಯಾ.ಕೃಷ್ಣ ದೀಕ್ಷಿತ್, ವಿದ್ವಾಂಸ ಮಲ್ಲೇಪುರಂ ವೆಂಕಟೇಶ, ಸಿ. ಸೋಮಶೇಖರ್ ಉಪಸ್ಥಿತರಿದ್ದರು.

ಮಕ್ಕಳು ಇತಿಹಾಸ ಸೃಷ್ಟಿಸುವಂತಾಗಲಿ: ಶಿವಕುಮಾರ್

ಬೆಂಗಳೂರು: ಇತಿಹಾಸದ ಪಾಠ ಕಲಿಸುವ ಕೆಲಸವಷ್ಟೇ ಆಗಬಾರದು. ಇತಿಹಾಸ ಸೃಷ್ಟಿಸುವಂತಹ ಮಕ್ಕಳನ್ನು ಶಿಕ್ಷಕರು ತಯಾರು ಮಾಡಿ. ನೀವು ಶಾಲೆಗೆ ಬರುವ ಮಕ್ಕಳನ್ನು ಮಾತ್ರ ಬೆಳೆಸುತ್ತಿಲ್ಲ, ಸಮಾಜವನ್ನೇ ಬೆಳೆಸುತ್ತಿದ್ದೀರಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಶನಿವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಇತಿಹಾಸ ಮರೆತವನು ಇತಿಹಾಸ ಸೃಷ್ಟಿಸುವುದಿಲ್ಲ' ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದಾರೆ. ಮಕ್ಕಳ ಕಲಿಕಾ ನಿಸ್ವಾರ್ಥದಲ್ಲಿ ಶ್ರಮ, ಬದ್ಧತೆ, ಶಿಸ್ತಿರಬೇಕು. ಮಕ್ಕಳು ದೊಡ್ಡ ಕನಸು ಕಾಣುವಂತೆ ಮಾಡಬೇಕು. ನೀವು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಹಾಕುವ ಅಡಿಪಾಯ ಕೊನೆವರೆಗೂ ಇರುತ್ತದೆ ಎಂದು ಹೇಳಿದರು.

ಉತ್ತಮವಾಗಿರುವ ಖಾಸಗಿ ಶಾಲೆಗಳು ಈ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಶಿಕ್ಷಕರನ್ನು ನೇಮಿಸಬೇಕು ಎಂದು ಸೂಚಿಸಿದ್ದೇವೆ. ಮೂರು ಶಾಲೆ ನಡೆಸುತ್ತಿರುವ ನನ್ನ ಮಗಳಿಗೂ ಸರ್ಕಾರಿ ಶಾಲೆ ದತ್ತು ಪಡೆಯುವಂತೆ ಸೂಚಿಸಿದ್ದೇನೆ. ನಮ್ಮ ಕ್ಷೇತ್ರದ ಶಾಲೆಗಳನ್ನು ದತ್ತು ಪಡೆಯಲಾಗುತ್ತಿದೆ. ನಾನು ಶಿಕ್ಷಣ ಪ್ರೇಮಿ. ಈ ಮೊದಲು 90 ಸಾವಿರ ಶಿಕ್ಷಕರ ಹುದ್ದೆ ಭರ್ತಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಜಾರಿ ಮಾಡುತ್ತೇವೆ ಎಂದು ಹೇಳಿದರು.



ದಾಖಲಾತಿ ಹೆಚ್ಚಿಸುವ ಗುರಿ ಹೊಂದಬೇಕು

ಮಕ್ಕಳಿಗೆ ಮೊಟ್ಟೆ, ಹಾಲು, ಶೂ-ಸಾಕ್ಸ್ ಮತ್ತು ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಈ ಬಾರಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಶೇ.20 ರಷ್ಟು ಹೆಚ್ಚಿಸುವ ಗುರಿಯನ್ನು ಶಿಕ್ಷಕರು ಹೊಂದಬೇಕು. ಕಳೆದೆರಡು ವರ್ಷಗಳಲ್ಲಿ ಸುಮಾರು 14,499 ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ಶಿಕ್ಷಕರು ಎದುರಿಸುತ್ತಿರುವ ವರ್ಗಾವಣೆ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಶಿಕ್ಷಕ ಸ್ನೇಹಿ ಆಡಳಿತಕ್ಕೆ ನಾಂದಿ ಹಾಡಲಾಗಿದೆ ಹಾಗೂ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯದ 46 ಸಾವಿರ ಸರ್ಕಾರಿ ಶಾಲೆಗಳಲ್ಲಿ ಏಕಕಾಲಕ್ಕೆ ಪೋಷಕರ ಸಭೆಯನ್ನು ನಡೆಸುವ ಮೂಲಕ ಶಾಲಾ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಹೆಚ್ಚಿಸಲಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ರಾಜ್ಯ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎನ್‌ಪಿಎಸ್ ರದ್ದತಿ ಭರವಸೆಯನ್ನು ಸರ್ಕಾರದ ಅವಧಿಯಲ್ಲೇ ಪೂರೈಸುವ ಮೂಲಕ ಒಪಿಎಸ್‌ನ್ನು ಮರು ಜಾರಿ ಮಾಡಬೇಕು.
■ **ಚಂದ್ರಶೇಖರ್ ನುಗ್ಗಲಿ,** ರಾಜ್ಯಾಧ್ಯಕ್ಷ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಪ್ರಮುಖ ಬೇಡಿಕೆಗಳೇನು?

- ಎನ್‌ಪಿಎಸ್ ರದ್ದುಗೊಲಿಸಿ ಒಪಿಎಸ್ ಜಾರಿಗೊಳಿಸಬೇಕು
- ಪದವಿ ಪೂರ್ಣೈಸಿದ ಶಿಕ್ಷಕರಿಗೆ ವೇತನ ಬಡ್ತಿ ನೀಡಬೇಕು
- ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ನೀಡಬೇಕು
- ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಪ್ರಾರಂಭಿಸಬೇಕು
- ಶಿಕ್ಷಕರ ಸಂಘಕ್ಕೆ ಬೆಂಗಳೂರಿನ ಗಾಂಧಿನಗರದಲ್ಲಿ ನಿವೇಶನ ಒದಗಿಸಬೇಕು
- ಶಿಕ್ಷಕರಿಗೆ ಹೆಚ್ಚುವರಿ ಕೆಲಸಗಳಿಂದ ಮುಕ್ತಿಗೊಳಿಸಬೇಕು

ಕಿರುಸುದ್ದಿ

ಬಜೆಟ್ ನಂತರ ಪಕ್ಷದಲ್ಲಿನ ಗೊಂದಲ ನಿವಾರಣೆ



ಬಾಗಲಕೋಟೆ: ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಗೊಂದಲವನ್ನು ಬಜೆಟ್ ನಂತರ ನಮ್ಮ ಪಕ್ಷದ ಹೈಕಮಾಂಡ್ ಬಗೆ ಹರಿಸಲಿದೆ. ಮುಖ್ಯಮಂತ್ರಿ ಬದಲಾವಣೆ ಇಷ್ಟು ವರ್ಷ ಎಂಬುದರ ಕುರಿತು ಎಲ್ಲಿಯೂ ಚರ್ಚೆಯಾಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಕ್ಬಾಲ್ ಹುಸೇನ್ ಡಿಕೆ ಪರ ಬ್ಯಾಟಿಂಗ್ ಮಾಡಿರುವ ಕುರಿತು ಮಾತನಾಡಿದ ಸಚಿವರು, ರಾಜ್ಯದಲ್ಲಿ ಏಳುಕೋಟಿ ಜನಸಂಖ್ಯೆ ನಮ್ಮವರು. ಒಬ್ಬರು ಹೇಳಿದರೆ ಪಕ್ಷದ ನಿರ್ಣಯ ಆಗುವುದಿಲ್ಲ, ಮುಖ್ಯಮಂತ್ರಿ ಬದಲಾವಣೆ ಕುರಿತು ಎರಡೂವರೆ ವರ್ಷ ಮೂರುವರ್ಷ ಎಂದು ಹೇಳಿಲ್ಲ, ಹೀಗಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಐದು ವರ್ಷ ಆಡಳಿತ ನಡೆಸಲಿದ್ದಾರೆ ಎಂದು ಹೇಳಿದರು. ಬಾಲಕೃಷ್ಣ ಮನೆಯಲ್ಲಿ ಡಿನ್ನರ್ ಮೀಟಿಂಗ್ ಕುರಿತು ಮಾತನಾಡಿ, ಮೊದಲಿನಿಂದಲೂ ಡಿ.ಕೆ.ಶಿವುಕುಮಾರ ಸಿಎಂ ಆಗಬೇಕು ಎಂದು ಬಯಸುತ್ತಿದ್ದಾರೆ. ಬಹಿರಂಗವಾಗಿ ಕೂಡ ಹೇಳಿದ್ದಾರೆ. ಪುನಃ ಹೇಳ್ತಿದ್ದಾರೆ ಅಷ್ಟೇ ಎಂದು ತಿಳಿಸಿದರು.

ಫೈನಾನ್ಸ್ ಹಾವಳಿ: ಕುಟುಂಬ ಬೀದಿ ಪಾಲು

ಬೆಳಗಾವಿ: ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಗಳ ಹಾವಳಿ ತಡೆಗೆ ರಾಜ್ಯದ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದರೂ ಕಿರುಕುಳ ಮಾತ್ರ ನಿಂತಿಲ್ಲ, ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿ ಅಲಖನೂರ ಗ್ರಾಮದಲ್ಲಿ ಖಾಸಗಿ ಫೈನಾನ್ಸ್ ಕಂಪನಿಯ ಕಿರುಕುಳಕ್ಕೆ ಮೂರು ತಿಂಗಳ ಹಸುಗೂಸು ಜತೆ ಕುಟುಂಬ ಬೀದಿ ಪಾಲಾಗಿದೆ. ಚಿಕ್ಕೋಡಿಯ ಸ್ಮಾಲ್ ಫೈನಾನ್ಸ್ ಕಂಪನಿಯಿಂದ ಮನೆ ಸೀಜ್ ಮಾಡಲಾಗಿದ್ದು, ಮೂರು ತಿಂಗಳ ಹಸುಗೂಸು ಸೇರಿ ಐವರು ಕುಟುಂಬಸ್ಥರು ಬೀದಿ ಪಾಲಾಗಿ ವಾಸ್ತವ್ಯ ಇಲ್ಲದೆ. ಇಡೀ ರಾತ್ರಿ ಬೀದಿಯಲ್ಲೇ ಕಳೆದಿರುವ ಮನ ಕುಲುಕುವ ಘಟನೆ ನಡೆದಿದೆ. ಹನುಮಂತ ಪಾಟೀಲ್ ಎಂಬುವವರು ತಂದೆ ಶ್ರೀಕಾಂತ್ ಪಾಟೀಲ್ ಹೃದಯ ಶಸ್ತ್ರಚಿಕಿತ್ಸೆಗಾಗಿ ಮನೆ ಅಡವಿಟ್ಟು ಸುಮಾರು 20 ಲಕ್ಷ ರೂ. ಸಾಲ ಪಡೆದಿದ್ದರು. ಕಳೆದ ವರ್ಷ ಶ್ರೀಕಾಂತ್ ನಿಧನರಾದ ಬಳಿಕ, ಆರೋಗ್ಯ ಸಮಸ್ಯೆಯಿಂದಾಗಿ ಹನುಮಂತ ಕಳೆದ ಏಳು ತಿಂಗಳಿಂದ ಕಂತು ಪಾವತಿಸಲು ಸಾಧ್ಯವಾಗಿರಲಿಲ್ಲ. ಸುಮಾರು ಏಳು ಲಕ್ಷ ರೂ. ಬಾಕಿ ಇದ್ದ ಹಿನ್ನೆಲೆಯಲ್ಲಿ ಏಕಾಏಕಿ ಬಂದ ಫೈನಾನ್ಸ್ ಕಂಪನಿಯ ಸಿಬ್ಬಂದಿ ಮನೆ ಸೀಜ್ ಮಾಡಿದ್ದರಿಂದ ಕುಟುಂಬ ತೊಂದರೆಗೆ ಸಿಲುಕಿದೆ.

ಸರ್ಕಾರದ ಮೇಲೆ ಜನರ ವಿಶ್ವಾಸ ಇಲ್ಲ: ಬೊಮ್ಮಾಯಿ

ಹಾವೇರಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಕುರ್ಚಿಯ ಗುದ್ದಾಟ ಬಜೆಟ್ ನಂತರ ತೀವ್ರವಾಗಿ ಅಂತಿಮ ಘಟಕ್ಕೆ ತಲುಪಲಿದೆ. ಅದು ಕಾದಾಟವೇ ಆಗಲಿದ್ದು, ಸಂಧಾನ ಆಗಲು ಸಾಧ್ಯವಿಲ್ಲ. ಅದು ಯಾವ ರೀತಿ ಆಗುತ್ತದೆ ಎನ್ನುವುದನ್ನು ಕಾದು ನೋಡಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸರ್ಕಾರದ ಮೇಲೆ ಜನರ ವಿಶ್ವಾಸ ಸಂಪೂರ್ಣ ಹೋಗಿದೆ ಎಂದು ಹೇಳಿದರು.

ರಾಜಕಾರಣದಲ್ಲಿ ಶಸ್ತ್ರ-ಅಸ್ತ್ರ ಬೇಕಾಗಿಲ್ಲ: ಮಾಜಿ ಸಂಸದ ಡಿ.ಕೆ. ಸುರೇಶ್

ಅದೃಷ್ಟ ಇದ್ರೆ ಅಣ್ಣ ಸಿಎಂ!



ಬೆಂಗಳೂರು: ಹಣೆ ಬರಹದಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗುತ್ತಾರೆ. ಹಣೆಬರಹ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ತಿಳಿಸಿದರು.

ಶನಿವಾರ ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿ, ಶಸ್ತ್ರ ತ್ಯಾಗದ ಪ್ರಶ್ನೆಗೆ ಉತ್ತರಿಸಿದ ಅವರು, ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲವಲ್ಲ, ಶಸ್ತ್ರ ಇದೆ ಎಂದು ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು ಎಂದು ಕೇಳಿದರು. ಆದರೆ, ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ ಎಂದರು. ಇದು ರಾಜಕಾರಣ, ಇಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ ಎಂದರು.

ಶಾಸಕರ ದೆಹಲಿ ಯಾತ್ರೆ, ವಿಚಾರ ನನಗೆ ಗೊತ್ತಿಲ್ಲ: ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಈ ಬಗ್ಗೆ ಶಾಸಕರನ್ನೇ ಕೇಳಬೇಕು. ಶಾಸಕರ ಭೋಜನಕೂಟ ನಡೆದಾಗ ನಾನು ಊರಲ್ಲಿ ಇರಲಿಲ್ಲ, ನನಗೆ ಈ ಬಗ್ಗೆ ಮಾಹಿತಿ ಇಲ್ಲ, ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ, ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ ಎಂದು ತಿಳಿಸಿದರು. ಅಲ್ಲದೇ, ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟವಾಗಬಹುದು. ನನಗೆ ಕಷ್ಟ ಆಗುವುದಿಲ್ಲ, ಈ ಬಗ್ಗೆ ನಾನೇಗೆ ಹೇಳಲಿ ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಶಾಸಕರ ವಿಚಾರಧಾರೆ ಶಾಸಕರಿಗೇ ಸಂಬಂಧಿಸಿದ್ದೇ ಹೊರತು, ನನಗಲ್ಲ, ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಬರುವುದಿಲ್ಲ ಎಂದರು. ಮುಖ್ಯಮಂತ್ರಿ ಆಗಲು ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ ಎಂದರು. ದಯವಿಟ್ಟು ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯೆ ನೀಡುವೆ ಎಂದರು.

ಪಕ್ಷದಿಂದ ಕೆಎಂಎಫ್ ಚುನಾವಣೆ ಅಭ್ಯರ್ಥಿ ಆಯ್ಕೆ: ಕೆಎಂಎಫ್ ಚುನಾವಣೆ ಯಾವಾಗ ಮಾಡಬೇಕು ಎಂದು ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಆಗ ಪಕ್ಷ ತೀರ್ಮಾನ ಮಾಡುವ ವ್ಯಕ್ತಿಯೇ ಸ್ಪರ್ಧೆ ಮಾಡಲಿದ್ದಾರೆ ಎಂದರು. ಆದರೆ, ನಾನು ಯಾವುದಕ್ಕೂ ಆಕಾಂಕ್ಷಿ ಅಲ್ಲ, ನಾನು ರಾಜಕೀಯ ಪಂಡಿತನಲ್ಲ ಎಂದರು.

ಕೊಟ್ಟ ಗ್ಯಾರಂಟಿ ವಾಗ್ದಾನ ಉಳಿಸಿಕೊಳ್ಳಬೇಕು: ಗ್ಯಾರಂಟಿಯು ರಾಜ್ಯದ ಜನತೆಗೆ ಕೊಟ್ಟ ನಮ್ಮ ವಾಗ್ದಾನ. ನಾವು ಅದರಂತೆ ನಡೆಯಬೇಕು. ಪಕ್ಷದ ಅಧ್ಯಕ್ಷರು, ಸಿಎಂ ಸೇರಿದಂತೆ ಚುನಾವಣೆ ಎದುರಿಸಿದ ಎಲ್ಲರೂ ಗ್ಯಾರಂಟಿ ನೀಡುವುದಾಗಿ ಹೇಳಿದ್ದಾರೆ. ಅದನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಗ್ಯಾರಂಟಿ ವಾಗ್ದಾನ ಮಾಡುವ ಮುಂಚೆ ಚಿಂತಿಸಬೇಕಿತ್ತು

ಹೊರೆಯಾದರೂ ಆಗಲಿ, ಬೇರೆಯಾದರೂ ಆಗಲಿ. ಮಾತು ಕೊಡುವ ಮುನ್ನ ಚಿಂತನೆ ಮಾಡಬೇಕಿತ್ತು. ಮಾತು ಕೊಟ್ಟಾಗಿದೆ. ಅದರಂತೆ ನಡೆಯಬೇಕು. ಐದು ವರ್ಷಗಳ ಕಾಲ ಎಷ್ಟೇ ಕಷ್ಟ ಆದರೂ ಗ್ಯಾರಂಟಿಗಳನ್ನು ರಾಜ್ಯದ ಜನತೆಗೆ ಕೊಡಬೇಕು. ಅದು ನಮ್ಮ ನಂಬಿಕೆ ಎಂದು ತಿಳಿಸಿದರು. ಸಿರಿವಂತರು ಇದನ್ನು ಪಡೆಯುತ್ತಿದ್ದರೆ ಅದು ತಪ್ಪು. ಬಡವರಿಗಾಗಿ ಗ್ಯಾರಂಟಿ ಯೋಜನೆ ತರಲಾಗಿದೆ. ಈ ಯೋಜನೆ ಎಲ್ಲರೂ ಬಳಸುತ್ತಿರುವ ಬಗ್ಗೆ ಕೆಲವರು ಮಾತನಾಡಿರಬಹುದು. ನಾವು ಕೊಟ್ಟಿರುವ ವಾಗ್ದಾನವನ್ನು ಅನುಷ್ಠಾನ ಮಾಡಲಾಗಿದ್ದು, ಇದರಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಹಿಂದೆ ಸರಿದರೆ ಮಾತಿಗೆ ತಪ್ಪಿದಂತೆ ಆಗುತ್ತದೆ ಎಂದರು.

ಶಾಸಕರ ಫಾರಿನ್ ಟೂರ್ ಬಗ್ಗೆ ಗೊತ್ತಿಲ್ಲ: ಡಿಕೆಶಿ



ಶಾಸಕರು ದೆಹಲಿಗೆ ಹೋಗುವುದೂ ಗೊತ್ತಿಲ್ಲ, ಫಾರಿನ್ ಗೆ ಹೋಗುವುದೂ ಗೊತ್ತಿಲ್ಲ. ಈ ಬಗ್ಗೆ ನನ್ನನ್ನು ಯಾರೂ ಕೇಳಿಯೂ ಇಲ್ಲ, ಈ ವಿಚಾರದಲ್ಲಿ ನಾನು ಬಾಯಿ ಹಾಕುವುದಿಲ್ಲ. ನನ್ನ ಪರವಾಗಿ 139 ಶಾಸಕರು ಸೇರಿ ಮುಖ್ಯಮಂತ್ರಿಯವರು ನನ್ನ ಬೆಂಬಲಕ್ಕೆ ಇದ್ದೇ ಇದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಪಕ್ಷ ನಾಯಕ ಆರ್. ಅಶೋಕ್ ಟೀಕೆ

ಕುರ್ಚಿ ಕಾಳಗದಿಂದ ಅಭಿವೃದ್ಧಿ ಕುಂಠಿತ



ಮಂಡ್ಯ: ಸಾವಿರ ದಿನಗಳನ್ನು ಪೂರೈಸಿ ಮುನ್ನುಗ್ಗುತ್ತಿರುವ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಸಾವಿರ ಸಮಸ್ಯೆಗಳು, ಹಗರಣಗಳು ಗೊಂದಲಗಳಿಂದ ಕೂಡಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾವಿರ ದಿನಗಳನ್ನು ಪೂರೈಸಿದ್ದರೂ, ಬರೀ ಹಗರಣಗಳು, ಕುರ್ಚಿ ಕಾಳಗ, ಶಾಸಕರ ಡಿನ್ನರ್, ಬ್ರೇಕ್‌ಫಾಸ್ಟ್ ಮೀಟಿಂಗ್‌ಗೆ ಮಾತ್ರ ಸೀಮಿತವಾಗಿದೆ ಎಂದು ಆರೋಪಿಸಿದರು.

ಆರೋಗ್ಯ ಇಲಾಖೆಗೆ ಅನಾರೋಗ್ಯ: ರಾಜ್ಯದ ಸರ್ಕಾರಿ ಆಸ್ಪತ್ರೆಗಳು ಖಾಲಿ ಖಾಲಿಯಾಗಿವೆ. ಅಗತ್ಯ ಔಷಧಗಳಿಲ್ಲ, ಈ ಸರ್ಕಾರ ಔಷಧಗಳನ್ನೇ ಖರೀದಿಸುತ್ತಿಲ್ಲ, ಸರ್ಕಾರವೂ ಸರಬರಾಜು ಮಾಡುತ್ತಿಲ್ಲ, ಇಲ್ಲವೇ ಯೂಸರ್ಸ್ ಫಂಡ್‌ನಿಂದಲೂ ಖರೀದಿ ಮಾಡದಂತೆ ಆದೇಶ ನೀಡಿದೆ. ರೋಗಿಗಳು ಚೀಟಿ ಹಿಡಿದುಕೊಂಡು ಔಷಧ ಅಂಗಡಿಗಳತ್ತ ಹೋಗುವಂತಹ ಸ್ಥಿತಿಯಿಂದಾಗಿ ಆರೋಗ್ಯ ಇಲಾಖೆಗೆ ಅನಾರೋಗ್ಯ ಕಾಡುತ್ತಿದೆ ಎಂದು ಟೀಕಿಸಿದರು.

ಮಾ. 12ರಿಂದ ವೈದ್ಯರು ಪ್ರತಿಭಟನೆಗೆ ಮುಂದಾಗಿದ್ದಾರೆ. ಸರ್ಕಾರ ಬದುಕಿದ್ದರೆ ಔಷಧಗಳನ್ನು ಖರೀದಿಸಬೇಕು. ಈ ಪರಿಸ್ಥಿತಿಗೆ ಆರೋಗ್ಯ ಸಚಿವರೇ ಕಾರಣ. ಜತೆಗೆ ಗ್ಯಾರಂಟಿಗಳು ಹೊರೆಯಾಗಿವೆ ಎಂದು ಸ್ವತಃ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಹೇಳಿದ್ದಾರೆ. ಈ ಹೊರೆಯಿಂದ ಎಲ್ಲಾ ಇಲಾಖೆಗಳಲ್ಲೂ ಶೇ. 25 ರಿಂದ 30ರಷ್ಟು ಕಡಿತವಾಗುತ್ತಿದೆ. ಯಾವ ಇಲಾಖೆಯಿಂದಲೂ ಅಭಿವೃದ್ಧಿ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಖಾತೆ ಆರಂಭಿಸಿದರು. 11-12 ಸಾವಿರ ಲಂಚ ಕೊಡದೆ ಆಗುತ್ತಿಲ್ಲ, ಸರ್ಕಾರವೇ ಡಿಜಿಟಲ್ ಖಾತೆಗಳನ್ನು ಬದಲಾವಣೆ ಮಾಡಬೇಕಿತ್ತು. ಆದರೆ ಲಂಚಕ್ಕೆ ದಾರಿ ಮಾಡಿಕೊಡಲು ಈ ಖಾತಾ ಮಾಡಿದ್ದಾರೆ ಎಂದರು.

ಹೈಕಮಾಂಡ್ ತೀರ್ಮಾನ ಅಂತಿಮ

ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ವಿಚಾರ ಹೈಕಮಾಂಡ್ ತೀರ್ಮಾನ ಮಾಡುತ್ತಾರೆ. ರಾಜ್ಯದ ಪರಿಸ್ಥಿತಿ ಬಗ್ಗೆ ಈಗಾಗಲೇ ರಾಜ್ಯ ಉಸ್ತುವಾರಿಗೆ ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ವಿಚಾರ ಇದೆ. ದೇವೇಗೌಡರೇ ಮೊದಲು ಮೈತ್ರಿ ಬೇಡ ಎಂದಿದ್ದರು, ಈಗ ಮೈತ್ರಿ ಬಗ್ಗೆ ಮಾತನಾಡಿದ್ದಾರೆ. ಹೊಂದಾಣಿಕೆ ಬಗ್ಗೆ ಆಮೇಲೆ ನೋಡೋಣ ಆದರೆ, ಸಿದ್ದರಾಮಯ್ಯ ಉಳಿದುಕೊಳ್ಳಲು ಸ್ಥಳೀಯ ಚುನಾವಣೆ ಘೋಷಣೆ ಮಾಡಲಿ ಎಂದು ತಿರುಗೇಟು ನೀಡಿದರು.

ಒಳಮೀಸಲಾತಿ ಜಾರಿ ಮಾಡಿಲ್ಲ



ಬೆಂಗಳೂರು: ಕಾಂಗ್ರೆಸ್ ಸರ್ಕಾರವು ಒಳ ಮೀಸಲಾತಿ ಜಾರಿ ಮಾಡಿಲ್ಲ, ಇಷ್ಟು ದಿನಗಳ ಕಾಲ ದಲಿತರಿಗೂ ವಂಚನೆ ಮಾಡಿ, ಇದೀಗ ಯುವ ಜನರಿಗೂ ಅನ್ಯಾಯ ಮಾಡಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಎಂದು ಕಿಡಿಕಾರಿದ್ದಾರೆ.

ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಹಳೇ ರೀತಿಯಲ್ಲೇ ಮೀಸಲಾತಿ ಕೊಡುವುದಾದರೆ ಅದು ಒಳ ಮೀಸಲಾತಿ ಆಗುವುದಿಲ್ಲ, ಒಳ ಮೀಸಲಾತಿ ಕೊಡುವುದಾದರೆ ಶೇ.17 ರಂತೆ ಕೊಡಬೇಕು. ಅದು ಆಗುವುದಿಲ್ಲ, ಕೋರ್ಟ್‌ನಲ್ಲಿ ಕೇಸಿದೆ ಎಂದರು.

ಒಳ ಮೀಸಲಾತಿಗೆ ಒಳಪಡುವ ಪರಿಶಿಷ್ಟ ಜಾತಿಗಳ ಹೋರಾಟ ಎರಡ್ಮೂರು ದಶಕಗಳಿಂದ ನಡೆಯುತ್ತಿತ್ತು. ಒಳ ಮೀಸಲಾತಿ ಮಾಡಲು ಒತ್ತಡ ಹೆಚ್ಚಾದ ಕಾರಣ ಒಂದು ತೀರ್ಮಾನಕ್ಕೆ ಬಂದು ಎಬಿಸಿಡಿ ಗುಂಪುಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿತ್ತು. ಆಗ ನಮಗೆ ಅದನ್ನು ಜಾರಿಗೊಳಿಸಲು ಅಧಿಕಾರ ಇರಲಿಲ್ಲ ಎಂದು ವಿಶ್ಲೇಷಿಸಿದರು.

ರಾಜ್ಯದಲ್ಲಿ ಯುವ ಜನತೆ ವಿರೋಧಿ ಸರ್ಕಾರ

ಬೆಂಗಳೂರು : ರಾಜ್ಯದಲ್ಲಿ ನಿರುದ್ಯೋಗಿ ಯುವ ಜನತೆಯ ವಿರೋಧಿ ಸರ್ಕಾರ ಇದೆ ಎಂದು ವಿಧಾನ ಪರಿಷತ್‌ನ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆರೋಪಿಸಿದ್ದಾರೆ. ಶನಿವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗಿದೆ. 40 ಸಾವಿರ ಹುದ್ದೆ ಭರ್ತಿ ಮಾಡಿರುವುದಾಗಿ ಸಿದ್ದರಾಮಯ್ಯ ಅವರು ಹೇಳುತ್ತಾರೆ. 40 ಸಾವಿರ ಹುದ್ದೆಯಡಿ ಯಾವ್ಯಾವ ಹುದ್ದೆ ಭರ್ತಿ ಮಾಡಿದ್ದೀರೆಂದು ಇಲಾಖಾವಾರು ಲೆಕ್ಕ ಕೊಡಿ ಎಂದು ಸವಾಲು ಹಾಕಿದರು. ಶೇ.56 ಮೀಸಲಾತಿಯಡಿ ನಾವು ಹುದ್ದೆ ಭರ್ತಿ ಮಾಡುವುದಾಗಿ ಕೋರ್ಟಿನಲ್ಲಿ ಸಮರ್ಪಕ ವಾದ ಮಂಡಿಸಿಲ್ಲ, ಇದು ಎಸ್ಸಿ,ಎಸ್ಟಿಗಳಿಗೆ ಅನ್ಯಾಯವಾಗಿದೆ ಎಂದರು.

ಇಂದು ಲಿಖಿತ ಪರೀಕ್ಷೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಎಲ್ಲ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ (ಮಾ.1) ಲಿಖಿತ ಪರೀಕ್ಷೆ ನಡೆಸಲಿದ್ದು ಸಕಲ ತಯಾರಿ ಮಾಡಿಕೊಂಡಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚನ್ನಮ್ಮ, ಏಕಲವ್ಯ ಮಾದರಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ಶಾಲೆ, ಇಂದಿರಾಗಾಂಧಿ, ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇತ್ಯಾದಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ನೂರು ಅಂಕಗಳಿಗೆ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಒಟ್ಟು 2.31 ಲಕ್ಷ ಮಂದಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದು, 629 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬಹುತೇಕ ಎಲ್ಲ ತಾಲೂಕು ಕೇಂದ್ರಗಳಲ್ಲಿ ಕೂಡ ಪರೀಕ್ಷೆ ನಡೆಯಲಿದೆ. 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ವಿವರಿಸಿದ್ದಾರೆ.

ವಾಯುವ್ಯ ಸಾರಿಗೆಗೆ ಶೀಘ್ರ ಕಿತ್ತೂರು ಚನ್ನಮ್ಮ ಎಂದು ಮರುನಾಮಕರಣ

ಬೆಳಗಾವಿ: ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮನ ಹೆಸರು ಮರುನಾಮಕರಣ ಮಾಡುವ ಸಂಬಂಧ ಪ್ರಸ್ತಾವ ಸಲ್ಲಿಕೆಯಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮೋದನೆ ಪಡೆದು ಮರುನಾಮಕರಣ ಮಾಡುತ್ತೇವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮ ರಸ್ತೆ ಸಾರಿಗೆ ನಿಗಮ ಎಂದು ಶೀಘ್ರದಲ್ಲೇ ಮರುನಾಮಕರಣ ಮಾಡುತ್ತೇವೆ' ಎಂದರು.

ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ (2019ರಿಂದ 2023ರ ಅವಧಿಯಲ್ಲಿ) ಹೊಸ ಬಸ್ ಖರೀದಿಯಾಗಿಲ್ಲ, ಕೊರೋನಾ ಹಿನ್ನೆಲೆಯಲ್ಲಿ ಆಗ ಸಿಬ್ಬಂದಿ ವೇತನ ನೀಡಲು, ಡೀಸೆಲ್ ಖರೀದಿಗೂ ಕಷ್ಟದ ಪರಿಸ್ಥಿತಿ ಇತ್ತು. ಹಾಗಾಗಿ ಈಗ ಕೆಲವು ಮಾರ್ಗಗಳಲ್ಲಿ ಹಳೇ ಬಸ್‌ಗಳು ಓಡುತ್ತಿರಬಹುದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೊಸ ಬಸ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಂತ-ಹಂತವಾಗಿ ವಿವಿಧ ಮಾರ್ಗಗಳಲ್ಲಿ ಹೊಸ ಬಸ್ ಒದಗಿಸಲಾಗುತ್ತಿದೆ ಎಂದರು.



9 ಸಾವಿರ ಸಿಬ್ಬಂದಿ ನೇಮಕ

ನಾನು ಈ ಹಿಂದೆ ಸಾರಿಗೆ ಸಚಿವನಾಗಿದ್ದಾಗ, ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯಾಪ್ತಿಯಲ್ಲಿ ಹಲವು ಬಸ್ ನಿಲ್ದಾಣ, ಘಟಕ ನಿರ್ಮಿಸಿದ್ದೆ. ಈ ಸಲ ಸಾರಿಗೆ ಸಚಿವನಾದ ನಂತರ ಸಾರಿಗೆ ಸಂಸ್ಥೆಯಲ್ಲಿ 9 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದೇವೆ. ಅನುಕಂಪದ ಆಧಾರದಲ್ಲಿ 1 ಸಾವಿರ ಮಂದಿಗೆ ಕೆಲಸ ಕೊಟ್ಟಿದ್ದೇವೆ' ಎಂದರು.

ಆಯವ್ಯಯದಲ್ಲಿ ಘೋಷಿಸಿದಂತೆ ಎರಡು ಸಾವಿರ ಹೊಸ ಬಸ್ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವಾಕರಸಾ ಸಂಸ್ಥೆಗೆ ಏಳು ನೂರು ವಾಹನಗಳ ಪೈಕಿ 250 ಬಸ್ ಗಳನ್ನು ಲೋಕಾರ್ಪಣೆಗೊಳಿಸಲಾಗಿದೆ. ಬೆಳಗಾವಿ ರಾಜ್ಯದ ದೊಡ್ಡ ಜಿಲ್ಲೆಯಾಗಿದೆ ಎಂದರು.



ಸಿಲಿಕಾನ್ ಸಿಟಿಯ ರಸ್ತೆಗಳಲ್ಲಿ ಕಂಗೊಳಿಸಿದ ಗುಲಾಬಿ ಚೆರ್ರಿ ಹೂ

ಗುಲಾಬಿ ಬಣ್ಣಕ್ಕೆ ತಿರುಗಿದ ಬೆಂಗಳೂರಿನ ರಸ್ತೆಗಳು!

▸ **ಮಹೇಶ್ ಹೆಗಡೆ**

ಬೆಂಗಳೂರು: ಪ್ರತಿ ವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ರಸ್ತೆಗಳು ಗುಲಾಬಿ ಬಣ್ಣದ ಹೂವುಗಳಿಂದ ಕಂಗೊಳಿಸುತ್ತವೆ. ನಗರದ ಈ ಅದ್ಭುತ ಸೌಂದರ್ಯವನ್ನು ಪ್ರತಿಯೊಬ್ಬರು ಆಸ್ವಾಧಿಸಿ, ಸಂತೋಷ ಪಡುತ್ತಿದ್ದಾರೆ. ಆದರೆ ಇದರ ಹಿಂದೆ ಭಾರತೀಯ ಅರಣ್ಯ ಸೇವೆಯ(ಐಎಫ್‌ಎಸ್) ಅಧಿಕಾರಿ ಸೇತುರಾಮ್ ಗೋಪಾಲರಾವ್ ನೇಗಿನಾಳ(ಎಸ್.ಜಿ. ನೇಗಿನಾಳ) ಅವರ 40 ವರ್ಷಗಳ ಹಿಂದಿನ ನಿರಂತರ ಪರಿಶ್ರಮ ಮತ್ತು ವೈಜ್ಞಾನಿಕ ಯೋಜನೆಯ ಪರಿಣಾಮವಾಗಿದೆ. ಸಿಲಿಕಾನ್ ಸಿಟಿ ಬೆಂಗಳೂರಿನ ರಸ್ತೆಗಳು ಈಗ ಟಬೂಬಿಯಾ ರೋಸಿಯಾ ಹೂವುಗಳಿಂದ ಕಂಗೊಳಿಸುತ್ತಿವೆ. ಜಪಾನಿನ ಚೆರ್ರಿ ಬ್ಲಾಸಂ ಹೂವುಗಳನ್ನು ಹೋಲುವ ಈ ಗುಲಾಬಿ ಬಣ್ಣದ ಹೂವುಗಳು ದಕ್ಷಿಣ ಅಮೆರಿಕ ಮೂಲದ್ದಾಗಿದೆ. ನಾಗರಬಾವಿ, ಕಬ್ಬನ್ ಪಾರ್ಕ್, ಲಾಲ್‌ಬಾಗ್, ಕೋರಮಂಗಲ, ಜಯನಗರ, ಸದಾಶಿವನಗರ ಸೇರಿದಂತೆ ರಾಜಧಾನಿಯ ಹಲವೆಡೆ ತಿಳಿ ಗೆಂಪು, ಬಿಳಿ ಬಣ್ಣದ ಹೂಗಳನ್ನು ಹೊತ್ತು ನಗರದ ನಿವಾಸಿಗಳ ಮನಸ್ಸಿಗೆ ಖುಷಿ ತರುತ್ತಿದೆ. ಚಳಿಗಾಲದಲ್ಲಿ ತನ್ನ ಎಲೆಗಳನ್ನು ಉದುರಿಸಿ ವಸಂತ ಋತುವಿನ ಆರಂಭದಲ್ಲಿ ಹೂವುಗಳಿಂದ ತುಂಬಿ ನಿಲ್ಲುವ ಟಬೂಬಿಯಾ ಮರಗಳು ಬೆಂಗಳೂರಿನ ಅಂದಕ್ಕೆ ಮೆರುಗು ತರುತ್ತವೆ.

40 ವರ್ಷದ ಹಿಂದಿನ ಪರಿಶ್ರಮ

1980ರ ದಶಕದಲ್ಲಿ ಬೆಂಗಳೂರು ವೇಗವಾಗಿ ಬೆಳೆಯುತ್ತಿದ್ದಾಗ, ಜನಸಂಖ್ಯೆಗನುಗುಣವಾಗಿ ರಸ್ತೆಗಳ ಅಗಲೀಕರಣಕ್ಕಾಗಿ ಸಾವಿರಾರು ಮರಗಳನ್ನು ಕಡಿಯಲಾಗಿತ್ತು. ಹಸಿರು ನಗರವಾಗಿದ್ದ ಬೆಂಗಳೂರು ಕಾಂಕ್ರೀಟ್ ಕಾಡಾಗಿ ಬದಲಾಗುತ್ತಾ, ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಆಗ ನಗರಕ್ಕೆ ಮತ್ತೆ ಹಸಿರು ಹೊದಿಕೆ ಹೆಚ್ಚಿಸಲು ಸರ್ಕಾರದ ಸೂಚನೆಯಂತೆ ಅಂದಿನ ಐಎಫ್‌ಎಸ್ ಅಧಿಕಾರಿ ಎಸ್.ಜಿ.ನೇಗಿನಾಳ ಮುಂದಾದರು. ಯಾವುದಾದರೂ ಸಸಿಗಳನ್ನು ನೆಡುವ ಬದಲಿಗೆ, ವೈಜ್ಞಾನಿಕವಾಗಿ ಮಣ್ಣಿನ ಗುಣಮಟ್ಟವನ್ನು ಅಭ್ಯಸಿಸಿ, ನಗರಕ್ಕೆ ಯಾವ ಮರಗಳು ಸೂಕ್ತವೆಂದು ನಿರ್ಧರಿಸಿದರು. ಅದರ ಪರಿಣಾಮವೆ ರಸ್ತೆ ಬದಿಯಲ್ಲಿ ನೆರಳು ನೀಡುವ ಜೊತೆಗೆ ಕಾಲೋಚಿತವಾಗಿ ಹೂ ಬಿಡುವ, ಬೇಗನೆ ಬೆಳೆಯುವ ಟಬೂಬಿಯಾ ರೋಸಿಯಾ ತಳಿಯನ್ನು ಆರಿಸಿಕೊಂಡರು ನಗರದಾದ್ಯಂತ ನೆಟ್ಟರು. 25 ರಿಂದ 100 ಅಡಿ ಎತ್ತರದವರೆಗೆ ಬೆಳೆಯುವ ಸಾಮರ್ಥ್ಯ ಹೊಂದಿರುವ ಆ ಮರಗಳೆ ಈಗ ಗುಲಾಬಿ ಬಣ್ಣದ ಹೂವೂಗಳನ್ನು ಬಿಟ್ಟು ಪ್ರತಿವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕಣ್ಣಿಗೆ ಹಬ್ಬ ನೀಡುತ್ತವೆ.



ಬೆಂಗಳೂರಿನ ಕಾಂಕ್ರೀಟ್ ಕಾಡಿನ ಮಧ್ಯೆ, ಗುಲಾಬಿ ಬಣ್ಣದ ಹೂವುಗಳಿಂದ ತುಂಬಿರುವ ನೈಜವಾದ ಮರಗಳು ಮನಸ್ಸಿಗೆ ಆನಂದವನ್ನು ನೀಡುತ್ತಿದೆ. ಈ ಸೌಂದರ್ಯದಲ್ಲಿ ಬೆಂಗಳೂರನ್ನು ನೋಡುವುದೆ ಒಂದು ಖುಷಿ.
■ **ಶ್ರೀದೇವಿ ಭಟ್,** ಹೊಸಕೆರೆಹಳ್ಳಿ ನಿವಾಸಿ

ರಾತ್ರಿಯಲ್ಲಿ ಹಸಿರು ಕಾರ್ಯಾಚರಣೆ

ನೇಗಿನಾಳ ಅವರು ಪ್ರತಿಯೊಂದು ಏರಿಯಾದ ನಿವಾಸಿಗಳ ಬಳಿ ತೆರಳಿ ಅವರ ಸಹಕಾರದೊಂದಿಗೆ ನೆಡುತೋಪು ಬೆಳೆಸಿದರು. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಹಗಲು ಹೊತ್ತಿನಲ್ಲಿ ಮರ ನೆಡುವುದು ಕಷ್ಟವಾಗಿತ್ತು. ಇದಕ್ಕಾಗಿ ನೇಗಿನಾಳ ಮತ್ತು ಅವರ ತಂಡವು ರಾತ್ರಿ ಹೊತ್ತು ಟಾರ್ಚ್ ಹಿಡಿದು ಕೆಲಸ ಮಾಡಿ, ಕೇವಲ 5 ವರ್ಷಗಳ ಅವಧಿಯಲ್ಲಿ ನಗರದಾದ್ಯಂತ ಸುಮಾರು 15 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಸಿಗಳನ್ನು ನೆಟ್ಟು ಪೋಷಿಸಿದರು. ಸಸಿಗಳ ರಕ್ಷಣೆಗಾಗಿ ಸಿಮೆಂಟ್ ರಿಂಗ್‌ಗಳ ಬದಲು ಬಿದಿರು ಮತ್ತು ಜಾಲರಿಗಳನ್ನು ಬಳಸಿ ಕಡಿಮೆ ವೆಚ್ಚದಲ್ಲಿ ಟ್ರೀ ಗಾರ್ಡ್‌ಗಳನ್ನು ನಿರ್ಮಿಸಿದ ಕೀರ್ತಿ ಇವರದು. ನೇಗಿನಾಳ ಅವರ ಈ ನಗರ ಅರಣ್ಯೀಕರಣ ಮಾದರಿಯನ್ನು ಕೇಂದ್ರ ಸರ್ಕಾರದ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿಕೊಂಡಿತು. ಇಂದು ನಾವು ನೋಡುತ್ತಿರುವ ಕಬ್ಬನ್ ಪಾರ್ಕ್ ರಸ್ತೆ, ಮೆಜೆಸ್ಟಿಕ್ ಪರಿಸರ ಮತ್ತು ಹೊರವರ್ತುಲ ರಸ್ತೆಗಳ ಹಸಿರುಕರಣ ಸಹ ಇವರ ಕೊಡುಗೆಯಾಗಿದೆ.



ಕಿರುಸುದ್ದಿ

ದ್ವಿತೀಯ ಪಿಯುಸಿ ಪರೀಕ್ಷೆ: 576 ವಿದ್ಯಾರ್ಥಿಗಳು ಗೈರು

◆ **ವಿಜಯನಗರ:** ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಪಿಯುಸಿ ವಾರ್ಷಿಕ ಪರೀಕ್ಷೆ ಶನಿವಾರ ಆರಂಭಗೊಂಡಿದ್ದು, ಮೊದಲ ದಿನ ನಡೆದ ಕನ್ನಡ ಭಾಷೆ ಪರೀಕ್ಷೆಗೆ 11338 ವಿದ್ಯಾರ್ಥಿಗಳು ಹಾಜರಾಗಿದ್ದರು. ಕನ್ನಡ ಭಾಷಾ ಪರೀಕ್ಷೆಗೆ ಜಿಲ್ಲೆಯಾದ್ಯಂತ ಒಟ್ಟು 11914 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದು, ಈ ಪೈಕಿ 11338 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, 576 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗರಾಜ್ ಹವಾಲ್ದಾರ್ ಮಾಹಿತಿ ನೀಡಿದರು.

ಇಂದು ನಿಖಿಲ್‌ಕುಮಾರ್ ಸ್ವಾಮಿ ಆಗಮನ: ಪರಿಶೀಲನೆ



◆ **ಹಗರಿಬೊಮ್ಮನಹಳ್ಳಿ:** ಜೆಡಿಎಸ್ ಪಕ್ಷದ ಯುವ ನಾಯಕ ನಿಖಿಲ್ ಕುಮಾರ್ ಸ್ವಾಮಿ ಇಂದು ಹಗರಿಬೊಮ್ಮನಹಳ್ಳಿಗೆ ಆಗಮಿಸುವ ಹಿನ್ನೆಲೆಯಲ್ಲಿ ನಿಖಿಲ್‌ಕುಮಾರ್ ಸ್ವಾಮಿ ಅವರ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಮತ್ತು ಹಗರಿಬೊಮ್ಮನಹಳ್ಳಿ ಪಿಎಸ್‌ಐ ಬಸವರಾಜ ಅಡವಿ ಬಾವಿ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಕಾರ್ಯಕ್ರಮ ಶಾಂತ ರೀತಿಯಿಂದ ನೆಡೆಯಲು ಯಾವೊಂದು ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗುತ್ತಿದೆ. 90 ಜನ ಎಚ್‌ಪಿಸಿ,8 ಜನ ಪಿಎಸ್‌ಐ, 3 ಜನ ಸಿಪಿಐ ಹಾಗೂ ಒಬ್ಬರು ಡಿವೈಎಸ್ಪಿ ಅವರನ್ನು ನಿಯೋಜಿಸಲಾಗಿದೆ ಎಂದರು. ತಾಲೂಕು ಜೆಡಿಎಸ್ ಅಧ್ಯಕ್ಷ ವೈ.ಮಲ್ಲಿಕಾರ್ಜುನ ಮಾತನಾಡಿ, ಜನರೊಂದಿಗೆ ಜನತಾ ದಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಪಕ್ಷದ ಯುವ ನಾಯಕ ನಿಖಿಲ್‌ಕುಮಾರ್ ಸ್ವಾಮಿ ಅವರು ಬೆಳಿಗ್ಗೆ 10-30ಕ್ಕೆ ಹೆಲಿಪ್ಯಾಡ್‌ಗೆ ಆಗಮಿಸುತ್ತಿದ್ದು, ಅಲ್ಲಿಂದ ಅವರನ್ನು ಮೆರವಣಿಗೆಯ ಮೂಲಕ ಬರ ಮಾಡಿಕೊಳ್ಳಲು ಎರಡು ಸಾವಿರ ಬೈಕ್ ರ್‍ಯಾಲಿ ನೂರಾರು ಆಟೋ ಇರಲಿವೆ. ನೀರಾವರಿ ಇಲಾಖೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಮೆರವಣಿಗೆಯ ಬಳಿಕ ವೇದಿಕೆ ಕಾರ್ಯಕ್ರಮ ಇರಲಿದೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಉದ್ದೇಶದಿಂದ 400 ಟ್ರಾಕ್ಸ್ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ.ಬಂದ ಜನರಿಗೆ ಕುಡಿಯುವ ನೀರು ಊಟದ ವ್ಯವಸ್ಥೆ ಸಿದ್ಧತೆ ಮಾಡಿಕೊಳ್ಳಲಾಗಿದೆ 10 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ ಎಂದರು.

ಪತ್ನಿ ಹತ್ಯೆಗೈದ ಪತಿ

◆ **ಬಸವಕಲ್ಯಾಣ:** ತಾಲೂಕಿನ ಮನ್ನಳ್ಳಿ ಗ್ರಾಮದಲ್ಲಿ ಅನೈತಿಕ ಸಂಬಂಧ ಶಂಕೆ ವ್ಯಕ್ತಪಡಿಸಿ ಪತಿಯೇ ಪತ್ನಿಯನ್ನು ಹತ್ಯೆ ಮಾಡಿದ ಘಟನೆ ಶುಕ್ರವಾರ ಬೆಳಿಗ್ಗೆ ನಡೆದಿದೆ. ಮನ್ನಳ್ಳಿ ಗ್ರಾಮದ ನಿವಾಸಿ ಅಶ್ವಿನಿ (28) ಮೃತಪಟ್ಟ ಮಹಿಳೆ. ಕಿಶನ್ ಎಂಬಾತ ಕೊಲೆ ಆರೋಪಿ ಎಂದು ತಿಳಿದು ಬಂದಿದೆ. ಇಡೀ ರಾತ್ರಿ ದಂಪತಿಗಳ ನಡುವೆ ಜಗಳ ನಡೆದಿದ್ದು, ನಸುಕಿನ ಸುಮಾರು 4 ಗಂಟೆಗೆ ಪತ್ನಿಯ ಮುಖದ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿರುವುದಾಗಿ ತಿಳಿದು ಬಂದಿದೆ. ಕಿಶನ್ ಮಹಾರಾಷ್ಟ್ರದ ದಾಬಾದಲ್ಲಿ ಕೆಲಸ ಮಾಡುತ್ತಿದ್ದನು. ಅಶ್ವಿನಿ ತನ್ನ ಮೂರು ಮಕ್ಕಳೊಂದಿಗೆ ಮನ್ನಳ್ಳಿ ಗ್ರಾಮದಲ್ಲೇ ವಾಸವಾಗಿದ್ದಳು. ಪತ್ನಿ ಇನ್ನೊಬ್ಬರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾಳೆ ಎಂಬ ಅನುಮಾನದಿಂದ ಕಿಶನ್ ಪದೇಪದೇ ಜಗಳವಾಡುತ್ತಿದ್ದನು. ಈ ವಿಚಾರವನ್ನು ಅಶ್ವಿನಿ ಕೆಲ ದಿನಗಳ ಹಿಂದೆ ತನ್ನ ತಂದೆಗೆ ತಿಳಿಸಿದ್ದು, ಅವರು ಕಿಶನ್‌ಗೆ ಬುದ್ಧಿವಾದ ಹೇಳಿದ್ದರೆಂದು ಹೇಳಲಾಗುತ್ತಿದೆ. ಈ ಕುರಿತು ಮಂಠಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಯಂತ್ರಕ್ಕೆ ಸಿಲುಕಿ ಮಹಿಳೆ ಮೃತ್ಯು

◆ **ಬೀದರ್:** ಕಡಲೆ ರಾಶಿ ಮಾಡುವ ಯಂತ್ರಕ್ಕೆ ಸಿಲುಕಿ ಮಹಿಳೆಯೊಬ್ಬಳು ಮೃತಪಟ್ಟ ಘಟನೆ ಭಾಲ್ಕಿ ತಾಲೂಕಿನ ಹಲಬರ್ಗಾ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಹಲಬರ್ಗಾ ಗ್ರಾಮದ ನಿವಾಸಿ ಕಮಲಬಾಯಿ (62) ಎಂದು ಗುರುತಿಸಲಾಗಿದೆ .ಹೊಲದಲ್ಲಿ ಕಡಲೆ ರಾಶಿ ಮಾಡುತ್ತಿದ್ದರು. ರಾಶಿ ಮಾಡುವ ಸಮಯದಲ್ಲಿ ಆಕಸ್ಮಿತವಾಗಿ ರಾಶಿ ಮಾಡುವ ಯಂತ್ರಕ್ಕೆ ಸಿಲುಕಿದ್ದಾರೆ. ಪರಿಣಾಮವಾಗಿ ಅವರ ಕುತ್ತಿಗೆ ಭಾಗವು ಸಂಪೂರ್ಣವಾಗಿ ಯಂತ್ರಕ್ಕೆ ಸಿಲುಕಿ ಅವರ ದೇಹದಿಂದ ಬೇರ್ಪಟ್ಟಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಘಟನೆಯು ಧನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಘಟನೆಯ ಕುರಿತು ಮಾಹಿತಿ ಸಂಗ್ರಹಿಸಿ ಘಟನೆ ಕುರಿತು ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಜಲ ಸಮೃದ್ಧಿ ಯೋಜನೆ ರೂಪಿಸಿ: ಖರ್ಗೆ



◆ **ಕಲಬುರಗಿ:** ಬಹುಗ್ರಾಮ ಯೋಜನೆಗೆ ಕೇಂದ್ರ ಸರ್ಕಾರ ತನ್ನ ಪಾಲಿನ ಹಣ ನೀಡಬೇಕಾಗುತ್ತದೆ. ಅನೇಕ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ನೀಡಿಲ್ಲ. ಆರ್‌ಡಿಪಿಆರ್ ಇಲಾಖೆಯು ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಕಳೆದ 15-20 ವರ್ಷಗಳಿಂದ ಬೇಸಿಗೆಯಲ್ಲಿ ನೀರಿನ ಸಮಸ್ಯೆಗೆ ತುತ್ತಾಗುವ ಗ್ರಾಮಗಳಲ್ಲಿ ಜಲ ಸಮೃದ್ಧಿ ಯೋಜನೆ ರೂಪಿಸಿ ನೀರಿನ ಭದ್ರತೆ ತರಲು ಯೋಜನೆ ರೂಪಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಎರಡು ವರ್ಷಗಳ ಬಳಿಕ ಸಂಸದ ರಾಧಾಕೃಷ್ಣ ದೊಡ್ಡಮನಿ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಮೇಲ್ವಿಚಾರಣಾ ಸಮಿತಿ (ದಿಶಾ) ಸಭೆಯಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿ ಮಾತನಾಡಿದ ಅವರು, ಬೇಸಿಗೆ ಸಮಯದಲ್ಲಿ ಜಲ ಸಮೃದ್ಧಿ ಯೋಜನೆ ರೂಪಿಸುವ ಮೂಲಕ ವಾಟರ್ ಸೆಕ್ಯೂರ್ ವಿಲೇಜ್ ಮಾಡಲು ಅನುಕೂಲ ಆಗಲಿದೆ ಎಂದು ಸಭೆಯ ಗಮನಕ್ಕೆ ತಂದರು.

400 ಕೋಟಿ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿಗೆ ಸಣ್ಣ ಸಣ್ಣ ಕಾರಣ ಹೇಳುವುದು ಸರಿಯಲ್ಲ ಎಂದು ಬೇಸರವ್ಯಕ್ತಪಡಿಸಿದರು.ಯಾವುದಾದರೂಯೋಜನೆಗೆ ಕಾನೂನು ತೊಡಕುಗಳು ಉಂಟಾದರೆ,ನಮಗೆ ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತರಬೇಕು.ಪ್ರಮೋಷನ್ ಹಾಗೂ ವರ್ಗಾವಣೆ ಏನಾದರೂ ಇದ್ದರೆ ಬೇಗ ಹೇಳ್ತಿರಾ.ಆದರೆ, ಕಾಮಗಾರಿಗಳ ವಿಳಂಬ ಕುರಿತು ಎಲ್ಲಿಯೂ ಹೇಳಲ್ಲ. ಈ ಮಧ್ಯೆ ಚಿಂಚೋಳಿ ಶಾಸಕ ಅವಿನಾಶ್ ಜಾಧವ್ ಮಾತನಾಡಿ, ಚಿಂಚೋಳಿಯಿಂದ ಬೈಪಾಸ್ ಮಿರಿಯಾಣಾಗೆ ಹೋಗುವ ರಸ್ತೆ ಇನ್ನೂ ಮುಗಿದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

> **ನಗರದಾದ್ಯಂತ ಸುಮಾರು 40 ಕೋಟಿ ರೂಪಾಯಿ ವೆಚ್ಚದಲ್ಲಿ ಯುಜಿಡಿ ಕಾಮಗಾರಿಗಳು ನಡೆಯುತ್ತಿವೆ. ಜೊತೆಗೆ 20 ಕೋಟಿಯಷ್ಟು ಚರಂಡಿ ಕಾಮಗಾರಿ ಹಾಗೂ 5 ಕೋಟಿ ಮೊತ್ತದ ರಸ್ತೆ ಕಾಮಗಾರಿಗಳು ಸಹ ನಗರದಲ್ಲಿ ನಡೆಯುತ್ತಿದ್ದು, ಎಲ್ ಆಂಡ್ ಟಿಯವರು ಪೈಪ್ ಲೈನ್ ಹಾಕುವ ಮುನ್ನ ಪಾಲಿಕೆ ಸದಸ್ಯ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಅನುಮತಿ ಪಡೆದು ಹಾಕಬೇಕು ಎಂದು ಸೂಚಿಸಲಾಗಿದೆ.**
> ■ **ಅವಿನಾಶ್ ಶಿಂಧೆ, ಆಯುಕ್ತ**

ಸಭೆಯಲ್ಲಿ ಶಾಸಕಿ ಕನೀಜ್ ಫಾತಿಮಾ, ಎಂ.ವೈ.ಪಾಟೀಲ, ಜಗದೇವ ಗುತ್ತೇದಾರ, ಬಿ.ಜಿ.ಪಾಟೀಲ, ಶಶೀಲ ನಮೋಶಿ, ಮೇಯರ್ ವರ್ಷಾ ರಾಜೀವ ಜಾನೆ, ಡಿಸಿ ಬಿ.ಫೌಜಿಯಾ ತರನ್ನುಮ್, ನಗರ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ.ಅಡ್ಡೂರು ಶ್ರೀನಿವಾಸಲು, ಸಿಇಓ ಭಂವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸುಮಿತ್ ಪಾಟೀಲ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು. ವರ್ಚುವಲ್ ಮೂಲಕ ಬೀದರ ಸಂಸದ ಸಾಗರ ಖಂಡ್ರೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಶಾಸಕರಾದ ಡಾ.ಅವಿನಾಶ ಜಾಧವ, ಬಸವರಾಜ ಮತ್ತಿಮೂಡ ಅವರು ಸಹ ಭಾಗವಹಿಸಿದ್ದರು.

ಕಲೆ, ಸಾಹಿತ್ಯ, ಉಳಿವಿಗೆ ಬೇಕಿದೆ ರಾಜ್ಯ ಬಜೆಟ್‌ನಲ್ಲಿ ಆದ್ಯತೆ

ಕುಕನೂರು: ಕಲೆ, ಸಾಹಿತ್ಯ ಉಳಿವಿಗೆ ರಾಜ್ಯ ಸರ್ಕಾರ ಗಮನಹರಿಸಬೇಕಿದೆ. ಅದಕ್ಕಾಗಿ ರಾಜ್ಯದಲ್ಲಿ ತಾಲೂಕಿಗೊಂದು ಸಾಹಿತ್ಯ ಭವನ ಹಾಗೂ ಗ್ರಾಮಕ್ಕೊಂದು ರಂಗಮಂದಿರ ನಿರ್ಮಾಣವನ್ನು ಮಾಡಲು ಈ ಸಲ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಗಮನಹರಿಸಬೇಕಾಗಿದೆ ಎಂದು ತಾಲೂಕಿನ ಮಂಡಲಗೇರಿ ಗ್ರಾಮದ ಹಿರಿಯ ಸಾಹಿತಿ ಬಸವರಾಜ ಬಿನ್ನಾಳ ಒತ್ತಾಯಿಸಿದ್ದಾರೆ.



ಕರ್ನಾಟಕ ಕಲೆ. ಸಾಹಿತ್ಯ ಸಂಸ್ಕೃತಿಗೆ ಹೆಸರಾಗಿರುವ ರಾಜ್ಯ. ರಾಜ್ಯದ ಎಲ್ಲಾ ತಾಲೂಕು ಕೇಂದ್ರದಲ್ಲಿ ಸಾಹಿತ್ಯ ಭವನ ಮತ್ತು ಹಳ್ಳಿಗೊಂದು ರಂಗಮಂದಿರ ನಿರ್ಮಾಣ ಮಾಡಬೇಕು. ಜಾನಪದ, ರಂಗಭೂಮಿ ಕಲೆ ಸೇರಿದಂತೆ ಹಲವಾರು ಕಲೆಗಳಿಗೆ ರಾಜ್ಯ ಹೆಸರುವಾಸಿಯಾಗಿದೆ. ಅನೇಕ ಸಾಹಿತಿಗಳು. ಕವಿಗಳು ಜಾನಪದ ಕಲಾವಿದರು ಜನ್ಮತಾಳಿ ರಾಜ್ಯದ ಸಾಂಸ್ಕೃತಿಕ ಹಿರಿಮೆ ಹೆಚ್ಚಿಸಿದ್ದಾರೆ. ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದ್ರೂ ಇದುವರೆಗೂ ಹಲವಾರು ತಾಲೂಕು ಕೇಂದ್ರದಲ್ಲಿ ಒಂದು ಸಾಹಿತ್ಯ ಭವನ ಇಲ್ಲ, ರಂಗಭೂಮಿ ಕಲೆಗಳಿಗೆ ಆದ್ಯತೆ ಇಲ್ಲ, ಹೀಗಾಗಿ ಹಳ್ಳಿಗೊಂದು ರಂಗಮಂದಿರ ನಿರ್ಮಾಣ ಮಾಡಬೇಕು. ಯಾಕೆಂದ್ರೆ ಹಳ್ಳಿಗಳಲ್ಲಿ ಹವ್ಯಾಸಿ ಕಲಾವಿದರು ನಾಟಕ ಪ್ರದರ್ಶನ ಮಾಡಬೇಕಾದ್ರೆ ಸಾಕಷ್ಟು ಕಷ್ಟ ಪಡುತ್ತಿದ್ದಾರೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಈ ಬಗ್ಗೆ ಗಮನ ಹರಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಸಲ ರಾಜ್ಯ ಬಜೆಟಿನಲ್ಲಿ ಕಲೆ, ಸಾಹಿತ್ಯ ಉಳಿವಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕೇಂದ್ರದ ವಿಳಾಸ ಬದಲು: ವಿದ್ಯಾರ್ಥಿಗಳು ಕಂಗಾಲು



◆ **ಯಾದಗಿರಿ:** ರಾಜ್ಯಾದ್ಯಂತ ಶನಿವಾರದಿಂದ ಆರಂಭಗೊಂಡ ದ್ವಿತೀಯ ಪಿಯುಸಿ ಪರೀಕ್ಷೆಗಳು ಜಿಲ್ಲೆಯಲ್ಲಿ ಶಾಂತಿಯುತವಾಗಿ ನಡೆದವು.

ಜಿಲ್ಲೆಯಾದ್ಯಂತ ಒಟ್ಟು 20 ಕೇಂದ್ರಗಳಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಪರೀಕ್ಷೆಗಳು ನಡೆದವು.

ಮೊದಲ ದಿನ ಕನ್ನಡ ಮತ್ತು ಅರೇಬಿಕ್ ಪತ್ರಿಕೆಗೆ ಒಟ್ಟು 8627 ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದು, 551 ಗೈರಾಗಿ, ಒಟ್ಟು 8076 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದರು. ಎಲ್ಲ ಕೇಂದ್ರಗಳ ಸುತ್ತ ಖಾಕಿಪಡೆ ಬಂದೋಬಸ್ತ್ ಕಲ್ಪಿಸಿತ್ತು.

ಪರೀಕ್ಷೆ ಕೇಂದ್ರ ತಪ್ಪಾಗಿ ಮುದ್ರಣ: ನಗರದ ಪರೀಕ್ಷಾ ಕೇಂದ್ರದ ವಿಳಾಸ ಹಾಲ್ ಟಿಕೆಟ್ ನಲ್ಲಿ ತಪ್ಪಾಗಿ ಮುದ್ರಣಗೊಂಡ ಕಾರಣ ವಿದ್ಯಾರ್ಥಿಗಳು ಪರದಾಡುವ ಘಟನೆ ಯಾದಗಿರಿಯಲ್ಲಿ ನಡೆದುದೆ. ನಗರದ ಸಬಾ ಪಿಯು ಕಾಲೇಜು ಪರೀಕ್ಷೆ ಕೇಂದ್ರದ ವಿಳಾಸ ತಪ್ಪು ಮಾಹಿತಿ ಮುದ್ರಣವಾಗಿದ್ದು, ಯಾದಗಿರಿಯ ಲುಂಬಿನಿ ಗಾರ್ಡನ್ ಸಮೀಪ ಇರುವ ಪರೀಕ್ಷೆ ಕೇಂದ್ರವಾದ ಸಬಾ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರ ಆದರೆ ಹಾಲ್ ಟಿಕೇಟ್‌ನಲ್ಲಿ ಕಾಲೇಜಿನ (ಕೇಂದ್ರ) ವಿಳಾಸ ಎರಡು ಕಿಮೀ ದೂರದ ಗಂಜ್ ರಸ್ತೆ ಎಂದು ನಮೂದಿಸಲಾಗಿದೆ. ಗಂಜ್ ರಸ್ತೆ ಮಾರ್ಗದಲ್ಲಿ ಪರೀಕ್ಷೆ ಕೇಂದ್ರ ಇಲ್ಲ, ಆದರೆ,ತಪ್ಪು ಮಾಹಿತಿ ಮುದ್ರಣವಾಗಿ ಅಲೆದಾಡುವ ಪರಿಸ್ಥಿತಿ ಉಂಡಾಗಿದೆ ಎಂದು ವಿದ್ಯಾರ್ಥಿಗಳು ಆಕ್ರೋಶವ್ಯಕ್ತಪಡಿಸಿದರು. ಗಂಜ್ ಪ್ರದೇಶದಲ್ಲಿ ಪರೀಕ್ಷೆ ಕೇಂದ್ರ ಹುಡುಕಿ ಸ್ಥಳೀಯರಿಂದ ವಿಳಾಸ ಕೇಳಿ ಸಬಾ ಪರೀಕ್ಷೆ ಕೇಂದ್ರದತ್ತ ವಿದ್ಯಾರ್ಥಿಗಳು ಆಗಮಿಸಿ ಪರೀಕ್ಷೆಗೆ ಹಾಜರಾದರು.

ದೆಹಲಿಗೆ ಉನ್ನತ ಮಟ್ಟದ ನಿಯೋಗಕ್ಕೆ ನಿರ್ಧಾರ

◆ **ಸಿರಗುಪ್ಪ:** ಬಳ್ಳಾರಿ-ಸಿರಗುಪ್ಪ-ಸಿಂಧನೂರ್-ಲಿಂಗಸಗೂರು ರೈಲ್ವೆ ಮಾರ್ಗದ ರಚನೆಗಾಗಿ ಮಾ.9ರಿಂದ 12ರವರೆಗೆ ನಾಲ್ಕು ದಿನ ನವದೆಹಲಿಗೆ ಉನ್ನತ ಮಟ್ಟದ ನಿಯೋಗ ಹೋಗಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಯಂ.ಮಹೇಶ್ವರ ಸ್ವಾಮಿ ಹೇಳಿದರು.



ಪಟ್ಟಣದ ಖಾಸಗಿ ಹೋಟೇಲ್‌ನಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಬಳ್ಳಾರಿ ಸಿರಗುಪ್ಪ, ಸಿಂಧನೂರು, ಲಿಂಗಸುಗೂರು ನೂತನ ರೈಲ್ವೇ ಬ್ರಾಡ್ ಗೇಜ್ ನಿರ್ಮಾಣದ ಆದ್ಯತೆಯ ಪ್ರಮುಖ ಬೇಡಿಕೆಯ ಜೊತೆಗೆ ಬಳ್ಳಾರಿ ಮಾರ್ಗವಾಗಿ ನಿಲುಗಡೆ ಆಗಿರುವ ಕೊಲ್ಲಾಪುರ್-ಬೆಳಗಾವಿ ಮುನಗೂರು ಹಾಗೂ ಶಿವಮೊಗ್ಗ-ಚೆನ್ನೈ ಎಕ್ಸ್‌ಪ್ರೆಸ್ ರೈಲುಗಳನ್ನು ಪುನರ್ ಪ್ರಾರಂಭಿಸ ಬೇಕು. ಬಳ್ಳಾರಿ ಮಾರ್ಗವಾಗಿ ಬೆಂಗಳೂರಿಗೆ ಹೋಗಿಬರಲು ಉದಯ ಇಂಟರ್‌ಸಿಟಿ ಅಥವಾ ಒಂದೇ ಭಾರತ್ ರೈಲು ಆರಂಭಿಸಬೇಕು ಎನ್ನುವ ಇತರೆ ಬೇಡಿಕೆಗಳೊಂದಿಗೆ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಹಾಗೂ ಬಳ್ಳಾರಿ ಸಿರಗುಪ್ಪ, ಸಿಂಧನೂರು, ಲಿಂಗಸೂಗೂರಿನ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಮತ್ತು ವಿವಿಧ ಪಕ್ಷಗಳ ಮುಖಂಡರುಗಳ ಉನ್ನತ ಮಟ್ಟದ ನಿಯೋಗ 2026ರ ಮಾ.9ರಿಂದ 12ರವರೆಗೆ ನಾಲ್ಕು ದಿನಗಳ ಕಾಲ ಲೋಕಸಭಾ ಅಧಿವೇಶನದ ಸಮಯದಲ್ಲಿ ರೈಲ್ವೆ ಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ರೈಲ್ವೆ ಬೋರ್ಡ್ ಅಧಿಕಾರಿಗಳು ಮತ್ತು ಇತರೆ ಮಂತ್ರಿಗಳನ್ನು ಕರ್ನಾಟಕ ದ ಲೋಕಸಭಾ ಸದಸ್ಯರುಗಳ ನೇತೃತ್ವದಲ್ಲಿ ನವದೆಹಲಿಯಲ್ಲಿ ಭೇಟಿ ಮಾಡಿ, ಮನವಿ ಪತ್ರ ಅರ್ಪಿಸಿ ಈ ಭಾಗದ ರೈಲ್ವೆ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

> ⏩ **ಬಳ್ಳಾರಿ-ಸಿರಗುಪ್ಪ-ಸಿಂಧನೂರ್-ಲಿಂಗಸಗೂರು ರೈಲ್ವೆ ಮಾರ್ಗದ ರಚನೆಗೆ ಆಗ್ರಹ**

ಬಳ್ಳಾರಿ ಜಿಲ್ಲೆಯ ಮಾಜಿ ಮಂತ್ರಿಗಳಾದ ಗಾಲಿ ಜನಾರ್ದನ ರೆಡ್ಡಿ ಮತ್ತು ಬಿ.ಶ್ರೀರಾಮುಲು ಸಿರಗುಪ್ಪ ಮಾಜಿ ಶಾಸಕ ಸೋಮಲಿಂಗಪ್ಪ ಟಿ.ಎಂ ಚಂದ್ರಶೇಖರಯ್ಯ ಸ್ವಾಮಿ, ಕೊಪ್ಪಳ ಮಾಜಿ ಸಂಸದ ವಿರುಪಾಕ್ಷಪ್ಪ ಮುಂತಾದ ನಾಯಕರುನಿಯೋಗದ ನೇತೃತ್ವದೊಂದಿಗೆ ಸಿರಗುಪ್ಪದ ಮುಖಂಡರುಗಳಾದ ಬಸವರಾಜಪ್ಪ ಹಾಗೂ ಯೋಗಿರಾಜ್ ಬಳ್ಳಾರಿ ಮಾಜಿ ಜಿಲ್ಲಾ ಪರಿಷತ್ ಸದಸ್ಯ ಗೋನಾಳ್ ರಾಜಶೇಖರ ಗೌಡ, ಮಾಜಿ ಬುಡ ಅಧ್ಯಕ್ಷ ದಮ್ಮೂರ್ ಶೇಖರ್, ಮಾಜಿ ಕಾರ್ಪೋರೇಟರ್ ದಿವಾಕರ್ ಮುಂತಾದವರು ರೈಲ್ವೆ ಕ್ರಿಯಾ ಸಮಿತಿಯ ಜೊತೆಗೆ ನವದೆಹಲಿಗೆ ನಿಯೋಗದಲ್ಲಿ ಆಗಮಿಸುವುದಾಗಿ ತಿಳಿಸಿದರು.

ಮಾಜಿ ಶಾಸಕರಾದ ಟಿ.ಎಂ.ಚಂದ್ರಶೇಖರಯ್ಯ ಸ್ವಾಮಿ, ಎಂ.ಎಸ್. ಸೋಮಲಿಂಗಪ್ಪ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಚೊಕ್ಕ ಬಸವನಗೌಡ, ಮಾಜಿ ಜಿಲ್ಲಾ ಪರಿಷತ್ ಸದಸ್ಯ ಮಲ್ಲಿಕಾರ್ಜುನಯ್ಯ, ತಾಲೂಕು ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಬಸವರಾಜ, ಪ್ರಗತಿಪರ ರೈತ ಪಿ.ಯೋಗರಾಜ್, ಬಾಗಿ ರಾಘವೇಂದ್ರ, ಆರ್.ಯು.ಸಿ.ಸಿ ಸದಸ್ಯ ಕೆ.ಎಂ.ಕೊಟ್ರೇಶ್, ವಿಶ್ವಜ್ಯೋತಿ ಇಂಟರ್ ನ್ಯಾಷನಲ್ ಶಾಲೆಯ ಅಧ್ಯಕ್ಷ ಆರ್.ಬಸವಲಿಂಗಪ್ಪ, ಬಿಜೆಪಿ ತಾಲೂಕ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಇತರರು ಭಾಗವಹಿಸಿದ್ದರು.

ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ದಿವಾಳಿ: ಹಾಲಪ್ಪ



◆ **ಯಲಬುರ್ಗಾ:** ಮುಖ್ಯಮಂತ್ರಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಇದರಿಂದ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಯಲಬುರ್ಗಾ ಮಂಡಲದ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಅನೇಕ ವೈಫಲ್ಯಗಳನ್ನು ಪಟ್ಟಿ ಮಾಡಿ ಜನರ ಗಮನಕ್ಕೆ ತರುವ ಮೂಲಕ ಬಿಜೆಪಿಯನ್ನು ಮತ್ತಷ್ಟು ಸಂಘಟಿಸುವ ಕೆಲಸವನ್ನು ಪಕ್ಷದ ಎಲ್ಲ ಕಾರ್ಯಕರ್ತರು ಮುಂದಾಗಬೇಕು ಎಂದರು.

ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು 3ನೇ ಬಾರಿಗೆ ಪ್ರಧಾನಿಯಾಗಿ ಯಾವುದೇ ಭ್ರಷ್ಟಾಚಾರ ರಹಿತ ಸುಭದ್ರ ಆಡಳಿತ ನೀಡುವ ಮೂಲಕ ದೇಶದ ಜನರ ವಿಶ್ವಾಸವನ್ನು ಗಳಿಸಿಕೊಂಡಿದ್ದಾರೆ ಇದನ್ನು ಸಹಿಸದ ಕಾಂಗ್ರೆಸ್ಸಿಗರು ಬಿಜೆಪಿ ಪಕ್ಷದ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಬಿಜೆಪಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಮಂಡಲದ ಪ್ರಭಾರಿಗಳಾದ ಸುನಿಲ್ ಹೆರೂರ ಹಾಗೂ ಕೆ.ಮಹೇಶ ಎಲ್ಲರೂ ಪಕ್ಷ ಸಂಘಟನೆಗೆ ಮುಂದಾಗಿ ಎಂದರು.

ಬಿಜೆಪಿ ಮಾಜಿ ಅಧ್ಯಕ್ಷ ರತನ್ ದೇಸಾಯಿ ಅಧ್ಯಕ್ಷತೆ ವಹಿಸಿದ್ದರು.

ನೂತನ ಬಿಜೆಪಿ ರಾಜಕಾರಣಿ ಸದಸ್ಯರಾದ ಬಸವರಾಜ ಗೌರಾ, ಶಿವಲೀಲಾ ದಳವಾಯಿ, ವೀರಣ್ಣ ಹುಬ್ಬಳ್ಳಿ, ಬಸಲಿಂಗಪ್ಪ ಭೂತೆ, ಶಿವಶಂಕರ ದೇಸಾಯಿ, ಶರಣಪ್ಪ ಈಳಿಗೇರ, ಶಿವಕುಮಾರ್ ನಾಗಲಾಪುರಮಠ, ಶರಣಪ್ಪ ಬಣ್ಣದಬಾವಿ, ಮಂಜುನಾಥ ನಾಡಗೌಡ್ರು, ಅಮರೇಶ ಹುಬ್ಬಳ್ಳಿ, ಅಯ್ಯನಗೌಡ ಕೆಂಚಮ್ಮನವರ, ಶಿವಪ್ಪ ವಾದಿ, ಶಕುಂತಲಾ ಮಾಲಿಪಾಟೀಲ, ಸಂತೋಷ್ಮಾ ಜೋಶಿ, ದೊಡ್ಡಯ್ಯ ಗುರುವಿನ್, ಕಳಕಪ್ಪ ತಳವಾರ್, ಅಶೋಕ ಅರಿಕೇರಿ, ದ್ಯಾಮಣ್ಣ ಉಚ್ಚಲಕುಂಟಾ, ಸಿದ್ದು ಮಣ್ಣಿನವರ್, ಅಮೆತಪ್ಪ ಹಡಪದ, ಶ್ರೀನಿವಾಸ ತಿಮ್ಮಾಪುರ, ಹನುಮಂತ ರಾಠೋಡ, ಕಲ್ಲೇಶ ಕರಮುಡಿ, ಬಾಪುಗೌಡ ಪಾಟೀಲ, ಲಕ್ಷ್ಮಣ ಕಾಳೆ, ಸುರೇಶ ಹೊಸಳ್ಳಿ ಮತ್ತಿತರರಿದ್ದರು.

ತುಂಗಭದ್ರಾ ಜಲಾಶಯದ ಶಂಕುಸ್ಥಾಪನೆ ದಿನಾಚರಣೆ

◆ **ಬಳ್ಳಾರಿ:** ಲಕ್ಷಾಂತರ ರೈತರ ಜೀವನಾಡಿ, ತುಂಗಭದ್ರಾ ಜಲಾಶಯ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ದಿನಾಚರಣೆ ಹಿನ್ನೆಲೆಯಲ್ಲಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಶನಿವಾರ ಜಲಾಶಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ನಮ್ಮ ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಪವಿತ್ರ ದಿನ ಇದಾಗಿದೆ. ಕಳೆದ 28.2.1945ರಂದು ಜಲಾಶಯ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಇಂದಿಗೆ 81 ವರ್ಷಗಳು ಕಳೆದಿವೆ, ತಾಯಿಯ ಆಶೀರ್ವಾದದಿಂದ ನಮ್ಮ ರೈತರ ಜಮೀನುಗಳು ಹಸಿರಾಗಿವೆ. ಅನ್ನವ ನೀಡುತ್ತಾ ಎಲ್ಲರನ್ನೂ ಸುಭಿಕ್ಷೆಯಿಂದ ಇಟ್ಟಿದ್ದಾಳೆ. ಇದೇ ರೀತಿ ನಮ್ಮ ರೈತರನ್ನು ಕಾಪಾಡಲಿ ಎಂದು ಪ್ರಾರ್ಥಿಸಿದರು.

ಪ್ರತಿ ವರ್ಷ ಈ ಪವಿತ್ರ ದಿನದಂದು ತುಂಗಭದ್ರಾ ಜಲಾಶಯದ ಜಲಸಂಪನ್ಮೂಲ ಇಲಾಖೆಯ ಮತ್ತು ತುಂಗಭದ್ರಾ ಮಂಡಳಿಯ ಅಧಿಕಾರಿಗಳಿಂದ ವಿಶೇಷ ಪೂಜೆಗಳು ನೆರವೇರಲಿವೆ. ಈ ಕಾರ್ಯಕ್ರಮದಲ್ಲಿ ನಾವೆಲ್ಲರೂ ಭಾಗವಹಿಸಿ ತುಂಗಭದ್ರೆ ತಾಯಿಯನ್ನು ಸ್ಮರಿಸುತ್ತೇವೆ ಎಂದರು.

ತುಂಗಭದ್ರಾ ಮಂಡಳಿಯ ಮುಖ್ಯಾಧಿಕಾರಿ ಒಆರ್‌ಕೆ ರೆಡ್ಡಿ, ಸಹ ಕಾರ್ಯದರ್ಶಿ ಅಖಿಲ್ ಅಂಜನ್ ಸೇರಿದಂತೆ ವಿವಿಧ ಅಧಿಕಾರಿಗಳು, ತುಂಗಭದ್ರಾ ರೈತರ ಸಂಘದ ಪದಾಧಿಕಾರಿಗಳಾದ, ಕುಡಿತಿನಿ, ಎಲೆ ಪಂಪಾಪತಿ, ವೀರಭದ್ರ ನಾಯಕ್, ದರೂರು ಸಾಗರ ಗೌಡ, ಕೋಳೂರು ಚಂದ್ರಶೇಖರ್ ಗೌಡ, ರಾಜೇಗೌಡ, ಕುರುಬರ ಗಾದಿಲಿಂಗ ಮೂರ್ತಿ, ಕುರುಬರ ಹಾಗಲೂರಪ್ಪ, ಕೊಂಚಿಗೇರಿ ಗೋವಿಂದಪ್ಪ, ಎಮ್ಮಿಗನೂರು ರಾಜಸಾಬು, ಅಂಜನಪ್ಪ, ಬಸವರಾಜ ಸ್ವಾಮಿ ಸೇರಿದಂತೆ ವಿಜಯನಗರ, ಕೊಪ್ಪಳ, ರಾಯಚೂರು, ಬಳ್ಳಾರಿ ಸಮಿತಿ ಪದಾಧಿಕಾರಿಗಳು ಇದ್ದರು.



ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಅಗತ್ಯ: ಕಲ್ಲೇಶ್

◆ **ಕುಷ್ಟಗಿ:** ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ಯುವಕರ ಕ್ರೀಡಾ ಪ್ರತಿಭೆಗೆ ಉತ್ತೇಜನ ನೀಡುವ ಉದ್ದೇಶದಿಂದ ಆಯೋಜಿಸಲಾಗಿದ್ದ ಹಿರೇಮನ್ನಾಪುರ ಪ್ರೀಮಿಯರ್ ಲೀಗ್ 08 ಕ್ರಿಕೆಟ್ ಟೂರ್ನಿಯ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಸಂಭ್ರಮದ ವಾತಾವರಣದಲ್ಲಿ ನೆರವೇರಿತು.

ಕುಷ್ಟಗಿ ಪುರಸಭೆ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಕಲ್ಲೇಶ್ ತಾಳದ ಈ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.

ಮಾಜಿ ಗ್ರಾಪಂ ಅಧ್ಯಕ್ಷ ಇಮಾಮ್ ಸಾಬ ಗರಡಿಮನಿ, ಮಾಜಿ ಉಪಾಧ್ಯಕ್ಷ ಪ್ಯಾಟೆಪ್ಪ ಸೂಡಿ, ಮೈದಾನ ದಾನಿಗಳಾದ ಅಂಚಾಳಪ್ಪ ಗುರಿಕಾರ, ಬಾಲಪ್ಪ ಗುರಿಕಾರ ಹಾಗೂ ತಂಡಗಳ ಮಾಲೀಕರಾದ ಪರಸಪ್ಪ ಅಳ್ಳಳ್ಳಿ,ಶಿವು ಭೋವಿ,ಶರಣಪ್ಪ ಬ್ಯಾಳಿ,ಇಮ್ರಾನ್ ಹುಸೇನ್ ಬಜಾರಮನಿ, ಶಂಕ್ರಪ್ಪ ತಾವರಗೇರಾ,ದೇವಣ್ಣ ಸುಬೇದಾರ,ಪ್ರಕಾಶ್ ಸುಗರಿ,ಚಂದ್ರು ಬ್ಯಾಳಿ, ಶಿವು ತಾವರಗೇರಾ ಇತರರಿದರು.

ಟೂರ್ನಿಯ ಫೈನಲ್ ಪಂದ್ಯದಲ್ಲಿ ಸಾನ್ವಿ ಸ್ಟಾರ್ ತಂಡ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿದ್ದು, ಜೈ ಜವಾನ್ ಜೈ ಕಿಸಾನ್ ತಂಡ ದ್ವಿತೀಯ ಸ್ಥಾನ ಹಾಗೂ ರಾಯಲ್ ಚಾಲೆಂಜರ್ ತಂಡ ತೃತೀಯ ಸ್ಥಾನ ಪಡೆದವು.



ವೈಯಕ್ತಿಕ ವಿಭಾಗದಲ್ಲಿ ಉತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿ ಕುಮಾರ್ ಪಿ ಹರಿಜನ್ ಅವರಿಗೆ ಲಭಿಸಿತು. ಉತ್ತಮ ಬೌಲರ್ ಹಾಗೂ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿಯನ್ನು ಯಮನೂರ ಲೈನದ್ ಪಡೆದುಕೊಂಡರು. ಅಂತಿಮ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ ರವಿಚಂದ್ರ (ಬಿಜಿ ಪೊಲೀಸ್) ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಭಾಜನರಾದರು.

ಟೂರ್ನಿಯನ್ನು ಜೈ ಶ್ರೀರಾಮ್ ಬಾಯ್ಸ್ ತಂಡದ ಯುವಕರು ಯಶಸ್ವಿಯಾಗಿ ಸಂಘಟಿಸಿದ್ದು, ಕಿರಣ್ ಸೂಡಿ, ವಸಂತ ನಾಯಕ, ವಿನಯ್ ತೋಟದ, ಅಭಿಷೇಕ ಟಿ., ರಮೇಶ್ ನಾಯಕ, ಪ್ರದೀಪ್ ನಾಯಕ, ವಿಕಾಸ್ ನಾಯಕ, ವಿಶಾಲ ಮದರ, ಅಪ್ಪಾಜಿ ಪತ್ತಾರ, ಬಸವರಾಜ, ಅಕ್ಬರ, ಚಂದ್ರು ಕೌದಿ, ಮಹೇಶ ತೋಟದ, ಮೇಘರಾಜ,, ಸಂಜಯ್ ಮರದ ಹಾಗೂ ಶರಣು ಭೋವಿ ಸೇರಿದಂತೆ ಹಲವರು ಶ್ರಮಿಸಿದರು.

ಅನಧಿಕೃತ ಹೋಂಸ್ಟೇ, ರೆಸಾರ್ಟ್‌ಗಳ ಮೇಲೆ ಕ್ರಮ

◆ **ಕೊಪ್ಪಳ:** ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ತಾಲೂಕಿನಲ್ಲಿ ಬರುವ ಅನಧಿಕೃತ ಹೋಂಸ್ಟೇ ಮತ್ತು ರೆಸಾರ್ಟ್‌ಗಳ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲೆಯ ಕೊಪ್ಪಳ ತಾಲೂಕಿನಲ್ಲಿ 10 ಮತ್ತು ಗಂಗಾವತಿ 3 ಸೇರಿ ಒಟ್ಟು 13 ಅಧಿಕೃತ ರೆಸಾರ್ಟಗಳಿವೆ. ಅದೇ ರೀತಿ ಕೊಪ್ಪಳ ತಾಲ್ಲೂಕಿನಲ್ಲಿ 47 ಹೋಂಸ್ಟೇ ಹಾಗೂ 40 ರೆಸಾರ್ಟಗಳು ಮತ್ತು ಗಂಗಾವತಿ ತಾಲ್ಲೂಕಿನ 6 ಹೋಂಸ್ಟೇ ಹಾಗೂ 43 ರೆಸಾರ್ಟ್‌ಗಳು ಸೇರಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 53 ಹೋಂಸ್ಟೇಗಳು 83 ರೆಸಾರ್ಟ್‌ಗಳು ಅನಧಿಕೃತವಾಗಿದ್ದು, ಈ ಎಲ್ಲಾ ಅನಧಿಕೃತ ಹೋಂಸ್ಟೇ ಮತ್ತು ರೆಸಾರ್ಟಗಳಿಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಕೊಪ್ಪಳ ತಾಲ್ಲೂಕಿನ 28 ಹಾಗೂ ಗಂಗಾವತಿ 87 ಸೇರಿ ಒಟ್ಟು 105 ಅನಧಿಕೃತ ಹೋಂಸ್ಟೇ ಮತ್ತು ರೆಸಾರ್ಟಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ. ಕೊಪ್ಪಳ ತಾಲ್ಲೂಕಿನ 37 ಹೋಂಸ್ಟೇ ಮತ್ತು ರೆಸಾರ್ಟಗಳ ಗ್ರಾಮ ಪಂಚಾಯತ್ ನಿರಾಕ್ಷೇಪಣಾ ಪತ್ರ ರದ್ದು ಪಡಿಸಲಾಗಿದೆ. ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಗಂಗಾವತಿ ತಾಲ್ಲೂಕಿನ 5 ರೆಸಾರ್ಟಗಳನ್ನು ತೆರವುಗೊಳಿಸಲಾಗಿದೆ. ಕೊಪ್ಪಳ ತಾಲ್ಲೂಕಿನ 5 ಮತ್ತು ಗಂಗಾವತಿ ತಾಲ್ಲೂಕಿನ 20 ಹೋಂಸ್ಟೇ, ರೆಸಾರ್ಟಗಳಿಗೆ ಸಂಬಂಧಿಸಿದಂತೆ 25 ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇವೆ.

ಕೊಪ್ಪಳ ತಾಲ್ಲೂಕಿನ ವಿದ್ಯುತ್ ಸಂಪರ್ಕ ಕಡಿತ ಮತ್ತು ಗ್ರಾಮ ಪಂಚಾಯತ್ (ಎನ್.ಓ.ಸಿ) ರದ್ದಿನೊಂದಿಗೆ ಒಟ್ಟು 40 ರೆಸಾರ್ಟಗಳನ್ನು ಮತ್ತು ಒಟ್ಟು 4 ಹೋಂಸ್ಟೇಗಳನ್ನು ಬಂದ್ ಮಾಡಿ ಸೀಜ್ ಮಾಡಲಾಗಿದೆ.

1062 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಜಿಲ್ಲೆಯಾದ್ಯಂತ ಸುಸೂತ್ರವಾಗಿ ನಡೆದ ಪಿಯುಸಿ ಪರೀಕ್ಷೆ

◆ **ಕಲಬುರಗಿ:** ಜಿಲ್ಲೆಯಾದ್ಯಂತ ಪ್ರಸಕ್ತ ಸಾಲಿನ ಪಿಯುಸಿ ವಾರ್ಷಿಕ ಪರೀಕ್ಷೆಗಳು ಯಾವುದೇ ಅಡೆತಡೆಗಳಿಲ್ಲದೆ ಸುಸೂತ್ರವಾಗಿ ನೆರವೇರಿದವು. ಜಿಲ್ಲೆಯ ಒಟ್ಟು 51 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದು, ಒಟ್ಟು 17,536 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. 1062 ಕನ್ನಡ ಭಾಷಾ ವಿದ್ಯಾರ್ಥಿಗಳು ವಿವಿಧ ಕಾರಣಗಳಿಂದ ಗೈರಾಗಿದ್ದಾರೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.



ಪರೀಕ್ಷೆಗಳ ಪಾರದರ್ಶಕತೆ ಮತ್ತು ಶಿಸ್ತು ಕಾಪಾಡುವ ಉದ್ದೇಶದಿಂದ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿತ್ತು.ನಿಯಮಾವಳಿಯಂತೆ ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮರಾಗಳ ದೃಶ್ಯಾವಳಿಗಳನ್ನು ನಗರದ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ನೇರ ವೀಕ್ಷಣೆ ಮಾಡಲಾಯಿತು. ಅಧಿಕಾರಿಗಳು ನಿರಂತರ ಮೇಲ್ವಿಚಾರಣೆ ನಡೆಸಿ ಪರೀಕ್ಷಾ ಪ್ರಕ್ರಿಯೆ ಸುಗಮವಾಗಿ ಸಾಗುವಂತೆ ನೋಡಿಕೊಂಡರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿಗಳು ಶಾಂತ ವಾತಾವರಣದಲ್ಲಿ ಪರೀಕ್ಷೆ ಬರೆಯಲು ಅನುಕೂಲ ಕಲ್ಪಿಸಲಾಯಿತು. ಯಾವುದೇ ಅಕ್ರಮ ಅಥವಾ ಅಹಿತಕರ ಘಟನೆಗಳು ವರದಿಯಾಗಿಲ್ಲವೆಂದು ಅಧಿಕಾರಿಗಳು ತಿಳಿಸಿದ್ದಾರೆ. ಮನೆ ಮನೆಗೆ ಭೇಟಿ ನೀಡಿ ಪರೀಕ್ಷೆಗೆ ಹಾಜರಾಗುವಂತೆ ಹೇಳಲಾಗಿತ್ತು. ಆದರೂ,1062 ವಿದ್ಯಾರ್ಥಿಗಳು ಗೈರಾಗಿದ್ದಾರೆ.ಓದು ಮಾಡದೇ ಇರುವುದು, ವೈಯಕ್ತಿಕ ಕಾರಣದಿಂದ ಪರೀಕ್ಷೆಗೆ ಗೈರಾಗಿದ್ದಾರೆ ಎಂದು ಡಿಡಿಪಿಯು ಸುರೇಶ್ ಅಕ್ಕಣ್ಣ ತಿಳಿಸಿದರು.

ಕಿರುಸುದ್ದಿ

ಹೆತ್ತ ತಾಯಿ ಹೊತ್ತ ನಾಡಿನ ಬಗ್ಗೆ ಗೌರವವಿರಲಿ



ಮುಂಡಗೋಡ: ಕನ್ನಡ ಭಾಷೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯಬೇಕು ಹೆತ್ತ ತಾಯಿ ಹೊತ್ತ ನಾಡಿನ ಬಗ್ಗೆ ಗೌರವವಿರಬೇಕು ಎಂದು ಮಾಜಿ ಶಾಸಕ ವಿ.ಎಸ್.ಪಾಟೀಲ ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ರೋಟರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ನೀಲಮ್ಮ ಗೌಡಶಾನಿ ಮತ್ತು ದಿ.ಶಿವನಗೌಡ ಪಾಟೀಲ ಅವರ ದತ್ತಿ ನಿಧಿ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಮಕ್ಕಳು ಮುಂದಿನ ಉತ್ತಮ ಪ್ರಜೆಗಳಾಗಿ ಬಾಳಬೇಕು. ನಾಡು ಮತ್ತು ನುಡಿ ಸೇವೆಗಾಗಿ ಸದಾ ಸಿದ್ಧರಿರಬೇಕು. ತಂದೆ-ತಾಯಿಗಳನ್ನು ಗೌರವಿಸಬೇಕು. ನಮ್ಮ ತಾಯಿಯವರ ದತ್ತಿ ನಿಧಿ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಅಭಿನಂದನಾರ್ಹ ಎಂದರು. ಎಮ್.ಇ.ಎಸ್. ಅಧ್ಯಕ್ಷ ಡಾ.ಎಂ.ಸಿ. ಜಂಬಗಿ, ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ, ಡಾ. ಪಿ.ಪಿ.ಛಬ್ಬಿ ಮಾತನಾಡಿದರು. ತಾಲೂಕಿನ ಇಂದೂರಿನ ಸಾಹಿತಿ ಚಿದಾನಂದ ಪಾಟೀಲ ಕನ್ನಡ ಸಾಹಿತ್ಯಕ್ಕೆ ವೀರಶೈವರ ಕೊಡುಗೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ವಿ.ಎಸ್. ಪಾಟೀಲ, ಡಾ.ಎಂ.ಸಿ. ಜಂಬಗಿ, ರೋಟರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಜಿ. ಎನ್.ಕುಲಕರ್ಣಿ ಇವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಗಪ್ಪ ಕೋಳುರ, ಎಸ್.ಬಿ.ಹೂಗಾರ, ಸುಭಾಸ ವಡ್ಡರ, ಸಿ.ಎನ್.ಸುರಕೋಡ, ಎಸ್.ಡಿ.ಮುಡೆಣ್ಣವರ ಇದ್ದರು. ರೋಟರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಗೌರವ ಕಾರ್ಯದರ್ಶಿ ಎಸ್.ಡಿ.ಮುಡೆಣ್ಣವರ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ವಂದಿಸಿದರು.

ಸುಗ್ಗಿ ಕುಣಿತಕ್ಕೆ ಸಜ್ಜಾದ ಅಂಕೋಲಾ

ನಾಗರಾಜ ಶೆಟ್ಟಿ

ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಹೋಳಿ ಹಬ್ಬ ಸುಗ್ಗಿ ಕುಣಿತದ ಮೂಲಕ ಮೂಲಕ ಗುರುತಿಸಿಕೊಂಡಿದ್ದು, ಹಲವು ತಲೆಮಾರುಗಳಿಂದ ಆಚರಿಸುತ್ತ ಬರಲಾಗುತ್ತಿರುವ ಸುಗ್ಗಿ ಕುಣಿತ ಮನರಂಜನಾತ್ಮಕ ಜಾನಪದ ಕಲೆ ಮಾತ್ರ ಆಗಿರದೇ ಊರಿನ ಒಳಿತಿಗಾಗಿ ನಡೆಯುವ ದೈವೀ ಆರಾಧನೆಗಾಗಿ ಆಚರಿಸಲ್ಪಡುವುದು ವಿಶೇಷ.

ತಾಲೂಕಿನಲ್ಲಿ ಹಾಲಕ್ಕಿ ಒಕ್ಕಲಿಗರು, ಕ್ಷತ್ರೀಯ ಕೋಮಾರ ಪಂಥರು, ಈಡಿಗ ನಾಮಧಾರಿಗಳು ಮತ್ತು ಹಳ್ಳೇರರಲ್ಲಿ ಸುಗ್ಗಿ ಕಟ್ಟುವ ಸಂಪ್ರದಾಯವಿದ್ದು, ಬೆಳಂಬಾರದ ಹಾಲಕ್ಕಿ ಒಕ್ಕಲಿಗರು ಪ್ರತಿ ವರ್ಷ ಸುಗ್ಗಿ ಕುಣಿತ ನಡೆಸುತ್ತಿದ್ದು ಉಳಿದಂತೆ ಆಯಾ ಹಳ್ಳಿಗಳ ಹಕ್ಕುದಾರರು, ಗುರುಮನೆ, ಮೇತ್ರಿಮನೆ, ಬುಧವಂತರು, ಕೋಲಕಾರರು ಆಯಾ ಸಮಾಜದ ಪ್ರಮುಖರು ಸುಗ್ಗಿ ಕಟ್ಟುವ ಕುರಿತು ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.

ಗ್ರಾಮೀಣ ಭಾಗಗಳ ಪ್ರಮುಖ ಧಾರ್ಮಿಕ ಸ್ಥಾನಗಳಾಗಿರುವ ಮಹಾಸತಿ ಗುಡಿ, ಮಂಡದ ಮನೆಗಳಿಂದ ಆರಂಭವಾಗುವ ಸುಗ್ಗಿ ಕುಣಿತ ಕರಿದೇವರ ಸ್ಥಾನದಲ್ಲಿ ಅಂತ್ಯಗೊಳ್ಳುತ್ತದೆ. ಅಂಕೋಲಾ ತಾಲೂಕಿನಲ್ಲಿ ಹೋಳಿ ಹಬ್ಬವನ್ನು ಸುಗ್ಗಿಹಬ್ಬ ಎಂದೇ ಕರೆಯಲಾಗುತ್ತಿದೆ.

ಸಾಮಾನ್ಯವಾಗಿ ಹೋಳಿ ಹಬ್ಬಕ್ಕಿಂತ ಒಂದು ವಾರದ ಮೊದಲೇ ಸುಗ್ಗಿ ಕುಣಿತದ ಆಚರಣೆ ಆರಂಭವಾಗುತ್ತಿದ್ದು ಸುಗ್ಗಿ ತಂಡದಲ್ಲಿ ಒಂದು ಹಳ್ಳಿಯ ಒಂದು ಜನಾಂಗದ ಪ್ರತಿ ಮನೆಯ ಸದಸ್ಯರು ಸುಗ್ಗಿ ತಂಡದ ಭಾಗವಾಗಿರುತ್ತಾರೆ ಸುಗ್ಗಿ ಕಟ್ಟುವವರು ಮತ್ತು ಅವರ ಕುಟುಂಬ ಕೆಲವು ನಿಯಮಗಳನ್ನು ಚಾಚು ತಪ್ಪದೇ ಪಾಲಿಸಬೇಕಾಗುತ್ತಿದ್ದು ಸುಗ್ಗಿ ಕಟ್ಟುವವರು ವ್ಯಸನಗಳಿಂದ ದೂರವಿದ್ದು ಮಾಂಸಾಹಾರ ತ್ಯಜಿಸಿ ಸಾತ್ವಿಕ ಆಹಾರಗಳನ್ನು ಮಾತ್ರ ಸೇವಿಸಬೇಕು, ಸುಗ್ಗಿ ಕುಣಿತ ಮುಗಿಯುವ ವರೆಗೆ ಮನೆಯಿಂದ ಹೊರಗೆ ಇದ್ದು, ಸ್ಥಳೀಯ ದೇವಾಲಯಗಳಲ್ಲಿ ವಾಸವಿರಬೇಕು ಇತ್ತೀಚಿನ ದಿನಗಳಲ್ಲಿ ನಿಯಮಗಳಲ್ಲಿ ಸ್ವಲ್ಪ ಸಡಿಲಿಕೆ ಕಂಡು ಬರುತ್ತಿದ್ದರೂ ಹಿಂದಿನ ದಿನಗಳಲ್ಲಿ ಈ ಕಟ್ಟುಪಾಡುಗಳನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸಲಾಗುತಿತ್ತು. ಸುಗ್ಗಿ ಕಾಲ ಎಂದರೆ ಸಂತೋಷ ಮತ್ತು ಸಮೃದ್ಧಿಯ ದಿನಗಳಾಗಿದ್ದು, ಸುಗ್ಗಿ ಕುಣಿತವನ್ನು ಕೆಡಕು ದೂರವಾಗಿ ಊರಿಗೆ ಒಳಿತಾಗಲಿ ಹೊಲ ಗದ್ದೆಗಳಲ್ಲಿ ಬೆಳೆದ ಬೆಳೆ ಕೊಯ್ಲು ಮುಗಿದು ಧಾನ್ಯ ಮನೆಗೆ ಸೇರಿದ ಸಂಭ್ರಮದ ಜೊತೆಯಲ್ಲಿ ಮುಂದಿನ ಸಾಲಿನ ಬೇಸಾಯಕ್ಕೆ ಸಿದ್ಧರಾಗುವ ಪೂರ್ವದಲ್ಲಿ ಊರಲ್ಲಿ ಯಾವುದೇ ರೀತಿಯ ರೋಗ ರುಜಿನಗಳು ಭಾದಿಸದಂತೆ ಹಾಗೂ ಕಾಲಕ್ಕೆ ಸರಿಯಾಗಿ ಮಳೆ ಸುರಿದು ಕೃಷಿ ಕಾರ್ಯಗಳು ಉತ್ತಮ ರೀತಿಯಲ್ಲಿ ನಡೆದು ಬದುಕಿನಲ್ಲಿನ ಕಷ್ಟ ಕಾರ್ಪಣ್ಯಗಳು ದೂರವಾಗಿ ಕುಟುಂಬ ಮತ್ತು ಸಮಾಜದಲ್ಲಿ ಸಮೃದ್ಧಿ ನೆಲೆಸಲಿ ಎಂಬ ಆಶಯವನ್ನು ಹೋಳಿ ಸಂದರ್ಭದಲ್ಲಿ ನಡೆಯುವ ಸುಗ್ಗಿ ಕುಣಿತ ಹೊಂದಿದೆ.



ಕುಂಚ ಮೇಳ

ಸಾಂಪ್ರದಾಯಿಕ ಜಾನಪದ ಹಾಡುಗಳು, ಗುಮಟೆ ವಾದನದೊಂದಿಗೆ ಬಣ್ಣ ಬಣ್ಣದ ತುರಾಯಿಗಳೊಂದಿಗೆ ಕೆಲವು ತಂಡಗಳು ಸುಗ್ಗಿ ಕುಣಿತ ನಡೆಸಿದರೆ ಹಾಲಕ್ಕಿ ಒಕ್ಕಲಿಗರ ಕೆಲವು ತಂಡಗಳು ಕೈಯಲ್ಲಿ ಕುಂಚ ಹಿಡಿದು ದೊಡ್ಡ ಗಾತ್ರದ ಮದ್ದಲೆ, ತಾಳಗಳ ನಾದಕ್ಕೆ ಲಯಬದ್ಧ ಕುಣಿತದ ಪ್ರದರ್ಶನ ನೀಡುತ್ತವೆ ಕೋಲಾಟದ ತಂಡಗಳನ್ನು ಕೋಲುಮೇಳವೆಂದು ಕುಂಚದ ತಂಡಗಳನ್ನು ಕುಂಚ ಮೇಳವೆಂದು ಕರೆಯುತ್ತಾರೆ.

ಕಾಳಿ ನದಿ ಯೋಜನೆ: ಮುಂದುವರಿದ ಪಾದಯಾತ್ರೆ



ಹಳಿಯಾಳ: ಕಾಳಿ ನದಿ ಯೋಜನೆ ಜಾರಿಗೆ ಆಗುತ್ತಿರುವ ವಿಳಂಬ ವಿರೋಧಿಸಿ ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾತ್ರೆ ಎರಡನೇ ದಿನವೂ ಮುಂದುವರೆದಿದೆ.

ಎರಡನೇ ದಿನದ ಪಾದಯಾತ್ರೆ ಪ್ರದಾನಟ್ಟಿ, ಹೊಸುರ, ತತ್ವಣಗಿ, ಅಮ್ಮನಕೊಪ್ಪ, ಜೋಗನಕೊಪ್ಪ, ಎನ್.ಎಸ್.ಕೊಪ್ಪ, ಗೋಲೆಹಳ್ಳಿ, ಮುಂಡವಾಡ ಗ್ರಾಮಗಳ ಮೂಲಕ ಸಾಗಿದ್ದು, ಗ್ರಾಮಸ್ಥರು ಪಾದಯಾತ್ರಿಕರನ್ನು ಸ್ವಾಗತಿಸಿದರು. ಯೋಜನೆ ತ್ವರಿತ ಜಾರಿಗೆ ಆಗ್ರಹಿಸಿ ಸ್ಥಳೀಯರು ಬೆಂಬಲ ಸೂಚಿಸಿದರು. ರಾತ್ರಿ ಮುರ್ಕವಾಡದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ನಂತರ ಮುರ್ಕವಾಡ ಗ್ರಾಮದಲ್ಲಿ ಪಾದಯಾತ್ರಿಕರು ವಾಸ್ತವ್ಯ ಮಾಡಿದ್ದಾರೆ.

ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಮಾತನಾಡಿ, ಯೋಜನೆಗೆ ಸ್ಪಷ್ಟ ಗಡುವು ಪ್ರಕಟಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ನೀರಾವರಿ ಸೌಲಭ್ಯ ಸಿಗುವವರೆಗೆ ಹೋರಾಟ ಹಿಂತೆಗೆದುಕೊಳ್ಳುವುದಿಲ್ಲ ಎಂದು ಎಚ್ಚರಿಸಿದರು.

ಮೊದಲ ದಿನದ ಪಾದಯಾತ್ರೆಯ ವೇಳೆ ರೈತ ಬಾಂಧವರ ನೀರಸ ಪ್ರತಿಕ್ರಿಯೆಯಿಂದ ಸವಾಲಾಗಿದ್ದ ಪಾದಯಾತ್ರೆ ಶನಿವಾರ ಗಲ್ಲಿ ಗಲ್ಲಿಗಳಿಂದ ಜನ ಹೊರಟು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಮುಂದಿನ ಗ್ರಾಮದವರೆಗೂ ಪಾದಯಾತ್ರೆಗೆ ಸಾಥ್ ನೀಡಿ ಎಲ್ಲರೂ ಜೊತೆಗಿದ್ದೇವೆ ಎನ್ನುವ ಸಂದೇಶ ನೀಡಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಅಶೋಕ ಮೇಟಿ, ಬೀದರ ಜಿಲ್ಲೆಯ ರಾಜ್ಯ ರೈತ ಸಂಘಟನೆಯ ಕಾರ್ಯದರ್ಶಿ ಮಹೇಶ ಸುಭೇದಾರ, ವಿಜಯ ಭರತ್, ಸಾತುರಿ ಗೋಡಿಮನಿ, ರಾಮದಾಸ್ ಬೆಳಗಾಂಕರ, ನಕುಲ ಕೆಂಚನವರ, ಇನ್ನಿತರ ರೈತ ಮುಖಂಡರು ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಕುಮಟಾ: ಉಪವಿಭಾಗದ ಗೋಕರ್ಣ ಶಾಖೆಯ ಬಂಕಿಕೊಡ್ಲ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ 11ಕೆ.ವಿ ಬಂಕಿಕೊಡ್ಲ ಫೀಡರಿನ ವ್ಯಾಪ್ತಿಯ ಬಂಕಿಕೊಡ್ಲ, ಹನೆಹಳ್ಳಿ, ಕಡಿಮೆ, ಗೊನೆಹಳ್ಳಿ, ಹಿತ್ತಲಮಕ್ಕಿ ಕ್ರಾಸ್‌ವರೆಗಿನ ಎಲ್ಲಾ ಭಾಗಗಳಲ್ಲಿ ಮಾ.2ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಈ ಭಾಗದ ಗ್ರಾಹಕರು ಸಹಕರಿಸ ಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಹೆಸ್ಕಾಂ, ಕುಮಟಾ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೋಟರಿ ಸಂಸ್ಥೆಯ ಕಾರ್ಯ ಶ್ಲಾಘನೀಯ

ಶಿರಸಿ: ಜಾಗತಿಕ ಮಟ್ಟದಲ್ಲಿ ಸಮಾಜದ ಅವಶ್ಯಕತೆಗಳಿಗೆ ಸ್ಪಂದಿಸುವ ಮೂಲಕ ರೋಟರಿ ಸಂಸ್ಥೆ ಸೇವೆಗೆ ಪರ್ಯಾಯ ಅರ್ಥ ಕಲ್ಪಿಸಿದೆಎಂದು ರೋಟರಿ ಸಂಸ್ಥೆಯ ಅಂತಾರಾಷ್ಟ್ರೀಯ ನಿರ್ದೇಶಕ ರೋ.ಕೆ.ಪಿ. ನಾಗೇಶ ಹೇಳಿದರು.

ಸ್ಕೊಡ್‌ವೆಸ್ ಸಂಸ್ಥೆ, ರೋಟರಿ ಬೆಂಗಳೂರು ಹೈಗ್ರೌಂಡ್ಸ್ ಮತ್ತು ರೋಟರಿ ಬೆಂಗಳೂರು ಗಂಧದಗುಡಿ ವಿಭಾಗದ ಸಹಯೋಗದಲ್ಲಿ ವಾನಳ್ಳಿ ಗ್ರಾಪಂ ವ್ಯಾಪ್ತಿಯ ಕಕ್ಕಳ್ಳಿ ಮತ್ತು ಮುಷ್ಕಿಯಲ್ಲಿ ನಡೆದ 'ಮೂರು ಮತ್ತು ನಾಲ್ಕನೇ ಸೋಲಾರ್ ಗ್ರಾಮ' ಯೋಜನೆಯನ್ನು ಉದ್ಘಾಟಿಸಿ ಸೌರದೀಪಗಳನ್ನು ವಿತರಿಸಿ ಮಾತನಾಡಿದರು.

ಪಶ್ಚಿಮ ಘಟ್ಟಗಳು ಜಾಗತಿಕ ಮಟ್ಟದ ಮನ್ನಣೆಯನ್ನು ಪಡೆದ ಪ್ರದೇಶಗಳಾಗಿದ್ದು, ಜಾಗತಿಕ ತಾಪಮಾನ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಪಶ್ಚಿಮ ಘಟ್ಟಗಳ ಅವಲಂಬಿತ ಸಮುದಾಯಗಳ ಬಲವರ್ಧನೆಗೆ ರೋಟರಿ ಸಂಸ್ಥೆ ಕೈ ಜೋಡಿಸಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವೆಂಕಟೇಶ ನಾಯ್ಕ, ಹಲವಾರು ಸಮಸ್ಯೆಗಳಿಗೆ ಉತ್ತರ ಕನ್ನಡ ಜಿಲ್ಲೆ ಇಂದಿಗೂ ಉತ್ತರ ಕಾಣದ ಜಿಲ್ಲೆಯಾಗಿಯೇ ಉಳಿದಿದೆ. ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಅನುಷ್ಠಾನ ಕೊರತೆಯಲ್ಲಿ ನ್ಯೂನತೆಗಳು ಇರುವುದರಿಂದ ರೋಟರಿಯಂತಹ ಸಂಸ್ಥೆಗಳ ಸಹಾಯ ಅತ್ಯಗತ್ಯ ಎಂದರು.

ಮುಖ್ಯ ಅತಿಥಿಗಳಾಗಿ ರೋಟರಿ ಬೆಂಗಳೂರು ಹೈಗ್ರೌಂಡ್ಸ್ ನಿಕಟಪೂರ್ವ ಅಧ್ಯಕ್ಷ ರೋ. ಸನತ್ ಕುಮಾರ್, ಕಾಮಧೇನು ಚೇರ್ ಡಿಸ್ಟ್ರಿಕ್ಟ್ 3191 ಮತ್ತು 3192ನ ರೋ. ಕೆ.ಸಿ. ಜಯರಾಮ್, ಅಧ್ಯಕ್ಷ ರೋ. ಅಶ್ವಿನ್ ವಿ.ಎಸ್., ಸಲಹೆಗಾರರಾದ ರೋ. ಜಯಪ್ರಕಾಶ, ಉಪಾಧ್ಯಕ್ಷ ರೋ. ಎಮ್.ಜಯರಾಮು, ಖಜಾಂಚಿ ರೋ. ದಿನಕರ, ಬುಲೆಟಿನ್ ಎಡಿಟರ್ ರೋ. ರಾಜಶೇಖರ, ವೊಕೇಷನಲ್ ಸರ್ವಿಸ್ ಡೈರೆಕ್ಟರ್ ರೋ. ನಟರಾಜ ನಾಯ್ಕ, ಎಂಗೇಜ್‌ಮೆಂಟ್ ಚೇರ್ ರೋ. ಸುವರ್ಣ ಜಯರಾಮು, ಸ್ಪೇಷಲ್ ಪ್ರಾಜೆಕ್ಟ್ ಚೇರ್ ರೋ. ಚಂದ್ರಶೇಖರ್ ಕೆ.ಎ., ಮೀಡಿಯಾ ಡೈರೆಕ್ಟರ್ ರೋ. ಶುಭಂ, ರೋಟರಿ ಬೆಂಗಳೂರು ಗಂಧದಗುಡಿಯ ನಿಕಟಪೂರ್ವ ಅಧ್ಯಕ್ಷ ರೋ. ವಿಜಯರಾಜ್ ಸಿಸೋಡಿಯಾ, ರೋ. ಸುಂದರ್ ರಾಜ್ ಪಾತಿ, ರೋ. ಶ್ರೀಕಾಂತ್ ತಾಕೇಲ್, ಕಾರ್ಯದರ್ಶಿ ರೋ. ಅರುಣ್ ಕುಮಾರ್ ಹಾಗೂ ವಾನಳ್ಳಿ ಪಂಚಾಯತ್‌ನ ಮಾಜಿ ಉಪಾಧ್ಯಕ್ಷ ಜಯರಾಮ್ ಹೆಗಡೆ ಉಪಸ್ಥಿತರಿದ್ದು, ಸಂದರ್ಭೋಚಿತವಾಗಿ ಮಾತನಾಡಿದರು.



ಈ ಸಂದರ್ಭದಲ್ಲಿ 150ಕ್ಕೂ ಹೆಚ್ಚಿನ ಮನೆಗಳಿಗೆ ಉಚಿತ ಸೌರ ದೀಪಗಳನ್ನು ವಿತರಿಸಲಾಯಿತು. ನಂತರದಲ್ಲಿ ಉಚಿತ ಆಟ-ಪಾಠೋಪಕರಣಗಳನ್ನು ವಿತರಿಸಲಾಯಿತು. ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯಕ್ರಮಾಧಿಕಾರಿ ಡಾ.ನಾರಾಯಣ ಹೆಗಡೆ ಕಾರ್ಯಕ್ರಮ ನಿರ್ವಹಿಸಿ, ಸ್ವಾಗತಿಸಿ, ವಂದಿಸಿದರು.

ವಿಠ್ಠಲ-ರುಕ್ಮಿಣಿ ದಿಂಡಿ ಉತ್ಸವ ಸಂಭ್ರಮ



ಬನವಾಸಿ: ಇಲ್ಲಿಯ ನಾಮದೇವ ಕಲ್ಯಾಣ ಮಂಟಪದಲ್ಲಿನ ಶ್ರೀ ವಿಠ್ಠಲ ರುಖುಮಾಯಿ ದೇವಾಲಯದಲ್ಲಿ ಎರಡು ದಿನಗಳ ಕಾಲ ನಡೆದ ವಿಠ್ಠಲ-ರುಕ್ಮಿಣಿ ದಿಂಡಿ ಉತ್ಸವ ಶನಿವಾರ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಉತ್ಸವದ ಎರಡನೇ ದಿನ ಬೆಳಗ್ಗೆ ವಿಠ್ಠಲ-ರುಕ್ಮಿಣಿ ಮೂರ್ತಿಗಳಿಗೆ ಅಭಿಷೇಕ,ವಿಶೇಷ ಅಲಂಕಾರ, ಪೂಜೆ, ಕಾಕಡಾರತಿ ನೆರವೇರಿಸಲಾಯಿತು. ಬಳಿಕ ಶ್ರೀ ದೇವರ ರಾಜ ಬೀದಿ ಉತ್ಸವ ಸಂಭ್ರಮದಿಂದ ಜರುಗಿತು. ಪಲ್ಲಕ್ಕಿಯಲ್ಲಿ ವಿಠ್ಠಲ-ರುಕ್ಮಿಣಿ ಹಾಗೂ ಸಂತ ಜ್ಞಾನೇಶ್ವರಿ ಕೃತಿಯನ್ನು ಪ್ರತಿಷ್ಠಾಪಿಸಿ, ವಿಠ್ಠಲ ರುಖುಮಾಯಿ ದೇವಸ್ಥಾನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಾಯಿತು. ನಾಮದೇವ ಸಿಂಪಿ ಸಮಾಜ ಬಾಂಧವರು ತಾಳ, ಮೃದಂಗ ಬಾರಿಸುತ್ತ ಅಭಂಗಗಳನ್ನು ಹಾಡುತ್ತ ಸಾಗಿದರೆ, ದಾರಿಯುದ್ದಕ್ಕೂ ಭಕ್ತರು ಪೂಜೆ ಸಲ್ಲಿಸಿದರು. ಬಳಿಕ ದೇವಾಲಯದಲ್ಲಿ ಕಾಲಾ ಕೀರ್ತನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಅನ್ನಸಂತರ್ಪಣೆ ನಡೆಯಿತು.

ಕಾರ್ಯಕ್ರಮದಲ್ಲಿ ನಾಮದೇವ ಸಿಂಪಿ ಸಮಾಜ ಬಾಂಧವರು ಉಪಸ್ಥಿತರಿದ್ದರು.



ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	6052	6052
ಕಡಲೆಬೇಳೆ	6500	6500
ಕಡಲೆಕಾಳು	1101	5810
ಉದ್ದಿನಕಾಳು	5116	7181
ಧನಿಯಾ (ಕೊತ್ತಂಬರಿ ಬೀಜ)	9801	9801
ಒಣ ಮೆಣಸಿನಕಾಯಿ	1099	63869
ಹೆಸರುಬೇಳೆ	8900	8900
ಬಟಾಣಿ	5900	6050
ಹೆಸರುಕಾಳು	1209	5771
ಹುರುಳಿ ಕಾಳು	4311	4311
ಜೋಳ	1810	4296
ಮೆಕ್ಕೆಜೋಳ	1600	2000
ಮಡಿಕೆ (ಮಟಕಿ)	13102	13355
ಸಾಸುವೆ	4651	6152
ಈರುಳ್ಳಿ	500	2200
ಆಲೂಗಡ್ಡೆ	1200	1700
ಸೋಯಾಬಿನ್	4019	5319
ತೊಗರಿ	3052	5301
ತೊಗರಿ ಬೇಳೆ	7300	11900
ಗೋಧಿ	2300	3625

ಅಧಿಕಾರಿಗಳಿಗೆ ದಂಡ

◆ **ಕಲಬುರಗಿ:** ಸಾಲಕ್ಕೆ ಮಾಹಿತಿ ನೀಡದೆ ನಿರ್ಲಕ್ಷ್ಯ ವಹಿಸಿದ ಒಬ್ಬ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಮೂವರು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ತಲಾ 10 ಸಾವಿರ ದಂಡ ವಿಧಿಸಿ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ. ವೆಂಕಟ ಸಿಂಗ್ ಆದೇಶ ಮಾಡಿದ್ದಾರೆ. ಮೇಲ್ಮನವಿದಾರರು ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗೆ ಸಕಾಲದಲ್ಲಿ ಮಾಹಿತಿ ನೀಡದೆ ಇರುವುದರಿಂದ ಅರ್ಜಿದಾರರು ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದಲ್ಲಿ ಸಲ್ಲಿಸಿದ ದ್ವಿತೀಯ ಮೇಲ್ಮನವಿ ವಿಚಾರಣೆ ನಡೆಸಿದಾಗ ಮೇಲ್ಮನವಿದಾರರಿಗೆ ಮಾಹಿತಿ ನೀಡುವಂತೆ ಪ್ರತಿವಾದಿಗಳಾದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ಪೀಠ ಮಾಹಿತಿ ಹಕ್ಕು ಅಧಿನಿಯಮ ಅಡಿ ನಿರ್ದೇಶನ ನೀಡಿ, ತಪ್ಪಿದಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 20(1) ರಡಿ ದಂಡದ ಎಚ್ಚರಿಕೆ ನೀಡಿದರೂ ಪೀಠದ ಆದೇಶ ಪಾಲನೆ ಮಾಡದ ಕಾರಣ ಪ್ರತಿವಾದಿ ಅಧಿಕಾರಿಗಳಾದ ವಡಗೇರಾ ತಾಲೂಕಿನ ತಡಬಿಡಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಯಂಕನಗೌಡ, ಗುಂಡಗುರ್ತಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮಲ್ಲಿಕಾರ್ಜುನ ನಾಯಕ್, ಯಾದಗಿರಿ ತಾಲೂಕಿನ ಸೈದಾಪೂರ ಗ್ರಾಮ ಪಂಚಾಯತ ಕಾರ್ಯದರ್ಶಿ, ಇಸ್ಮಾಯಿಲ್, ಅವರಿಗೆ ಹಾಗೂ ವಿಜನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಕಾಡರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಿವಕುಮಾರ್ ದೊಡ್ಡಮನಿ ಅವರಿಗೆ ತಲಾ 10,000 ಸಾವಿರ ರೂಪಾಯಿ ದಂಡ ವಿಧಿಸಿ ಆದೇಶ ಮಾಡಲಾಗಿದೆ. ಪ್ರಕರಣದಲ್ಲಿ ಸೈದಾಪೂರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇಸ್ಮಾಯಿಲ್ ಅವರಿಗೆ ಎರಡು ಪ್ರತ್ಯೇಕ ಪ್ರಕರಣದಲ್ಲಿ ತಲಾ 10,000ಸಾವಿರ ಸೇರಿ 20,000 ಸಾವಿರ ದಂಡ ವಿಧಿಸಿದೆ ಹಾಗೂ ಮೇಲ್ಮನವಿದಾರಿಗೆ ಮಾಹಿತಿ ನೀಡಲು ಮಾಡಿದ ವಿಳಂಬಕ್ಕಾಗಿ ಮೇಲ್ಮನವಿದಾರರಿಗೆ ರೂ.3000 ಸಾವಿರ ಪರಿಹಾರ ನೀಡುವಂತೆ ತಡಬಿಡಿ ಗ್ರಾಮ ಪಂಚಾಯತ ಕಾರ್ಯದರ್ಶಿ ಯಂಕನಗೌಡ ಇವರಿಗೆ ಆದೇಶ ಮಾಡಲಾಗಿದೆ. ಒಟ್ಟು ಐದು ಪ್ರಕರಣಗಳಲ್ಲಿ ಪ್ರತಿವಾದಿಯವರಿಗೆ 50,000 ಸಾವಿರ ದಂಡ ವಿಧಿಸಿದ್ದು, ಸದರಿ ದಂಡ ಪಾವತಿ ಮಾಡಿ ಮುಂದಿನ ವಿಚಾರಣೆಗೆ ಹಾಜರಾಗಲು ಪುನಃ ಎಚ್ಚರಿಕೆ ನೀಡಿದೆ.

ಮುಂದುವರೆದಿದೆ...

ಕಿರುಸುದ್ದಿ

ಹಣಕಾಸಿನ ವಿಚಾರ: ತಂದೆಯನ್ನು ಕೊಂದ ಮಗ

ಗದಗ/ ಲಕ್ಷ್ಮೇಶ್ವರ: ಆಸ್ತಿ ಹಾಗೂ ಹಣದ ವಿಚಾರಕ್ಕಾಗಿ ತಂದೆ-ಮಗನ ನಡುವೆ ಜಗಳ ನಡೆದಿದ್ದು, ತಂದೆಯನ್ನು ಕೊಂದ ಮಗ ಪೊಲೀಸ್ ಠಾಣೆಗೆ ಬಂದು ಶರಣಾದ ಘಟನೆ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಗೋವನಾಳ ಗ್ರಾಮದಲ್ಲಿ ನಡೆದಿದೆ. ಶಂಕರಗೌಡ ದ್ಯಾವನಗೌಡ್ರ (56) ಕೊಲೆಯಾದ ವ್ಯಕ್ತಿ. ಪ್ರಭು ಶಂಕರಗೌಡ ದ್ಯಾವನಗೌಡ್ರ (24) ತನ್ನ ತಂದೆಯ ತಲೆ ಹಾಗೂ ಮರ್ಮಾಂಗಕ್ಕೆ ಹೊಡೆದು ಕೊಲೆ ಮಾಡಿದ್ದಾನೆ ಎನ್ನಲಾಗಿದೆ. ಎರಡು ಎಕರೆ ಜಮೀನನ್ನು ಬೇರೆಯವರಿಗೆ ಉಳುಮೆ ಮಾಡಲು ಕೊಟ್ಟಿದ್ದ ಹಣದ ವಿಚಾರಕ್ಕೆ ತಂದೆ, ಮಗನ ನಡುವೆ ಜಗಳ ಆರಂಭವಾಗಿದೆ. ಕುಡಿದ ಮತ್ತಿನಲ್ಲಿ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆರೆಯಲ್ಲಿ ಮುಳುಗಿ ಇಬ್ಬರು ಮಹಿಳೆಯರು ಸಾವು

ಕೂಡ್ಲಿಗಿ: ಈಜು ಬಾರದೇ ಕೆರೆಯಲ್ಲಿ ಮುಳುಗುತ್ತಿದ್ದ ಯುವತಿಯರ ರಕ್ಷಣೆಗೆ ತೆರಳಿದ್ದ ಇಬ್ಬರು ಮಹಿಳೆಯರು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಗಂಡಬೊಮ್ಮನಹಳ್ಳಿಯಲ್ಲಿ ಶನಿವಾರ ನಡೆದಿದೆ. ಮೃತರನ್ನು ಸರೋಜಮ್ಮ(35) ಸುಜಾತಾ(28) ಎಂದು ಗುರುತಿಸಲಾಗಿದೆ. ಶ್ರಾವಣಿ (20), ಸಂಗೀತಾ(20), ಅನಿತಾ (18) ಅನ್ನೋರು ಅಸ್ವಸ್ಥಗೊಂಡಿದ್ದು ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗುಡೇಕೋಟೆಯಲ್ಲಿ ನಿನ್ನೆ ನಡೆದ ಜಾತ್ರೆ ಮುಗಿಸಿಕೊಂಡು ಶನಿವಾರ ಮಧ್ಯಾಹ್ನ ಗಂಡಬೊಮ್ಮನಹಳ್ಳಿ ಗ್ರಾಮದಲ್ಲಿರುವ ಕೆರೆ ಬಳಿ ಊಟದ ಬುತ್ತಿಯೊಂದಿಗೆ ಆಗಮಿಸಿದ್ದರು. ಈ ವೇಳೆ ಮೊದಲು ಇಬ್ಬರು ಮೂವರು ಯುವತಿಯರು ಕೆರೆಯಲ್ಲಿ ಈಜಾಡಲು ತೆರಳಿದ್ದು, ಕೆರೆಯಲ್ಲಿ ಸಿಲುಕಿದ್ದರು. ಅವರ ರಕ್ಷಣೆಗೆ ಧಾವಿಸಿದ ಸರೋಜಮ್ಮ ಹಾಗೂ ಸುಜಾತಾ ಕೆರೆಯಲ್ಲಿ ಸಿಲುಕಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಎಸ್ಪಿ ಜಾಹ್ನವಿ ಎಸ್. ಭೇಟಿ ನೀಡಿ, ಪರಿಶೀಲಿಸಿದರು. ಈ ಕುರಿತು ಗುಡೇಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಹನ ಡಿಕ್ಕಿ: ವಿದ್ಯಾರ್ಥಿ ಸಾವು

ಮುದ್ದೇಬಿಹಾಳ: ಎಸ್ ಎಸ್ ಎಲ್ ಸಿ ಪೂರ್ವಭಾವಿ ಪರೀಕ್ಷೆ ಮುಗಿಸಿಕೊಂಡು ಸಮೀಪದ ಬಿದರಗುಂದಿ ಗ್ರಾಮದಿಂದ ಹುನಗುಂದ ತಾಲೂಕಿನ ಬೇವಿನಮಟ್ಟಿಗೆ ತೆರಳುತ್ತಿದ್ದ ಗೂಡ್ಸ್ ವಾಹನ ಹಾಗೂ ವಿದ್ಯಾರ್ಥಿಗಳಿದ್ದ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮಹೇಶ್ ಬಸಪ್ಪ ಮಾದರ್ (16) ಎಂಬ ವಿದ್ಯಾರ್ಥಿ ಸ್ಥಳದಲ್ಲಿ ಮೃತಪಟ್ಟಿದ್ದಾನೆ. ತಾಲೂಕಿನ ಮದರಿ ಗ್ರಾಮದ ಜಾತ್ರೆಯಲ್ಲಿ ಎತ್ತುಗಳನ್ನು ಖರೀದಿಸಿಕೊಂಡು ತೆರಳುತ್ತಿದ್ದ ಸರಕು ಸಾಗಣೆ ವಾಹನ ಡಿಕ್ಕಿ ಹೊಡೆದದ್ದರಿಂದ, ತೀವ್ರತೆಗೆ ನಗರದ ಶಾಂತಲಾ ಪ್ರೌಢಶಾಲೆ ವಿದ್ಯಾರ್ಥಿ ಗೋನಾಳ ಪಿ ಎಸ್ ಗ್ರಾಮದ ನಿವಾಸಿ ಮಹೇಶ ಸ್ಥಳದಲ್ಲೇ ಆಸು ನೀಗಿದ್ದಾನೆ. ಘಟನೆಯಲ್ಲಿ ಇನ್ನೊರ್ವ ವಿದ್ಯಾರ್ಥಿ ಬಿದರಕುಂದಿ ಗ್ರಾಮದ ಶ್ರೀಶೈಲ ಸಿದ್ದಣ್ಣ ಬೂದಿಹಾಳ ಗಂಭೀರವಾಗಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿಕೆ
ಪದವೀಧರರು ಉದ್ಯೋಗ ಸೃಷ್ಟಿಸಿ

ಬೀದರ: ಭಾರತದ ಗ್ರಾಮೀಣ ಪ್ರದೇಶದ ಆರ್ಥಿಕತೆ ಸಂಪೂರ್ಣವಾಗಿ ಕೃಷಿ ಆಧಾರಿತವಾಗಿದ್ದು, ಪಶು ಸಂಗೋಪನೆಯೇ ಗ್ರಾಮೀಣ ಭಾಗದ ಜನರ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ಸಮೀಪದಲ್ಲಿರುವ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 15ನೇ ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಪದಕ ಹಾಗೂ ಪದವಿ ಪ್ರದಾನ ಮಾಡಿದ ನಂತರ ಭಾಷಣ ಆರಂಭಿಸಿದ ಅವರು,

ಕೃಷಿ, ಹಾಲು ಹಾಗೂ ಮೀನುಗಾರಿಕೆ, ಪಶುಸಂಗೋಪನೆ ರೈತರ ಆರ್ಥಿಕ ಅಭಿವೃದ್ಧಿಗೆ ಮಹತ್ವದ ಆಧಾರಗಳಾಗಿವೆ. ಭಾರತವು ಹಾಲು ಮತ್ತು ಮೀನು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ.

ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಾಗೂ ಇಲ್ಲಿ ಕಲಿತು ಮುಂದೆ ಕೆಲಸ ಸಲ್ಲಿಸಲಿರುವ ಪದವಿಧರರು ಮಾನವ, ಪ್ರಾಣಿ ಮತ್ತು ಪರಿಸರವನ್ನು ಒಳಗೊಂಡ ಸಮಗ್ರ ಆರೋಗ್ಯ ದೃಷ್ಟಿಕೋನದಲ್ಲಿ ಕಾರ್ಯನಿರ್ವಹಿಸಬೇಕು. ಇಲ್ಲಿ ಕಲಿತಂತಹ ವಿದ್ಯಾರ್ಥಿಗಳು ಪದವಿ ನಂತರ ಉದ್ಯೋಗ ಹುಡುಕುವವರಾಗದೇ, ಉದ್ಯೋಗ ಸೃಷ್ಟಿಸುವವರಾಗಬೇಕು ಎಂದು ಮಾರ್ಗದರ್ಶನ ನೀಡಿದರು.

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಬಳಸಿ ಕೃಷಿ, ಕೃಷಿಯೇತರ ಹಾಗೂ ಪಶು ಸಂಗೋಪನೆ ಉತ್ಪಾದನೆಯನ್ನು ಹೆಚ್ಚಿಸುವುದು ಇಂದಿನ ಬೇಡಿಕೆಯಾಗಿದೆ. ವಿವಿಧ ರೋಗಗಳ ನಿಯಂತ್ರಣ ಕಾಲಕ್ರಮೇಣ ಇಂದಿನ ದೊಡ್ಡ ಸವಾಲಾಗಿದೆ, ವಿಜ್ಞಾನಿಗಳು ನಿರಂತರ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಯಶಸ್ಸು, ಪರಿಶ್ರಮ ಹಾಗೂ ಸೇವಾಭಾವನೆಯೊಂದಿಗೆ ಜೀವನ ನಡೆಸಿ, ನೈತಿಕ ಮೌಲ್ಯಗಳನ್ನು ಪಾಲಿಸಿಕೊಂಡು ಪ್ರಾಣಿಗಳ ಸೇವೆಯೇ ದೇಶ ಸೇವೆ ಎಂದು ದೃಢವಾಗಿ ನಂಬಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಋಷಿ ಮೆಂಡನ್‌ಗೆ 16 ಚಿನ್ನ

ಈ ಸಾಲಿನ ಘಟಿಕೋತ್ಸವದಲ್ಲಿ 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಮಂದಾರ್ತಿ ಗ್ರಾಮದ ಋಷಿ ಮೆಂಡನ್ 16 ಚಿನ್ನದ ಪದಕಗಳನ್ನು ಪಡೆದರು. ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಕಳ್ಳಂಬಳ್ಳ ಗ್ರಾಮದ ಭೂಮಿಕಾ ಹಾಗೂ ರಾಜಕುಮಾರ್ ತಲಾ 6 ಚಿನ್ನದ ಪದಕಗಳನ್ನು ಪಡೆದರು.

ಮೂಕ ಪಶುಗಳ ಬಗ್ಗೆ ಕರುಣೆ ತೋರಿಸಿ ರೈತರಿಗೆ ಸೇವೆ ಸಲ್ಲಿಸುವ ಜೊತೆಗೆ ಪರಿಸರ ಸಂರಕ್ಷಣೆಯಲ್ಲೂ ಸಕ್ರೀಯರಾಗಬೇಕು ಎಂದರು.

ರಾಜ್ಯ ಸರ್ಕಾರದ ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಮಾತನಾಡಿ, ರಾಜ್ಯದಲ್ಲಿ 2.9 ಕೋಟಿ ಜಾನುವಾರುಗಳಿವೆ, ಹಾಲು ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯ ದ್ವಿತೀಯ ಸ್ಥಾನದಲ್ಲಿದೆ. ಕಳೆದ ಸಾಲಿನಲ್ಲಿ ರಾಜ್ಯದಲ್ಲಿ ಪ್ರತಿದಿನ ಸುಮಾರು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಭಾಗದ ಆರ್ಥಿಕತೆಯ ಬಲವರ್ಧನೆಯಲ್ಲಿ ಪಶು ಸಂಗೋಪನೆ ಪ್ರಮುಖ ಆಧಾರಸ್ತಂಭ. ಸರ್ಕಾರ ವಿವಿಧ ಯೋಜನೆಗಳ ಜಾರಿಗೆ ತರುವ ಮೂಲಕ ಈ ಕ್ಷೇತ್ರವನ್ನು ಬಲಪಡಿಸುತ್ತಿದ್ದು, ಅನುಗ್ರಹ ಯೋಜನೆಯಡಿ ಜಾನುವಾರು ಸಾವಿಗೆ ಪರಿಹಾರ ನೀಡಲಾಗುತ್ತಿದೆ. ಮಹಿಳೆಯರು ಹಾಗೂ ಸ್ತ್ರೀ ಶಕ್ತಿ ಗುಂಪುಗಳಿಗೆ ಜಾನುವಾರುಗಳನ್ನು ವಿತರಿಸಲಾಗುತ್ತಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅರೆ-ಶುಷ್ಕ ಉಷ್ಣವಲಯದ ಅಂತರರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆ (ಇಕ್ರಿಸ್ಯಾಟ್) ಮಹಾನಿರ್ದೇಶಕ ಹಿಮಾಂಶು ಪಾಠಕ್ ಮಾತನಾಡಿ, ಕರ್ನಾಟಕ ಕೃಷಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿ ಸ್ಥಾನದಲ್ಲಿದೆ. 2025ರಲ್ಲಿ ದೇಶದಲ್ಲಿ 217 ಮಿಲಿಯನ್ ಲೀಟರ್ ಹಾಲು ಉತ್ಪಾದನೆಯಾಗಿದೆ ಎಂದು ತಿಳಿಸಿದರು.

ಕರ್ನಾಟಕ ಪಶು ವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ಸಿ.ವೀರಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಸಿಇಒ ಡಾ. ಗಿರೀಶ್ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಕುಲಸಚಿವ ಪಿ.ಟಿ. ರಮೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾಮಣ್ಣನ ದರ್ಶನಕ್ಕೆ ಹರಿದು ಬಂದ ಭಕ್ತಗಣ

ನವಲಗುಂದ: ಕಲಿಯುಗದ ಕಾಮದೇನು ಬೇಡಿದ ವರ ದಯಪಾಲಿಸುವಂತಹ ಶ್ರೀ ರಾಮಲಿಂಗ ಕಾಮಣ್ಣನ ದರ್ಶನಕ್ಕೆ ಮೊದಲ ದಿನವೇ ಲಕ್ಷಾಂತರ ಭಕ್ತರ ಗಣ ಹರಿದು ಬಂದಿತು.

ಹೋಳಿ ಹಬ್ಬದ ಪ್ರಯುಕ್ತ ಪಟ್ಟಣದ ಶ್ರೀ ರಾಮಲಿಂಗ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಂಡಿರುವಂತಹ ಶ್ರೀ ರಾಮಲಿಂಗ ಕಾಮದೇವ ಭಕ್ತರ ಕಾಮದೇನು. ಶ್ರೀ ರಾಮಲಿಂಗ ಕಾಮಣ್ಣನು ಇಷ್ಟಾರ್ಥ ಸಿದ್ದಿ ಪುರುಷನಾಗಿ ಪೂಜೆಗೊಳ್ಳುತ್ತಿರುವಂತಹ ಕಾಮದೇವ ರಾಗಿದ್ದಾರೆ, ಸರ್ವಧರ್ಮದವರು ಸೇರಿಕೊಂಡು ಹೋಳಿ ಹಬ್ಬವನ್ನು ಅತೀ ವಿಜೃಂಭಣೆಯಿಂದ ಆಚರಣೆ ಮಾಡುತ್ತಾರೆ.

ಮಕ್ಕಳಿಗಾಗಿ ಬೆಳ್ಳಿ ತೊಟ್ಟಿಲು, ಮದುವೆ ಅಥವಾ ಕಂಕಣ ಭಾಗ್ಯಕ್ಕಾಗಿ ಬೆಳ್ಳಿ ಬಾಸಿಂಗ್, ಮನೆ, ನಿವೇಶನಕ್ಕೆ ಛತ್ರಿ ಆರೋಗ್ಯಕ್ಕೆ ಕುದುರೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೆಳ್ಳಿ ಪಾದುಕೆ ಹಾಗೂ ಹಸ್ತ ಸಾಮಗ್ರಿಗಳನ್ನು ಪಡೆದು ಪೂಜಿಸಿದರೆ ಬೇಡಿಕೆ ಈಡೇರುತ್ತದೆ ಎನ್ನುವುದು ಭಕ್ತರ ನಂಬಿಕೆಯಾಗಿದೆ.





ಭಟ್ಕಳ: ಪಟ್ಟಣದ ಮುಖ್ಯ ವೃತ್ತದಲ್ಲಿ ಕಳೆದ 24 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಗಡಿಯಾರದ ಗೋಪುರವನ್ನು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಾಗಿ ಶನಿವಾರ ಸಂಜೆ ನೆಲ ಸಮಗೊಳಿಸಲಾಗಿದೆ.

ಯುವಕನ ಕತ್ತು ಕೊಯ್ದು ಕೊಲೆ

ನಿಶ್ಚಿತಾರ್ಥವಾಗಿದ್ದ ಯುವತಿಯ ಪ್ರೇಮಿಯಿಂದ ಕೃತ್ಯ

ಗದಗ/ಲಕ್ಷ್ಮೇಶ್ವರ: ನಿಶ್ಚಿತಾರ್ಥವಾಗಿದ್ದ ಯುವತಿಯ ಪ್ರೇಮಿಯೊಬ್ಬ ಯುವಕನ ಕತ್ತು ಕೊಯ್ದು ಕ್ರೂರವಾಗಿ ಹತ್ಯೆ ಮಾಡಿರುವ ಘಟನೆ ಲಕ್ಷ್ಮೇಶ್ವರ ತಾಲೂಕಿನ ಗೊಜನೂರು-ಮಾಗಡಿ ರಸ್ತೆಯ ಮಧ್ಯದ ಜಮೀನೊಂದರಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ. ತಾಲೂಕಿನ ಶಿಗ್ಲಿ ಗ್ರಾಮದ ಮಹಮ್ಮದ್ ಫಾರೂಕ್ ಶೇಖ್ ಸನದಿ (25) ಕೊಲೆಯಾದ ಯುವಕ. ಧಾರವಾಡ ಜಿಲ್ಲೆಯ ಅಣ್ಣಿಗೇರಿ ಪಟ್ಟಣದ ದಾವಲಸಾಬ ಪಾಪಾಸಾಬ ಮಕಾಂದಾರ ಕೊಲೆ ಮಾಡಿದ ಆರೋಪಿ. ಮೂಲತಃ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಹರ್ಲಾಪುರ ಗ್ರಾಮದ ಮಹಮ್ಮದ್ ಫಾರೂಕ್ ಶೇಖ್ ಸನದಿ ಸಧ್ಯ ತಾಯಿ ತವರೂರು ಶಿಗ್ಲಿ ಗ್ರಾಮದಲ್ಲಿ ವಾಸವಿದ್ದನು. ಕಳೆದ ಎರಡು ತಿಂಗಳ ಹಿಂದೆ ನಿಶ್ಚಿತಾರ್ಥವಾಗಿತ್ತು. ನಿಶ್ಚಿತಾರ್ಥವಾಗಿದ್ದ ಯುವತಿಯ ಪ್ರೇಮಿಯಾಗಿದ್ದ ದಾವಲಸಾಬ ಪಾಪಾಸಾಬ ಮಕಾಂದಾರ ಅವನೇ ಮಹಮ್ಮದ್ ಫಾರೂಕ್ ಶೇಖ್ ಸನದಿಯನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸಧ್ಯ ಪೊಲೀಸರು ಕೊಲೆ ಆರೋಪಿ ದಾವಲಸಾಬ ಪಾಪಾಸಾಬ ಮಕಾಂದಾರನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದಾರೆ. ಲಕ್ಷ್ಮೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳು ಸಾವು

ಗದಗ: ತಾಲೂಕಿನ ಮುಳಗುಂದ ಪಟ್ಟಣ ಸಮೀಪದ ಚಿಂಚಲಿ ಗ್ರಾಪಂ ವ್ಯಾಪ್ತಿಯ ಕೆರೆಯೊಂದರಲ್ಲಿ ಈಜಲು ಹೋಗಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟ ಘಟನೆ ಶನಿವಾರ ನಡೆದಿದೆ.

ವಿದ್ಯಾರ್ಥಿಗಳು ಮುಳಗುಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ ಮೆಟ್ರಿಕ್ ಪೂರ್ವ ವಸತಿ ನಿಲಯದಲ್ಲಿದ್ದು ಸ್ಥಳೀಯ ಎಸ್‌ಜೆಜೆಎಂ ಸಂಯುಕ್ತ ಪಪೂ ಮಹಾವಿದ್ಯಾಲಯದಲ್ಲಿ ಓದುತ್ತಿದ್ದ ಬಸವರಾಜ ಬಡಿಗೇರ ಸಾ.ಬೆಳದಡಿ(15) ಹಾಗೂ ಮುಂಡರಗಿ ತಾಲೂಕಿನ ಹಮ್ಮಿಗಿ ಗ್ರಾಮದ ಪರಶುರಾಮ ವಡ್ಡರ(15) ಎಂಬುದಾಗಿ ತಿಳಿದು ಬಂದಿದ್ದು, ಇಬ್ಬರು ವಿದ್ಯಾರ್ಥಿಗಳು 9ನೇ ತರಗತಿಯಲ್ಲಿ ಓದುತ್ತಿದ್ದರು ಎನ್ನಲಾಗಿದೆ.

ಘಟನೆಯ ಹಿನ್ನಲೆ: ಒಟ್ಟು ಆರು ಜನ ಬಾಲಕರು ಬೆಳಗ್ಗೆ ವಸತಿ ನಿಲಯದಿಂದ ಶಾಲೆಗೆ ಹೋಗಿ ವಾಪಸ್ ಬರುವಾಗ ವಸತಿ ನಿಲಯಕ್ಕೆ ಬಾರದೇ ಶಾಲೆಯಿಂದ ನೇರ ಈಜಲು ಕೆರೆಗೆ ಹೋಗಿದ್ದು, ಮೂವರು ಮಕ್ಕಳು ನೀರಿನಲ್ಲಿ ಮುಳುಗುತ್ತಿದ್ದಾಗ ಅಲ್ಲಿಯೇ ಇದ್ದ ಮೂವರು ವಿದ್ಯಾರ್ಥಿಗಳು ಒಬ್ಬನನ್ನು ರಕ್ಷಿಸಿದ್ದಾರೆ. ಇನ್ನಿಬ್ಬರು ನೀರಿನಲ್ಲಿ ಮುಳುಗಿ ಅಸುನೀಗಿದ್ದಾರೆ.

ಕೆರೆಯಲ್ಲಿ ಮುಳುಗಿದ ಬಾಲಕರ ಶೋಧನೆಗೆ ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಮೃತ ಬಾಲಕರನ್ನು ಹಲವು ಗಂಟೆಗಳ ಕಾಲ ಪರಿಶೀಲನೆ ನಡೆಸಿ ಬಾಲಕರ ಮೃತ ದೇಹಗಳನ್ನು ಹೊರ ತಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತು ಮುಳಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ-ದ	ಅಳತೆ ಮೀ ಗಳಲ್ಲಿ ಪೂ-ಪ	ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
142	ಶಾಂತವೇರಿ ಗೋಪಾಲಗೌಡ	120	ಮೂಲೆ	ದ:12.00ಪೂ:9.00	12.00	18.00	216.00	59180.00	127.83
143	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	280	ಮೂಲೆ	ದ:9.00 ಪ:12.00	13.00	18.00	234.00	59180.00	138.48
144	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	300	ಮೂಲೆ	ಉ:12.00 ಪೂ:9.00	9.00	12.00	108.00	59180.00	63.91
145	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	318	ಮೂಲೆ	ಉ:12.00 ಪ:12.00	12.00	6.00	72.00	59180.00	42.61
146	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	338	ಮೂಲೆ	ಉ:12.00 ಪೂ.9.00	12.00	9.00	108.00	59180.00	63.91
147	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	363	ಮೂಲೆ	ದ:9.00 ಪ:12.00	12.00	13.70	164.40	59180.00	97.29
148	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	485	ಮೂಲೆ	ದ:9.00ಪ:12.00	9.00	12.00	108.00	59180.00	63.91
149	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	653	ಮೂಲೆ	ದ:9.00ಪ:9.00	13.00	12.00	156.00	59180.00	92.32
150	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	668	ಮೂಲೆ	ಉ.9.00 ಪ:9.00	9.00	12.00	108.00	59180.00	63.91
151	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	863	ಮೂಲೆ	ಉ.9.00 ಪ:12.00	18.00	12.00	216.00	59180.00	127.83
152	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	923	ಮೂಲೆ	ಉ.18.00 ಪ:12.00	24.00	15.00	360.00	59180.00	213.05
153	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1313	ಮೂಲೆ	ಉ.9.00 ಪೂ:9.00	9.00	12.00	108.00	59180.00	63.91
154	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1314	ಮೂಲೆ	ಉ:9.00 ಪ:12.00	12.00	18.00	216.00	59180.00	127.83
155	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1322	ಮೂಲೆ	ಉ:12.00 ಪ:12.00	9.00	12.00	108.00	59180.00	63.91
156	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1343	ಮೂಲೆ	ಉ:12.00 ಪ:12.00	12.00	9.00	108.00	59180.00	63.91
157	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1415	ಮೂಲೆ	ದಉ.9.00 ಪೂ:12.00	12.00	18.00	216.00	59180.00	127.83
158	ಲಲಿತಾದ್ರಿನಗರ (ದಕ್ಷಿಣ)	721	ಮೂಲೆ	ಉತ್ತರ18.00	9.00	12.00	108.00	59180.00	63.91
159	ಲಲಿತಾದ್ರಿನಗರ (ದಕ್ಷಿಣ)	722	ಮೂಲೆ	ಉತ್ತರ18.00	9.00	12.00	108.00	59180.00	63.91
160	ಗಾಯತ್ರಿಪುರಂ 1ನೇ ಹಂತ	388	ಮಧ್ಯಂತರ	ಪಶ್ಚಿಮ 9.00	9.00	14.00	126.00	64560.00	81.35
161	ಗಾಯತ್ರಿಪುರಂ 1ನೇ ಹಂತ	373	ಮಧ್ಯಂತರ	ಪೂರ್ವ9.00	12.00	15.00	180.00	64560.00	116.21
162	ಗಾಯತ್ರಿಪುರಂ 1ನೇ ಹಂತ	345	ಮಧ್ಯಂತರ	ಪಶ್ಚಿಮ9.00	10.00	12.00	120.00	64560.00	77.47
163	ಗಾಯತ್ರಿಪುರಂ 1ನೇ ಹಂತ	341	ಮಧ್ಯಂತರ	ಪಶ್ಚಿಮ 9.00	10.70	12.00	128.4	64560.00	82.90
164	ಗಾಯತ್ರಿಪುರಂ 1ನೇ ಹಂತ	314	ಮಧ್ಯಂತರ	ಪಶ್ಚಿಮ 9.00	12.00	9.00	108.00	64560.00	69.72
165	ಸಾತಗಳ್ಳಿ 2ನೇ ಹಂತ	4622	ಮೂಲೆ	ಪೂ-ಉ 9.00	(9.00+9.30)/2	(6.60+6.60)/2	60.39	37660.00	22.74
166	ಸಾತಗಳ್ಳಿ 2ನೇ ಹಂತ	4649	ಮೂಲೆ	9.00 ಪ – ಉ	9.00	6.00	54.00	37660.00	20.34
167	ಸಾತಗಳ್ಳಿ 2ನೇ ಹಂತ	4648	ಮೂಲೆ	9.00 ದ – ಪ	9.00	(6.10+6.30)/2	55.80	37660.00	21.01
168	ಸಾತಗಳ್ಳಿ 2ನೇ ಹಂತ	4597	ಮೂಲೆ	9.00 ಉ – ಪ	9.20	6.10	56.12	37660.00	21.13
169	ಸಾತಗಳ್ಳಿ 2ನೇ ಹಂತ	4596	ಮೂಲೆ	9.00 ಪ – ದ	9.00	(6.15+6.20)/2	55.57	37660.00	20.93
170	ಸಾತಗಳ್ಳಿ 2ನೇ ಹಂತ	4545	ಮೂಲೆ	9.00 ಉ	9.00	(6.10+6.15)/2	55.12	37660.00	20.76
171	ಸಾತಗಳ್ಳಿ 2ನೇ ಹಂತ	5406	ಮೂಲೆ	9.00 ಪೂ – ಪ	9.00	(6.00+8.50)/2	65.25	37660.00	24.57
172	ಸಾತಗಳ್ಳಿ 2ನೇ ಹಂತ	5405	ಮಧ್ಯಂತರ	9.00 ದ	9.00	6.00	54.00	32280.00	17.43
173	ಸಾತಗಳ್ಳಿ 2ನೇ ಹಂತ	5404	ಮಧ್ಯಂತರ	9.00 ದ	9.00	6.00	54.00	32280.00	17.43
174	ಸಾತಗಳ್ಳಿ 2ನೇ ಹಂತ	5403	ಮಧ್ಯಂತರ	9.00 ದ	9.00	6.00	54.00	32280.00	17.43
175	ಸಾತಗಳ್ಳಿ 2ನೇ ಹಂತ	5402	ಮಧ್ಯಂತರ	9.00 ದ	9.00	6.00	54.00	32280.00	17.43
176	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1698	ಮಧ್ಯಂತರ	9.00 ಪೂ	15.00	24.00	360.00	48643.00	175.11
177	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1697	ಮಧ್ಯಂತರ	9.00 ಪೂ	15.00	24.00	360.00	48643.00	175.11
178	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1696	ಮಧ್ಯಂತರ	9.00 ಪೂ	15.00	24.00	360.00	48643.00	175.11
179	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1695	ಮಧ್ಯಂತರ	9.00 ಪೂ	15.00	24.00	360.00	48643.00	175.11
180	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1694	ಮಧ್ಯಂತರ	9.00 ಪೂ	15.00	24.00	360.00	48643.00	175.11
181	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1693	ಮಧ್ಯಂತರ	9.00 ಪೂ	15.00	24.00	360.00	48643.00	175.11
182	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1692	ಮಧ್ಯಂತರ	9.00 ಪೂ	15.00	24.00	360.00	48643.00	175.11
183	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1688	ಮಧ್ಯಂತರ	9.00 ಪೂ	15.00	24.00	360.00	48643.00	175.11
184	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1689	ಮಧ್ಯಂತರ	9.00 ಪೂ	15.00	24.00	360.00	48643.00	175.11
185	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1690	ಮಧ್ಯಂತರ	9.00 ಪೂ	15.00	24.00	360.00	48643.00	175.11
186	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1691	ಮಧ್ಯಂತರ	9.00 ಪೂ	15.00	24.00	360.00	48643.00	175.11
187	ವಸಂತನಗರ	651	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
188	ವಸಂತನಗರ	682	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
189	ವಸಂತನಗರ	725	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
190	ವಸಂತನಗರ	754	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
191	ವಸಂತನಗರ	9	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
192	ವಸಂತನಗರ	10	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
193	ವಸಂತನಗರ	11	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
194	ವಸಂತನಗರ	12	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
195	ವಸಂತನಗರ	210	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
196	ವಸಂತನಗರ	1910	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
197	ವಸಂತನಗರ	1911	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
198	ವಸಂತನಗರ	1912	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
199	ವಸಂತನಗರ	1913	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
200	ವಸಂತನಗರ	1914	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
								ಒಟ್ಟು (ಲಕ್ಷಗಳು)	18629.43

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ-ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ **New e-Auction Bidding user manual** ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://kppp.karnataka.gov.in** ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ-ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ನಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ-ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ICICI** ಬ್ಯಾಂಕ್‌ಗೆ **DEBIT CARD/CREDIT CARD/NET BANKING** ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/- ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/- ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MDA Mysore, Bank of Baroda, Account No.89260100004660 (IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ-ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು **https://kppp.karnataka.gov.in** ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕ್ಷಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕ್ಷಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ **(Location)**, ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –

ಅ) ವಲಯ ಕಛೇರಿ-1 – 1. ನಾಚನಹಳ್ಳಿ-ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.9740029156. ಆ) ವಲಯ ಕಛೇರಿ-2- ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ-3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ-4- ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ-5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ-6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ-8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ-ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ- 0821-2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/- ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

ಕಿರುಸುದ್ದಿ

ಚೆಸ್: ಗುಕೇಶ್‌ಗೆ ಸೋಲು

ಹೊಸದಿಲ್ಲಿ: ಎರಡು ಪಂದ್ಯಗಳಲ್ಲಿ ಸತತ ಡ್ರಾ ಸಾಧಿಸಿದ್ದ ವಿಶ್ವಚಾಂಪಿಯನ್, ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಪ್ರಾಗ್ ಚೆಸ್ ಪಂದ್ಯಾವಳಿಯ ಮೂರನೇ ಪಂದ್ಯದಲ್ಲಿ ಅಚ್ಚರಿಯ ಸೋಲು ಕಂಡಿದ್ದಾರೆ. ಭಾರತದ ಮತ್ತೋರ್ವ ಗ್ರ್ಯಾಂಡ್‌ಮಾಸ್ಟರ್, ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಡ್ರಾ ಸಾಧಿಸಿದರು. ಭಾರತ ಮೂಲದ ಇಬ್ಬರು ಮಾತ್ರ ಭಾಗವಹಿಸಿರುವ ಈ ಕೂಟದಲ್ಲಿ ಸತತ ಡ್ರಾ ಫಲಿತಾಂಶ ಪಡೆದ ಗುಕೇಶ್‌ಗೆ ಹಿನ್ನಡೆಯಾಗಿದೆ. ಹೊಲ್ಯಾಂಡ್‌ನ ಜಾರ್ಡನ್ ವ್ಯಾನ್ ಫಾರೆಸ್ಟ್ ಅವರನ್ನು ಎದುರಿಸಿದ್ದ ಗುಕೇಶ್ ನಿರಾಶಾದಾಯಕ ಸೋಲು ಕಂಡರು. ಅರ್ವಿಂದ್ ಇರಾನಿನ ಪರ್ಹಮ್ ಅವರೊಂದಿಗೆ ಡ್ರಾ ಮಾಡಿಕೊಂಡಿದ್ದಾರೆ. ಕರಿ ಕಾಯಿಗಳೊಂದಿಗೆ ಆಡಿದ ಗುಕೇಶ್ ಆರಂಭಿಕ ಹಿನ್ನಡೆ ಅನುಭವಿಸಿದರು. ರುಯ್ ಲೋಪೇರುಝ್ ಮೂಲಕ ಆರಂಭದಲ್ಲೇ ಗುಕೇಶ್‌ನ ಬಿಶಾಪ್ ಪಡೆದುಕೊಂಡರು. ಚೇತರಿಸಿಕೊಳ್ಳುವುದಕ್ಕೆ ಗುಕೇಶ್‌ಗೆ ಸಮಯ ಬೇಕಾಯಿತು. ಹತ್ತಾರು ಪ್ರಯತ್ನಗಳನ್ನು ಮಾಡಿ ಮರಳುವಷ್ಟರಲ್ಲಿ ಗುಕೇಶ್‌ಗೆ ಸಮಯದ ಹಿನ್ನಡೆ ಕೂಡ ಆಯಿತು. ಕೊನೆಯಲ್ಲಿ ಜಾರ್ಡನ್ ಗೆಲುವು ಸಾಧಿಸಿದರು. ಅರ್ವಿಂದ್ ಕೂಡ ಆರಂಭಿಕ ಹಿನ್ನಡೆ ಅನುಭವಿಸಿದ್ದರು. ಆದರೆ ಮರಳಿದ ಅವರು ಡ್ರಾ ಸಾಧಿಸಿದರು. ಚಾಲೆಂಜರ್ಸ್ ವಿಭಾಗದಲ್ಲಿ ದಿವ್ಯಾ ದೇಶಮುಖ್ ಜೆನ್ನರ್ ಅವರೊಂದಿಗೆ, ಸೂರ್ಯಶೇಖರ ಗಂಗೂಲಿ ನೆಮೆಕ್ ಅವರೊಂದಿಗೆ ಸೋತರು.

ಐಟಿಎಫ್ ಕಲಬುರಗಿ ಲೋಗೋ ಬಿಡುಗಡೆ

ಕಲಬುರಗಿ: ಮೊಟ್ಟ ಮೊದಲ ಬಾರಿಗೆ ಕಲಬುರಗಿಯೂ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಪಂದ್ಯಾವಳಿಗಳಿಗೆ ಸಾಕ್ಷಿಯಾಗಲಿದ್ದು, ಭಾನುವಾರ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಡಬ್ಲ್ಯು35 ಮಟ್ಟದ ಮಹಿಳಾ ಟೆನಿಸ್ ಟೂರ್ನಿ ಪ್ರಾರಂಭವಾಗಲಿದೆ. ಈ ಹಿನ್ನೆಲೆ ಶನಿವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಲೋಗೋ ಬಿಡುಗಡೆ ಮಾಡಲಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಲೋಗೋ ಬಿಡುಗಡೆಗೊಳಿಸಿ, ಯುಎಸ್ಡಿ 30 ಬಹುಮಾನ ಮೊತ್ತದ ಈ ಟೂರ್ನಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ನಿಯಾಗಿದ್ದು, ಮಾರ್ಚ್ 1 ರಿಂದ 8ರವರೆಗೆ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿದ್ದು,ಮುಖ್ಯ ಡ್ರಾ ಪಂದ್ಯಗಳು ಮಾರ್ಚ್ 3 ರಿಂದ ಆರಂಭವಾಗಲಿವೆ ಎಂದರು. ಐಟಿಎಫ್ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ 32 ಆಟಗಾರರ ಸಿಂಗಲ್ಸ್ ಮುಖ್ಯ ಡ್ರಾ ಇರಲಿದ್ದು, ಭಾನುವಾರದಿಂದ 32 ಆಟಗಾರ್ತಿಯರ ಅರ್ಹತಾ ಸುತ್ತು (ಕ್ವಾಲಿಫೈಯರ್ ಡ್ರಾ) ನಡೆಯಲಿದೆ. ಜೊತೆಗೆ 16 ಜೋಡಿಗಳ ಡಬಲ್ಸ್ ಡ್ರಾ ಕೂಡ ಆಯೋಜಿಸಲಾಗಿದೆ. ಮಾರ್ಚ್ 3ರಿಂದ ಆರಂಭವಾಗುವ ಮುಖ್ಯ ಡ್ರಾ ಪಂದ್ಯ ಗಳಲ್ಲಿ,11ಕ್ಕೂ ಅಧಿಕ ದೇಶದ ಟೆನಿಸ್ ಆಟಗಾರ್ತಿಯರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ITF ಕಲಬುರಗಿ
KALABURAGI OPEN
WOMEN'S WORLD TENNIS TOUR
W35 | 1st – 8th March 2026 | US $30,000 EVENT
CHANDRASHEKHAR PATIL SPORTS STADIUM KALABURAGI

ಶೂಟಿಂಗ್: ಫೈನಲ್‌ಗೆ ಟ್ರಿಗರ್, ಬೆಂಗಳೂರು

ಬೆಂಗಳೂರು: ಟ್ರಿಗರ್ ಟ್ಯಾಕ್ಟಿಶನ್ಸ್, ಬೆಂಗಳೂರು, ಹುಬ್ಬಳ್ಳಿ ಮತ್ತು ಕ್ಯಾಲಿಬರ್ ಕ್ಯಾಪಿಟಲ್ಸ್ ತಂಡಗಳು ಕರ್ನಾಟಕ ಶೂಟಿಂಗ್ ಲೀಗ್ ಕೂಟದ ಫೈನಲ್‌ಗೇರಿದವು. ಇದೇ ಮೊದಲ ಬಾರಿಗೆ ಆಯೋಜಿಸಲಾದ ಫ್ರಾಂಚೈಸಿ ಮಾದರಿಯ ಶೂಟಿಂಗ್ ಕೂಡವು ಶನಿವಾರದಂದು ಆರಂಭಗೊಂಡಿದ್ದು, ಅರ್ಹತಾ ಸುತ್ತಿನ ಪಂದ್ಯಗಳು ನಡೆದವು. ಮೊದಲ ಗುಂಪಿನಲ್ಲಿ ಮೊದಲ ಸ್ಥಾನ ಪಡೆದ ಟ್ರಿಗರ್ ಟ್ಯಾಕ್ಟಿಶನ್ಸ್, ಎರಡನೇ ಸ್ಥಾನದ ಬೆಂಗಳೂರು ಬ್ರಿಗೇಡ್ ತಂಡಗಳು ಸ್ನೈಪರ್ ಸ್ಕ್ವಾಡ್ ಮತ್ತು ರೆಡ್ರಮ್ ತಂಡಗಳಿಗಿಂತ ಹೆಚ್ಚಿನ ಸ್ಕೋರ್‌ಗಳೊಂದಿಗೆ ಫೈನಲ್‌ಗೇರಿದವು. 18 ಇವೆಂಟ್‌ಗಳಲ್ಲಿ ಟ್ರಿಗರ್ 11 ಗೆಲುವುಗಳೊಂದಿಗೆ 22 ಅಂಕ ಗಳಿಸಿತು. ಬೆಂಗಳೂರು 9 ಗೆಲುವು ಮತ್ತು 2 ಡ್ರಾಗಳೊಂದಿಗೆ 20 ಅಂಕ ಗಳಿಸಿತು. ಎರಡನೇ ಗುಂಪಿನಲ್ಲಿ 10 ಇವೆಂಟ್‌ಗಳಲ್ಲಿ ಮಿಂಚಿದ ಕ್ಯಾಲಿಬರ್ 21 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದರೆ, ಹುಬ್ಬಳ್ಳಿ ಶೂಟಿಂಗ್ ಸ್ಟಾರ್ಸ್ 9 ಗೆಲುವು 2 ಡ್ರಾಗಳೊಂದಿಗೆ 20 ಅಂಕ ಗಳಿಸಿ ಎರಡನೇ ಸ್ಥಾನ ಗಳಿಸಿತು. ಫೈನಲ್ ಪಂದ್ಯಗಳು ಭಾನುವಾರದಂದು ನಡೆಯಲಿವೆ.

ಕರ್ನಾಟಕಕ್ಕೆ ಅವಕಾಶ ನಿರಾಕರಿಸಿದ ಪ್ರವಾಸಿ ತಂಡ | ರಣಜಿ ಟ್ರೋಫಿ ಮೇಲೆ ಒಡೆತನ ಸಾಧಿಸಿದ ಕಾಶ್ಮೀರ

ಕಾಶ್ಮೀರ ಕ್ಲಾಸ್ ಆಟಕ್ಕೆ ರಣಜಿ ಕಿರೀಟ

- ಪಂದ್ಯ ಡ್ರಾ ಜಮ್ಮು ಕಾಶ್ಮೀರ ಮೊದಲ ಇನ್ನಿಂಗ್ಸ್ ಆಧಾರದ ಮೇಲೆ ಜಯ
- ಕರ್ನಾಟಕಕ್ಕೆ ತವರಿನಲ್ಲೇ ಆಘಾತ: ಮೊದಲ ಬಾರಿಗೆ ಪ್ರಶಸ್ತಿ ಗೆದ್ದ ಕಾಶ್ಮೀರ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ನಿರೀಕ್ಷೆಯಂತೆ ರಣಜಿ ಟ್ರೋಫಿ ಫೈನಲ್ ಪಂದ್ಯದ 5ನೇ ದಿನ ಔಪಚಾರಿಕತೆಗೆ ಸಾಕ್ಷಿಯಾಯಿತು. 8 ಬಾರಿಯ ಚಾಂಪಿಯನ್, ಆತಿಥೇಯ ಕರ್ನಾಟಕ ಪುಟಿದೇಳಲು ಅವಕಾಶವನ್ನೇ ನೀಡದ ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡ ಇದೇ ಮೊದಲ ಬಾರಿಗೆ ಪ್ರಶಸ್ತಿ ಮೇಲೆ ಒಡೆತನ ಸಾಧಿಸಿತು. ದೇಶವೇ ತಿರುಗಿ ನೋಡುವಂತಹ ಇತಿಹಾಸ ನಿರ್ಮಿಸಿತು.

ನಾಲ್ಕನೇ ದಿನದಾಟದ ಅತ್ಯಂಕ್ಕೆ 57 ಓವರ್‌ಗಳಿಗೆ 4ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿ, 477 ರನ್‌ಗಳ ಬೃಹತ್ ಮುನ್ನಡೆ ಕಾಯ್ದುಕೊಂಡಿದ್ದ ಕಾಶ್ಮೀರ, ಕೊನೆಯ ದಿನವೂ ಕರ್ನಾಟಕ ಬೌಲರ್‌ಗಳ ಮೇಲೆ ಸವಾರಿ ನಡೆಸಿತು.

ಕಾಶ್ಮೀರ ಆಡಿದ್ದೇ ಆಟ: ಮೊದಲ ದಿನ 94 ರನ್‌ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದ ಕಾಶ್ಮೀರ ಪರ 24 ವರ್ಷ ವಯಸ್ಸಿನ ಯುವ ಆಟಗಾರ ಕಮ್ರಾನ್ ಇಕ್ಬಾಲ್ (ಅಜೇಯ 160, 311 ಎಸೆತ, 16 ಬೌಂಡರಿ, 3 ಸಿಕ್ಸರ್), ಪ್ರಥಮ ದರ್ಜೆ ಪಂದ್ಯಗಳಲ್ಲಿ 2ನೇ ಶತಕ ಸಿಡಿಸಿದರು. ಶುಕ್ರವಾರ 32 ರನ್ ಗಳಿಸಿದ್ದ ಸಾಹಿಲ್ ಲೋಥ್ರಾ (ಅಜೇಯ 101, 226 ಎಸೆತ, 8 ಬೌಂಡರಿ, 3 ಸಿಕ್ಸರ್) ಸಹ ಶತಕ ಪೂರೈಸಿ ಕೊನೆಯ ದಿನದಾಟದಲ್ಲಿ ಮತ್ತೆ ಕರ್ನಾಟಕದ ಬೌಲರ್‌ಗಳ ಬೆವರಿಳಿಸಿದರು. ಈ ಜೋಡಿಯ 5ನೇ ವಿಕೆಟ್‌ನ ಮುರಿಯದ 197 ರನ್ (415 ಎಸೆತ) ಜೊತೆಯಾಟವು ರಾಜ್ಯದ ಪ್ರಮುಖ ಬ್ಯಾಟರ್‌ಗಳಾದ ಕರುಣ್ ನಾಯರ್, ಮಯಾಂಕ್ ಅಗರ್‌ವಾಲ್ ಹಾಗೂ ಕೆ.ಎಲ್. ರಾಹುಲ್ ಅವರು ಸೇರಿ 8 ಜನ ಬೌಲ್ ಮಾಡಿದರೂ ಜಗ್ಗದೇ ಮುಂದುವರಿಯಿತು. ಈ ಹಿನ್ನೆಲೆಯಲ್ಲಿ ಆತಿಥೇಯ ತಂಡದ ಹಿನ್ನಡೆಯಿಂದ ಮೈದಾನದಲ್ಲಿದ್ದ ಪ್ರೇಕ್ಷಕರು ಮೌನಕ್ಕೆ ಶರಣಾದರು. 113 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡ 342 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತಾದರೂ, ನಂತರದ ಆಟದಿಂದ ಪ್ರಯೋಜನವಿಲ್ಲ ಎಂಬುದನ್ನು ಅರಿತ ಕರ್ನಾಟಕ ಡ್ರಾಗೆ ಒಪ್ಪಿ ಮತ್ತೆ ಬ್ಯಾಟಿಂಗ್ ಮಾಡಲಿಲ್ಲ.

ಸಂಭ್ರಮದಲ್ಲಿ ಮಿಂದೆದ್ದ ಕಾಶ್ಮೀರ: ಈ ನಿರ್ಧಾರ ಹೊರ ಬೀಳುತ್ತಿದ್ದಂತೆಯೇ ಪ್ರವಾಸಿ ತಂಡದ ಆಟಗಾರರು ಮತ್ತು ಬೆಂಬಲಿಗರ ಕೇಕೆ ಮುಗಿಲುಮುಟ್ಟಿತು. ಭಯೋತ್ಪಾದನೆಯಿಂದ ಸದ್ದು ಮಾಡುತ್ತಿದ್ದ ಕಣವೆ ರಾಜ್ಯದ ಕ್ರಿಕೆಟ್‌ನ ಹೊಸ ಯುಗ ಈ ಮೂಲಕ ಆರಂಭವಾದಂತಾಯಿತು. ಪಂದ್ಯ ಡ್ರಾ ಆಗುತ್ತಲೇ ಮೈದಾನಕ್ಕೆ ಇಳಿದ ಜಮ್ಮು ಕಾಶ್ಮೀರದ ಆಟಗಾರರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಎಲ್ಲ ಆಟಗಾರರೂ ನರ್ತಿಸಿ ಸಂಭ್ರಮಿಸಿದರು. ಮೊದಲ ಬಾರಿ ಟ್ರೋಫಿ ಹಿಡಿದ ಆಟಗಾರರು ಕುಣಿದು ಕುಪ್ಪಳಿಸಿದರು.

ಚಿತ್ರಗಳು: ಮಂಜುನಾಥ ಜರತಾರಘರ



ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 1 ನೇ ಇನ್ನಿಂಗ್ಸ್:
584/10(173.1)
ಕರ್ನಾಟಕ 1 ನೇ ಇನ್ನಿಂಗ್ಸ್:
293/10(93.3)
ಜಮ್ಮು ಕಾಶ್ಮೀರ 2 ನೇ ಇನ್ನಿಂಗ್ಸ್;
342/4(113)
ಕಮರಾನ್ ಇಕ್ಬಾಲ್ ಬ್ಯಾಟಿಂಗ್; 160 ರನ್, 311 ಎ,16 ಬೌ, 3 ಸಿ, ಸಾಹಿಲ್ ಬ್ಯಾಟಿಂಗ್; 101 ರನ್, 226 ಎ, 8ಬೌ.3 ಸಿ.
ಬೌಲಿಂಗ್; ಪ್ರಸಿದ್ಧ ಕೃಷ್ಣ; 2 ವಿ, 12 ಓ, 42 ರನ್,ವೈಶಾಕ್; 1 ವಿ, 10 ಓ, 30 ರನ್,

ಪಂದ್ಯ ಶ್ರೇಷ್ಠ; ಶುಂಭಸಿಂಗ್ ಪುಂಡಿರ್

ಸರಣಿ ಶ್ರೇಷ್ಠ; ಆಕೀಬ್ ನಬಿ ದಾರ **60** ವಿಕೆಟ್

ಜಮ್ಮು ಕಾಶ್ಮೀರ ನಡೆದು ಬಂದ ಹಾದಿ

1859-60ರಲ್ಲಿ ಜಮ್ಮು ಕಾಶ್ಮೀರ ತಂಡ ಮೊದಲ ರಣಜಿ ಪಂದ್ಯ ಆಡಿತ್ತು. ಇದಾದ 23 ವರ್ಷದ ಬಳಿಕ 1982-83ನೇ ಋತುವಿನಲ್ಲಿ ಸರ್ವಿಸ್‌ನ ವಿರುದ್ಧ ಮೊದಲ ಜಯಗಳಿಸಿತ್ತು. 2013-14ರಲ್ಲಿ ರಣಜಿ ಟ್ರೋಫಿಯ ಕ್ವಾರ್ಟರ್ ಫೈನಲ್‌ನ ವರೆಗೂ ತಲುಪಿತ್ತು. ಜಮ್ಮು ಕಾಶ್ಮೀರದ ಪರ್ವೇಜ್ ರಸೂಲ್ ಹಾಗೂ ಉಮ್ರಾನ್ ಮಲಿಕ್ ಮಾತ್ರ ಈವರೆಗೆ ರಾಷ್ಟ್ರಿಯ ತಂಡದಲ್ಲಿ ಆಡಿದ್ದು, ಆಲ್‌ರೌಂಡರ್ ಅಬ್ದುಲ್ ಸಮದ್ ಅವರೊಂದಿಗೆ ರಸಿಕ್ ಸಲಾಂ ದಾರ್ ಮತ್ತು ಯುಧ್‌ವೀರ್ ಸಿಂಗ್ ಚರಕ್ ಐಪಿಎಲ್‌ನಲ್ಲಿ ಆಡಿದ್ದಾರೆ.

ಜಮ್ಮು-ಕಾಶ್ಮೀರ ಸರ್ಕಾರದಿಂದ ಬಹುಮಾನ

ರಣಜಿ ಟ್ರೋಫಿ ಗೆದ್ದ ಜಮ್ಮು ಮತ್ತು ಕಾಶ್ಮೀರ ತಂಡಕ್ಕೆ 2 ಕೋಟಿ ರೂ. ಬಹುಮಾನ ನೀಡುವುದಾಗಿ ಅಲ್ಲಿನ ಸರ್ಕಾರ ಘೋಷಣೆ ಮಾಡಿದೆ. ಗೆಲುವು ಖಾತ್ರಿಯಾದಂತೆ ಸ್ವಹಿತಾಸಕ್ತಿಯಿಂದ ಹುಬ್ಬಳ್ಳಿಗೆ ಬಂದು ಕೊನೆಯ ದಿನದ ಆಟವನ್ನು ವೀಕ್ಷಿಸಿದ ಜಮ್ಮು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ತಮ್ಮ ತಂಡದ ಆಟಗಾರ ನಡುವೆ ಕುಳಿತು ಪಂದ್ಯ ವೀಕ್ಷಿಸುವುದರ ಜೊತೆಗೆ ಆಟಗಾರರಿಗೆ ಪ್ರೋತ್ಸಾಹಿಸಿದರು. ಪಂದ್ಯ ಮುಗಿದ ಬಳಿ ಸ್ವತಃ ಮೈದಾನಕ್ಕೆ ಆಗಮಿಸಿ ವಿಜೇತ ತಂಡಕ್ಕೆ ಅಭಿನಂದನೆ ಸಲ್ಲಿಸಿ, ಫೋಟೋ ತೆಗೆಸಿಕೊಂಡರು. ಇದಲ್ಲದೆ ಪಂದ್ಯಾವಳಿ ಮುಕ್ತಾಯದ ನಂತರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ನಿಮ್ಮ ಬಗ್ಗೆ ನಮಗೆ ಹೆಮ್ಮೆಯಿದೆ. ಸರ್ಕಾರದಿಂದ ನಾವು 2 ಕೋಟಿ ರೂ. ಬಹುಮಾನ ಘೋಷಿಸುತ್ತೇವೆ ಎಂದು ಬರೆದುಕೊಂಡಿದ್ದಾರೆ. ಅವರಷ್ಟೇ ಅಲ್ಲದೆ, ಶನಿವಾರದಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಶಾಸಕ ಮಹೇಶ ಟೆಂಗಿನಕಾಯಿ ಸಹ ಪಂದ್ಯ ವೀಕ್ಷಿಸಿ ಆಟಗಾರಿಗೆ ಅಭಿನಂದಿಸಿದರು.

ಪ್ರಧಾನಿ ಮೋದಿ ಸೇರಿದಂತೆ ಗಣ್ಯರಿಂದ ಅಭಿನಂದನೆ

ಪಂದ್ಯ ಮುಕ್ತಾಯಗೊಳ್ಳುತ್ತಿದ್ದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಕಾಶ್ಮೀರ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಗೃಹ ಮಂತ್ರಿ ಅಮಿತ್ ಶಾ, ಸಚಿನ್ ತೆಂಡೂಲ್ಕರ್ ಸೇರಿದಂತೆ ಮಾಜಿ ಕ್ರಿಕೆಟಿಗರು, ರಾಜಕಾರಣಿಗಳು ಹಾಗೂ ಬೇರೆ ಬೇರೆ ಕ್ಷೇತ್ರದ ಗಣ್ಯರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ತಂಡಕ್ಕೆ ಅಭಿನಂದಿಸಿದರು.



ನಾವು ಪ್ರಶಸ್ತಿ ಪಡೆದಿರುವುದು ಇಡೀ ರಾಜ್ಯಕ್ಕೆ ಹೆಮ್ಮೆಯ ವಿಷಯ. ಕಳೆದ ವರ್ಷ ನಮ್ಮ ತಂಡ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾಗಲೇ ಮುಂದೊಂದು ದಿನ ನಮ್ಮಲ್ಲಿ ಪ್ರಶಸ್ತಿ ಗೆಲ್ಲುವ ಸಾಮರ್ಥ್ಯವಿದೆ ಎಂಬ ವಿಶ್ವಾಸ ಮೂಡಿತ್ತು. ಅದು ಇಂದು ಈಡೇರಿದೆ. ಈಗ ರಾಜ್ಯದ ಅಲ್ಲಿಯ ಯುವ ಆಟಗಾರರಿಗೆ ಪ್ರೇರಣೆ ಆಗಲಿದೆ. ಈ ಪಂದ್ಯದಲ್ಲಿ ನಾವು ಸಂಪೂರ್ಣ ತೊಡಗಿಕೊಂಡಿದ್ದೇವು. ಈ ವಿಜಯದಲ್ಲಿ ಪ್ರತಿಯೊಬ್ಬರೂ ಕೊಡುಗೆ ನೀಡಿದ್ದಾರೆ. ಬಲಿಷ್ಠ ಕರ್ನಾಟಕ ತಂಡದ ವಿರುದ್ಧ ಚಾಂಪಿಯನ್ ಆಗಿದ್ದು ತಂಡದ ವಿಶ್ವಾಸವನ್ನು ವೃದ್ಧಿಸಿದೆ.

■ ಪಾರಸ್ ಡೋಗ್ರಾ,
ನಾಯಕ, ಜಮ್ಮು-ಕಾಶ್ಮೀರ.

ಸೆಮಿಗೇರಲು ಮುಖಾಮುಖಿ | ಸೋತವರಿಗೆ ವಿಶ್ವಕಪ್‌ನಿಂದ ಗೇಟ್‌ಪಾಸ್

ಇಂದು ವಿಂಡೀಸ್-ಭಾರತ ಕ್ವಾರ್ಟರ್

ಕೋಲ್ಕತ್ತಾ: ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಭಾರತ ಹಾಗೂ ವಿಂಡೀಸ್ ತಂಡಗಳು ಭಾನುವಾರದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ವಿಶ್ವಕಪ್ ಕ್ವಾರ್ಟರ್‌ಫೈನಲ್ ಮಾದರಿ ಹೊಂದಿಲ್ಲ, ಲೀಗ್ ಹಂತದಲ್ಲಿ ಗೆದ್ದು ಬಂದ ತಂಡಗಳು ಸೂಪರ್-8ರ ಪಂದ್ಯಗಳಲ್ಲಿ ಮುಖಾಮುಖಿಯಾಗುತ್ತವೆ. ಅಲ್ಲಿಯ ಬಲಶಾಲಿ ತಂಡಗಳು ಸೆಮಿಫೈನಲ್‌ಗೇರುತ್ತವೆ. ಆದರೆ ವಿಂಡೀಸ್ ಮತ್ತು ಭಾರತ ತಲಾ ಒಂದು ಪಂದ್ಯಗಳನ್ನು ಸೋತಿವೆ. ಹೀಗಾಗಿ ಸೆಮೀಸ್ ಟಿಕೆಟಿಗಾಗಿ ನಿರ್ಣಾಯಕ ಪಂದ್ಯವೊಂದು ನಡೆಯಲಿದೆ. ಈ ನಿಟ್ಟಿನಲ್ಲಿ ಮಾದರಿಯ ಭಾಗವಾಗದಿದ್ದರೂ ಇದು ಕ್ವಾರ್ಟರ್ ಫೈನಲ್‌ನಂತೆ ಭಾಸವಾಗುತ್ತಿದೆ. ಟಿ20 ವಿಶ್ವಕಪ್ ಪಂದ್ಯಾವಳಿ ನಿಣಾಯಕ ಹಂತಕ್ಕೆ ತಲುಪಿದೆ. ಎರಡನೇ ಗುಂಪಿನ ಎರಡು ತಂಡಗಳು ಸೆಮಿಫೈನಲ್‌ಗೇರಿವೆ. ಇನ್ನೊಂದು ಗುಂಪಿನ ಒಂದು ತಂಡ ಈಗಾಗಲೇ ಸೆಮಿಗೇರಿದೆ. ಇನ್ನೊಂದು ತಂಡ ಸೆಮೀಸ್ ಟಿಕೆಟ್ ಪಡೆಯಬೇಕಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಮಾಡು ಇಲ್ಲವೇ ಮಡಿ: ದ.ಆಫ್ರಿಕಾ ಭಾರತಕ್ಕೆ ಮೊದಲ ಪಂದ್ಯದಲ್ಲಿ ಸೋಲಿಸಿ ವಿಲನ್ ಆಗಿತ್ತು. ಹಾಗೇ ಎರಡನೇ ಪಂದ್ಯದಲ್ಲಿ ವಿಂಡೀಸ್ ತಂಡವನ್ನು ಸೋಲಿಸಿ ಭಾರತಕ್ಕೆ ಅನುಕೂಲಮಾಡಿಕೊಟ್ಟಿತ್ತು.ಮೊದಲಪಂದ್ಯದಲ್ಲಿ ಜಿಂಬಾಬ್ವೆ ತಂಡವನ್ನು ವಿಂಡೀಸ್ ಭಾರೀ ಅಂತರದಲ್ಲಿ ಸೋಲಿಸಿ ರನ್ ರೇಟ್ ಬಲಪಡಿಸಿ ಕೊಂಡಿತ್ತು. ಹೀಗಿರುವಾಗಲೇ ಭಾರತ ಸೆಮಿಫೈನಲ್ ಪ್ರವೇಶಿಸಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡವನ್ನು ಸೋಲಿಸಲೇಬೇಕಿತ್ತು. ಇಲ್ಲವಾದರೆ ಭಾರತ ಸೆಮಿ ನಿರ್ಧಾರ ರನ್‌ರೇಟ್ ಮಾಡಬೇಕಾಗಿತ್ತು. ಆದರೆ ಸೋತ ವಿಂಡೀಸ್ ಕೂಡ ಭಾರತ ಮೇಲೆ ಗೆದ್ದರಷ್ಟೇ ಸೆಮಿ ಟಿಕೆಟ್ ಪಡೆಯಲಿದೆ. ಹೀಗಾಗಿ ಭಾನುವಾರದ ಪಂದ್ಯ ಕ್ವಾರ್ಟರ್‌ಫೈನಲ್ ಪಂದ್ಯವಾಗಲಿದೆ. ಇಲ್ಲಿ ರನ್‌ರೇಟ್ ಯಾವುದೇ ಕಾರಣಕ್ಕೂ ಕೆಲಸಕ್ಕೆ ಬಾರದು. ಒಂದು ರನ್‌ನಿಂದಲೂ ಗೆಲ್ಲುವ ತಂಡವೇ ಹೆಚ್ಚಿನ ಅಂಕಗಳೊಂದಿಗೆ ಸೆಮಿಗೇರಲಿವೆ.



ಪಿಚ್ ರಿಪೋರ್ಟ್

ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಇಬ್ಬನಿ ನಿರ್ಣಾಯಕ ಪಾತ್ರ ವಹಿಸಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಉಭಯ ವಿಭಾಗದಿಂದ ಉತ್ತಮ ಪ್ರದರ್ಶನವೇ ಮೂಡಿಬಂದಿದೆ. ಬ್ಯಾಟಿಂಗ್‌ಗೆ ಅಲ್ಪ ಸಹಕಾರಿಯಾಗಿದೆ. ಉದ್ದದ ಬೌಂಡರಿಗಳು ಬೌಲರ್‌ಗಳಿಗೆ ಅಲ್ಪ ಬಲ ನೀಡಬಹುದು.

ಭಾರತ ಬ್ಯಾಟಿಂಗ್ ಬಲವರ್ಧನೆ: ಹಿಂದಿನ ಪಂದ್ಯಗಳಿಗಿಂತಲೂ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಭಾರತೀಯ ಬ್ಯಾಟಿಗರು ಮಿಂಚಿದ್ದಾರೆ. ವಿಶ್ವಾಸ ಕಾಯ್ದುಕೊಂಡಿದ್ದಾರೆ. ತಮ್ಮ ಅಸಲು ಆಟ ಪ್ರದರ್ಶಿಸಿದ್ದಾರೆ. ತಂಡದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇಶಾನ್ ಕಿಶನ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದು, ಮಧ್ಯಮ ಕ್ರಮಾಂಕದ ಬ್ಯಾಟರ್ ರಿಂಕು ಸಿಂಗ್ ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡಿ ಫಲಿತಾಂಶ ಕಂಡಿದೆ ಭಾರತ. ಇನ್ನೂ ಮಧ್ಯಮ ಕ್ರಮಾಂಕದಲ್ಲಿ ಸೂರ್ಯ, ತಿಲಕ್ ಕೂಡ ಲಯಕ್ಕೆ ಮರಳಿದಂತಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಶಿವಂ ದುಬೆ ವಿಶ್ವಕಪ್‌ನಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ್ದು, ಅಕ್ಷರ್ ಕೂಡ ಬ್ಯಾಟಿಂಗ್ ಮಾಡುವ ಗಟ್ಸ್ ಹೊಂದಿದ್ದಾರೆ.

ದುಬಾರಿಯಾದ ಬೌಲರ್ಸ್, ಭಾರತಕ್ಕೆ ಚಿಂತೆ: ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರು ಕೂಡ ಭಾರತ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ ಎನ್ನಬಹುದು. ಬೂಮ್ರಾ, ಅಕ್ಷರ್ ಮತ್ತು ವರುಣ್ ಬಿಟ್ಟರೆ ಇನ್ನುಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ. ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಕೂಡ ಅಲ್ಪ ಹಿನ್ನಡೆ ಅನುಭವಿಸಿದ್ದಾರೆ. ಮುಖ್ಯವಾಗಿ ಬೇಕಾದಾಗ ವಿಕೆಟ್ ಕಿತ್ತಿ ನಿರಾಳ ನೀಡುತ್ತಿದ್ದ ಶಿವಂ ದುಬೆ ಭಾರೀ ದುಬಾರಿಯಾಗಿದ್ದಾರೆ.

ದ.ಆಫ್ರಿಕಾ-ಜಿಂಬಾಬ್ವೆ ಔಪಚಾರಿಕ ಪಂದ್ಯ

ಇನ್ನು ಭಾನುವಾರ ಸೂಪರ್-8ರ ಪಂದ್ಯಗಳ ಕೊನೆಯ ದಿನವಾಗಿದೆ. ಭಾರತ ಪಂದ್ಯಕ್ಕೂ ಮುನ್ನ ಮೊದಲಿಗೆ ದ.ಆಫ್ರಿಕಾ ಹಾಗೂ ಜಿಂಬಾಬ್ವೆ ಔಪಚಾರಿಕ ಪಂದ್ಯದಲ್ಲಿ ಎದುರಾಗಲಿವೆ. ಆಫ್ರಿಕಾ ಸೆಮಿಗೇರಿದೆ, ಜಿಂಬಾಬ್ವೆ ಈಗಾಗಲೇ ಹೊರಬಿದ್ದಿದೆ. ಈ ನಿಟ್ಟಿನಲ್ಲಿ ಈ ಪಂದ್ಯ ಅಂಕಪಟ್ಟಿ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಆದಾಗ್ಯೂ ಪಂದ್ಯಾವಳಿಯನ್ನು ಗೆಲುವಿನೊಂದಿಗೆ ಮುಗಿಸಲು ಜಿಂಬಾಬ್ವೆ, ಗೆಲುವಿನೊಂದಿಗೆ ಸೆಮಿಗೇರಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದಕ್ಕಾಗಿ ದ.ಆಫ್ರಿಕಾ ಫೈಟ್ ನಡೆಸಲಿದೆ.

ಪಾಕಿಸ್ತಾನ ಹೊರಕ್ಕೆ, ನ್ಯೂಜಿಲೆಂಡ್ ಸೆಮಿಗೆ

ಪಲ್ಲೆಕೆಲೆ: ದಾಖಲೆಯ ಜೊತೆಯಾಟ ನಿರ್ಮಿಸಿದ ಫರ್ಹಾನ್ ಮತ್ತು ಫಕರ್ ಜಮಾನ್ ಪಾಕಿಸ್ತಾನ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದು ಪಂದ್ಯ ಗೆಲ್ಲಿಸಿದರೂ ರನ್‌ರೇಟ್ ವೃದ್ಧಿಯಾಗದ ಕಾರಣದಿಂದ ಪಾಕ್ ತಂಡ ವಿಶ್ವಕಪ್‌ನಿಂದ ಹೊರಬಿದ್ದಿದೆ. ಇದರೊಂದಿಗೆ ಇಂಗ್ಲೆಂಡ್ ವಿರುದ್ಧ ಸೋತಿರುವ ನ್ಯೂಜಿಲೆಂಡ್ ಸೆಮಿಗೇರಿದೆ. ಪಂದ್ಯವನ್ನು ಪಾಕಿಸ್ತಾನ ದೊಡ್ಡ ಅಂತರದಲ್ಲಿ ಗೆಲ್ಲಬೇಕಾದ ಅನಿವಾರ್ಯದಲ್ಲಿತ್ತು. ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 212 ರನ್ ಚಚ್ಚಿತು. ಫರ್ಹಾನ್ ಶತಕ ಹಾಗೂ ಜಮಾನ್ ಅವರ ಆಟದೊಂದಿಗೆ ದೊಡ್ಡ ಸ್ಕೋರ್ ನಿರ್ಮಿಸಿದ್ದ ಪಾಕಿಸ್ತಾನ ರನ್‌ರೇಟ್ ಹೆಚ್ಚಿಸಿಕೊಳ್ಳುವುದಕ್ಕೆ ಲಂಕಾ ತಂಡವನ್ನು 147ರ ಒಳಗಾಗಿ ತಡೆಯಬೇಕಿತ್ತು. ಆದರೆ ಶಣಕ (76) ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಗುರಿ ಬೆನ್ನತ್ತುವಾಗ ಶ್ರೀಲಂಕಾ 6 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿ 5 ರನ್ ನಿಂದ ಸೋಲೊಪ್ಪಿಕೊಂಡಿತು.



- ಶಣಕ ಪರಾಕ್ರಮಕ್ಕೆ ಒಲಿಯದ ಜಯ
- ಗೆದ್ದರೂ ಹೊರಬಿದ್ದ ಪಾಕ್


ಜಮಾನ್-ಫರ್ಹಾನ್ ಮಿಂಚಿನಾಟ: ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ ಹಿಂದೆಂದೂ ಸಿಗದ ಭರ್ಜರಿ ಆರಂಭ ಸಿಕ್ಕಿತು. ಫರ್ಹಾನ್ ವಿಶ್ವಕಪ್‌ನಲ್ಲಿ ಎರಡನೇ ಶತಕ ಬಾರಿಸಿದ್ದು ವಿಶ್ವದಾಖಲೆಯೊಂದನ್ನು ಮಾಡಿದರು. ಸ್ಯಾಮ್ ಅಯೂಬ್ ಹಾಗೂ ಬಾಬರ್ ಅಜಂ ಅವರನ್ನು ಹೊರಕೂಡಿಸಿದ ನಂತರ ಆರಂಭಿಕರಾಗಿ ಕಣಕ್ಕಿಳಿದ ಫಕರ್ ಜಮಾನ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರಂಭದಿಂದಲೂ ಪರಾಕ್ರಮ ಮೆರೆದ ಈ ಜೋಡಿ ದಾಖಲೆಯ 176 ರನ್‌ಗಳಿಸಿತು. ಜಮಾನ್ 84 ಕ್ಕೆ ವಿಕೆಟ್ ಒಪ್ಪಿಸಿದರು. ಫರ್ಹಾನ್ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ವಿರಾಟ್ ಕೊಹ್ಲಿ ದಾಖಲೆ ಅಳಿಸಿದರು. ಇದಲ್ಲದೆ, 59 ಬಾಲ್‌ಗಳಲ್ಲಿ ಶತಕ ಪೂರೈಸಿ ಪಂದ್ಯಾವಳಿಯಲ್ಲಿ ಎರಡು ಶತಕ ಬಾರಿಸಿದ 2ನೇ ಆಟಗಾರ ಎನಿಸಿದರು. 179 ರನ್‌ಗಳಿಗೆ ಎರಡನೇ ವಿಕೆಟ್ ಕಳೆದುಕೊಂಡ ಪಾಕಿಸ್ತಾನ ಭಾರೀ ಕುಸಿತ ಅನುಭವಿಸಿತು. ಮುಂದಿನ ಬ್ಯಾಟರ್‌ಗಳು ಬರುತ್ತಲೇ ಪೆವಿಲಿಯನ್ ಹೊರಟತೊಡಗಿದರು. ಕೊನೆಯ ಮೂರೂವರೆ ಓವರುಗಳಲ್ಲಿ ಪಾಕಿಸ್ತಾನ 6 ವಿಕೆಟ್‌ಗಳನ್ನು ಕಳೆದುಕೊಂಡಿತು.

ಮೇನಲ್ಲಿ ಬೆಂಗಳೂರಲ್ಲಿ ಎರಡು ಎಟಿಪಿ ಕೂಟ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಮೇ ತಿಂಗಳಲ್ಲಿ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮೇ 11ರಿಂದ 17ರವರೆಗೆ ಮತ್ತು ಮೇ 18ರಿಂದ 24ರವರೆಗೆ ನಿರಂತರವಾಗಿ ಎರಡು ಎಟಿಪಿ ಚಾಲೆಂಜರ್ ಟೂರ್ನಿಗಳನ್ನು ಆಯೋಜಿಸಲು ಸಜ್ಜಾಗಿದೆ.

ಈ ಎರಡು ವಾರಗಳ ಸ್ಪರ್ಧೆಗಳು ಪುರುಷರ ವೃತ್ತಿಪರ ಟೆನಿಸ್‌ನಲ್ಲಿ ಬೆಂಗಳೂರನ್ನು ದೇಶದ ಕೇಂದ್ರಬಿಂದುವಾಗಿಸಲಿದೆ. ಆಟಗಾರರಿಗೆ ಸ್ವದೇಶದಲ್ಲೇ ನಿರಂತರವಾಗಿ ಅಂಕಗಳನ್ನು ಗಳಿಸುವ ಅವಕಾಶ ದೊರೆಯಲಿದೆ. ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ ಸ್ಪರ್ಧೆಗಳ ಮತ್ತು ಎಟಿಪಿ ಟೂರ್ ನಡುವಿನ ಸೇತುವೆಯಾಗಿ ಇರುವ ಚಾಲೆಂಜರ್ ಸ್ಪರ್ಧೆಗಳು ಉದಯೋನ್ಮುಖ ಆಟಗಾರರ ಬೆಳವಣಿಗೆಗೆ ಮಹತ್ವದ ಪಾತ್ರವಹಿಸುತ್ತವೆ.

ಇತ್ತೀಚೆಗೆ ನಡೆದ ಬೆಂಗಳೂರು ಓಪನ್ 125ರ ಯಶಸ್ವಿ 10ನೇ ಆವೃತ್ತಿ ಹಾಗೂ ಈ ತಿಂಗಳ ಆರಂಭದಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ ಭಾರತ ಸಾಧಿಸಿದ 3-2 ಡೇವಿಸ್ ಕಪ್ ಜಯದ ಬಳಿಕ ಈ ಘೋಷಣೆ ಬಂದಿದೆ. ಇದು ಕೆಎಸ್‌ಎಲ್‌ಟಿಎಯ ದೀರ್ಘಕಾಲೀನ ಯೋಜನೆಯ ಭಾಗವಾಗಿದೆ. ನಿರಂತರವಾಗಿ ಎರಡು ಚಾಲೆಂಜರ್ 50 ಟೂರ್ನಿಗಳನ್ನು ಪಡೆಯುವುದು ಬೆಂಗಳೂರನ್ನು ಉನ್ನತ ಮಟ್ಟದ ಟೆನಿಸ್ ಕೇಂದ್ರವಾಗಿ ರೂಪಿಸುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ.




ದೇಶದಲ್ಲೇ ಬಲಿಷ್ಠ ಅಂತಾರಾಷ್ಟ್ರೀಯ ಕ್ಯಾಲೆಂಡರ್ ನಿರ್ಮಾಣವಾದರೆ ಆಟಗಾರರು, ತರಬೇತುದಾರರು, ಅಧಿಕಾರಿಗಳು ಹಾಗೂ ಕ್ರೀಡಾಂಗಣದಲ್ಲಿ ಕುಳಿತು ನೋಡುವ ಯುವ ಪ್ರತಿಭೆಗಳಿಗೂ ಲಾಭವಾಗುತ್ತದೆ. ಈ ಸಾಧನೆ ಸಾಧ್ಯವಾಗಲು ಸಹಕರಿಸಿದ ಕ್ರೀಡಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಹಾಗೂ ನಮ್ಮ ಪ್ರಾಯೋಜಕರಿಗೆ ಕೃತಜ್ಞತೆಗಳು, ಎಂದು ಮಹೇಶ್ವರ ರಾವ್ (ಐಎಎಸ್), ಮಹಾನಗರ ಆಯುಕ್ತರು ಹಾಗೂ ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಹೇಳಿದರು.

ಇದಕ್ಕೂ ಮುನ್ನ ಬೆಂಗಳೂರು ನಗರದಲ್ಲಿ ಡೇವಿಸ್ ಕಪ್, ಬೆಂಗಳೂರು ಓಪನ್ (ಚಾಲೆಂಜರ್ 125) ಸೇರಿದಂತೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳು ಯಶಸ್ವಿಯಾಗಿ ನಡೆದಿವೆ. ಸುಮಿತ್ ನಾಗಲ್, ಪ್ರಜ್ನೇಶ್ ಗುನ್ನೇಶ್ವರನ್ ಅವರ ವೃತ್ತಿಜೀವನಕ್ಕೆ ಇಲ್ಲಿ ನಡೆದ ಸ್ಪರ್ಧೆಗಳು ಮಹತ್ವದ ವೇದಿಕೆ ಒದಗಿಸಿವೆ. ಇತ್ತೀಚೆಗೆ ವೈಷ್ಣವಿ ಅಡ್ಕರ್ ಸಾಧಿಸಿದ ಮಹತ್ವದ ಪ್ರಶಸ್ತಿ ಜಯವೂ ಬೆಂಗಳೂರಿನ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5910

5909 ಉತ್ತರ

ಎಡದಿಂದ ಬಲಕ್ಕೆ:
1.ಭುವನಮನೋಹರಿ
3.ಶಿವ 4.ಕಜ್ಜಿ 5.ಬೀಜಾಣು
7.ಮಜಕೂರು 9.ಪಾಕೃತ
11.ಮಂದಲಿಗೆ
13.ಮಣಭಾರ
15.ಕೆಲಬಲ 16.ತಿಲಗಾತ್ರ
ಮೇಲಿನಿಂದ ಕೆಳಕ್ಕೆ :
1.ಭುವನಜ 2.ಕೃಪಾಕರಿ
5.ಬೀರು 6.ಅಣು
8.ಕೂಡಲಿ 10.ಪಾಷಾಣ
11.ಮಂದಾನಿಲ
12.ಗೆಜ್ಜೆಟೀಕೆ
13.ಮಧುಮತಿ
14.ರಸತತ್ವ

ಎಡದಿಂದ ಬಲಕ್ಕೆ
1.ಕರ್ನಾಟಕವನ್ನಾಳಿದ ಪ್ರಾಚೀನ ರಾಜವಂಶ (3)
3.ವಿಶ್ವವನ್ನಾಳುವವನು-ಲೋಕನಾಯಕ (4)
5.ಕರುಣಾಸ್ವರೂಪಿ (4)
6.ಅಪಾರಪ್ರಮಾಣವನ್ನು ಸೂಚಿಸುವ ಪದ (4)
8.ಸಮಾಜದ ಒಟ್ಟು ಕಲ್ಯಾಣವನ್ನು ಹೀಗೆನ್ನುತ್ತೇವೆ (4)
11.ಅಡುಗೆ ಎಂಬ ಹೆಸರಿನ ರಾಕ್ಷಸನ ಶತ್ರು-ಇಂದ್ರ (4)
14.ಸೊಗಸು ಹೆಚ್ಚಾಗು-ಬಣ್ಣವೇರು (4)
15.ಕರ್ನಾಟಕದ ಭಾಷೆ ಮಾತನಾಡುವ ವ್ಯಕ್ತಿ (4)
16.ಬಂಧಮುಕ್ತಗೊಳಿಸು (4)
17.ತೂಕ ಅಳೆಯುವ ಸಾಧನವಿಲ್ಲಿ ತಿರುಗಿದೆ (3)
ಮೇಲಿನಿಂದ ಕೆಳಕ್ಕೆ
1.ಕೊಡದಲ್ಲಿ ಹುಟ್ಟಿದವನು-ಅಗಸ್ತ್ಯ (4)
2.ಪರಿವರ್ತಿಸು-ತಿರುವು ಮಾಡು (4)
3.ಈಕೆ ಗೆಲುವಿನ ಅಧಿದೇವತೆ (4)
4.ರಾಮಭಕ್ತೆ ಈ ಕುಲದ ಮಹಿಳೆ (3)
7.ಸಸ್ಯಗಳಿಂದ ದೊರಕುವ ಆಹಾರ ಪದಾರ್ಥ (4)
9.ಇತ್ತೀಚೆಗೆ ಬೆಳೆದ ಹೊಸ ಪೈರು (4)
10.ಆಶ್ಚರ್ಯಪಡು ಎಂಬರ್ಥದ ನುಡಿಗಟ್ಟು (4)
12.ಕಡಿಯ ನಡುವೆ ಕರಬೂಜ ಜಾತಿಯ ಹಣ್ಣು ಇದೆ (4)
13.ಸಾಧನೆಗಾಗಿ ಮಾನ್ಯತೆ ಪಡೆದವನು (4)
14.ಲಾಕ್ಷಣಿಕವಾಗಿ ಸಂಪತ್ತು-ಧನ (3)

ಕಿರುಸುದ್ದಿ

ಧರ್ಮಜಾಗೃತಿ ಸಭೆ ಇಂದು

ಲಕ್ಷ್ಮೇಶ್ವರ: ಲಕ್ಷ್ಮೇಶ್ವರದ ಅಖಂಡ ಭಾರತ ಯುವಸೇನೆಯಿಂದ ಶಿವಾಜಿ ಮಹಾರಾಜ ಜಯಂತಿ ಅಂಗವಾಗಿ ಮಾ.1ರಂದು ಧರ್ಮಜಾಗೃತಿ ಸಭೆ ಮತ್ತು ಶೋಭಾಯಾತ್ರೆ ನಡೆಯಲಿದೆ. ಬೆಳಗ್ಗೆ 10ಕ್ಕೆ ಪಟ್ಟಣದ ಪಂಪವೃತ್ತದಿಂದ ಪ್ರಮುಖ ಮಾರ್ಗದಲ್ಲಿ ಶಿವಾಜಿ ಮಹಾರಾಜರ ಮೂರ್ತಿಯೊಂದಿಗೆ ಶೋಭಾಯಾತ್ರೆ ನಡೆಯಲಿದೆ. ಸಂಜೆ 5ಕ್ಕೆ ಪಟ್ಟಣದ ಪರ್ವತ ಮಲ್ಲಯ್ಯ ದೇವಸ್ಥಾನದ ಹತ್ತಿರ ಧರ್ಮಜಾಗೃತಿ ಸಭೆ ನಡೆಯಲಿದೆ. ಬೆಳ್ಳಟ್ಟಿಯ ರಾಮಲಿಂಗೇಶ್ವರ ಮಠದ ಬಸವರಾಜ ಸ್ವಾಮೀಜಿ ಸಾನ್ನಿಧ್ಯವಹಿಸುವರು. ರಾಷ್ಟ್ರ ರಕ್ಷಣಾ ಪಡೆಯ ಸಂಸ್ಥಾಪಕ ವಾಗ್ಮೀ ಪುನೀತ್ ಕೆರೆಹಳ್ಳಿ ದಿಕ್ಸೂಚಿ ಭಾಷಣ ಮಾಡುವರು. ಸುನೀಲ ಮಹಾಂತಶೆಟ್ಟರ, ಸಂಕಲ್ಪ ಜಗದೀಶ ಶೆಟ್ಟರ, ಶರಣು ಅಂಗಡಿ ಉಪಸ್ಥಿತರಿರುವರು. ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಕಾಮ ರತಿ ಪ್ರತಿಷ್ಠಾಪನೆ ನಾಳೆ

ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದಲ್ಲಿ ಮಾ.3ರಂದು ಆಚರಿಸಲಾಗುವ ಹೋಳಿ ಹುಣ್ಣಿಮೆ ಅಂಗವಾಗಿ ರಂಗ ಪಂಚಮಿ ಹೋಳಿಯಾಟವನ್ನು ಶಾಂತಿಯುತವಾಗಿ ಆಚರಿಸಬೇಕೆಂದು ಅಭಿವೃದ್ಧಿ ಅಧಿಕಾರಿ ಅಮೀರನಾಯಕ ವಿನಂತಿಸಿಕೊಂಡರು. ಈ ಕುರಿತು ಗುರುವಾರ ಗ್ರಾಮ ಪಂಚಾಯತಿಯಲ್ಲಿ ಗ್ರಾಮಸ್ಥರ ಶಾಂತಿ ಸಭೆಯಲ್ಲಿ ಈ ಕುರಿತು ವಿವರಿಸಿದ ಅವರು, ಮಾ.2ರಂದು ಕಾಮ ರತಿಯನ್ನು ಪ್ರತಿಷ್ಠಾಪಿಸಬೇಕು. ಮಾ.3 ರಂದು ಹೋಳಿಯಾಟ, ಕಾಮದಹನದೊಂದಿಗೆ ಹೋಳಿ ಹಬ್ಬವನ್ನು ಆಚರಿಸುವ ಕುರಿತು ಗ್ರಾಮದ ಗಣ್ಯರ ಸಲಹೆಯಂತೆ ನಿರ್ಧರಿಸಲಾಗಿದೆ. ವಿದ್ಯಾರ್ಥಿಗಳ ಪರೀಕ್ಷಾ ಸಮಯವಿರುವುದರಿಂದ ಡಿಜೆ, ಜೋರಾಗಿ ಹಲಗೆ ಬಾರಿಸುವುದು ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ಜೋರಾಗಿ ಧ್ವನಿವರ್ಧಕ ಬಳಕೆ ನಿಷೇಧಿಸಲಾಗಿದೆ. ಕಾನೂನು ಉಲ್ಲಂಘನೆ ಮಾಡಿದರೆ ದಂಡ ವಿಧಿಸಲಾಗುವುದು ಎಂದರು. ಸೇರಿದ ಗ್ರಾಮಸ್ಥರು ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಿದರು.

ಸೆಂಟ್ರಲ್ ಎಫ್‌ಐಡಿಗೆ ಸಲಹೆ

ನರಗುಂದ: ಈಗಾಗಲೇ ರಾಜ್ಯ ಸರ್ಕಾರದ ಎಫ್‌ಐಡಿ ಹೊಂದಿರುವ ರೈತರು ಕೇಂದ್ರ ಸರ್ಕಾರದಿಂದ ದೊರೆಯುವ ಆರ್ಥಿಕ ಲಾಭ ಪಡೆಯಲು ಸೆಂಟ್ರಲ್ ಎಫ್‌ಐಡಿ ಮಾಡಿಸಬೇಕು. ಕೇಂದ್ರ ಸರ್ಕಾರದ ಮಾನದಂಡಗಳ ಪ್ರಕಾರ ಫ್ರೂಟ್ ಹಾಗೂ ಭೂಮಿ ದತ್ತಾಂಶಗಳನ್ನು ನಿಯಮಿತವಾಗಿ ಸಿಂಕ್ರೊನೈಜ್ ಮಾಡುವುದು ಮುಖ್ಯವಾಗಿದೆ. ಫ್ರೂಟ್ ತಂತ್ರಾಂಶದಲ್ಲಿ ರೈತರ ಇ-ಕೆವೈಸಿ ಮತ್ತು ಸಹಮತಿ ಪತ್ರವನ್ನು ವಿದ್ಯುನ್ಮಾನ ರೀತಿಯಲ್ಲಿ ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದಿಂದ ರೈತರಿಗೆ ನೋಂದಾಯಿತ ರೈತ ಸಂಖ್ಯೆ ನೀಡಲಾಗುತ್ತದೆ. ಈ ಸಂಖ್ಯೆಯನ್ನು ಪಿ.ಎಂ.ಕಿಸಾನ್ ಯೋಜನೆ ಸೇರಿದಂತೆ ಎಲ್ಲ ಯೋಜನೆಗಳಲ್ಲೂ ಕಡ್ಡಾಯವಾಗಿ ಉಪಯೋಗಿಸಲಾಗುತ್ತದೆ. ಕೂಡಲೇ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ, ಗ್ರಾಮ ಒನ್ ಕೇಂದ್ರ, ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಗಳಿಗೆ ಸಂಪರ್ಕಿಸಬೇಕು. ರೈತರು ಬರುವಾಗ ತಮ್ಮ ಆಧಾರ್ ಕಾರ್ಡ್, ಆಧಾರ್‌ನೊಂದಿಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆ, ಪಾಸ್ ಬುಕ್ ಝರಾಕ್ಸ್ ಹಾಗೂ ತಮ್ಮೆಲ್ಲ ಪಹಣಿಗಳನ್ನು ಕಡ್ಡಾಯವಾಗಿ ತರಬೇಕು. ಈ ಮಾಹಿತಿ ಮತ್ತು ಬಾಕಿಯಿರುವ ಫಲಾನುಭವಿಗಳ ಪಟ್ಟಿಯನ್ನು ಈಗಾಗಲೇ ಸಂಬಂಧಿಸಿದ ಗ್ರಾಮ ಒನ್ ಕೇಂದ್ರಗಳಿಗೆ ತಲುಪಿಸಲಾಗಿದ್ದು, ರೈತರು 4-5 ದಿನಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಮಾಹಿತಿಗೆ ರೈತ ಸಂಪರ್ಕ ಕೇಂದ್ರ ಸಂಪರ್ಕಿಸಲು ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಕುಲಕರ್ಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	5011-9413
ಅಜವಾನ	8700-10519
ಅಲಸಂದಿ	1809-6219
ಕಡಲೆ	1000-5559
ಉದ್ದು	3424-6250
ಹವೀಜ	9319-9319
ಒಣಮೆನಸಿಕಾಯಿ	2629-59619
ಹೆಸರು	1102-8171
ಹುರಳಿ	2724-4347
ಜೋಳ	1577-4915
ಗೋವಿನಜೋಳ	1461-1800
ಮಡಿಕೆ	10672-10672
ಸಾಸವಿ	4844-6169
ಸಬ್ಬಸಗಿ	7651-7651
ಕುಸಬಿ	4369-5402
ಎಳ್ಳು	5569-5569
ಸೂರ್ಯಕಾಂತಿ	5379-6669
ತೊಗರಿ	1169-5889
ಗೋಧಿ	1767-5459



ನರಗುಂದ: ಹುಯಿಲಗೋಳ ಗ್ರಾಮದ ಶ್ರವಣ ದೋಷವುಳ್ಳ 5ನೇ ತರಗತಿ ವಿದ್ಯಾರ್ಥಿ ಸಮರ್ಥ ನೀಲಪ್ಪ ಹಂಚಿನಾಳಗೆ ಶಾಸಕರ ಅನುದಾನ 66.5 ರೂ. ವೆಚ್ಚದಲ್ಲಿ ಖರೀದಿಸಿದ ಶ್ರವಣ ಯಂತ್ರವನ್ನು ಶಾಸಕ ಸಿ.ಸಿ. ಪಾಟೀಲ ಅವರು ವಿತರಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾಸ್ಪತ್ರೆ ಆಡಳಿತಾಧಿಕಾರಿ ಡಾ.ಜಡೇಶ ಭದ್ರಗೌಡ್ರ, ಕಿರಣ ಜೋಶಿ, ನಿಜಗುಣಪ್ಪ ಹೂಗಾರ, ಪ್ರಕಾಶ ಅರಹುಣಶಿ, ನೀಲಪ್ಪ ಹಂಚಿನಾಳ, ಶಂಭುಲಿಂಗಪ್ಪ ಹಾಳಕೇರಿ ಇತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

ಗದಗ: ಬರುವ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದ ಈ ಹಿಂದಿನ ಘೋಷಣೆ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶುಕ್ರವಾರ ನಗರದಲ್ಲಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಮತ್ತು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಸಂಯುಕ್ತ ಆಶ್ರಯದಲ್ಲಿ ನಗರದ ಮಹಾತ್ಮಗಾಂಧಿ ಸರ್ಕಲನಲ್ಲಿ ಪ್ರತಿಭಟಿಸಿ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಭಾಗ್ಯಜ್ಯೋತಿ ಹಡಪದ ಮಾತನಾಡಿ, ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಹೋರಾಟದ ಸಂದರ್ಭದಲ್ಲಿ ನಾಲ್ಕನೇ ದಿನ ಪದಾಧಿಕಾರಿಗಳ ಜೊತೆಯಲ್ಲಿ ಮುಖ್ಯಮಂತ್ರಿಗಳು ಸಂಘವು ಮುಂದಿಟ್ಟ ಬೇಡಿಕೆಗಳನ್ನು ಕೇಳಿಸಿಕೊಂಡು, ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಗ್ಯಾರಂಟಿ ಕನಿಷ್ಠ ರೂ.10,000 ಭರವಸೆ ನೀಡಿದ್ದು ಇಲ್ಲಿಯವರೆಗೆ ಆದೇಶವಾಗಿಲ್ಲ. ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಈಗಿರುವ ರೂ.5,000 ಗೌರವಧನವನ್ನು ರೂ. 8,000 ಮಾಡುವುದಾಗಿ ಭರವಸೆ ನೀಡಲಾಗಿತ್ತು. ಇಲ್ಲಿಗೆ 14 ತಿಂಗಳಾದರೂ ಸಹ ಭರವಸೆ ಕೊಟ್ಟಂತೆ ಹೆಚ್ಚಳದ ಆದೇಶ ಮಾಡಿಲ್ಲ. ಕಾರ್ಯಕರ್ತೆಯರ ಕೆಲಸಕ್ಕೆ ಕತ್ತರಿ ಮುಖ್ಯವಾಗಿ ರಾಜ್ಯದಲ್ಲಿ ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಕಾರ್ಯಕರ್ತೆಯರನ್ನು ಕೈಬಿಡುವುದಾಗಿ ಹೊರಡಿಸಿರುವ ಆದೇಶ, ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಉಲ್ಲಂಘನೆಯಾಗಿದೆ ಎಂದರು. ಲಕ್ಷ್ಮೀ ಪೂಜಾರ, ಗೌರವ್ವ ಕಟ್ಟಿಮನಿ, ಸುಂದ್ರಮ್ಮ ಪಾಟೀಲ, ಶೋಭಾ ಮಲ್ಲನಗೌಡ್ರ, ಬಡಿಮಾ ಶೇಖ, ಪ್ರಭಾವತಿ ಬೆನಹಾಳ, ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ಅಧ್ಯಕ್ಷರು, ಕಾರ್ಯಕರ್ತರು ಆಶಾ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.



ಗದಗ: ಬರುವ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದ ಈ ಹಿಂದಿನ ಘೋಷಣೆ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಮತ್ತು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಸಂಯುಕ್ತ ಆಶ್ರಯದಲ್ಲಿ ನಗರದ ಮಹಾತ್ಮಗಾಂಧಿ ಸರ್ಕಲ್‌ನಲ್ಲಿ ಪ್ರತಿಭಟಿಸಿ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲೆಯಾದ್ಯಂತ ಸುಗಮವಾಗಿ ಜರುಗಿದ ದ್ವಿತೀಯ ಪಿಯುಸಿ ಪರೀಕ್ಷೆ

343 ವಿದ್ಯಾರ್ಥಿಗಳು ಗೈರು



ಗದಗ: ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿದ್ದು, ಜಿಲ್ಲೆಯ 24 ಪರೀಕ್ಷಾ ಕೇಂದ್ರಗಳಲ್ಲಿ ಶನಿವಾರ ನಡೆದ ಕನ್ನಡ ವಿಷಯ ಪರೀಕ್ಷೆಯಲ್ಲಿ ನೋಂದಾಯಿಸಿಕೊಂಡಿದ್ದ 9,361 ವಿದ್ಯಾರ್ಥಿಗಳ ಪೈಕಿ 9,288 ವಿದ್ಯಾರ್ಥಿಗಳು ಹಾಜರಾಗಿದ್ದು, 343 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇನ್ನು ಯಾವುದೇ ವಿದ್ಯಾರ್ಥಿಗಳು ಡಿಬಾರ್ ಆಗಿಲ್ಲ ಎಂದು ಡಿಡಿಪಿಯು ಎಸ್.ಬಿ.ಮಸನಾಯಕ ತಿಳಿಸಿದ್ದಾರೆ.

ಶನಿವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಕನ್ನಡ ವಿಷಯ ಪರೀಕ್ಷೆ ನಡೆಯಿತು. ದ್ವಿತೀಯ ಪಿಯುಸಿ ಪರೀಕ್ಷೆ ಸುಗಮವಾಗಿ ಜರುಗಲು ಮತ್ತು ಶಿಸ್ತು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಜಿಲ್ಲೆಯ 24 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಪರೀಕ್ಷಾ ಸಮಯದಲ್ಲಿ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿತ್ತು. ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯುವ ಮೂಲಕ ರಾಜ್ಯಮಟ್ಟದಲ್ಲಿ ಜಿಲ್ಲೆಯು ಒಂದಂಕಿ ರ್‍ಯಾಂಕ್ ಪಡೆಯುವಂತೆ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಪರೀಕ್ಷೆಗೂ ಮುನ್ನ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಅಧಿಕಾರಿಗಳು ಪರೀಕ್ಷಾ ನಿಯಮಗಳನ್ನು ಹಾಗೂ ಮಾಹಿತಿ ನೀಡಿದರು.

550 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು

ಮುಂಡರಗಿ: ಪಟ್ಟಣದ ಶ್ರೀ ಜ.ಅ.ವಿ.ಸಮಿತಿಯ ಜ.ಅ.ಪದವಿ ಪೂರ್ವ ಕಾಲೇಜು ಮತ್ತು ಸರಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸ್ತುತ ಸಾಲಿನ ಪಿಯುಸಿ ವಾರ್ಷಿಕ ಪರೀಕ್ಷೆಗಳು ಶಾಂತಿ, ಸುವ್ಯವಸ್ಥೆಯಿಂದ ಜರುಗಿದವು.

ಪರೀಕ್ಷೆ ಆಗಮಿಸುತ್ತಿರುವ ವಿದ್ಯಾರ್ಥಿಗಳನ್ನು ಜ.ಅ.ಪಿಯು ಕಾಲೇಜಿನಲ್ಲಿ ಕೇಂದ್ರದ ಮುಖ್ಯ ಅಧೀಕ್ಷಕ ಪಿ.ಎಂ.ಕಲ್ಲನಗೌಡ್ರ ಮತ್ತು ಪರೀಕ್ಷೆಯ ಮಾರ್ಗಾಧಿಕಾರಿ ಪಿ.ಎಂ.ಪಾಟೀಲ ಹಾಗೂ ಸಿಬ್ಬಂದಿ ಗುಲಾಬಿ ಹೂ ನೀಡಿ ಸ್ವಾಗತಿಸಿ ಪರೀಕ್ಷೆಗೆ ಬರಮಾಡಿಕೊಂಡರು. ಇನ್ನು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಕೊಟ್ರೇಶ ಅಂಗಡಿ ಮತ್ತು ಮುಖ್ಯ ಅಧೀಕ್ಷಕ ಫಕೀರಸಾಬ ಕಲಕೇರಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಸ್ವಾಗತಿಸಿದರು.

ಜಗದ್ಗುರು ಅನ್ನದಾನೀಶ್ವರ ಪದವಿಪೂರ್ವ ಪರೀಕ್ಷಾ ಕೇಂದ್ರದಲ್ಲಿ ತಾಲೂಕಿನ ಕಲಕೇರಿ, ಡಂಬಳ, ಪಟ್ಟಣದ ಸರ್ಕಾರಿ ಪಿಯು ಕಾಲೇಜು, ಅಂಬೇಡ್ಕರ್ ಪಿಯು ಕಾಲೇಜು ಮತ್ತು ವಿನೂತನ ಪಿಯು ಕಾಲೇಜಿನ ವಿದ್ಯಾರ್ಥಿಗಳು ಕನ್ನಡ ಭಾಷಾ ಪರೀಕ್ಷೆಯನ್ನು ಬರೆದರು. ಒಟ್ಟು 567 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಅದರಲ್ಲಿ 550 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 17 ವಿದ್ಯಾರ್ಥಿಗಳು ಗೈರಾಗಿದ್ದರು. ಸರ್ಕಾರಿ ಪಿಯು ಕಾಲೇಜ ಪರೀಕ್ಷಾ ಕೇಂದ್ರದಲ್ಲಿ ತಾಲೂಕಿನ ಹಿರೇವಡ್ಡಟ್ಟಿ, ಪೇಠಾಲೂರ, ಕೊಪ್ಪಳ ತಾಲೂಕಿನ ಅಳವಂಡಿ ಮತ್ತು ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಪಿಯು ಕಾಲೇಜು ಮತ್ತು ಎಂ.ಎಸ್.ಡಂಬಳ ಸಂಯುಕ್ತ ಮಹಿಳಾ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಒಟ್ಟು 453 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಣಿಮಾಡಿಕೊಂಡಿದ್ದರು. ಅದರಲ್ಲಿ 440 ವಿದ್ಯಾರ್ಥಿಗಳು ಹಾಜರಾಗಿದ್ದರು. 13 ವಿದ್ಯಾರ್ಥಿಗಳು ಗೈರಾಗಿದ್ದರು.



ಪರೀಕ್ಷೆ ಬರೆದ 490 ವಿದ್ಯಾರ್ಥಿಗಳು



ಲಕ್ಷ್ಮೇಶ್ವರ: ಪಟ್ಟಣದಲ್ಲಿ 2025-26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಶನಿವಾರದಿಂದ ಪ್ರಾರಂಭವಾಗಿದ್ದು, ಯಾವುದೇ ಅಹಿತಕರ ಘಟನೆಗಳಿಲ್ಲದೆ ಸುಸೂತ್ರವಾಗಿ ಜರುಗಿದವು.

ಪ್ರಥಮ ದಿನವಾದ ಶನಿವಾರ ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಉತ್ಸಾಹದಿಂದ ಆಗಮಿಸುತ್ತಿರುವದು ಕಂಡು ಬಂದಿತು. ಕನ್ನಡ ಭಾಷೆಯ ವಿಷಯದ ಪರೀಕ್ಷೆಯನ್ನು ವಿದ್ಯಾರ್ಥಿಗಳು ಯಶಸ್ವಿಯಾಗಿ ಎದುರಿಸಿದ್ದಾರೆ. ತಾಲೂಕಿನಲ್ಲಿ ಪಟ್ಟಣದ ಬಿಸಿಎನ್ ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಾಗೂ ಸರ್ಕಾರಿ ಪ.ಪೂ.ಕಾಲೇಜಿನ ಪರೀಕ್ಷಾ ಕೇಂದ್ರಗಳಿದ್ದು, ಪರೀಕ್ಷಾ ವಿಭಾಗದ ಅಧೀಕ್ಷಕರು ಸೇರಿದಂತೆ ವಿವಿಧ ಸಿಬ್ಬಂದಿ ಪರೀಕ್ಷಾ ಕೇಂದ್ರದಲ್ಲಿ ಸಕಲ ಸಿದ್ಧತೆಗಳೊಂದಿಗೆ ಪರೀಕ್ಷೆಗಳನ್ನು ಯಶಸ್ವಿಯಾಗಿ ನಿಭಾಯಿಸಲಾಗುತ್ತಿದೆ. ಬಿಸಿಎನ್ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಶನಿವಾರ ನಡೆದ ಪ್ರಥಮ ಭಾಷೆ ಕನ್ನಡ ವಿಷಯಕ್ಕೆ ಒಟ್ಟು 504 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು ಗೈರಾಗಿದ್ದು, 490 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಬಿ.ಸಿ.ಎನ್.ಪ.ಪೂ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಪುರಸಭೆ ಪ.ಪೂ ಕಾಲೇಜ್, ಎಸ್‌ಎಂ.ಜೆ.ವ್ಹಿ ಪ.ಪೂ. ಕಾಲೇಜ್ ಮತ್ತು ಸರ್ಕಾರಿ ಪ.ಪೂ.ಕಾಲೇಜ್‌ಗಳ ವಿದ್ಯಾರ್ಥಿಗಳಿದ್ದು, ಇಲ್ಲಿ ಎಸ್.ಟಿ.ಮುದಿಗೌಡ್ರ ಮುಖ್ಯ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದರಂತೆ ಸರ್ಕಾರಿ ಪ.ಪೂ.ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಬಿ.ಸಿ.ಎನ್.ಪ.ಪೂ.ಕಾಲೇಜ್ ಹಾಗೂ ಶಿಗ್ಲಿಯ ಸರ್ಕಾರಿ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳು ಈ ಕೇಂದ್ರಗಳಲ್ಲಿ ಪರೀಕ್ಷೆ ಎದುರಿಸುತ್ತಿದ್ದಾರೆ. ಶನಿವಾರ ಕನ್ನಡ ಪರೀಕ್ಷೆಗೆ 308 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಗೈರಾಗಿದ್ದು 280 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದಾರೆ. ಈ ಕೇಂದ್ರಕ್ಕೆ ಮಂಜುನಾಥ ಕೊಕ್ಕರಗುಂದಿ ಅವರು ಮುಖ್ಯ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಾಚಾರ್ಯ ಡಿ.ಎಸ್.ಪ್ಯಾಟಿ ಹಾಜರಿದ್ದರು.

ಪಟ್ಟಣದ ಬಿಸಿಎನ್ ಪ.ಪೂ. ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿರುವ ಸ್ವಪ್ನಾ ಮುಳಗುಂದ ಎನ್ನುವ ವಿಶಿಷ್ಟಚೇತನ ವಿದ್ಯಾರ್ಥಿನಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪೂರೈಸಿರುವ ವಿದ್ಯಾರ್ಥಿನಿಯ ಸಹಾಯದೊಂದಿಗೆ ಪರೀಕ್ಷೆಗೆ ಹಾಜರಾಗಿ ಗಮನ ಸೆಳೆದಳು.

ಬೇಡಿಕೆ ಈಡೇರಿಸದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ

ಗದಗ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಇಲಾಖೆಯ ಎಲ್ಲಾ ವೃಂದ ಸಂಘಗಳ ಸಹಯೋಗದೊಂದಿಗೆ ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲ್ಲಾಖೆಯ ಅಧಿಕಾರಿ ಹಾಗೂ ನೌಕರರ ಪ್ರಮುಖ ಬೇಡಿಕೆಗಳಾದ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಇಲಾಖೆಯಿಂದ ಔಷಧಿಗಳನ್ನು ಸರಬರಾಜು ಮಾಡುವುದು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡುವುದು, ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲ ಕಾಲಕ್ಕೆ ಪ್ರಕಟಿಸಬೇಕು. ಎಲ್ಲಾ ವೃಂದದ ಯಾವುದೇ ಅಧಿಕಾರಿ-ನೌಕರರಿಗೆ ಮುಂಬಡ್ತಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಗಾಗಲೇ ಹಲವಾರು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದೆ. ಇಷ್ಟಾದರೂ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದ ಕಾರಣ ಮೊದಲ ಹಂತದಲ್ಲಿ ಮಾ.11 ರಿಂದ 15 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಲ್ಲ ವೈದ್ಯರು, ನೌಕರರು ಕಪ್ಪು ಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ ಮುಷ್ಕರದಲ್ಲಿ ಭಾಗವಹಿಸಲಾಗುವುದು. ನಂತರ ಇದಕ್ಕೆ ಸರ್ಕಾರದ ನಿರ್ಧಾರವನ್ನು ಸ್ಪಷ್ಟ ಪಡಿಸದಿದಲ್ಲಿ ಮಾ.16 ರಿಂದ ಎಲ್ಲ ಆಸ್ಪತ್ರೆಗಳಲ್ಲಿ ತುರ್ತು ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿಗೆ ಗೈರಾಗುವ ಮೂಲಕ ಮುಷ್ಕರ ಮುಂದುವರಿಸಲಾಗುವುದು ಎಂದರು.

ಜಿಲ್ಲಾ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಬಸವರಾಜ ಬಳ್ಳಾರಿ ಮಾತನಾಡಿ, ರಾಜ್ಯ ಸರ್ಕಾರಿ ವೈದ್ಯಾಧಿಕಾರಿ ಸೇರಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೈಗೊಳ್ಳುವ ಮುಷ್ಕರಕ್ಕೆ ಜಿಲ್ಲಾ ಸರ್ಕಾರಿ ನೌಕರರ ಸಂಘದಿಂದ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ವೈದ್ಯಾಧಿಕಾರಿ ಸಂಘದ ಜಿಲ್ಲಾಧ್ಯಕ್ಷ ಡಾ.ಶರಣು ಗಾಣಿಗೇರ, ಮಲ್ಲಿಕಾರ್ಜುನ ಕಲಾಕಂಬಿ, ಡಾ.ಅರುಣಪ್ರಸಾದ, ಅಜಯಕುಮಾರ ಕಲಾಲ, ಡಾ.ಪ್ರಲ್ಹಾದ್ ಹೊಸಮನಿ, ರವಿ ಗುಂಜೀಕರ ಇದ್ದರು.



ದರೂದೆ ಷರೀಫ್ ಕಾರ್ಯಕ್ರಮ



ನರಗುಂದ: ಪವಿತ್ರ ರಮಜಾನ್ ತಿಂಗಳ ಪ್ರಯುಕ್ತ ಪಟ್ಟಣದ ಮಾರ್ಕಂಡೇಯ ಕಲ್ಯಾಣ ಮಂಟಪದಲ್ಲಿ ಮುಸ್ಲಿಂ ಮಹಿಳಾ ಸಮಾಜದ ವತಿಯಿಂದ ದರೂದೆ ಷರೀಫ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ದಾಯಿ ರಬಿಯಾ ಕಚ್ಚಿ ಉಪನ್ಯಾಸ ನೀಡಿದರು.ಮುಸ್ಲಿಂ ಸಮಾಜದ ಶಿಕ್ಷಕಿ ರಿಜ್ವಾನಾ ಗಸ್ತಿ, ರಝಿಯಾ ಅತ್ತಾರ, ಶಾಹಿದಾ ನದಾಫ, ರಿಹನಾ ಹುಂಡೇಕಾರ, ಯಾಸ್ಮಿನ್ ಮುಳ್ಳೂರ, ಗೌಸಿಯಾ ಸಕಲಿ, ತಸ್ಮಿಯಾ ಅಲ್ಲಿಭಾಯಿ, ರೋಶನ್ ಅಲ್ಲಿಭಾಯಿ, ಶಾಹಿನ್ ತಬಲಚಿ ಇವರನ್ನು ಸತ್ಕರಿಸಲಾಯಿತು. ಶಗುಪತಾ ಅರಬಜಮಾದಾರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಗುರುವಂದನಾ ಕಾರ್ಯಕ್ರಮ ಇಂದು

ಲಕ್ಷ್ಮೇಶ್ವರ: ಪಟ್ಟಣದ ಶ್ರೀ ಉಮಾ ವಿದ್ಯಾಲಯ ಹೈಸ್ಕೂಲ್‌ನ 1988-89 ನೇ ಸಾಲಿನ ಸ್ನೇಹಬಂಧನ 89 ಸ್ನೇಹಿತರ ತಂಡದಿಂದ ಮಾ.1 ರಂದು 9 ಗಂಟೆಗೆ ಜ.ರಂಭಾಪುರಿ ವೀರಗಂಗಾಧರ ಸಮುದಾಯ ಭವನದಲ್ಲಿ ಗುರುವಂದನಾ ಕಾರ್ಯಕ್ರಮದ ಜೊತೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿ.ಎಂ.ಮಹಾಂತಶೆಟ್ಟರ ವಹಿಸಲಿದ್ದು, ಕಾರ್ಯಕ್ರಮವನ್ನು ಮಾಜಿ ಶಾಸಕ ಜಿ.ಎಸ್.ಗಡ್ಡದೇವರಮಠ ಉದ್ಘಾಟಿಸಲಿದ್ದಾರೆ. ಶಾಲೆಯ ಸುಮಾರು 16 ನಿವೃತ್ತ ಶಿಕ್ಷಕರು ಹಾಗೂ 6 ಜನ ಬೋಧಕೇತರ ಸಿಬ್ಬಂದಿ ಪಾಲ್ಗೊಳ್ಳಲಿರುವುದು ವಿಶೇಷವಾಗಿದ್ದು, ಕಾರ್ಯಕ್ರಮದಲ್ಲಿ ಅಗಲಿದ ಶಿಕ್ಷಕರಿಗೆ ಹಾಗೂ ಸ್ನೇಹಿತರಿಗೆ ಪುಷ್ಪ ನಮನಗಳನ್ನು ಅರ್ಪಿಸುವದರ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಗುವುದು. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಸ್ನೇಹಬಂಧನ 89 ಸ್ನೇಹಿತರು ತಿಳಿಸಿದ್ದಾರೆ.

ಅಕ್ಷರ ಜ್ಞಾನ ನಾಶವಾಗದ ಸಂಪತ್ತು: ಗೊಖಲೆ

ಶಿರಹಟ್ಟಿ: ಶಿಕ್ಷಣ ಮನುಷ್ಯನನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುತ್ತದೆ. ಹಣ, ಆಸ್ತಿ, ಸಂಪತ್ತು ಒಂದಿಲ್ಲೊಂದು ದಿನ ಅಳಿದರೂ ಜ್ಞಾನ ನಾಶವಾಗದ ಸಂಪತ್ತು ಎಂದು ಹಿಂದೂ ಸೇವಾ ಪ್ರತಿಷ್ಠಾನದ ನಿರ್ವಾಹಕ ವಿಶ್ವಸ್ಥ ಮಿಲಿಂದ ಗೊಖಲೆ ಹೇಳಿದರು.

ಸ್ಥಳೀಯ ಶಿಶು ಮಂದಿರ ಶಿಕ್ಷಣ ಸಮಿತಿ ಶಾಲೆ ಹಾಗೂ ಹಿಂದೂ ಸೇವಾ ಪ್ರತಿಷ್ಠಾನ ಸಂಚಾಲಿತ ಭಾರತಿ ಶಿಶುಮಂದಿರದ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಕ್ಷರ ಕಲಿಕೆ ಪ್ರತಿಯೊಬ್ಬರ ಹಕ್ಕು. ಅಕ್ಷರದಿಂದ ಹತ್ತು ಹಲವು ಕ್ಷೇತ್ರಗಳಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ. ಇಂದು ಶಿಕ್ಷಣ ಬಹಳಷ್ಟು ಪ್ರಾಮುಖ್ಯತೆ ಪಡೆದಿದೆ. ಅಕ್ಷರ ಜ್ಞಾನ ಇಲ್ಲದವರ ಜೀವನ ಸೂತ್ರ ಹರಿದ ಗಾಳಿಪಟದಂತಾಗುತ್ತದೆ. ವಿದ್ಯಾರ್ಥಿ ಬದುಕಿಗೆ ನೆಲೆ ಕಟ್ಟಿಕೊಡುವ ತಳಪಾಯ ಎಂಬುದನ್ನು ಅರಿಯಬೇಕು. ಸಾಧಿಸುವ ಛಲ ಹೊಂದಿದಾಗ ಮಾತ್ರ ಸಮಾಜಮುಖಿಯಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಶಿಶುಮಂದಿರದಲ್ಲಿ ಸಂಸ್ಕಾರ ಪ್ರಧಾನ ಶಿಕ್ಷಣ ನೀಡುತ್ತೇವೆ. ಹಾಗಾಗಿ ಮಕ್ಕಳ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆ ಉತ್ತಮವಾಗಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ನಿರ್ಮಾಣವಾಗುತ್ತಾರೆ ಎಂದರು. ಡಾಕ್ಟರ್ ಪ್ರಕಾಶ ಹೊಸಮನಿ ಮಾತನಾಡಿ, ಶಿಶುಮಂದಿರದ ಶಿಕ್ಷಣ ಎಲ್ಲರಿಗೂ ಸಿಗುವಂತಾದರೆ ಮಕ್ಕಳು ಚಾರಿತ್ರ್ಯವಂತರಾಗುತ್ತಾರೆ ಎಂದು ಅಭಿಪ್ರಾಯಪಟ್ಟರು. ಹಿಂದೂ ಸೇವಾ ಪ್ರತಿಷ್ಠಾನ ನಿರ್ದೇಶಕ ಸುರೇಶ ಜಿ., ಪ್ರಧಾನ ಗುರು ಉಮೇಶ ಎಮ್ಮಿ, ಸೇವಾಮಿತ್ರ ಯೋಜನೆಯ ರಾಜ್ಯ ಸಂಯೋಜಕ ನಟರಾಜ ರಾನಡೆ, ವೀರಣ್ಣ ಮಜ್ಜಗಿ, ಉದಯ ಕುಲಕರ್ಣಿ, ದೇವೆಂದ್ರ ಪವಾರ, ಗೀತಾ ಹಲಸೂರ, ಡಾ ಪವನ ಫಾಯದೇ, ಡಾ ಪ್ರಸಾದ ಮಹೇಂದ್ರಕರ, ಶಿವಣ್ಣ ಚಕ್ರಸಾಲಿ, ಅಜಯ ಮಜ್ಜಗಿ, ಸತೀಶ ಚಕ್ರಸಾಲಿ, ಶಿಶುಮಂದಿರದ ಶಿಕ್ಷಕಿಯರಾದ ಯಶೋಧಾ ಮಾಗಡಿ, ರೂಪಾ ಶಿಂಗಟಾಲೂರ, ಶಿಕ್ಷಣ ಸಮಿತಿ ಶಾಲೆಯ ಅಬೇದಾ ತಹಶೀಲ್ದಾರ್, ತಾಲೂಕಾ ಸಂಯೋಜಕ ಶಿವಲಿಂಗ ಅಡ್ರಕಟ್ಟಿ, ಚೇತನ ಯಲಿಗಾರ ಇದ್ದರು.



ಕಡಲೆ ಖರೀದಿ ಆರಂಭ ಯಾವಾಗ?

ಸಿ.ಎಸ್.ಅರಸನಾಳ



ದಿಗಂತ ವಿಶೇಷ

ಮುಂಡರಗಿ: ಪಟ್ಟಣ ಸೇರಿ ತಾಲೂಕಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ಕಡಲೆ ಖರೀದಿ ಕೇಂದ್ರ ತೆರೆದಿದ್ದು ನೋಂದಣಿ ಕಾರ್ಯ ನಡೆದಿದೆ. ಆದರೆ ಇನ್ನೂ ಖರೀದಿ ಕಾರ್ಯ ಆರಂಭಿಸಿಲ್ಲ, ಆದಷ್ಟು ಬೇಗ ಖರೀದಿ ಕಾರ್ಯ ಆರಂಭಿಸಿದರೆ ರೈತರಿಗೆ ಅನುಕೂಲವಾಗಲಿದೆ ಎನ್ನುವುದು ರೈತರ ಒತ್ತಾಯವಾಗಿದೆ. ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕಡಲೆ ದರ ಕಡಿಮೆಯಾಗಿದ್ದು, ಇದರಿಂದ ರೈತರು ಸಂಕಷ್ಟ ಸ್ಥಿತಿಯಲ್ಲಿದ್ದಾರೆ.

ಕಡಲೆ ಬೆಳೆಯನ್ನು ಪಟ್ಟಣ ಸೇರಿ ತಾಲೂಕಿನಲ್ಲಿ 18,291 ಹೆಕ್ಟರ್ ಪ್ರದೇಶದಲ್ಲಿ ಬೆಳೆಯಲಾಗಿತ್ತು. ಸುಮಾರು ಒಂದು ತಿಂಗಳಿಂದ ಕಡಲೆ ಬೆಳೆ ಒಕ್ಕಲು ಕಾರ್ಯವನ್ನು ಮಾಡಿದ್ದಾರೆ. ಆದರೆ ಮಾರುಕಟ್ಟೆಯಲ್ಲಿ ಒಂದು ತಿಂಗಳಿಂದ ಕಡಲೆ ದರ ಕುಸಿತವಾಗುತ್ತಿದೆ. ಒಂದು ತಿಂಗಳ ಹಿಂದೆ ಪ್ರತಿ ಕ್ವಿಂಟಾಲ್ ಕಡಲೆಗೆ ಸುಮಾರು 5,800-5900ರೂ. ವರೆಗೆ ಮಾರಾಟವಾಗಿತ್ತು. ಆದರೆ ಈಗ ದರ ಕುಸಿತವಾಗುತ್ತಿದ್ದು, ಫೆ.27ರಂದು ಕನಿಷ್ಠ 2,009ರೂ.ನಿಂದ ಗರಿಷ್ಠ 5,272ರೂ.ವರೆಗೆ ಮಾರಾಟವಾಗಿದೆ. ಮುಂಗಾರಿನಲ್ಲಿ ಮಳೆ, ದರ ಕುಸಿತದಿಂದ ಉಳ್ಳಾಗಡ್ಡಿ ಬೆಳೆದಿದ್ದ ರೈತರು ನಷ್ಟ ಅನುಭವಿಸಿದ್ದರು. ಹಿಂಗಾರಿನಲ್ಲಿ ಕಡಲೆಯಲ್ಲಿ ಉತ್ತಮ ದರ ಸಿಗಬಹುದು ಅಂದುಕೊಂಡಿದ್ದ ರೈತರಿಗೆ ದರ ಕುಸಿತದಿಂದ ನಿರಾಸೆಗೊಳ್ಳುವಂತಾಗಿದೆ.

ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್ ಕಡಲೆಗೆ 5,875ರೂ. ಘೋಷಿಸಿದೆ. ತಾಲೂಕಿನಲ್ಲಿ 6ಕಡೆಗಳಲ್ಲಿ ಕಡಲೆ ಖರೀದಿ ಕೇಂದ್ರ ತೆರೆದಿದ್ದು, ಈಗಾಗಲೇ ನೋಂದಣಿ ಕಾರ್ಯ ನಡೆಯುತ್ತಿದೆ. ಫೆ.26ರವರೆಗೆ ಬರದೂರಿನಲ್ಲಿ 75, ಪಟ್ಟಣದಲ್ಲಿ 61, ಪೇಠಾಲೂರಿನಲ್ಲಿ 379, ಆಲೂರಿನಲ್ಲಿ 217, ಡಂಬಳದಲ್ಲಿ 68 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಹಳ್ಳಿಕೇರಿಯಲ್ಲಿ ಹೊಸದಾಗಿ ತೆರೆದಿದ್ದು, ಅಲ್ಲಿ ನೋಂದಣಿ ಆಗಿಲ್ಲ. ನೋಂದಣಿ ಮಾಡಿಸಿದ ರೈತರು ಫಸಲನ್ನು ಬೇರೆಡೆ ಮಾರಾಟ ಮಾಡದೇ ಒಂದೆಡೆ ಸಂಗ್ರಹಿಸಿಟ್ಟುಕೊಂಡಿದ್ದಾರೆ. ಜಿಪಿಎಸ್‌ಗೊಂಡ ಪ್ರತಿ ಎಕರೆಗೆ 4ಕ್ವಿಂಟಾಲ್‌ನಂತೆ ಒಬ್ಬ ರೈತರಿಂದ 40ಕ್ವಿಂಟಾಲ್‌ವರೆಗೂ ಖರೀದಿಗೆ ಅವಕಾಶ ಕಲ್ಪಿಸಿದೆ. ಕಡಲೆ ಖರೀದಿ ಕೇಂದ್ರದಲ್ಲಿ ಆದಷ್ಟು ಬೇಗ ಖರೀದಿ ಕಾರ್ಯವನ್ನು ಆರಂಭಿಸಬೇಕು ಎನ್ನುವುದು ರೈತರ ಒತ್ತಾಯವಾಗಿದೆ.

> ಕಳೆದ ವರ್ಷಕ್ಕಿಂತ ಪ್ರಸ್ತುತ ವರ್ಷ ಕಡಲೆ ಇಳುವರಿಯು ಕಡಿಮೆಯಾಗಿದೆ. ದರ ಕುಸಿತವಾಗಿದೆ. ಮುಂಗಾರಿನಲ್ಲಿ ಉಳ್ಳಾಗಡ್ಡಿ ಬೆಳೆದು ದರ ಕುಸಿತದಿಂದಾಗಿ ನಷ್ಟವಾಗಿತ್ತು. ಈಗಾಗಲೆ ಅರ್ಧದಷ್ಟು ಕಡಲೆ ಫಸಲನ್ನು ಕಡಿಮೆ ದರಕ್ಕೆ ಹೊರಗಡೆ ಮಾರಾಟ ಮಾಡಿದ್ದೇವೆ. ಇನ್ನೂಳಿದ ಫಸಲನ್ನು ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವುದಕ್ಕೆ ನೋಂದಣಿ ಮಾಡಿಸಿ ಸಂಗ್ರಹಿಸಿಟ್ಟಿದ್ದೇವೆ. ಶೀಘ್ರ ಕಡಲೆ ಖರೀದಿ ಕಾರ್ಯ ಆರಂಭಿಸಿದರೆ ರೈತರಿಗೆ ಅನುಕೂಲವಾಗುತ್ತದೆ.
>
> ■ **ಶಿವಾನಂದ ಇಟಗಿ,** ರೈತ ಮುಖಂಡ, ಮುಂಡರಗಿ


> ಗದಗ ಜಿಲ್ಲೆಯ ಹಲವೆಡೆ ಕಡಲೆ ಖರೀದಿ ಕಾರ್ಯ ಆರಂಭಗೊಂಡಿದೆ. ಮುಂಡರಗಿ ತಾಲೂಕಿನ ಖರೀದಿ ಕೇಂದ್ರಗಳಲ್ಲಿ ಈಗಾಗಲೇ ನೋಂದಣಿ ಕಾರ್ಯ ನಡೆದಿದ್ದು, ಖರೀದಿಕಾರ್ಯಕ್ಕೆ ಬೇಕಾಗುವ ಸಲಕರಣೆ ಮತ್ತಿತರ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಸೋಮವಾರದಿಂದ ಕಡಲೆ ಖರೀದಿ ಕಾರ್ಯ ಆರಂಭಿಸಲಿದ್ದಾರೆ.
>
> ■ **ಡಿ.ಬಿ.ಡೊಕ್ಕಣ್ಣವರ,** ಶಾಖಾ ವ್ಯವಸ್ಥಾಪಕ, ರಾಜ್ಯ ಸಹಕಾರ ಮಾರಾಟ ಮಂಡಲ, ಗದಗ

ಮತದಾರರ ಪಟ್ಟಿ ಪರಿಷ್ಕರಣೆಗೆ ಜಾಗೃತಿ ವಹಿಸಿ: ಸಿಸಿಪಾ

ನರಗುಂದ: ಸ್ಥಳೀಯ ಸಂಸ್ಥೆಯ ಚುನಾವಣೆಗಳು ಮತ್ತು ವಿಧಾನಸಭೆ ಚುನಾವಣೆ ಯಾವುದೇ ಕ್ಷಣದಲ್ಲೂ ಬರಬಹುದು. ಮತದಾರರ ಪಟ್ಟಿಯ ಪರಿಷ್ಕರಣೆ ಬಹಳ ಮಹತ್ವ ಪಡೆದಿದೆ. ಹೀಗಾಗಿ ಚುನಾವಣಾ ಸೇನಾನಿಗಳಾದ ಬಿಎಲ್‌ಎ-2 ಹಾಗೂ ಬೂತ್ ಮಟ್ಟದ ಕಾರ್ಯಕರ್ತರು ಜಾಗೃತೆಯಿಂದ ಮತದಾರರ ಪಟ್ಟಿ ಪರಿಷ್ಕರಣೆ ಕೆಲಸ ಮಾಡಬೇಕೆಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಶನಿವಾರ ನರಗುಂದ ವಿಧಾನಸಭಾ ಮತಕ್ಷೇತ್ರದ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಜರುಗಿದ ನರಗುಂದ, ಹೊಳೆಆಲೂರ ಮತ್ತು ಲಕ್ಕುಂಡಿ ಮಂಡಲಗಳ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ ಬಿಎಲ್‌ಎ-2 ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಮತದಾರರ ಪಟ್ಟಿಯಲ್ಲಿ ಎಲ್ಲೆಲ್ಲಿಯೋ ಹೆಸರುಗಳು ಸೇರ್ಪಡೆ ಆಗಿವೆ. ಸಧ್ಯ ವಿಧಾನಸಭೆ ಚುನಾವಣೆ ಕಾಂಗ್ರೆಸ್ ಪಕ್ಷದ 75 ಶಾಸಕರು ಬಿಜೆಪಿ ಸೇರಲಿದ್ದಾರೆ. ಸುಪ್ರೀಂಕೋರ್ಟ್ ಆದೇಶದಂತೆ ಮತದಾರರ ಪಟ್ಟಿ ಪರಿಷ್ಕರಣೆ ಏ.1ರಿಂದ ಶೀಘ್ರ ನಡೆಯಲಿದೆ. ಪಟ್ಟಿಯಲ್ಲಿನ 18-25 ವಯಸ್ಸಿನ ಶೇ.80 ಯುವಕ, ಯುವತಿಯರು ಬಿಜೆಪಿಗೆ ಮತ ನೀಡಲಿದ್ದಾರೆ. ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ದೇಶದ ಭವಿಷ್ಯ ಅಡಗಿದೆ. ಆದ್ದರಿಂದ ಘಟನಾಯಕರು, ಬಿಎಲ್‌ಎ-2 ಗಳು ಬಿಜೆಪಿ ಪಕ್ಷದ ಸೇನಾನಿಗಳಾಗಿದ್ದರಿಂದ ಎಲ್ಲರೂ ಪರಿಷ್ಕರಣೆಯಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಬೇಕು ಎಂದರು.



ಉಮೇಶಗೌಡ ಪಾಟೀಲ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆ ಬಹಳ ಅವಶ್ಯವಿದೆ. 3 ತಿಂಗಳವರೆಗೆ ನಡೆಯಲಿರುವ ಪರಿಷ್ಕರಣೆ ಬಗ್ಗೆ ಕಾರ್ಯಕರ್ತರು ಹೆಚ್ಚು ಆಸಕ್ತಿ ಮತ್ತು ಜಾಗೃತೆ ವಹಿಸಬೇಕು. ಈ ಪಟ್ಟಿ ಎಲ್ಲ ಚುನಾವಣೆಗೂ ಅನ್ವಯಿಸಲಿದೆ. ಮತದಾರರ ಪಟ್ಟಿ ಪರಿಷ್ಕರಣೆಯಿಂದ ಬಿಹಾರದಲ್ಲಿ ಬಿಜೆಪಿ 2/3 ಬಹುಮತ ಪಡೆದಿದೆ. ಸ್ವಹಿತಾಸಕ್ತಿವುಳ್ಳ ರಾಜಕೀಯ ಪಕ್ಷಗಳು ಅಧಿಕಾರದ ದುರಾಸೆಗೆ ಬಾಂಗ್ಲಾದ ವಲಸಿಗರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುತ್ತಿದ್ದಾರೆ. ಕಾರಣ ನಮ್ಮ ಪಕ್ಷದ ಕಾರ್ಯಕರ್ತರು ಜಾಗೃತವಹಿಸಬೇಕು ಎಂದರು. ವಿಭಾಗ ಸಂಯೋಜಕ ಸಂತೋಷ ಹಡಪದ ಮಾತನಾಡಿದರು. ಎಸ್.ಆರ್. ಹಿರೇಮಠ, ಲಕ್ಕುಂಡಿ ಮಂಡಲ ಅಧ್ಯಕ್ಷ ಪ್ರಕಾಶ ಅರಹುಣಶಿ, ಉಮೇಶಗೌಡ ಪಾಟೀಲ, ನಾಗನಗೌಡ ತಿಮ್ಮನಗೌಡ್ರ, ಸೋಮಶೇಖರ ಚರೇದ, ಲಿಂಗರಾಜ ಪಾಟೀಲ, ಗೌಸ ತಾಲೀಮನವರ, ಸಿದ್ದೇಶ ಹೂಗಾರ, ಬಿ.ಎಂ. ಮುಖಾಶಿ, ಬಾಪುಗೌಡ ತಿಮ್ಮನಗೌಡ್ರ, ಚಂದ್ರು ದಂಡಿನ, ವಸಂತ ಮೇಟಿ, ಅಜ್ಜಪ್ಪ ಹುಡೇದ, ಎಸ್.ಆರ್. ಪಾಟೀಲ, ಶಿವನಗೌಡ ಕರಿಗೌಡ್ರ, ಮಹೇಶ ಮುಸ್ಕಿನಬಾವಿ ಇತರರಿದ್ದರು. ಕೇದಾರಗೌಡ ಮಣ್ಣೂರ ಸ್ವಾಗತಿಸಿದರು.

ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ

ಬೆಳಗಾವಿಗೆ ಶೀಘ್ರದಲ್ಲೇ 100 ಎಲೆಕ್ಟ್ರಿಕಲ್ ಬಸ್: ಸಚಿವ ರೆಡ್ಡಿ



ಬೆಳಗಾವಿ: ಬೆಳಗಾವಿಗೆ 100 ಎಲೆಕ್ಟ್ರಿಕಲ್ ಬಸ್ ಮಂಜೂರಾಗಿವೆ. ಕೇಂದ್ರದ ಟೆಂಡರ್ ಪ್ರಕ್ರಿಯೆ ಆಗುವುದಷ್ಟೇ ಬಾಕಿ ಇದೆ. ಇದಲ್ಲದೆ, ಬೆಳಗಾವಿ ಜಿಲ್ಲೆಗೆ ಹೆಚ್ಚಿನ ಬಸ್ ಒದಗಿಸಲಾಗುವುದು. ಬೇಡಿಕೆ ಇರುವ ಮಾರ್ಗಗಳಲ್ಲಿ ಬಸ್ ಕಾರ್ಯಾಚರಣೆ ಆರಂಭಿಸಲಾಗುವುದು' ಎಂದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಿಎಮ್ ಇ ಬಸ್ ಸೇವಾ ಯೋಜನೆ ಅಡಿ ಬೆಳಗಾವಿ ನಗರಕ್ಕೆ ನೂರು ವಾಹನಗಳು ಮಂಜೂರಾಗಿದ್ದು, ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಐದು ಕೋಟಿ ವೆಚ್ಚದಲ್ಲಿ 11 ನಗರ ಸಾರಿಗೆ ಹೊಸ ವಾಹನಗಳನ್ನು ಖರೀದಿಸಿ ಸಾರ್ವಜನಿಕ ಪ್ರಯಾಣಕ್ಕಾಗಿ ಬಳಕೆ ಮಾಡಲಾಗುತ್ತಿದೆ. ಅಂದಾಜು ಎಂಟು ಕೋಟಿ ರೂ ವೆಚ್ಚದಲ್ಲಿ ಹದಿನಾಲ್ಕು ಹವಾನಿಯಂತ್ರಿತ ಸ್ಲೀಪರ್ ಕೋಚ್ ಹಾಗೂ ಅಂದಾಜು ನಾಲ್ಕು ಕೋಟಿ ವೆಚ್ಚದಲ್ಲಿ ಹತ್ತು ಹವಾನಿಯಂತ್ರಣ ರಹಿತ ಸ್ಲೀಪರ್ ಕೋಚ್ ಒಟ್ಟು ಇಪ್ಪತ್ತನಾಲ್ಕು ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ ಎಂದರು.ಬೆಳಗಾವಿ ರಾಜ್ಯದ ದೊಡ್ಡ ಜಿಲ್ಲೆಯಾಗಿದ್ದು ಕ್ರಮೇಣ ಈ ಭಾಗಕ್ಕೆ ಹೆಚ್ಚುವರಿ ಹೊಸ ಬಸಗಳನ್ನು ಒದಗಿಸುವುದರ ಜೊತೆಗೆ ಶೀಘ್ರದಲ್ಲಿಯೇ ನಗರ ಸಾರಿಗೆಗೆ ಎಂಭತ್ತು ಹೊಸ ಬಸಗಳನ್ನು ನೀಡುವ ಭರವಸೆ ನೀಡಿದರು. ಬೆಳಗಾವಿ ವಿಭಾಗದಲ್ಲಿ ಹೊಸ ಮಾರ್ಗಗಳಲ್ಲಿ ಬಸ್ ಸಂಚಾರಕ್ಕೆ ಸೂಚನೆ ನೀಡಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಎನ್‌ಡಬ್ಲ್ಯುಕೆಆರ್‌ಟಿಸಿಗೆ ಹೊಸ ಬಸ್ ಒದಗಿಸುವಂತೆ ಈ ಹಿಂದೆ ಸಾರಿಗೆ ಸಚಿವರಿಗೆ ಮನವಿ ಮಾಡಿದ್ದೆ. ಈಗ ಎನ್‌ಡಬ್ಲ್ಯುಕೆಆರ್‌ಟಿಸಿಗೆ 250 ಹೊಸ ಬಸ್ ನೀಡಿದ್ದರಿಂದ ಬಹುದಿನಗಳ ಕನಸು ಈಡೇರಿದೆ. ಬೆಳಗಾವಿ ರಾಜ್ಯದಲ್ಲೇ ದೊಡ್ಡ ಜಿಲ್ಲೆ. ಮುಂದಿನ ದಿನಗಳಲ್ಲಿ ನಮಗೆ ಹೆಚ್ಚಿನ ಬಸ್ ಒದಗಿಸಬೇಕು' ಎಂದು ಮನವಿ ಮಾಡಿದರು.

ಈ ಭಾಗದಲ್ಲಿ ಚಾಲಕರು, ನಿರ್ವಾಹಕರ ಕೊರತೆ ಹೆಚ್ಚಿತ್ತು. ಈಗ ಹಲವರಿಗೆ ನೇಮಕಾತಿ ನೀಡಿದ್ದರಿಂದ ಅನುಕೂಲವಾಗಲಿದೆ. ಸಾರಿಗೆ ಸಿಬ್ಬಂದಿ ಹಿತ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಿದೆ' ಎಂದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿದರು. ವ್ಯವಸ್ಥಾಪಕರ ನಿರ್ದೇಶಕಿ ಪ್ರಿಯಾಂಗ ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕರಾದ ಬಾಬಸಾಹೇಬ ಪಾಟೀಲ, ವಿಠಲ ಹಲಗೇಕರ, ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ, ಎನ್‌ಡಬ್ಲ್ಯುಕೆಆರ್‌ಟಿಸಿ ಉಪಾಧ್ಯಕ್ಷ ಸುನೀಲ ಹಣಮನ್ನವರ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಗ್ಯಾರಂಟಿ ಯೋಜನೆಗಳ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ, ನಗರ ಪೊಲೀಸ್ ಕಮಿಷನ್ರ್ ಭೂಷಣ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಇತರರಿದ್ದರು.

ಅಪಘಾತ ರಹಿತವಾಗಿ ಸೇವೆ ಸಲ್ಲಿಸಿದ 68 ಚಾಲಕರಿಗೆ ಬೆಳ್ಳಿ ಪದಕ, ಹೊಸದಾಗಿ ನೇಮಕಗೊಂಡ 188 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಲಾಯಿತು. ವೈಯಕ್ತಿಕ ಅಪಘಾತ, ಗುಂಪು ಜೀವವಿಮೆ ಮತ್ತು ಕುಟುಂಬ ಕಲ್ಯಾಣ ನಿಧಿ ಯೋಜನೆಯ ಪರಿಹಾರ ಚೆಕ್ ಕೂಡ ನೀಡಲಾಯಿತು.

ನೌಕರ ಬಹುದಿನಗಳ ಬೇಡಿಕೆ ಈಡೇರಿಸುವ ದೃಷ್ಟಿಯಿಂದ ಸರ್ಕಾರದಿಂದ ನಮ್ಮ ನಿಗಮಕ್ಕೆ ಬರಬೇಕಿರುವ 1,100 ಕೋಟಿ ಬಾಕಿ ಪಾವತಿಸಬೇಕು.

■ **ಭರಮಗೌಡ(ರಾಜು) ಕಾಗೆ, ಎನ್‌ಡಬ್ಲ್ಯುಕೆಆರ್‌ಟಿಸಿ ಅಧ್ಯಕ್ಷ**

ಹಿಂದೂ ಸಮಾವೇಶ | ಅದೃಶ್ಯ ಕಾಡಸಿದ್ದೇಶ್ವರ ಶ್ರೀ ಹೇಳಿಕೆ

ವೀರಶೈವ-ಲಿಂಗಾಯತ ಒಂದೇ ಎನ್ನಿರಿ



ರಬಕವಿ-ಬನಹಟ್ಟಿ: ಸನಾತನ ಧರ್ಮವನ್ನು ಒಡೆದು ಆಳುವ ತುಷ್ಟೀಕರಣ ನೀತಿಯ ಮಠಾಧೀಶರು, ಸ್ವಾಮೀಜಿಗಳು ತಮ್ಮ ಸ್ವಾರ್ಥ ಬದುಕನ್ನು ಬಿಟ್ಟು, ಬಸವಣ್ಣನವರನ್ನು ಒಂದು ಸಮುದಾಯಕ್ಕೆ ಓಲೈಕೆ ಮಾಡುವ ದುರಂತದ ದುಸ್ಸಾಹಸಕ್ಕೆ ಕೈ ಹಾಕುವ ಬದಲು ಹಿಂದೂ ಧರ್ಮವನ್ನು ಒಗ್ಗೂಡಿಸುವ ಕೆಲಸದಲ್ಲಿ ತಲ್ಲೀನರಾಗುವವರೆಗೂ ರಾಜ್ಯದಲ್ಲಿ ಸಮಾವೇಶಗಳು ನಿಲ್ಲುವುದಿಲ್ಲವೆಂದು ಕೊಲ್ಹಾಪೂರದ ಕಣೇರಿಮಠದ ಅದೃಶ್ಯ ಕಾಡಸಿದ್ಧೇಶ್ವರ ಶ್ರೀಗಳು ಹೇಳಿದರು.

ಬನಹಟ್ಟಿಯಲ್ಲಿ ಶನಿವಾರ ರಾತ್ರಿ ನಡೆದ ಬಸವಾದಿ ಶರಣರ ಬೃಹತ್ ಹಿಂದೂ ಸಮಾವೇಶದಲ್ಲಿ ಮಾತನಾಡಿದ ಅವರು, ವೀರಶೈವ ಹಾಗೂ ಲಿಂಗಾಯತ ಒಡೆಯುವದನ್ನು ಕೈ ಬಿಟ್ಟು ಒಂದೇ ಎಂದು ಸಾರಬೇಕು. ಅಲ್ಲಿಯವರೆಗೂ ಹಿಂದೂ ಬೃಹತ್ ಸಮಾವೇಶಗಳು ನಿರಂತರವೆಂದರು. ಶೀಘ್ರವೇ ಯಾದಗೀರ, ಬೆಳಗಾವಿ ಹಾಗೂ ಬೀದರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಸಮಾವೇಶಗಳು ನಡೆಯಲಿವೆ. ಇವೆಲ್ಲದಕ್ಕೂ ಹಿಂದೂ ಧರ್ಮದ ಬೆಂಬಲವಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕೂಡಲೇ ಒಂದಾಗದಿದ್ದರೆ ಹೋರಾಟ ನಿರಂತರ ಎಂದರು.92 ಜಾತಿಗಳನ್ನು ಒಂದು ಮಾಡಿದವ ಬಸವಣ್ಣ ಇದೀಗ ಅದನ್ನು ಲಿಂಗಾಯತ, ವೀರಶೈವವೆಂದು ತುಕುಡಿಮಾಡಲುಹೊರಟಿರುವದನ್ನು ಬಹಿರಂಗವಾಗಿ ವಿರೋಧಿಸುವೆ ಎಂದರು. ವೇದಿಕೆ ಮೇಲೆ ರಾಜ್ಯದೆಲ್ಲೆಡೆಯಿಂದ ಆಗಮಿಸಿದ್ದ 200 ಕ್ಕೂ ಅಧಿಕ ಮಠಾಧೀಶರು ಉಪಸ್ಥಿತರಿದ್ದರು.

ಲವ್ ಜಿಹಾದ್ ಭಯಾನಕ

ಲವ್ ಜಿಹಾದ್ ಎಂಬ ಹೆಸರಿನಲ್ಲಿ ರಾಜ್ಯದಲ್ಲಿ ಪ್ರತಿ ವರ್ಷ 40 ರಿಂದ 45 ಸಾವಿರ ಯುವತಿಯರು ಬಲಿಯಾಗುತ್ತಿದ್ದಾರೆ. ಹಿಂದೂ ಧರ್ಮ ನಾಶ ಮಾಡುವ ಕುತಂತ್ರವೂ ನಡೆಯುತ್ತಿದೆಯೆಂದು ಅದೃಶ್ಯ ಕಾಡಸಿದ್ಧೇಶ್ವರ ಶ್ರೀಗಳು ಹೇಳಿದರು.

ಭರ್ಜರಿ ಮೆರವಣಿಗೆ

ಮಹಾರಾಷ್ಟ್ರದ ಕಣೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳಿಗೆ ವಿಜಯಪುರ-ಬಾಗಲಕೋಟೆ-ಧಾರವಾಡ ಜಿಲ್ಲೆಗಳಲ್ಲಿ ಪ್ರವೇಶ ನಿರ್ಬಂಧ ತೆರವಾದ ಕಾರಣ ಶ್ರೀಗಳ ನೇತೃತ್ವದಲ್ಲಿ ಎರಡುವರೆ ತಿಂಗಳ ನಂತರ ಮೊದಲ ಬಾರಿಗೆ ನಾಡಿನ ನೂರಾರು ಮಠಾಧೀಶರು, ಸಾವಿರಾರು ಭಕ್ತರೊಡಗೂಡಿ ಶನಿವಾರ ಬಾಗಲಕೋಟೆ ಜಿಲ್ಲೆ ರಬಕವಿ-ಬನಹಟ್ಟಿ ಪಟ್ಟಣದಲ್ಲಿ ಅದ್ದೂರಿ ಪುರಪ್ರವೇಶ ಕಾರ್ಯಕ್ರಮದ ನಿಮಿತ್ತ ಭರ್ಜರಿ ಮೆರವಣಿಗೆಯೊಂದಿಗೆ ಬಲ ಪ್ರದರ್ಶನ ನಡೆಯಿತು. ಸಂಸದ ಪಿ.ಸಿ. ಗದ್ದಿಗೌಡರ, ಶಾಸಕ ಸಿದ್ದು ಸವದಿ, ಅನೇಕ ರಾಜಕೀಯ ಮುಖಂಡರು ಹಾಗೂ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ, ಮಂಗಳವಾರ ಪೇಟೆ ದೈವ ಮಂಡಳಿ, ಗೌಡರು ಮತ್ತು ರೈತರ ದೈವ ಮಂಡಳಿ ಸೇರಿದಂತೆ ಸಾವಿರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್‌ನ ಆಯುಷ್ಯ ರಾಜ್ಯದಲ್ಲಿ ಎರಡೇ ವರ್ಷ: ಸಿದ್ದು ಸವದಿ

ದೇಶ ವಿರೋಧಿ ಮನಸ್ಥಿತಿಯಿಂದ ಕೂಡಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಆಯುಷ್ಯ ಕೇವಲ ಇನ್ನೆರಡು ವರ್ಷ ಮಾತ್ರವೆಂದು ತೇರದಾಳ ಶಾಸಕ ಸಿದ್ದು ಸವದಿ ರಾಜ್ಯ ಸರ್ಕಾರದ ವಿರುದ್ಧ ಗದಾಪ್ರಹಾರ ನಡೆಸಿದರು. ಧರ್ಮವನ್ನು ಛಿದ್ರಗೊಳಿಸಿ ಆಳುವಾಸೆ ಹೊಂದಿರುವ ಕಾಂಗೆಸ್‌ನ ಮನಸ್ಸುಗಳು ದೇಶದ್ರೋಹಗಳಿಂದ ಕೂಡಿದೆ. ಅಧಿಕಾರ ಶಾಶ್ವತವಲ್ಲ ದೇಶ ಉಳಿದರೆ ಧರ್ಮ, ದೇಶ, ಪಕ್ಷ. ಕೇವಲ ಒಂದು ಧರ್ಮವನ್ನು ಓಲೈಸಿಕೊಳ್ಳುವ ಸ್ವಾರ್ಥದಲ್ಲಿ ಒಂದೆಡೆ 10 ಸಾವಿರ ಕೋಟಿ ರೂ.ಗಳಷ್ಟು ಅನುದಾನ ನೀಡಿದರೆ ಮತ್ತೊಂದಕ್ಕೆ ಶೂನ್ಯವಾಗಿದೆಯೆಂದು ಸವದಿ ಸರ್ಕಾರದ ವಿರುದ್ಧ ಟೀಕೆ ವ್ಯಕ್ತಪಡಿಸಿದರು.

ಎಲ್ಲೆಂದರಲ್ಲಿ ಕೆಟ್ಟು ನಿಲ್ಲುವ ಬಸ್‌ಗಳು !

ಅಸಮಾಧಾನ ವ್ಯಕ್ತಪಡಿಸಿದ ಸಚಿವೆ ಹೆಬ್ಬಾಳ್ಕರ್



ಬೆಳಗಾವಿ: ನಾನು ಪ್ರತಿನಿಧಿಸುವ ಬೆಳಗಾವಿ ಗ್ರಾಮೀಣ ಕ್ಷೇತ್ರ ಹಿಂದುಳಿದಿರುವಂಥದ್ದು, ಇಲ್ಲಿ ಶ್ರಮಿಕ ವರ್ಗದವರೇ ಹೆಚ್ಚಿದ್ದಾರೆ. ಖಾಸಗಿ ವಾಹನ ಬಳಸುವವರಿಗಿಂತ ಸಾರಿಗೆ ಸಂಸ್ಥೆಯ ಬಸ್‌ಗಳನ್ನೇ ನೆಚ್ಚಿಕೊಂಡವರೇ ಇದ್ದಾರೆ. ಆದರೆ, ಕೆಟ್ಟು ನಿಲ್ಲುವ ಮತು ಸೋರುವ ಬಸ್‌ಗಳನ್ನೇ ನಮಗೆ ಹೆಚ್ಚಾಗಿ ಕೊಡುತ್ತಿರುವ ಕಾರಣ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಬೇಕು ಎಂದು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮನವಿ ಮಾಡಿದರು. ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್ ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನದೊಂದಿಗೆ 7,800 ಹೊಸ ಬಸ್‌ಗಳನ್ನು ರಾಜ್ಯದ ಸಾರಿಗೆ ನಿಗಮಗಳಿಗೆ ಒದಗಿಸಿದೆ. ಈ ಪೈಕಿ ಎನ್‌ಡಬ್ಲ್ಯುಕೆಆರ್‌ಟಿಸಿಗೆ 1,200 ಬಸ್ ಕೊಡಲಾಗಿದೆ ಎಂದರು. ಎನ್‌ಡಬ್ಲ್ಯು ಕೆಆರ್‌ಟಿಸಿಗೆ ರಾಣಿ ಚನ್ನಮ್ಮನ ಹೆಸರು ಮರುನಾಮಕರಣ ಮಾಡುವಂತೆಯೂ ಕೋರಿದರು.

ಕಿರುಸುದ್ದಿ

ಪ್ರಕರಣದಲ್ಲಿ ಭಾಗಿಯಾದವರ ಬಂಧನ

ಬಾಗಲಕೋಟೆ: ಬಾಗಲಕೋಟೆಯಲ್ಲಿ ಹಿಂದೂ ಕಾರ್ಯಕರ್ತನ ಬಂಧನ ವೇಳೆ ತಳ್ಳಾಟ, ನೂಕಾಟ ಪ್ರಕರಣದಲ್ಲಿ ಯಾರು ಭಾಗಿಯಾಗಿರುತ್ತಾರೆ ಅವರನ್ನು ಪೊಲೀಸರು ಬಂಧನ ಮಾಡುತ್ತಾರೆ. ಅದರಲ್ಲಿ ಹಿಂದೂ, ಮುಸ್ಲಿಂ ಎಂಬ ವ್ಯತ್ಯಾಸ ಮಾಡುವುದಿಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ,ಡಿಸಿಎಂ ವಿಧಾನಸೌಧ ಎದುರು ಗಾಂಧಿ ಪುತ್ಥಳಿ ಮುಂದೆ ಪ್ರತಿಭಟನೆ ನಡೆಸಬೇಕು ಎಂಬ ಈಶ್ವರಪ್ಪ ಹೇಳಿಕೆಗೆ ಅದು ನಮ್ಮ ಪಕ್ಷದ ಆಂತರಿಕ ವಿಷಯ.ಪ್ರತಿಭಟನೆ ಕೂಡುವ ಅವಶ್ಯಕತೆ ಇರುವುದಿಲ್ಲ ಎಂದರು.

ಬಾಗಲಕೋಟೆ ಉಪಚುನಾವಣೆಯಲ್ಲಿ ಮೇಟಿ ಕುಟುಂಬದವರ ಪೈಪೋಟಿಗೆ ಪ್ರತಿಕ್ರಿಯೆ ನೀಡಿದ ಸಚಿವರು, ಈ ಬಗ್ಗೆ ಜಿಲ್ಲಾಧ್ಯಕ್ಷರು ಮಧ್ಯಸ್ಥಿಕೆ ವಹಿಸಿ ಸಮಸ್ಯೆಯನ್ನು ತಿಳಿಗೊಳಿಸುತ್ತಾರೆ. ನಾವೂ ಕೂಡ ಆ ಕುಟುಂಬದ ಜತೆ ಇದ್ದೇವೆ. ನಾವೂ ಕೂಡ ಆ ಕುಟುಂಬದವರ ಜತೆ ಮಾತನಾಡಿದ್ದೇವೆ. ಮೇಟಿ ಕುಟುಂಬಕ್ಕೆ ಇರುವ ಅನುಕುಂಪ, ಯಾರ ಪರ ಮತದಾರರ ಒಲವು ಇದೆ ಎಂಬುದರ ಕುರಿತು ಸಮೀಕ್ಷೆ ಮಾಡಿ ಎರಡೂ ಪರಿಗಣಿಸಿ ಟಿಕೆಟ್ ಫೈನಲ್ ಆಗಲಿದೆ ಎಂದರು. ಮಾಜಿ ಸಚಿವ ಅಜಯಕುಮಾರ ಸರನಾಯಕ, ಪ್ರಕಾಶ ತಪಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿದ್ದರು.

ದಕ್ಷಿಣದ ಸಚಿವರಿಗೆ ಉತ್ತರದ ಕಾಳಜಿಯಿಲ್ಲ

ಬೆಳಗಾವಿ ಜಿಲ್ಲೆಯನ್ನು ಎರಡನೇ ರಾಜಧಾನಿ ಎನ್ನುತ್ತಾರೆ. ಆದಕ್ಕೆ ತಕ್ಕಂತೆ ಬಸ್ ಸೌಕರ್ಯ ಕಲ್ಪಿಸುತ್ತಿಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಕಂದಾಯ, ಆರೋಗ್ಯ, ಅಲ್ಪಸಂಖ್ಯಾತರ ಕಲ್ಯಾಣ, ಸಮಾಜಕಲ್ಯಾಣ, ಇಂಧನ ಮತ್ತಿತರ ಖಾತೆಗಳ ಸಚಿವರು ದಕ್ಷಿಣ ಕರ್ನಾಟಕದವರೇ ಇದ್ದಾರೆ. ಈ ಪೈಕಿ ಕೆಲವರಿಗೆ ಉತ್ತರ ಕರ್ನಾಟಕದ ಬಗ್ಗೆ ಕಾಳಜಿ ವಹಿಸಿದ್ದಾರೆ. ಇನ್ನೂ ಕೆಲವರು ನಿರ್ಲಕ್ಷಿಸುತ್ತಿದ್ದಾರೆ' ಎಂದು ಶಾಸಕ ಆಸಿಫ್ ಸೇಠ ದೂರಿದರು. ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆವರು ಮಾತನಾಡಿದರು. ಹೆಸರಿಗಷ್ಟೇ ಅಲ್ಲ, ವಾಸ್ತವದಲ್ಲೂ ಬೆಳಗಾವಿಯನ್ನು ಎರಡನೇ ರಾಜಧಾನಿಯಂತೆ ಟ್ರೀಟ್ ಮಾಡಬೇಕು. ಉತ್ತರ ಕರ್ನಾಟಕ ಅಭಿವೃದ್ಧಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ಕಾಲದಲ್ಲಿ ಸಿ.ಎಂ, ಡಿಸಿಎಂ ಆಗುವ ಸಾಮರ್ಥ್ಯ ಹೊಂದಿದವರೂ ನಮ್ಮಲ್ಲೂ ಇದ್ದಾರೆ' ಎಂದು ಮಾರ್ಮಿಕವಾಗಿ ಹೇಳುತ್ತ ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ ಹೆಸರು ಪ್ರಸ್ತಾಪಿಸಿದರು.

ಬೆಳಗಾವಿಗೆ 100 ಎಲೆಕ್ಟ್ರಿಕಲ್ ಬಸ್ ಬರುತ್ತಿವೆ ಎಂದು ಆರು ತಿಂಗಳಿನಿಂದ ಹೇಳಲಾಗುತ್ತಿದೆ. ಆದರೆ, ಅವು ಬರುತ್ತಿಲ್ಲ. ಇದರಿಂದ ಶಾಲಾ-ಕಾಲೇಜಿಗೆ ಹೋಗಲು ಮಕ್ಕಳಿಗೆ ತೊಂದರೆಯಾಗುತ್ತಿದೆ. ಇದು ನಮ್ಮ ದೌರ್ಭಾಗ್ಯ.

■ **ಆಸಿಫ್ ಸೇಠ, ಶಾಸಕ**

45 ನಿಮಿಷ ತಡವಾಗಿ ಬಂದ ಪರಿಕ್ಷಾರ್ಥಿ

ವಿಜಯನಗರ: ಹೊಸಪೇಟೆ ನಗರದ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಓರ್ವ ವಿದ್ಯಾರ್ಥಿ ಸುಮಾರು 45 ನಿಮಿಷ ತಡವಾಗಿ ಬಂದಿದ್ದರಿಂದ ವಾಪಸ್ ಕಳುಹಿಸಲಾಗಿದೆ. ಇನ್ನುಳಿದಂತೆ ಎಲ್ಲ ಕೇಂದ್ರಗಳಲ್ಲಿ ಪರೀಕ್ಷೆ ಶಾಂತಿಯುತವಾಗಿ ನಡೆದಿದೆ ಎಂದು ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗರಾಜ್ ಹವಾಲ್ದಾರ್ ಮಾಹಿತಿ ನೀಡಿದರು.

ಸಹಾಯದೊಂದಿಗೆ ಪರೀಕ್ಷೆ ಬರೆದ ವಿದ್ಯಾರ್ಥಿನಿ

ಲಕ್ಷ್ಮೇಶ್ವರ: ಪಟ್ಟಣದ ಬಿಸಿಎನ್ ಪ.ಪೂ. ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿರುವ ಸ್ವಪ್ನಾ ಮುಳಗುಂದ ಎನ್ನುವ ವಿಶಿಷ್ಟಚೇತನ ವಿದ್ಯಾರ್ಥಿನಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಎಸ್‌ಎಸ್‌ಎಲ್‌ಸಿ ಪೂರೈಸಿರುವ ವಿದ್ಯಾರ್ಥಿನಿಯ ಸಹಾಯದೊಂದಿಗೆ ಪರೀಕ್ಷೆಗೆ ಹಾಜರಾಗಿ ಗಮನ ಸೆಳೆದಳು.

ಬೆಳವಡಿ ಉತ್ಸವಕ್ಕೆ ಅದ್ದೂರಿ ಚಾಲನೆ



ಬೆಳಗಾವಿ : ಬೆಳವಡಿ ಸಂಸ್ಥಾನದ ವೀರ ಜ್ಯೋತಿಯನ್ನು ಬೆಳವಡಿಯ ಮಲ್ಲಮ್ಮನ ವೃತ್ತದಲ್ಲಿ ಶನಿವಾರ ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ ಸಂಭ್ರಮದಿಂದ ಬರಮಾಡಿಕೊಂಡು, ಬೆಳವಡಿ ಸಂಸ್ಥಾನದ ಧ್ವಜಾರೋಹಣ ನೆರವೇರಿಸುವ ಮೂಲಕ ವೀರರಾಣಿ ಬೆಳವಡಿ ಮಲ್ಲಮ್ಮನ ಉತ್ಸವಕ್ಕೆ ಅದ್ದೂರಿ ಚಾಲನೆ ನೀಡಿದರು.

ಬೆಳವಡಿ ಮಲ್ಲಮ್ಮನ ಹುಟ್ಟೂರು ಶಿರಸಿ ಸಮೀಪದ ಸೋಂದಾದಿಂದ ಜಿಲ್ಲೆಯ ವಿವಿಧೆಡೆ ಸಂಚರಿಸಿ, ಬೆಳವಡಿಗೆ ಆಗಮಿಸಿದ ವೀರ ಜ್ಯೋತಿಗೆ ಪೂಜೆ ಸಲ್ಲಿಸುವುದರ ಮೂಲಕ ಸಡಗರದಿಂದ ಬರಮಾಡಿಕೊಳ್ಳಲಾಯಿತು. ಬಳಿಕ ಬೆಳವಡಿ ಮಲ್ಲಮ್ಮನ ಪುತ್ಥಳಿ ಶಾಸಕ ಮಹಾಂತೇಶ ಕೌಜಲಗಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಕೂಡಲಸಂಗಮ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು ಹಾಗೂ ಗಣ್ಯಮಾನ್ಯರಿಂದ ಮಾಲಾರ್ಪಣೆ ಮಾಡಲಾಯಿತು.

ವಿವಿಧ ಕಲಾ ತಂಡಗಳ ಆಕರ್ಷಕ ಮೆರವಣಿಗೆ: ರಾಣಿ ಮಲ್ಲಮ್ಮನ ವೇಷಧಾರಿ, ಡೊಳ್ಳುಕುಣಿತ, ಗೊಂಬೆಕುಣಿತ, ವೀರಗಾಸೆ, ಕುದುರೆಕುಣಿತ, ಜನಪದವಾದ್ಯಗಳು, ನಗಾರಿ, ಕುಂಭ ಹೊತ್ತ ನೂರಾರು ಮಹಿಳೆಯರು, ಕಥಕ್ಕಳಿ ತಂಡಗಳ ಮೆರವಣಿಗೆಯು ನೋಡುಗರ ಕಣ್ಣಿಗೆ ಮೆರಗು ನೀಡಿದವು. ಬೆಳವಡಿ ಮಲ್ಲಮ್ಮನ ವೃತ್ತದಿಂದ ಆರಂಭಗೊಂಡ ಮೆರವಣಿಗೆಯು ಬೆಳವಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ, ಐಪಿಎಸ್ ಪ್ರೊಬೇಷನರಿ ಅಧಿಕಾರಿ ಡಾ.ಭಾನುಪ್ರಕಾಶಜೆ, ಬೈಲಹೊಂಗಲ ಉಪವಿಭಾಗಾಧಿಕಾರಿ ಪ್ರವೀಣ ಜೈನ, ಬೈಲಹೊಂಗಲ ತಹಶೀಲ್ದಾರ್ ಹನುಮಂತ ಶಿರಹಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ ಸೇರಿದಂತೆ ಬೆಳವಡಿ ಗ್ರಾಮಸ್ಥರು ಹಾಜರಿದ್ದರು. ಬೈಲಹೊಂಗಲ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಸಾವಿರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಗಮನ ಸೆಳೆದ ಶೋಭಾಯಾತ್ರೆ



ಗದಗ: ನಗರದಲ್ಲಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಹಿಂದೂ ಸಮಾಜವನ್ನು ಒಂದೂಗೂಡಿಸುವ ಉದ್ದೇಶದಿಂದ ಬೃಹತ್ ಶೋಭಾಯಾತ್ರೆ ಅದ್ದೂರಿಯಾಗಿ ಗದಗ-ಬೆಟಗೇರಿ ಅವಳಿ ನಗರದಲ್ಲಿ ಜರುಗಿತು.

ಶೋಭಾಯಾತ್ರೆ ವಿವಿಧ ವಾದ್ಯ ವೃಂದಗಳೊಂದಿಗೆಮುಳಗುಂದನಾಕಾಹತ್ತಿರದ ಅಂಬಾಭವಾನಿ ದೇವಸ್ಥಾನದಿಂದ ಆರಂಭವಾಗಿ ತ್ರಿಕೂಟೇಶ್ವರ ದೇವಸ್ಥಾನ, ಜೋಡಮಾರುತಿ ದೇವಸ್ಥಾನ, ಪಟೇಲ ರಸ್ತೆ, ಬಸವೇಶ್ವರ ಸರ್ಕಲ್ ಮಾರ್ಗವಾಗಿ ವೀರಶೈವ ಜನರಲ್ ಲೈಬ್ರರಿ ಆವರಣದಲ್ಲಿ ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ ಭಾರತ ಮಾತೆ, ಅಖಂಡ ಭಾರತ, ಭುವನೇಶ್ವರಿ, ಪ್ರಭು ಶ್ರೀರಾಮಚಂದ್ರ, ಮಹರ್ಷಿ ವಾಲ್ಮೀಕಿ, ಭಾರತೀಯ ಸೇನೆ, ಬಾಲಗಂಗಾಧರ ತಿಲಕ್, ಲಾಲಾ ರಜಪೂತ ರಾಯ್, ಬಿಪಿನ್ ಚಂದ್ರಪಾಲ್, ಬಂಡೆದ್ದ ಮುಂಡರಗಿ ಭೀಮರಾಯ, ಹುಯಿಲಗೋಳ ನಾರಾಯಣರಾವ್, ಮಹಾರಾಣಾ ಪ್ರತಾಪ್, ಇಮ್ಮಡಿ ಪುಲಕೇಶಿ, ಕೃಷ್ಣದೇವರಾಯ, ಹಕ್ಕ-ಬುಕ್ಕರು ಸೇರಿದಂತೆ ವಿವಿಧ ದಾರ್ಶನಿಗಳ ಭಾವಚಿತ್ರಗಳು ರಾರಾಜಿಸಿದವು. ಮೆರವಣಿಗೆಯಲ್ಲಿ ಗದಗ-ಬೆಟಗೇರಿ ಅವಳಿ ನಗರದ 7 ನೇ ವಾರ್ಡ್‌ನ ಪುಟ್ಟ ಮಕ್ಕಳ ಕೋಲಾಟ ನೋಡುಗಳ ಗಮನ ಸೆಳೆಯಿತು. ಸುಮಾರು 30 ಕ್ಕೂ ಹೆಚ್ಚು ಪುಟ್ಟ-ಪುಟ್ಟ ಮಕ್ಕಳು ಕೋಲಾಟದಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಕಾರಿ ಶಾಲೆಯಿಂದ ಮಕ್ಕಳಿಗೆ ಕೋಲಾಟದ ತರಬೇತಿ ನೀಡಲಾಗುತ್ತು.

ಹಾಲ್ ಟಿಕೆಟ್ ನಿರಾಕರಣೆ: ಕಣ್ಣೀರಿಟ್ಟ ಪಿಯುಸಿ ವಿದ್ಯಾರ್ಥಿನಿ

ಹಾವೇರಿ : ಪಾಲಕರು ಕಾಲೇಜು ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕೆ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯ ಹಾಲ್ ಟಿಕೆಟ್ ನೀಡದೇ, ಅವಳ ಪಾಲಕರ ಬೈಕ್ ಮತ್ತು ಮೊಬೈಲ್‌ಗಳನ್ನು ಕಸಿದು ಇಟ್ಟುಕೊಂಡ ಘಟನೆ ಜಿಲ್ಲೆಯ ರಾಣೆಬೆನ್ನೂರ ನಗರದ ಬಿಎಚ್‌ಎಸ್‌ಎಸ್ ಕಾಲೇಜು ಆವರಣದ ಡಿಬಿಎಸ್ ಮೆಡಿಕಲ್ ನೀಟ್ ಅಕಾಡೆಮಿ ಕಾಲೇಜಿನಲ್ಲಿ ಶನಿವಾರ ನಡೆದಿದೆ. ಹಾಲ್ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿ ಸಾರಾ ಜೆಸ್ಸಿಕಾ ಕಣ್ಣೀರಿಟ್ಟಿದ್ದಾಳೆ.

ಶುಲ್ಕ ಬಾಕಿ: ಬೈಕ್ ಅಡವಿಟ್ಟುಕೊಂಡ ಸಿಬ್ಬಂದಿ

ಹಾಲ್ ಟಿಕೆಟ್ ನೀಡಲು ಕಳೆದ ಒಂದು ವಾರದಿಂದ ಆಡಳಿತ ಮಂಡಳಿ ಸತಾಯಿಸುತ್ತಿದ್ದಾರೆ. ಮೊದಲ ಪರೀಕ್ಷೆ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ ವಿದ್ಯಾರ್ಥಿನಿ ಕಾಲೇಜಿಗೆ ಬಂದು, ವಿದ್ಯಾರ್ಥಿನಿಯ ಭವಿಷ್ಯ ಹಾಳಾಗಬಾರದು ಹಾಲ್ ಟಿಕೆಟ್ ಕೊಡಿ ಎಂದು ವಿದ್ಯಾರ್ಥಿನಿಯ ತಂದೆ ರಾಜು ಬೇಡಿಕೊಂಡಾಗ ದಾಗ ಯಾರಾದ್ರೂ ಪುಕ್ಕಟ್ಟೆ ಕಲಿಸ್ತಾರಾ' ಎಂದು ದರ್ಪ ತೋರಿದ್ದಾರೆ. ಕೊನೆಗೆ ಮಧ್ಯಸ್ಥಿಕೆ ವಹಿಸಲು ಬಂದಿದ್ದ ಶಿವಪುತ್ರಪ್ಪ ಎಂಬುವರ ಬೈಕ್ ಮತ್ತು ಮೊಬೈಲ್ ಅಡವಿಟ್ಟುಕೊಂಡು ಹಾಲ್‌ಟಿಕೆಟ್ ನೀಡಿದ್ದಾರೆ.

ನಂತರ ಮಾತುಕತೆ ನಡೆಸಿ ಮೊಬೈಲ್ ವಾಪಸ್ ಪಡೆದಿದ್ದು, ಇದೀಗ ಶಿವಪುತ್ರಪ್ಪ ಬೈಕ್ ಕಾಲೇಜಿನ ಆಡಳಿತ ಮಂಡಳಿ ಕೈಯಲ್ಲಿದೆ.

ಸುನೀತಾ ಮೇಡಂ: ಬಿಎಚ್‌ಎಸ್‌ಎಸ್ ಕಾಲೇಜು ಆವರಣದ ಡಿಬಿಎಸ್ ಮೆಡಿಕಲ್ ನೀಟ್ ಅಕಾಡೆಮಿ ಕಾಲೇಜನ್ನು ಸುನಿತಾ ಎಂಬುವವರು ನಡೆಸುತ್ತಿದ್ದು ಆಡಳಿತಾಧಿಕಾರಿ ಅಥವಾ ಉಸ್ತುವಾರಿಯಾಗಿದ್ದಾರೆ. ಈ ಸುನಿತಾ ಮೂಲತಃ ಓರ್ವ ಸರ್ಕಾರಿ ಶಿಕ್ಷಕಿ. ಸರ್ಕಾರಿ ಹಿರಿಯ ಉನ್ನತೀಕರಿಸಿದ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದಾಗ್ಯೂ ಇವರು ಖಾಸಗಿ ಕಾಲೇಜಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. 30ಸಾವಿರ ಶುಲ್ಕಕ್ಕಾಗಿ ವಿದ್ಯಾರ್ಥಿನಿ ಕಣ್ಣೀರು ಹಾಕಿಸಿದ್ದಾರೆ. ಅಲ್ಲದೆ ಹಿಂದೆ ಈ ಕಾಲೇಜಿನಲ್ಲಿ ಕೆಲಸ ಮಾಡಿದ ಬೋಧಕ ಸಿಬ್ಬಂದಿಗೂ ವೇತನ ನೀಡಿಲ್ಲ ಎಂಬ ದೂರು ಕೇಳಿ ಬಂದಿದ್ದು, ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ಸುನೀತಾ ನಿರಾಕರಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ಗೋಕರ್ಣ: ಶಾಲೆಯ ಹಳೆಯ ವಿದ್ಯಾರ್ಥಿ ವಿನಾಯಕ ಶಾನಭಾಗ ಅಮೇರಿಕಾದಲ್ಲಿ ಉನ್ನತ ಉದ್ಯೋಗದಲ್ಲಿದ್ದು ರಜೆಗೆ ಊರಿಗೆ ಬಂದಾಗ ತಾವು ಕಲಿಸಿದ ಶಾಲೆಗೆ ಭೇಟಿ ನೀಡಿ ಈಗಿನ ವಿದ್ಯಾರ್ಥಿಗಳೊಂದಿಗೆ ಬೆರೆತು ಆಟ, ಪಾಠದೊಂದಿಗೆ ಜೊತೆಯಾಗಿ ವಿದ್ಯಾರ್ಥಿಗಳಿಗೆ ಸ್ಪೂರ್ತಿ ತುಂಬಿದ ಅಪರೂಪದ ಕಾರ್ಯಕ್ರಮ ಇಲ್ಲಿನ ತಾರಮಕ್ಕಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಮಕ್ಕಳಲ್ಲಿ ವ್ಯವಹಾರ ಜ್ಞಾನ ಬೆಳೆಯಲಿ

•**ಭಟ್ಕಳ:** ಪಟ್ಟಣದ ಮಣ್ಕುಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಲಾದ ಮಕ್ಕಳ ಸಂತೆ ಎಲ್ಲರ ಗಮನ ಸೆಳೆಯಿತು.

ಮಕ್ಕಳ ಸಂತೆ ಉದ್ಘಾಟಿಸಿ ಮಾತನಾಡಿದ ಉದ್ಯಮಿ ವಿನೋದ ಬಡಾಳ, ಪಾಲಕರು ತಮ್ಮ ಮಕ್ಕಳ ಜೊತೆಗೂಡಿ ದಿನನಿತ್ಯದ ಸಾಮಾನು ಖರೀದಿಗೆ ತೆರಳಬೇಕು. ಇದರಿಂದ ವ್ಯಾಪಾರ ಮಾತುಕತೆ ಬಗ್ಗೆ ಮಕ್ಕಳಿಗೂ ಮಕ್ಕಳಿಗೂ ಜ್ಞಾನ ಲಭಿಸುತ್ತದೆ ಎಂದರು. ಪತ್ರಕರ್ತ ಮೋಹನ ನಾಯ್ಕ ಮಾತನಾಡಿ, ಕಾನ್ವೆಂಟ್ ಶಾಲೆಯ ಮಕ್ಕಳ ಹಾಗೆ ಸರ್ಕಾರಿ ಶಾಲೆಯ ಮಕ್ಕಳಿಗೆ ಬಂಧನದ ಸಂಕೋಲೆ ಇರುವುದಿಲ್ಲ. ಸರ್ಕಾರಿ ಶಾಲೆಯ ಮಕ್ಕಳಿಗೆ ಶಾಲಾ ಚಟುವಟಿಕೆಯ ಜೊತೆಗೆ ಸಮುದಾಯ ಚಟುವಟಿಕೆಗಳಲ್ಲೂ ಸಕ್ರಿಯರಾಗಿ ಪಾಲ್ಗೊಳ್ಳುವ ಸ್ವಾತಂತ್ರ್ಯ ಇರುತ್ತದೆ ಎಂದರು. ಮಣ್ಕುಳಿಯ ಹಿರಿಯ ಪ್ರಾಥಮಿಕ ಶಾಲಾ ಅಭಿವೃದ್ಧಿ ಸಮಿತಿಯವರ ಅಚ್ಚುಕಟ್ಟಾದ ಮಕ್ಕಳ ಸಂತೆ ಏರ್ಪಡಿಸಿ ಮಕ್ಕಳಿಗೆ ವ್ಯವಹಾರ ಜ್ಞಾನ ಸಿಗುವಂತೆ ಮಾಡಿರುವುದು ಶ್ಲಾಘನೀಯ ಎಂದರು. ಬಿ.ಆರ್.ಸಿ ಗೋಪಾಲ ನಾಯ್ಕ, ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷ ಎಂ ಎಸ್ ನಾಯ್ಕ, ಉದ್ಯಮಿ ಅಚ್ಯುತ್ ಕಾಮತ ಮಾತನಾಡಿದರು. ಪುರಸಭೆ ಸದಸ್ಯರಾದ ಸುರೇಶ ನಾಯ್ಕ, ನಾಗರಾಜ ನಾಯ್ಕ, ಪ್ರಮುಖರಾದ ನಾಗೇಶ ನಾಯ್ಕ, ರಾಜೇಶ ನಾಯ್ಕ, ಸುಧಾಕರ ನಾಯ್ಕ, ಪಾಂಡುರಂಗ ನಾಯ್ಕ, ಪ್ರಮೋದ ಬಡಾಳ, ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ರಮೇಶ ನಾಯ್ಕ, ಮುಖ್ಯ ಶಿಕ್ಷಕಿ ವನಜಾಕ್ಷಿ ಇದ್ದರು. ಮಕ್ಕಳ ಸಂತೆಗೆ ಭೇಟಿ ನೀಡಿದ ವಿದ್ಯಾರ್ಥಿಗಳ ಪಾಲಕರು, ಸಾರ್ವಜನಿಕರು ಮಕ್ಕಳಿಂದ ವಿವಿಧ ಬಗೆಬಗೆಯ ದಿನನಿತ್ಯದ ವಸ್ತು ಖರೀದಿ ಮಾಡಿ ಸಂತಸಪಟ್ಟರು.



ಭಟ್ಕಳ: ಪಟ್ಟಣದ ಮಣ್ಕುಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಲಾದ ಮಕ್ಕಳ ಸಂತೆ ಎಲ್ಲರ ಗಮನ ಸೆಳೆಯಿತು. ಪುರಸಭೆ ಸದಸ್ಯರಾದ ಸುರೇಶ ನಾಯ್ಕ, ನಾಗರಾಜ ನಾಯ್ಕ, ಪ್ರಮುಖರಾದ ನಾಗೇಶ ನಾಯ್ಕ, ರಾಜೇಶ ನಾಯ್ಕ, ಸುಧಾಕರ ನಾಯ್ಕ, ಪಾಂಡುರಂಗ ನಾಯ್ಕ, ಪ್ರಮೋದ ಬಡಾಳ, ಶಾಲಾ ಎಸ್.ಡಿ.ಎಂ.ಸಿ ಅಧ್ಯಕ್ಷ ರಮೇಶ ನಾಯ್ಕ, ಮುಖ್ಯ ಶಿಕ್ಷಕಿ ವನಜಾಕ್ಷಿ ಇದ್ದರು.

ಕಿರುಸುದ್ದಿ

ಸಿಎಸ್ ಪರೀಕ್ಷೆ: ಪೃಥ್ವಿರಾಜ ಉತ್ತೀರ್ಣ



•**ಭಟ್ಕಳ:** ಶಿರಾಲಿಯ ಗುಡಿಹಿತ್ಲುವಿನ ಪೃಥ್ವಿರಾಜ ಪಾಂಡುರಂಗ ನಾಯ್ಕ ಇವರು ಕಂಪನಿ ಸೆಕ್ರೆಟರಿ (ಸಿಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೀರ್ತಿ ತಂದಿದ್ದಾರೆ. ಶಿರಾಲಿಯ ಗುಡಿಹಿತ್ಲುವಿನ ಉದ್ಯಮಿ ಪಾಂಡುರಂಗ ನಾಯ್ಕ ಮತ್ತು ತಾಪಂ ಮಾಜಿ ಸದಸ್ಯೆ ರತ್ನಾ ನಾಯ್ಕ ದಂಪತಿಯ ಪುತ್ರನಾದ ಇವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಇವರು ಪಿಯು ಶಿಕ್ಷಣವನ್ನು ಭಟ್ಕಳ ಆನಂದಾಶ್ರಮ ಪಿಯು ಕಾಲೇಜಿನಲ್ಲಿ ಪಡೆದು, ಬಿಕಾಂ ಪದವಿ ಶಿಕ್ಷಣವನ್ನು ಉಡುಪಿಯ ತ್ರಿಶಾ ಕಾಲೇಜಿನಲ್ಲಿ ಕಲಿತಿದ್ದರು. ಇತ್ತೀಚೆಗೆ ಕಂಪನಿ ಸೆಕ್ರೆಟರಿ ಪರೀಕ್ಷೆ ಬರೆದ ಅವರು ಉತ್ತೀರ್ಣರಾಗಿದ್ದಾರೆ. ಉತ್ತಮ ಸಾಧನೆ ಮಾಡಿದ ಇವರನ್ನು ಪಾಲಕರು ಮತ್ತು ಶಿಕ್ಷಣ ಪಡೆದ ಸಂಸ್ಥೆಗಳ ಶಿಕ್ಷಕರು, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಅರ್ಜಿ ಪುನರ್ ಪರಿಶೀಲನೆ ವೇಳೆ ಸಹಕರಿಸಿ: ನಾಯ್ಕ



•**ಸಿದ್ದಾಪುರ:** ತಾಲೂಕಿನ ಮನಮನೆ ಗ್ರಾಪಂ ವ್ಯಾಪ್ತಿಯ ಮಳಲವಳ್ಳಿ ಗ್ರಾಮ ಅರಣ್ಯ ಹಕ್ಕು ಸಮಿತಿ ಸಭೆ ಏಳುಕೊಪ್ಪದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ನಡೆಯಿತು. ವೀರಭದ್ರ ರಾಮು ನಾಯ್ಕ ಅಧ್ಯಕ್ಷತೆ ವಹಿಸಿದ್ದರು.ತೀನಾ ಶ್ರೀನಿವಾಸ ಹಾಗೂ ಶಿವರಾಮು ಪಡವಗೋಡ ಸಂಪನ್ಮೂಲ ವ್ಯಕ್ತಿಗಳಾಗಿ ಮಾರ್ಗದರ್ಶನ ನೀಡಿದರು. ಅರಣ್ಯವಾಸಿಗಳ ಅರ್ಜಿಗಳು ತಿರಸ್ಕೃತವಾದ ಹಿನ್ನೆಲೆಯಲ್ಲಿ ಪುನರ್ ಪರಿಶೀಲನೆ ಕುರಿತು ವಿವರವಾದ ಚರ್ಚೆ ನಡೆಯಿತು. ಪುನರ್‌ಪರಿಶೀಲನೆ ಸಂದರ್ಭದಲ್ಲಿ ಪಂಚಾಯತ ಮಟ್ಟದ ಸಮಿತಿಯವರೆಗೆ ಸಹಕರಿಸುವುದು, ಅಗತ್ಯ ದಾಖಲೆಗಳನ್ನು ಒದಗಿಸುವುದು ಹಾಗೂ ಅರಣ್ಯ ಜಮೀನಿನಲ್ಲಿ ಎಷ್ಟು ವರ್ಷಗಳಿಂದ ವಾಸ ಮತ್ತು ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ಪಂಚನಾಮೆ ವೇಳೆ ಸ್ಪಷ್ಟವಾಗಿ ತಿಳಿಸುವುದು ಅಗತ್ಯವೆಂದು ಸಲಹೆ ನೀಡಲಾಯಿತು.

ಆರೋಪ ಸುಳ್ಳು: ಈಶ್ವರ ಗೌಡ



•**ಗೋಕರ್ಣ:** ನಾಡುಮಾಸ್ಕೇರಿ ಗ್ರಾಪಂ ವ್ಯಾಪ್ತಿಯ ದುಬ್ಬನಸಶಿ, ಗಂಗೆಕೊಳ್ಳಭಾಗದ ಕಡಲ ತೀರದಲ್ಲಿ ಅಕ್ರಮ ರೆಸಾರ್ಟ, ಹೋಮ್‌ಸ್ಟೇಗಳು ತೆರವಿನ ಬಗ್ಗೆ ಹಿಂದುಳಿದ ಮಠಾಧೀಶರ ಮಹಾಸಭಾ ರಾಜ್ಯಾಧ್ಯಕ್ಷ ಪ್ರಣವಾನಂದ ಶ್ರೀಗಳು ಕಾರವಾರದಲ್ಲಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ನನ್ನ ಬಗ್ಗೆ ಸುಳ್ಳು ಆರೋಪ ಮಾಡಿದ್ದು, ಶ್ರೀಗಳಿಗೆ ಅಕ್ರಮ ಕಟ್ಟಡದವರು ತಪ್ಪು ಮಾಹಿತಿ ನೀಡಿ ಈ ರೀತಿ ಹೇಳಿಕೆ ಕೊಡುವಂತೆ ಮಾಡಿದ್ದಾರೆ ಎಂದು ನಾಡುಮಾಸ್ಕೇರಿ ಗ್ರಾಪಂ ಮಾಜಿ ಅಧ್ಯಕ್ಷ ಈಶ್ವರ ಗೌಡ ಹೇಳಿದ್ದಾರೆ. ಅವರು ಗಂಗಾವಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎರಡುವರೆ ವರ್ಷದಿಂದ ಗ್ರಾಪಂ ಅಧ್ಯಕನಾಗಿ ಅತಿಕ್ರಮಣ ಮಾಡಿಕೊಂಡು ಅಕ್ರಮ ಚಟುವಟಿಕೆ ನಡೆಸುವವರ ವಿರುದ್ಧ ಹೋರಾಟ ಮಾಡುತ್ತಲೇ ಬಂದಿದ್ದು,ಇದು ನಿರಂತರವಾಗಿರುತ್ತದೆ. ಇದಕ್ಕಾಗಿ ನಾವೇ ಸ್ವತಃ ಸ್ವಂತ ಹಣ ಖರ್ಚು ಮಾಡಿದ್ದು, ಆದರೆ ನಾನೇ ಕೋಟಿ ರೂಪಾಯಿ ಬೇಡಿಕೆ ಇಟ್ಟಿದ್ದೇನೆ ಎಂದಿದ್ದಾರೆ. ಈ ಬಗ್ಗೆ ದಾಖಲೆ ಇದ್ದರೆ ತೋರಿಸಲಿ ಎಂದಿದ್ದಾರೆ. ಈ ಭಾಗದಲ್ಲಿ ಶ್ರೀಗಳು ಹೇಳಿರುವಂತೆ ವಸತಿ ಮನೆಗಳಿಗೆ ನಾವು ಆಗಲಿ ಅಧಿಕಾರಿಗಳಾಗಲಿ ಯಾವುದೇ ತೊಂದರೆ ನೀಡಿಲ್ಲ, ಅಂದಿನಿಂದ ಇಂದಿನವರೆಗೂ ಬಡವರು, ಹಿಂದುಳಿದವರು ವಾಸ್ತವ್ಯ ಮಾಡುತ್ತಿದ್ದಾರೆ. ಆದರೆ ಸರ್ಕಾರಿ ಜಾಗದಲ್ಲಿ ಒತ್ತುವರಿ ಮಾಡಿ ಪುಣ್ಯ ಕ್ಷೇತ್ರದಲ್ಲಿ ಅಕ್ರಮ ಚಟುವಟಿಕೆ ನಡೆಸುವವರ ವಿರುದ್ಧ ನಾವು ಹೋರಾಟ ಮಾಡಿದ್ದೇವೆ. ವಸತಿ ಇರುವ ಜಾಗವೇ ಬೇರೆ ರೆಸಾರ್ಟ ಕಟ್ಟಡ ಇರುವ ಜಾಗವೇ ಬೇರೆ ಈ ರೀತಿ ತಪ್ಪು ಮಾಹಿತಿ ನೀಡಿ ದೇವರಂತೆ ನಾವು ಕಾಣುವ ಶ್ರೀಗಳಿಂದ ಹೇಳಿಕೆ ಬಂದಿರುವುದು ಬೇಸರ ತಂದಿದೆ. ಅಕ್ರಮ ಚಟುವಟಿಕೆ ಮಾಡುವವರಿಗೆ ಬೆಂಬಲ ನೀಡದಂತೆ ಬೇಡಿಕೊಳ್ಳುತ್ತೇವೆ ಎಂದಿದ್ದಾರೆ. ಇನ್ನೂ ತಹಶೀಲ್ದಾರರು ನ್ಯಾಯಾಲಯದ ಆದೇಶದಂತೆ ಕೆಲಸ ಮಾಡಿದ್ದು, ಬಡಜನರಿಗೆ ತೊಂದರೆ ನೀಡಿಲ್ಲ,ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವವರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ ಎಂದಿದ್ದಾರೆ. ಈ ವೇಳೆ ಅಕ್ರಮ ಕಟ್ಟಡ ತೆರವಿನ ಹೋರಾಟದ ಪ್ರಮುಖರು, ಮೀನುಗಾರರು ಮತ್ತಿತರ ಸಮಾಜದವರು ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಯಕಾರಿಣಿ ಸಭೆ | ಸಂಸದ ಕಾಗೇರಿ ಹೇಳಿಕೆ

ರೈತರಿಗೆ ಬೆಳೆ ವಿಮೆ ತಲುಪಿಸಲು ರಾಜ್ಯ ಸರ್ಕಾರ ಬದ್ಧ



•**ಯಲ್ಲಾಪುರ:** ಬೆಳೆ ವಿಮೆಯನ್ನು ನಾನು ಕೊಡಿಸಿಯೇ ಕೊಡಿಸುತ್ತೇನೆ. ಆದರೆ ರಾಜ್ಯ ಸರಕಾರವೇ ಅಡ್ಡ ಗಾಲು ಹಾಕುತ್ತಿದೆ. ನಾನೆ ರಾಜ್ಯ ಸರಕಾರ ಫಾಲೋ ಅಪ್ ಮಾಡ್ಬೇಕಾಗಿದೆ ಬೆಳೆವಿಮೆ ಯಾಕೆ ಬರ್ತಿಲ್ಲ ಅಂತಾ ನಿಖರವಾಗಿ ಹೇಳುತ್ತಿಲ್ಲ ಹೇಳಿದರೆ ಅವರಿಗೆ ಬಹುಮಾನ ಕೊಡಬಹುದು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಶನಿವಾರ ಪಟ್ಟಣದ ಅಡಿಕೆಭವನದಲ್ಲಿ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ನಾವು ಸಂಘಟನಾತ್ಮಕವಾಗಿ ಶಕ್ತಿ ಕೊಡುವ ಮೂಲಕ ಇದರ ಪುನರಚನೆ ಭಾಗವಾಗಬೇಕು ಇದರೊಂದಿಗೆ ಸಮಾಜವನ್ನು ಜಾಗೃತ ಸ್ಥಿತಿಯಲ್ಲಿಡಲು ನಾವೆಲ್ಲರೂ ಕಾರಣೀಕರ್ತರಾಗಬೇಕು.

ಚುನಾವಣೆ ಯಲ್ಲಿ ಬಿ ಎಲ್ ಎ -2ಗಳೇ ನಮಗೆ ಆಧಾರ ಸ್ಥಂಭವಾಗಿದ್ದು, ಅವುಗಳ ಕುರಿತು ನಮ್ಮ ಕ್ಷೇತ್ರದಲ್ಲಿ ಸ್ಪಷ್ಟತೇ ತರಬೇಕಾಗಿದೆ.

ತಾಪಂ, ಜಿಪಂ ಸೇರಿದಂತೆ ಸ್ಥಳೀಯ ಚುನಾವಣೆಗಳು ಬರುತ್ತೀವೆ ನಾವು ಸಿದ್ಧರಾಗಬೇಕು. ನಮ್ಮಮಂಡಲವೂ ಚುನಾವಣೆ ಬಗ್ಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಆಡಳಿತದಲ್ಲಿ ಕಾಂಗ್ರೆಸ್ ಇದ್ದರು ಜನ ಸ್ಥಳೀಯವಾಗಿ ಬಿಜೆಪಿಯನ್ನು ಬಯಸುತ್ತಿದ್ದಾರೆ.

> ವಕೇಂದ್ರ ಸರಕಾರದಯೋಜನೆಗಳನ್ನು ವಿರೋಧಿಸಲಿಕ್ಕಾಗಿಯೇ, ಜನರ ದಿಕ್ಕು ತಪ್ಪಿಸಲು ರಾಜ್ಯ ಸರಕಾರ ವಿಶೇಷ ಅಧಿವೇಶನ ನಡೆಸಿದಂತಿತ್ತು.
> ■ ಶಾಂತಾರಾಮ ಸಿದ್ದಿ,ಎಂಎಲ್‌ಸಿ

ಅದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ಹೊನ್ನಾವರದ ಮಂಕಿ ಪಟ್ಟಣ ಪಂಚಾಯತ್ ಚುನಾವಣೆ. ವೀಕೇಂದ್ರಿಕಾರಣ ವ್ಯವಸ್ಥೆಯಲ್ಲಿ ನಾವು ತೆಗೆದುಕೊಳ್ಳುವ ಪ್ರಯತ್ನವನ್ನು ಇಚ್ಛಾ ಪೂರ್ವಕ ವಾಗಿ ಈಗಿನಿಂದಲೇ ಶ್ರಮವಹಿಸಿ ಮಾಡಬೇಕು. ಜನಸಾಮಾನ್ಯರಿಗೆ ಒಳ್ಳೇದಾಗುವದಕ್ಕೆ ಎಲ್ಲ ಪ್ರಯತ್ನವನ್ನು ನಾವು ಮಾಡಬೇಕು. ತಾಪಂ ಜಿಪಂ, ಪಪಂ ಚುನಾವಣೆಯಲ್ಲಿ ಎಲ್ಲ ಕಡೆ ನಮ್ಮದೇ ಮೇಲುಗೈ ಆಗುವಂತೆ ಸವಾಲಾಗಿ ಸ್ವೀಕರಿಸಿ ಮುನ್ನಡೆಯಬೇಕು. ಎಂದರಲ್ಲದೆ ಕೇಂದ್ರದಲ್ಲಿ ಮೋದಿ ಸರ್ಕಾರದ ಸಾಧನೆಗಳ ಕುರಿತು ತಿಳಿಸಿದರು.ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಪ್ರಾಸ್ತವಿಕ ಮಾತನಾಡಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ವಕ್ತಾರ ಹರಿಪ್ರಕಾಶ ಕೋಣೆ ಮನೆ,ಮಾಜಿ ಅಧ್ಯಕ್ಷರಾದ ಕೆ.ಜಿ.ನಾಯ್ಕ, ವೆಂಕಟೇಶ ನಾಯ್ಕ್, ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಪ್ರಮುಖರಾದ ಎಲ್.ಟಿ.ಪಾಟೀಲ, ಶಿವಾನಂದ ನಾಯ್ಕ, ಇತರರು ಇದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ಕ್ರಮವಹಿಸಿ: ವೈದ್ಯ

•**ಭಟ್ಕಳ:** ಮುರುಡೇಶ್ವರದ ಜನತಾ ವಿದ್ಯಾಲಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್. ವೈದ್ಯರ ಅಧ್ಯಕ್ಷತೆಯಲ್ಲಿ ತಾಲೂಕಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಪ್ರಗತಿ ಪರಿಶೀಲನಾ ಸಭೆಯು ನಡೆಯಿತು.

ಈ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳ ಮತ್ತು ಇತರೆ ವಿಷಯಗಳ ಕುರಿತು ಚರ್ಚೆ ನಡೆಸಲಾಯಿತು. ಸಚಿವರು ಎಲ್ಲ ಮುಖ್ಯ ಶಿಕ್ಷಕರಿಂದ ಶಾಲೆಯ ಕೊರತೆಗಳ ಬಗ್ಗೆ ಮಾಹಿತಿ ಪಡೆದರು. ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ನಾಯಕ್ ರವರು ಈಗಾಗಲೇ ಮುಗಿದಿರುವ ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಭಟ್ಕಳದ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಬಗ್ಗೆ ಮಾಹಿತಿಯನ್ನು ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಮುಖ್ಯ ಶಿಕ್ಷಕರಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳದ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ಉಪನಿರ್ದೇಶಕರ ಕಚೇರಿಯ ಡಿವೈಪಿಸಿ ಭಾಸ್ಕರ ಗಾಂವ್ಕರ್ ಮಾತನಾಡಿ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳದ ಬಗ್ಗೆ ಹಾಗೂ ಅನುದಾನಗಳ ಖರ್ಚು ವೆಚ್ಚಗಳ ಬಗ್ಗೆ ತಿಳಿಸಿದರು. ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಣಪತಿ ಶಿರೂರ್, ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಸಂತೋಷ್ ಶ್ರೇಷ್ಠಿ ಉಪಸ್ಥಿತರಿದ್ದರು. ಕ್ಷೇತ್ರ ಸಮನ್ವಯಾಧಿಕಾರಿ ಪೂರ್ಣಿಮಾ ಮೊಗೇರ ಸ್ವಾಗತಿಸಿದರು. ಶಿಕ್ಷಣ ಸಂಯೋಜಕ ಅಶೋಕ ಆಚಾರಿ ವಂದಿಸಿದರು.

> ತಾಲೂಕಿನ ಎಲ್ಲಾ 37 ಪ್ರೌಢಶಾಲೆಗಳಲ್ಲೂ ಈ ಸಾಲಿನ ಎಸ್ ಎಸ್‌ಎಲ್‌ಸಿ ಫಲಿತಾಂಶ ಶೇಕಡ ನೂರರಷ್ಟು ಆಗಬೇಕು. ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವಂತಾಗಬೇಕು. ಮುಂದಿನ ಶೈಕ್ಷಣಿಕ ವರ್ಷದೊಳಗೆ ಯಾವುದೇ ಪ್ರೌಢಶಾಲೆಗಳಲ್ಲಿ ಮೂಲಭೂತ ವ್ಯವಸ್ಥೆಗಳ ಕೊರತೆಇರದಂತೆ ಸರಿಪಡಿಸಲಾಗುವುದು.
> ■ ಮಂಕಾಳ ವೈದ್ಯ,ಸಚಿವ





ಸಿದ್ದಾಪುರ: ತಾಲೂಕಿನ ಮುತ್ಥಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನ ಮತ್ತು ಪ್ರಾಚ್ಯ ವಸ್ತು ಪ್ರದರ್ಶನ ಹಾಗೂ ಮಕ್ಕಳ ಸಂತೆ ಶುಕ್ರವಾರ ಸಂಭ್ರಮದಿಂದ ನಡೆಯಿತು. ಸ್ಥಳೀಯ ಹಿರಿಯರಾದ ಹೇಮಾವತಿ ಗೌಡರ್ ಮುತ್ಥಳ್ಳಿ, ಹಾರ್ಸಿಕಟ್ಟಾ ಗ್ರಾಪಂ ಪಿಡಿಒ ರಾಜೇಶ ನಾಯ್ಕ ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ ಕಾರ್ಯಕ್ರಮ ಉದ್ಘಾಟಿಸಿದರು.


ಕೆಲಸದ ಪ್ರಗತಿ ಬಗ್ಗೆ ಪರಿಶೀಲಿಸಲು ಆಗ್ರಹ



•**ಗೋಕರ್ಣ:** ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಡೆಯುತ್ತಿರುವ ಇಲ್ಲಿನ ತದಡಿ ಅಳಿವೆ ಭಾಗದ ಹೂಳೆತ್ತುವ ಕಾರ್ಯ ಸಮರ್ಪಕವಾಗಿ ಆಗುತ್ತಿಲ್ಲ ಈ ಬಗ್ಗೆ ಸಂಬಂಧಿಸಿದ ಇಲಾಖೆ ತಕ್ಷಣ ಎಚ್ಚೆತ್ತು, ನಿತ್ಯ ಹೂಳೆತ್ತುವ ಪ್ರಮಾಣ ಹಾಗೂ ಕೆಲಸದ ಪ್ರಗತಿ ಬಗ್ಗೆ ಪರಿಶೀಲಿಸಿ ಸಾರ್ವಜನಿಕರಿಗೂ ಮಾಹಿತಿ ನೀಡುವಂತೆ ಮೀನುಗಾರರು ಆಗ್ರಹಿಸಿದ್ದಾರೆ.

ಆಳ ಸಮುದ್ರಕ್ಕೆ ಹೋಗುವ ವೇಳೆ ಬೋಟ್ ಸಾಗಲು ಹೂಳು ತುಂಬಿ ತೊಂದರೆಯಾಗುವ ಬಗ್ಗೆ ಮೀನುಗಾರರು ಹಲವು ವರ್ಷಗಳಿಂದ ಮನವಿ ನೀಡುತ್ತಿದ್ದರು, ಅಂತೂ ಸರ್ಕಾರ ಹೂಳೆತ್ತುವ ಕಾರ್ಯಕ್ಕೆ ಒಟ್ಟು 2ಕೋಟಿ 65 ಲಕ್ಷ ರೂಪಾಯಿ ಮಂಜೂರಿ ಮಾಡಿತ್ತು, ಈ ಕಾರ್ಯಕ್ಕೆ ಶಾಸಕ ದಿನಕರ ಶೆಟ್ಟಿಯವರು ಇತ್ತೀಚಿಗೆ ಚಾಲನೆ ನೀಡಿದ್ದರು. ಇದಾದ ಬಳಿಕ ಬೃಹತ್ ಡ್ರೆಜಿಂಗ್ ಮಷಿನ್ ಮೂಲಕ ಕೆಲಸ ಪ್ರಾರಂಭವಾಗಿತ್ತು. ಆದರೆ ಒಮ್ಮೆ ಅಳಿವೆ ಭಾಗಕ್ಕೆ ಹೋಗಿ ಮತ್ತೆ ಬರುವುದು, ಮತ್ತೊಂದು ದಿನ ಕೆಲಸ ಮಾಡದೆ ನಿಲ್ಲಿಸುವುದುಮಾಡುತ್ತಿದ್ದಾರೆಎಂದುಸ್ಥಳೀಯರು ಮಾಧ್ಯಮದವರಿಗೆ ವಿವರಿಸಿದ್ದಾರೆ. ತದಡಿ ಬಂದಿರನಲ್ಲೇ ಲಂಗರು ಹಾಕಿರುವ ಈ ಬೋಟ್ ಕೆಲವೇ ಗಂಟೆ ತೆರಳಿ ವಾಪಸ ಮರಳುತ್ತಿದ್ದು, ಎಷ್ಟು ಪ್ರಮಾಣದಲ್ಲಿ ಹೂಳು ತೆಗೆಯುತ್ತಾರೆ,ಎಲ್ಲಿ ಹಾಕುತ್ತಾರೆ ಎಂಬುದನ್ನ ಜನರಿಗೆ ತಿಳಿಸುತ್ತಿಲ್ಲ, ಅನಗತ್ಯ ಹಣ ಪೋಲುಮಾಡುವುದನ್ನ ತಪ್ಪಿಸಿ ಕೆಲಸ ಪ್ರಾರಂಭದ ಹಂತದಲ್ಲೇ ಸರಿಯಾದ ಕ್ರಮದಲ್ಲಿ ನಡೆಯಲಿ ಎಂದಿದ್ದಾರೆ. ಅಲ್ಲದೇ ಸರಿಯಾದ ಕ್ರಮದಲ್ಲಿ ಹೂಳು ತೆಗೆಯದೆ ಖರ್ಚು ಮಾತ್ರ ತೋರಿಸುವ ಕಾರ್ಯವಾಗುತ್ತಿದ್ದರೆ, ಇದನ್ನ ನಿಲ್ಲಿಸಿ ಬಂದರು ವಿಸ್ತರಣೆ ಮಾಡುವ ಕಾರ್ಯವಾದರೂ ಮಾಡಬಹುದಿತ್ತು ಎಂದು ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಉಮೇಶ ಹರಿಕಾಂತ,ಜಗದೀಶ ತಾಂಡೇಲ, ಭಾಸ್ಕರ ಹರಿಕಾಂತ, ನಾಗರಾಜ ಹರಿಕಾಂತ ಮತ್ತಿತರ ಸ್ಥಳೀಯರು ಉಪಸ್ಥಿತರಿದ್ದರು.



ಮುಂಡಗೋಡ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಸುಧಾರಣೆ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಮತ್ತು ತಾಪಂ ಕಾರ್ಯ ನಿರ್ವಾಹಕ ಅಧಿಕಾರಿಗಳ ಆದೇಶದ ಮೇರೆಗೆ ಬೆಡಸಗಾಂವ ಗ್ರಾಪಂ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ವಾಹನದಲ್ಲಿ ಧ್ವನಿವರ್ಧಕದ ಮೂಲಕ ಪ್ರತಿನಿತ್ಯ ಸಂಜೆ 7 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ಮೊಬೈಲ್, ಟಿವಿ ಹಾಗೂ ಯಾವುದೇ ಧ್ವನಿವರ್ಧಕ ಬಳಸದಂತೆ ಜಾಗೃತಿ ಮೂಡಿಸಲಾಗುತ್ತಿದೆ.

ಯೋಜನೆಗಳು ಜನರಿಗೆ ತಲುಪುವಂತಾಗಲಿ: ನಾಗರಾಜ



•**ಸಿದ್ದಾಪುರ:** ಸರ್ಕಾರದ ಜನಪರ ಯೋಜನೆಗಳು ಜನರಿಗೆ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ರಾಜ್ಯಾದ್ಯಂತ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿವೆ. ಇನ್ನಷ್ಟು ಸಮರ್ಪಕವಾಗಿಸಲು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಾರ್ಯಾಗಾರವನ್ನು ಮಾಡಲಾಗುತ್ತಿದೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಕೆ.ಜಿ.ನಾಗರಾಜ ಹೇಳಿದರು.

ಪಟ್ಟಣದ ತಾಪಂ ಸಭಾಭವನದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಉಚಿತ ವಿದ್ಯುತ್ ಯೋಜನೆಗಳಿಂದ ಜನರಿಗೆ ಸಾಕಷ್ಟು ಅನುಕೂಲವಾಗುತ್ತಿದೆ. ಕೆಲವು ದಾಖಲೆಗಳ ತೊಂದರೆಯಿಂದ ಕೆಲವು ಜನರು ಈ ಯೋಜನೆಯ ಫಲ ಪಡೆಯಲು ಸಾಧ್ಯವಾಗುತ್ತಿಲ್ಲ, ಹಿಂದುಳಿದ ಅವಿದ್ಯಾವಂತ ಜನರು ಹೆಚ್ಚಾಗಿದ್ದು, ಅಧಿಕಾರಿಗಳು ಇಂತಹ ಜನರನ್ನು ಗುರುತಿಸಿ ಅವರಿಗೆ ಅವಶ್ಯಕವಾದ ದಾಖಲೆ ನೀಡುವುದರ ಜೊತೆಗೆ ಯೋಜನೆಯ ಲಾಭ ಅವರಿಗೆ ದೊರೆಯುವಂತೆ ಮಾಡಬೇಕು ಎಂದು ಹೇಳಿದರು.

ಸಾರಿಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಹೆಸ್ಕಾಂ, ಆಹಾರ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯಿಂದ ಗ್ಯಾರಂಟಿ ಯೋಜನೆಯಲ್ಲಿ ಆಗಿರುವ ಪ್ರಗತಿಯನ್ನು ತಿಳಿಸಿದರು. ಅಧಿಕಾರಿಗಳು ಪ್ರಗತಿಯ ಮಾಹಿತಿಯನ್ನು ನೀಡುವ ಪುಸ್ತಕದಲ್ಲಿ ಸಂಬಂಧಿಸಿದ ಅಧಿಕಾರಿಯ ಸಹಿ ಹಾಗೂ ಸೀಲ್ ಕಡ್ಡಾಯವಾಗಿ ಇರಬೇಕು ಎಂದು ತಾಪಂ ಕಾರ್ಯನಿರ್ವಹಣಾಧಿಕಾರಿ ದೇವರಾಜ ಹಿತ್ತಲಕೊಪ್ಪ ಅಧಿಕಾರಿಗಳಿಗೆ ಸೂಚಿಸಿದರು. ಬಸ್ ನಿಲ್ದಾಣದ ಸ್ವಚ್ಛತೆ ಹಾಗೂ ಅಲ್ಲಿಯ ಶೌಚಾಲಯದ ಅವ್ಯವಸ್ಥೆಯ ಬಗ್ಗೆ ಕ್ರಮವಹಿಸುವಂತೆ ನಿಲ್ದಾಣಾಧಿಕಾರಿಗಳಿಗೆ ತಿಳಿಸಿದರಲ್ಲದೆ ಮುಂದಿನ ಸಭೆಗೆ ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ ಕಾರವಾರದಿಂದ ಕೌಶಲ್ಯಾಭಿವೃದ್ಧಿ ಅಧಿಕಾರಿಗಳನ್ನು ಕರೆಸುವಂತೆ ಒತ್ತಾಯಿಸಿದರು.

ದಕ್ಷಯಜ್ಞ ಯಕ್ಷಗಾನ ಪ್ರದರ್ಶನ



•**ಸಿದ್ದಾಪುರ:** ತಾಲೂಕಿನ ತೆರಕನಳ್ಳಿಯ ಈಶ್ವರ ದೇವಾಲಯದಲ್ಲಿ ಹೆಗ್ಗರಣಿಯ ವೀರಮಾರುತಿ ಕದಂಬೇಶ್ವರ ಮಂಡಳಿಯ ಕಲಾವಿದರಿಂದ ಏರ್ಪಡಿಸಲಾದ ದಕ್ಷಯಜ್ಞ ಆಖ್ಯಾನ ಸೇರಿದ್ದ ಪ್ರೇಕ್ಷಕರನ್ನು ರಂಜಿಸಿತು. ಈಶ್ವರನ ಪಾತ್ರದ ನಾಟ್ಯಾಚಾರ್ಯ ಶಂಕರ ಭಟ್ಟರ ತಾಂಡವ ನೃತ್ಯ ವಿಶೇಷ ಆಕರ್ಷಣೆಯಾಗಿತ್ತು. ದಕ್ಷನಾಗಿ ರಘುಪತಿ ಹೆಗ್ಗರಣೆ, ದಾಕ್ಷಾಯಣಿಯಾಗಿ ಮಂಜು ಕೋನಳ್ಳಿ ಮೆಚ್ಚುಗೆ ಗಳಿಸಿದರು. ವೀರಭದ್ರನಾಗಿ ಗಂಗಾಧರ ತೆಪ್ಪಗಿ, ದೇವೇಂದ್ರನ ಪಾತ್ರದಲ್ಲಿ ಮಹಾಬಲೇಶ್ವರ ಮೂರೂರು, ಬ್ರಾಹ್ಮಣ ಹಾಗೂ ಭೃಗುವಾಗಿ ವೆಂಕಟ್ರಮಣ ಹೆಗಡೆ ಮಾದನಕಳ್ ಅಭಿನಯಿಸಿದರು. ಪ್ರದರ್ಶಿಸಿದ ಧರ್ಮಾಂಗದ ದಿಗ್ವಿಜಯ ಆಖ್ಯಾನದಲ್ಲಿ ವಿನಾಯಕ ಮಾವಿನಕಟ್ಟೆ ಧರ್ಮಾಂಗದನಾಗಿ, ಮಧುಸೂದನನಾವುಡ ಭರತನಾಗಿ, ರಾಜು ನಿಡಗೋಡ ನಾರದ ಹಾಗೂ ವಿಷ್ಣುವಾಗಿ, ಎಂ.ಟಿ.ಗೌಡ ಅರೆಹಳ್ಳ ಬಲಿಚಕ್ರವರ್ತಿಯಾಗಿ ಗಮನ ಸೆಳೆದರು.

ಇಂದು ಗದಾಯುದ್ಧ ಯಕ್ಷಗಾನ

•**ಹೊನ್ನಾವರ:** ಯಕ್ಷಗಾನ ಭಾಗವತರಾಗಿದ್ದ ದಿ.ಕಡತೋಕ ಮಂಜುನಾಥ ಭಾಗವತ ಅವರ ನೆನಪಿನ 'ಕಡತೋಕ ಕೃತಿ-ಸ್ಮೃತಿ' ವಿಂಶತಿ ಯಕ್ಷರಂಗೋತ್ಸವ ಮಾ.1ರಂದು ಕಡತೋಕದ ಜನತಾ ವಿದ್ಯಾಲಯದ ಆವರಣದಲ್ಲಿ ನಡೆಯಲಿದೆ ಎಂದು ಯಕ್ಷ ರಂಗೋತ್ಸವದ ಸಂಘಟನಾ ಸಮಿತಿ ಅಧ್ಯಕ್ಷ ಶಿವಾನಂದ ಹೆಗಡೆ ಕಡತೋಕ ತಿಳಿಸಿದರು.ಪಟ್ಟಣದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ.1ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಅಧ್ಯಕ್ಷತೆಯನ್ನು ಸಾಮಾಜಿಕಮುಖಂಡ ಶಿವಾನಂದಹೆಗಡೆಕಡತೋಕವಹಿಸುವರು. ಯಕ್ಷಗಾನ ಸಂಘಟಕ ಕೆರೆಮನೆ ಶಿವಾನಂದ ಹೆಗಡೆ ಅವರಿಗೆ ಸಂಘಟಕ ಗೌರವ ಸಮರ್ಪಣೆ ಮಾಡಲಾಗುವುದು. ಅರ್ಥಧಾರಿ ನಾರಾಯಣ ಯಾಜಿ ಸಾಲೇಬೈಲು ಅಭಿನಂದನಾ ಮಾತನಾಡುವರು. ಕಲಾವಿದ ಸತ್ಯನಾರಾಯಣ ಹಾಸ್ಯಗಾರ ಇತರರು ಪಾಲ್ಗೊಳ್ಳುವರು. ನಂತರ 'ಗದಾಯುದ್ಧ' ಯಕ್ಷಗಾನ ನಡೆಯಲಿದೆ ಎಂದು ತಿಳಿಸಿದರು.ಸಂಘಟಕ ಗೋಪಾಲಕೃಷ್ಣ ಭಾಗವತ ಮಾತನಾಡಿ, ಪ್ರತಿ ವರ್ಷ ನಡೆಯುವ ಈ ಕಾರ್ಯಕ್ರಮದಲ್ಲಿ ವಿಚಾರ ವಿನಿಮಯ, ಸನ್ಮಾನ, ಯಕ್ಷಗಾನ ಪ್ರದರ್ಶನ ಸೇರಿದಂತೆ ಯಕ್ಷಗಾನ ಸಂಬಂಧಿ ಕಾರ್ಯಕ್ರಮ ನಡೆಯುತ್ತವೆ. ಕಲಾಭಿಮಾನಿಗಳು ಪಾಲ್ಗೊಳ್ಳಬೇಕು ಎಂದು ವಿನಂತಿಸಿದರು. ವಕೀಲ ಸತೀಶ ಭಟ್ಟ ಉಳಗೆರೆ ಮಾತನಾಡಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಎಐಟಿಸಿಯು ಒತ್ತಾಯ



•**ಭಟ್ಕಳ:** ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿ ಎಐಟಿಯುಸಿ ಸಂಘಟನೆಯಿಂದ ತಹಶೀಲ್ದಾರ ನಾಗೇಂದ್ರಕೋಳಶೆಟ್ಟಿ ಅವರ ಮೂಲಕ ಪ್ರಧಾನ ಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು.

ಮನವಿಯಲ್ಲಿ ಜಾರಿಗೆ ತರಲುದ್ದೇಶಿಸಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು ಹಿಂದಕ್ಕೆ ಪಡೆಯಬೇಕು. ಭಾರತೀಯ ಕಾರ್ಮಿಕರ ರಕ್ಷಣೆಗಾಗಿ ಸಂಸತ್ತು 1923 ರಿಂದ 1996 ರ ನಡುವೆ ಜಾರಿಗೆತಂದ 44 ಕಾರ್ಮಿಕ ಕಾನೂನುಗಳನ್ನು ಪುನಃ ಸ್ಥಾಪಿಸಬೇಕು. ಕಟ್ಟಡ ಮತ್ತುಇತರೆ ನಿರ್ಮಾಣಕಾರ್ಮಿಕರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಮತ್ತುಕಟ್ಟಡ ಮತ್ತುಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ, 1996 ಅನ್ನು ಪುನಃಸ್ಥಾಪಿಸಿ ಪೂರ್ಣವಾಗಿ ಜಾರಿಗೆ ತರಬೇಕು. ದೇಶದ ಎಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು ಪ್ರಯೋಜನಗಳನ್ನು ಪಡೆಯಲು ಇಎಸ್ಐ, ಪಿಎಫ್ ಮತ್ತುಇತರ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಎಲ್ಲಾ ನಿರ್ಮಾಣ ಕಾರ್ಮಿಕರಿಗೆ ಕನಿಷ್ಠ 36,000 ರೂ ಮಾಸಿಕ ವೇತನ ನಿಗದಿಪಡಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಖಾತರಿಪಡಿಸಬೇಕು. 60 ವರ್ಷ ತುಂಬಿದ ನಂತರ ತಿಂಗಳಿಗೆ 6,000 ರೂ ಕನಿಷ್ಠ ಪಿಂಚಣಿ ನೀಡಬೇಕು. ದೇಶಾದ್ಯಂತ ನಿರ್ಮಾಣ ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಠ 250 ದಿನಗಳ ಉದ್ಯೋಗದ ಖಾತರಿಯನ್ನು ಖಚಿತಪಡಿಸಿಕೊಳ್ಳಬೇಕು. ನಿರ್ಮಾಣ ವಲಯದ ಮಹಿಳಾ ಕಾರ್ಮಿಕರಿಗೆ ಕಾನೂನಿನ ಪ್ರಕಾರಆರು ತಿಂಗಳ ವೇತನ ಸಹಿತ ಹೆರಿಗೆ ರಜೆ ನೀಡಬೇಕು. 60 ವರ್ಷ ವಯೋಮಿತಿ ಒಳಗಡೆ ಯಾವುದೇ ಕಾಯಿಲೆ ಅಥವಾ ಸ್ವಾಭಾವಿಕ ಮರಣಕ್ಕೆ ತುತ್ತಾದಲ್ಲಿಅವರ ನಾಮಿನಿಗೆ ಕುಟುಂಬ ಪಿಂಚಣಿ ನೀಡುವುದು. ಅಪಘಾತ ಅಥವಾ ಸ್ವಾಭಾವಿಕ ಮರಣಕ್ಕೆ ತುತ್ತಾದಲ್ಲಿಯಾವುದೇ ಸಾವಿಗೂ ಕನಿಷ್ಠ 10 ಲಕ್ಷ ಪರಿಹಾರ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ ಮನವಿ ಸ್ವೀಕರಿಸಿದರು. ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಜಿ.ಎನ್. ರೇವಣಕರ್, ಮಂಜುನಾಥ ಆಚಾರಿ, ವೆಂಕಟ್ರಮಣ ನಾಯ್ಕ, ಸುಕ್ರ ಗೊಂಡ ಇದ್ದರು.

ಇಸ್ವತ್ತು ಕೈಬಿಡಲು ಆಗ್ರಹ

•**ಹೊನ್ನಾವರ:** ಜಿಲ್ಲೆಯ ಗ್ರಾಮೀಣ ಪ್ರದೇಶದ ತುಂಡು ಭೂಮಿಯಲ್ಲಿ ಜನಸಾಮಾನ್ಯರು ಮನೆ ಕಟ್ಟಿಕೊಳ್ಳಲು ತೊಡಕಾಗಿರುವಂತಹ ಎನ್.ಎ ಮತ್ತು ಇಸ್ವತ್ತು ಕೈಬಿಡುವಂತೆ ಆಗ್ರಹಿಸಿ ಜಿಲ್ಲಾ ದಿ.ಡಿ.ದೇವರಾಜ ಅರಸು ವಿಚಾರ ವೇದಿಕೆ ಅಧ್ಯಕ್ಷ ಅನಂತ ನಾಯ್ಕ ಹೆಗ್ಗಾರ ಒತ್ತಾಯಿಸಿದರು.

ಪಟ್ಟಣದ ನಾಮಧಾರಿ ವಿದ್ಯಾರ್ಥಿ ನಿಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ಶೇಕಡಾ 80% ಭೂ ಪ್ರದೇಶ ಅರಣ್ಯ ಭೂಮಿಯಾಗಿರುವ ಜೊತೆ, ಹೆಚ್ಚಿನದು ತುಂಡು ಭೂಮಿಯ ರೈತರಿಂದಲೇ ಗುಡ್ಡಗಾಡು ಜಿಲ್ಲೆಯಾಗಿದೆ. ರಾಜ್ಯದ ಇತರೇ ಎಲ್ಲಾ ಜಿಲ್ಲೆಗಳಿಗಿಂತ ನಮ್ಮ ಜಿಲ್ಲೆ ಭೌಗೋಳಿಕವಾಗಿ ಸಂಪೂರ್ಣ ಭಿನ್ನವಾಗಿದ್ದು, ಸಾಕಷ್ಟು ಹಳ್ಳಿಗಳು ರಸ್ತೆಯನ್ನೇ ಕಂಡಿಲ್ಲ, ಬಡವರು, ತುಂಡು ಭೂಮಿ ರೈತರು ಮನೆ ನಿರ್ಮಿಸಿಕೊಳ್ಳುವಲ್ಲಿ ತೊಡಕಾಗುವುದರಿಂದ ಮುಕ್ತಿ ನೀಡಬೇಕೆಂದು ಸಾರ್ವಜನಿಕವಾಗಿ ಆಗ್ರಹಿಸಿ ಮುಖ್ಯಮಂತ್ರಿಗಳಿಗೆ, ವಸತಿ ಸಚಿವರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಲಿಖಿತ ಮನವಿ ನೀಡಲಾಗುವುದೆಂದು ತಿಳಿಸಿದ ಅವರು ಕಳೆದ 7-8 ವರ್ಷಗಳಿಂದ ಸರ್ಕಾರ ಗ್ರಾಪಂಗಳಿಗೆ ಆಶ್ರಯ ಯೋಜನೆ ಅಡಿಯಲ್ಲಿ ಮನೆಗಳನ್ನು ಮಂಜೂರಿ ನೀಡಿಲ್ಲ ಎಂದು ಆರೋಪಿಸಿದರು.ಸದಸ್ಯ ಶಂಕರ ಗೌಡ ಗುಣವಂತೆ ಮಾತನಾಡಿದರು. ಸದಸ್ಯರಾದ ನಾರಾಯಣ ಮುಕ್ರಿ ಕಡತೋಕಾ, ಕೇಶವ ನಾಯ್ಕ ಮಾಗೋಡ, ದೀಪಕ ಲೋಬೋ ಕೋಡಾಣಿ ಉಪಸ್ಥಿತರಿದ್ದರು.



ಅಪ್ರತಿಮ ಸಾಹಸಕ್ಕೆ ಸಿದ್ದಾಪುರ ಹೆಸರುವಾಸಿ



•**ಸಿದ್ದಾಪುರ:** ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಅಪ್ರತಿಮ ಸಾಹಸ ಮೆರೆಯುವ ಮೂಲಕ ಸಿದ್ದಾಪುರ ತಾಲೂಕು ದಕ್ಷಿಣದ ಬಾರ್ಡೋಲಿ ಎಂಬ ಖ್ಯಾತಿಗೆ ಪಾತ್ರವಾಗಿದೆ. ಅಂದಿನ ಹಿರಿಯರಲ್ಲದೆ ಮಕ್ಕಳು ಸಹ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದು, ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ ಎಂದು ಭಾರತ ಸೇವಾದಳದ ತಾಲೂಕು ಅಧ್ಯಕ್ಷ ಕೆಕ್ಕಾರ ನಾಗರಾಜ ಭಟ್ಟ ಹೇಳಿದರು. ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ ಮತ್ತು ಇತಿಹಾಸ ವಿಭಾಗದ ಸಹಯೋಗದಲ್ಲಿ ಸರ್ಕಾರಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ 'ಸಿದ್ದಾಪುರ ತಾಲೂಕಿನ ಸ್ವಾತಂತ್ರ್ಯ ಹೋರಾಟದ ಮಜಲುಗಳು' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು. ಮಹಾವಿದ್ಯಾಲಯದ ಪ್ರಾ. ಡಾ.ಸತೀಶ ನಾಯ್ಕ ,ಐಕ್ಯುಎಸಿ ಉಪಸಂಚಾಲಕ ಗಣಪತಿ ಎಂ.ಬಿ., ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ.ನಾರಾಯಣ ಗೌಡ ಮಾತನಾಡಿದರು. ಐಕ್ಯುಎಸಿ ಸಂಚಾಲಕಿ ಡಾ.ರಶ್ಮಿ ಎನ್.ಕರ್ಕಿ, ಉಪನ್ಯಾಸಕರಾದ ಡಾ.ಮಲ್ಲಮ್ಮ, ಡಾ.ಕಿರಣಕುಮಾರಿ, ಡಾ.ಮಹಾಲಕ್ಷ್ಮೀ ನಾಯ್ಕ, ಮಧುರಾಕ್ಷಿ, ಚಂದ್ರಶೇಖರ ಮರಾಠಿ, ದಿವಾಕರ, ಮಾರುತಿ ಉಪಸ್ಥಿತರಿದ್ದರು. ಪೃಥ್ವಿ ಸಂಗಡಿಗರ ಪ್ರಾರ್ಥಿಸಿದರು. ಉಪನ್ಯಾಸಕ ಈಶ್ವರ ನಾಯ್ಕ ಸ್ವಾಗತಿಸಿದರು. ಉಪನ್ಯಾಸಕ ನಾರಾಯಣ ಗೌಡ ಪರಿಚಯಿಸಿದರು. ರಶ್ಮಿ ನಾಯ್ಕ ನಿರ್ವಹಿಸಿದರು. ಇತಿಹಾಸ ಉಪನ್ಯಾಸಕ ಶಶಿಧರ ಸಿರ್ಸಿಕರ ವಂದಿಸಿದರು.

ಕರಾಟೆ ಪಂದ್ಯಾವಳಿ: ಸನ್ಮಾನ

•**ಸಿದ್ದಾಪುರ:** ಥೈಲ್ಯಾಂಡ್ ಬ್ಯಾಂಕಾಕ್‌ನ ರತನ್ ಬಂಡಿತ್ ಯುನಿವರ್ಸಿಟಿಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಕರಾಟೆ ಪಂದ್ಯಾವಳಿ-2026 ಕಟಾ ಮತ್ತು ಕುಮಿಟಿ ವಿಭಾಗದಲ್ಲಿ ಎರಡು ಚಿನ್ನದ ಪದಕ ಪಡೆದ ಸಿದ್ದಾಪುರ ತಾಲೂಕಿನ ಕತ್ರಗಾಲ ವಿದ್ಯಾಗಿರಿ ರಮಾನಂದ ಆಂಗ್ಲ ಶಾಲೆಯ ವಿದ್ಯಾರ್ಥಿ ಸಿ.ಗೌರೀಶ ಅವರನ್ನು ಹಾಗೂ ತರಬೇತಿ ನೀಡಿದ ಚಂದ್ರಕಾಂತ ಜಿ.ಭಟ್ಟ ಶಿವಮೊಗ್ಗ ಅವರನ್ನು ಪಟ್ಟಣದ ಬಾಲಭವನದಲ್ಲಿ ಗೌರವಿಸಲಾಯಿತು.

ರಮಾನಂದ ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆ ಅಧ್ಯಕ್ಷ ಶ್ರೀ ಪಾದ ಭಟ್ಟ, ಪ್ರಧಾನಕಾರ್ಯದರ್ಶಿ ಪ್ರಸನ್ನ ಹೆಗಡೆ, ವೆಂಕಟೇಶ ಗೊದ್ಲಮನೆ, ರೈತ ಸಂಘದ ಕೆರಿಯಪ್ಪ ನಾಯ್ಕ, ಜಿ.ಬಿ.ನಾಯ್ಕ, ಪಾಲಕರಾದ ಚಂದ್ರಹಾಸ ಹೂವಿನಮನೆ, ವಿನೋದಾ ಚಂದ್ರಹಾಸ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಹಿಂದೂ ಸಮ್ಮೇಳನ

ಶಿಗ್ಗಾವಿ: ಪಟ್ಟಣದಲ್ಲಿ ಮಾ.1ರಂದು ಹಿಂದೂ ಸಮ್ಮೇಳನ ಸಮಿತಿ ಶಿಗ್ಗಾವಿ ವತಿಯಿಂದ ಬೃಹತ್ ಹಿಂದೂ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಸಮ್ಮೇಳನ ಸಮೀತಿ ಕಾರ್ಯದರ್ಶಿ ರಾಘವೇಂದ್ರ ದೇಶಪಾಂಡೆ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಧ್ಯಾಹ್ನ 3 ಗಂಟೆಗೆ ತಾಲೂಕು ಕ್ರೀಡಾಂಗಣದ ಗ್ರಾಮದೇವಿ ಪಾದಗಟ್ಟಿಯಿಂದ ಶೋಭಾಯಾತ್ರೆ ಪ್ರಾರಂಭವಾಗಲಿದ್ದು, ಸಂಜೆ 6 ಗಂಟೆಗೆ ಕಿತ್ತೂರಾಣಿ ಚೆನ್ನಮ್ಮ ಸರ್ಕಲ್‌ನ ಸಂತೆ ಮೈದಾನದಲ್ಲಿ ಸಭಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ರಾಣೆಬೆನ್ನೂರ ಹಿರೇಮಠದ ಶಿವಯೋಗಿ ಶಿವಾಚಾರ್ಯ ಶ್ರೀಗಳು ಹಾಗೂ ಶಿಗ್ಗಾವಿ ವಿರಕ್ತಮಠದ ಸಂಗನಬಸವ ಶ್ರೀಗಳು ಸಾನಿಧ್ಯವನ್ನು ವಹಿಸಲಿದ್ದು, ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ಹೊಸಕೇರಾ ಅವರು ದಿಕ್ಸೂಚಿ ಭಾಷಣವನ್ನು ಮಾಡಲಿದ್ದಾರೆ ಎಂದು ತಿಳಿಸಿದರು.

ಇಂದಿನಿಂದ ಪಾದಯಾತ್ರೆ, ಪ್ರವಚನ

ಹಾವೇರಿ: ಪೂಜ್ಯ ಶ್ರೀ ಹಾನಗಲ್ ಗುರುಕುಮಾರ ಶಿವಯೋಗಿಗಳವರ 159ನೇ ಜಯಂತಿ ಮಹೋತ್ಸವ ಹಾಗೂ ಮಹಾ ರಥೋತ್ಸವ ನಿಮಿತ್ತ ಮಾ.1ರಿಂದ ಆಯ್ದ ಹಳ್ಳಿಗಳಲ್ಲಿ ಪಾದಯಾತ್ರೆ ಹಾಗೂ ಪ್ರವಚನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮಾ.1ರಿಂದ ಮಾ.5 ರವರೆಗೆ ರಾಣೇಬೆನ್ನೂರ ತಾಲೂಕು ಲಿಂಗದಹಳ್ಳಿ, ಮಾ.6ರಿಂದ 10ರ ವರೆಗೆ ಆಲದಕಟ್ಟಿ, ಮಾ.11ರಿಂದ ಮಾ.15ರ ವರೆಗೆ ಹಲಗೇರಿ, ಮಾ.16ರಿಂದ ಮಾ.20ರ ವರೆಗೆ ಬೆನಕನಕೊಂಡ, ಮಾ.21ರಿಂದ 25ರವರೆಗೆ ನಂದಿಹಳ್ಳಿ ಗ್ರಾಮಗಳಲ್ಲಿ ಪಾದಯಾತ್ರೆ ಹಾಗೂ ಪ್ರವಚನ ಹಮ್ಮಿಕೊಳ್ಳಲಾಗಿದೆ. ಜತೆಗೆ ಉಚಿತ ಆರೋಗ್ಯ ತಪಾಸಣೆ, ಜಾನುವಾರು ಪ್ರದರ್ಶನ ಹಾಗೂ ತಪಾಸಣೆ, ಕೃಷಿ ಮಾಹಿತಿ, ಸಾಂಸ್ಕೃತಿಕ ಕಾರ್ಯಕ್ರಮ, ಸದ್ಭಾವ ಬುತ್ತಿ (ರೊಟ್ಟಿ ಜಾತ್ರೆ), ನಾಟಕ ಪ್ರದರ್ಶನ ಕಾರ್ಯಕ್ರಮ ನಡೆಯಲಿವೆ. ಮಾ.26ರಿಂದ ಏ.14ರ ವರೆಗೆ ಕುಮಾರೇಶ್ವರರ ಜನ್ಮಸ್ಥಳವಾದ ರಾಣೇಬೆನ್ನೂರು ತಾಲೂಕು ಜೋಯಿಸರಹರಳಹಳ್ಳಿ ಕುಮಾರೇಶ್ವರ ಮಠದ ಆವರಣದಲ್ಲಿ ಹಾವೇರಿ ಹುಕ್ಕೇರಿಮಠದ ಶಿವಬಸವ ಶ್ರೀಗಳ ಜೀವನದರ್ಶನ ಪ್ರವಚನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಹಾವೇರಿ: ಡಾ. ಬಾಬು ಜಗಜೀವನರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ 2026-27ನೇ ಪ್ರಶಸ್ತಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ 2026-27ನೇ ಸಾಲಿನ ನೀಡಲು ಉದ್ದೇಶಿಸಿರುವ ಹಿನ್ನೆಲೆಯಿಂದ ಹಾವೇರಿ ಜಿಲ್ಲೆಯಿಂದ ಸದರಿ ಪ್ರಶಸ್ತಿಗಳನ್ನು ಪಡೆಯಲು ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೇ ಸಮುದಾಯಗಳಿಗೆ ಸೇರಿದವರಾಗಿರಬೇಕು. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಅವರ ತತ್ವಗಳನ್ನು ಪಾಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಏಳಿಗೆಗಾಗಿ ದೀರ್ಘ ಕಾಲ ಶ್ರಮಿಸಿದವರಾಗಿರಬೇಕು. ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರತಕ್ಕದ್ದಲ್ಲ ಹಾಗೂ ಯಾವುದೇ ವ್ಯಕ್ತಿ ಒಂದು ಪ್ರಶಸ್ತಿಗೆ ಮಾತ್ರ ಅರ್ಜಿ ಸಲ್ಲಿಸಬೇಕು.

ಅರ್ಹ ವ್ಯಕ್ತಿಗಳು ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಾರ್ಯಾಲಯದಲ್ಲಿ ಅರ್ಜಿ ನಮೂನೆ ಪಡೆದು, ತಮ್ಮ ಸ್ವ ವಿವರ ಮತ್ತು ಅಗತ್ಯ ದಾಖಲೆಗಳೊಂದಿಗೆ ಮಾ.6ರೊಳಗಾಗಿ ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ಹಾವೇರಿ, 'ಬಿ' ಬ್ಲಾಕ್, ಮೊದಲನೇ ಮಹಡಿ, ರೂಂ ನಂ.25, ಜಿಲ್ಲಾಡಳಿತ ಭವನ ಹಾವೇರಿ (ದೇವಗಿರಿ)ರೀ ವಿಳಾಸಕ್ಕೆ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಸೀತಾಬಾಯಿ ಕುಲಕರ್ಣಿ



ಹಾವೇರಿ: ಇಲ್ಲಿಯ ಹಾದಿಬಸವಣ್ಣ ನಗರದ ನಿವಾಸಿ ಸೀತಾಬಾಯಿ ರಾಮಚಂದ್ರ ಕುಲಕರ್ಣಿ (90) ಅವರು ನಿಧನರಾದರು. ಮೃತರಿಗೆ ಮೂವರು ಪುತ್ರರು, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.



ಹಾವೇರಿ: ನಗರದಲ್ಲಿ ಶಿವಾಜಿ ಮಹಾರಾಜರ ಜಯಂತಿ ಪ್ರಯುಕ್ತ ಕರ್ನಾಟಕ ಕ್ಷತ್ರೀಯ ಒಕ್ಕೂಟ ಜಿಲ್ಲಾ ಘಟಕದ ನೇತೃತ್ವದಲ್ಲಿ ಶನಿವಾರ ಬೃಹತ್ ಮೆರವಣಿಗೆ ನಡೆಯಿತು. ನಾಸಿಕ್ ಡೋಲು ತಂಡ ಹಾಗೂ ಶಿವಾಜಿ ಅಭಿಮಾನಿಗಳು ಪೇಟಾ ಧರಿಸಿ ಗಮನ ಸೆಳೆದರು.

ಮಾ.10ರಿಂದ ನೆಹರು ಮಾರುಕಟ್ಟೆ ಬಂದ್

ಹಾವೇರಿ : ರಾಣೇಬೆನ್ನೂರು ನೆಹರು ಮಾರುಕಟ್ಟೆ ಘೋಷಿತ ಮಾರುಕಟ್ಟೆ ಪ್ರಾಂಗಣ ಅಲ್ಲದೇ ಇರುವುದರಿಂದ, ಅಲ್ಲಿ ಜರುಗುತ್ತಿರುವ ವ್ಯವಹಾರವು ಅನಧಿಕೃತವಾಗಿದ್ದು, ಕಾನೂನು ಬಾಹಿರವಾಗಿರುತ್ತದೆ. ಈ ಸ್ಥಳದಲ್ಲಿ ವರ್ತಕರುಗಳು ನಡೆಸುತ್ತಿರುವ ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ವ್ಯಾಪಾರ-ವಹಿವಾಟನ್ನು ಮಾ.10ರಿಂದ ಬಂದ್ ಮಾಡಿ, ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಗೊಳಿಸಲು ಕಾನೂನಿನ ಪ್ರಕಾರ ಕಾರ್ಯಾಚರಣೆ ಕೈಕೊಳ್ಳಲಾಗುತ್ತಿದೆ ಎಂದು ರಾಣೇಬೆನ್ನೂರು ಕೃಉಮಾಸ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.1966 ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮಕ್ಕೆ ಕಾಯ್ದೆ ಸಂಖ್ಯೆ 20/2024 ರ ಮೂಲಕ ಮಾಡಿರುವ ತಿದ್ದುಪಡಿ ಕಾಯ್ದೆಯನ್ವಯ ಅಧಿಸೂಚಿತ ಕೃಷಿ ಹುಟ್ಟುವಳಿಗಳನ್ನು ಘೋಷಿತ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾತ್ರ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದ್ದರಿಂದ ನೆಹರು ಮಾರುಕಟ್ಟೆ ಎಂಬ ಪ್ರದೇಶದಲ್ಲಿ ನಿಯಂತ್ರಿತ ಕೃಷಿ ಉತ್ಪನ್ನಗಳ ವ್ಯಾಪಾರ-ವಹಿವಾಟು ಮಾಡುತ್ತಿರುವ ದಲ್ಲಾಲರು, ಖರೀದಿದಾರರ ಅಂಗಡಿಗಳಿಗೆ, ರೈತಬಾಂಧವರು ಮೆಕ್ಕೆಜೋಳ, ಸೂರ್ಯಕಾಂತಿ ಹಾಗೂ ಇತರೆ ಕಾಳು-ಕಡಿಗಳನ್ನು ಮಾರಾಟಕ್ಕೆ ತರಬಾರದೆಂದು ಹಾಗೂ ತಾವು ಬೆಳೆದಂತಹ ಮೆಕ್ಕೆಜೋಳ, ಸೂರ್ಯಕಾಂತಿ ಹಾಗೂ ಇತರೆ ಕಾಳು-ಕಡಿ ಉತ್ಪನ್ನಗಳನ್ನು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ದಲ್ಲಾಲರು ಹಾಗೂ ಖರೀದಿದಾರರ ಅಂಗಡಿಗಳಿಗೆ ತಂದು ಮಾರಾಟ ಮಾಡಬೇಕೆಂದು ಪ್ರಕಟಣೆಯಲ್ಲಿ ವಿನಂತಿಸಿಕೊಂಡಿದ್ದಾರೆ.



ನರಗುಂದ: ಹುಯಿಲಗೋಳ ಗ್ರಾಮದ ಶ್ರವಣ ದೋಷವುಳ್ಳ 5ನೇ ತರಗತಿ ವಿದ್ಯಾರ್ಥಿ ಸಮರ್ಥ ನೀಲಪ್ಪ ಹಂಚಿನಾಳಗೆ ಶಾಸಕರ ಅನುದಾನ 66.5 ರೂ. ವೆಚ್ಚದಲ್ಲಿ ಖರೀದಿಸಿದ ಶ್ರವಣ ಯಂತ್ರವನ್ನು ಶಾಸಕ ಸಿ.ಸಿ. ಪಾಟೀಲ ಅವರು ವಿತರಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾಸ್ಪತ್ರೆ ಆಡಳಿತಾಧಿಕಾರಿ ಡಾ.ಜಡೇಶ ಭದ್ರಗೌಡ್ರ, ಕಿರಣ ಜೋಶಿ, ನಿಜಗುಣಪ್ಪ ಹೂಗಾರ, ಪ್ರಕಾಶ ಅರಹುಣಶಿ, ನೀಲಪ್ಪ ಹಂಚಿನಾಳ, ಶಂಭುಲಿಂಗಪ್ಪ ಹಾಳಕೇರಿ ಇತರರಿದ್ದರು.

ಕನ್ನಡ ಪರೀಕ್ಷೆಗೆ ಶೇ.96ರಷ್ಟು ವಿದ್ಯಾರ್ಥಿಗಳು ಹಾಜರು

ಮೊದಲ ದಿನ ದ್ವಿತೀಯ ಪಿಯು ಪರೀಕ್ಷೆ ಸುಗಮ

ಹಾವೇರಿ: ಪ್ರಸಕ್ತ ಸಾಲಿನ 2025-26ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಹಿನ್ನೆಲೆ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಶನಿವಾರ ಮೊದಲ ದಿನ ಪ್ರಥಮ ಭಾಷೆಯ ಪರೀಕ್ಷೆ ಬಹುತೇಕ ಶಾಂತಿಯುತ ಹಾಗೂ ಸುಗಮವಾಗಿ ನಡೆಯುವ ಮೂಲಕ ಶುಭಾರಂಭಗೊಂಡಿತು.

ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ಹಿನ್ನೆಲೆ ಮೊದಲದಿನದಪರೀಕ್ಷೆಯನ್ನುಎದುರಿಸಲುಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರವೇಶ ಪತ್ರದಲ್ಲಿ ದಾಖಲಾಗಿರುವ ಕಾಲೇಜಿನ ವಿಳಾಸಕ್ಕೆ ಗಂಟೆಗೂ ಮುಂಚೆಯೇ ಆಗಮಿಸಿದ್ದರು. ಪರೀಕ್ಷಾ ಕೇಂದ್ರಗಳಲ್ಲಿ ಹಾಕಲಾಗಿದ್ದ ನಾಮಫಲಕಗಳಲ್ಲಿ ತಮ್ಮ ನೋಂದಣಿ ಸಂಖ್ಯೆಯನ್ನು ಹುಡುಕಿಕೊಳ್ಳುವಲ್ಲಿ ವಿದ್ಯಾರ್ಥಿಗಳು ಮುಂದಾಗಿದ್ದರು. ಕೆಲ ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ, ಪಠ್ಯ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಪರಸ್ಪರ ಚರ್ಚೆ ನಡೆಸುತ್ತಿರುವುದು ಕಂಡುಬಂತು.

ಪರೀಕ್ಷಾ ಕೇಂದ್ರದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಸಿಸಿ ಟಿವಿಯನ್ನು ಅಳವಡಿಸಲಾಗಿತ್ತು. ಜಿಲ್ಲಾ ಪಂಚಾಯಿತಿಯಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಲಹೆ ನೀಡಲಾಗಿದೆ. ಪರೀಕ್ಷೆ ಹಿನ್ನೆಲೆ ಪರೀಕ್ಷಾ ಕೊಠಡಿಗಳಲ್ಲಿ ಸ್ವಚ್ಛತೆ, ಗಡಿಯಾರ, ಫ್ಯಾನ್, ಬೆಳಕಿನ ವ್ಯವಸ್ಥೆ, ಕುಡಿಯುವ ನೀರು ಹಾಗೂ ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿತ್ತು.

ಮೊಬೈಲ್, ರಿಸ್ಟ್ ವಾಚ್, ಬ್ಲೂಟೂತ್, ಪೇಜರ್, ವೈರಲೆಸ್ ಸೆಟ್‌ಗಳನ್ನು ನಿಷೇಸಲಾಗಿತ್ತು. ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವರೆಗೆ ನಿಷೇಧಾಜ್ಞೆ ಹೊರಡಿಸಲಾಗಿತ್ತು. ಝೆರಾಕ್ಸ್ ಹಾಗೂ ಸೈಬರ್ ಕೆಫೆಗಳನ್ನು ಮುಚ್ಚಿಸಲಾಗಿತ್ತು. ಪರೀಕ್ಷಾ ಕೇಂದ್ರದ ಹೊರ ಆವರಣದಲ್ಲಿ ಯಾವುದೇ ಅಹಿತಕರ ಚಟುವಟಿಕೆ ನಡೆಯದಂತೆ ನಿಗಾವಹಿಸಲು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿತ್ತು.

ಪ್ರತಿತಾಲೂಕಿಗೂನೇಮಿಸಿದತಹಸೀಲ್ದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪ್ರಿನ್ಸಿಪಾಲ್ ಒಳಗೊಂಡ ತ್ರಿಸದಸ್ಯ ಸಮಿತಿಯು ಪೊಲೀಸ್ ಬಂದೋಬಸ್‌ನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಆಯಾ ತಾಲೂಕಿಗೆ ತೆಗೆದುಕೊಂಡು ಹೋಗಿ ನಿಗದಿತ ಸಮಯದೊಳಗೆ ಪರೀಕ್ಷಾ ಕೇಂದ್ರವನ್ನು ತಲುಪಿಸಿದರು. ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆದ ಪರೀಕ್ಷೆಯು ಒಟ್ಟಾರೆಯಾಗಿ ಶಾಂತಿಯುತ ಮತ್ತು ಸುಗಮವಾಗಿ ನಡೆಯಿತು.



11,520 ವಿದ್ಯಾರ್ಥಿಗಳು ಹಾಜರ

ಪಿಯು ಪರೀಕ್ಷೆ ಮೊದಲ ದಿನ ಜರುಗಿದ ಕನ್ನಡ ವಿಷಯದ ಪರೀಕ್ಷೆಗೆ ಒಟ್ಟು 11,928 ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದರು. ಈ ಪೈಕಿ 11,520 ವಿದ್ಯಾರ್ಥಿಗಳು ಹಾಜರಾಗಿದ್ದು, 408 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಶೇ.96.58ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆ ನೀಡುವ ಮೂಲಕ ಮಾಹಿತಿ ನೀಡಿದ್ದಾರೆ.

> **ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಹಿನ್ನೆಲೆ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಮೊದಲ ದಿನ ಜರುಗಿದ ಕನ್ನಡ ಭಾಷೆ ಪರೀಕ್ಷೆ ಶಾಂತಿಯುತವಾಗಿ ನಡೆದಿದೆ. ಶೇ.96.58ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದಾರೆ.**
> **■ ಅಶೋಕ ಶಾಸ್ತ್ರೀ, ಡಿಡಿಪಿಯು ಹಾವೇರಿ**

ಶಿವಾಜಿ ಜಯಂತಿ: ಅದ್ದೂರಿ ಮೆರವಣಿಗೆ

ಹಾವೇರಿ: ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಪ್ರಯುಕ್ತ ಕರ್ನಾಟಕ ಕ್ಷತ್ರೀಯ ಒಕ್ಕೂಟ ಜಿಲ್ಲಾ ಘಟಕದ ನೇತೃತ್ವದಲ್ಲಿ ಶನಿವಾರ ಸಂಜೆ ನಗರದಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು.

ನಗರದ ಹುಕ್ಕೇರಿಮಠ ಆವರಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಸಲ್ಲಿಸಲಾಯಿತು. ಕ್ಷತ್ರಿಯ ಸಮಾಜದವರು, ಭಾವಸಾರ ಕ್ಷತ್ರೀಯ, ಮರಾಠಾ ಕ್ಷತ್ರೀಯ, ಸೋಮವಂಶ ಕ್ಷತ್ರೀಯ, ರಾಮವಂಶ ಕ್ಷತ್ರೀಯ, ರಜಪೂತ, ನಾಮದೇವ, ಕಲಾಲ, ಜೋಗಿ, ಕಿಳ್ಳಿಕ್ಯಾತರ, ಲಂಬಾಣಿ, ಗೊಂದಳಿ ಕ್ಷತ್ರೀಯ ಹೀಗೆ ಅನೇಕ ಸಮುದಾಯದ ಜನರು ಮೆರವಣಿಗೆಯಲ್ಲಿ ಹಾಜರಿದ್ದರು. ಬಳಿಕ ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ, ಹರಸೂರ ಬಣ್ಣದಮಠದ ಅಭಿನವರುದ್ರ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ, ಮೈಲಾರ ಲಿಂಗೇಶ್ವರ ದೇವಸ್ಥಾನದ ವೆಂಕಪ್ಪ ಒಡೆಯರ್ ಅವರು ಜಂಟಿಯಾಗಿ ಮೆರವಣಿಗೆಗೆ ಚಾಲನೆ ನೀಡಿದರು.

ಬಳಿಕ ಆರಂಭವಾದ ಮೆರವಣಿಗೆ ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಹೊರಟು, ಮೇಲಿನಪೇಟೆ, ಸುಭಾಸ್ ಸರ್ಕಲ್, ಪುನಃ ಮೇಲಿನಪೇಟೆ ಮಾರ್ಗವಾಗಿ ದ್ಯಾಮವ್ವನ ಗುಡಿ ಪಾದಗಟ್ಟಿ, ಎಂ.ಜಿ ರಸ್ತೆ, ಎಂ.ಜಿ.ವೃತ್ತ, ಜೆ.ಪಿ ವೃತ್ತ, ಹೊಸಮನಿ ಸಿದ್ದಪ್ಪ ವೃತ್ತ ಮಾರ್ಗದಿಂದ ಶಿವಾಜಿನಗರದಲ್ಲಿರುವ ಮರಾಠಾ ಸಮುದಾಯ ಭವನ ತಲುಪಿತು. ಮೆರವಣಿಗೆಯಲ್ಲಿ ಮಹಾರಾಷ್ಟ್ರದ ನಾಸಿಕ್ ಡೋಲು ತಂಡ ಭಾಗವಹಿಸಿ ಗಮನ ಸೆಳೆಯಿತು. ಪುರುಷರು ಬಿಳಿ ಶರ್ಟ್, ಬಿಳಿ ಪ್ಯಾಂಟ್, ಜುಬ್ಬಾ, ಪೇಟಾ ಧರಿಸಿದ್ದರು. ಮಹಿಳೆಯರು ಸೀರೆ, ಪೇಟಾ ಧರಿಸಿ ಗಮನ ಸೆಳೆದರು.

ಮೆರವಣಿಗೆಯಲ್ಲಿ ಮಾಜಿ ಶಾಸಕ ನೆಹರೂ ಓಲೇಕಾರ, ಕರ್ನಾಟಕ ಕ್ಷತ್ರೀಯ ಒಕ್ಕೂಟದ ಜಿಲ್ಲಾಧ್ಯಕ್ಷ ಶಂಕರ ಮೆಹರವಾಡೆ, ಒಕ್ಕೂಟದ ಗೌರವಾಧ್ಯಕ್ಷ ನಾಗರಾಜ ಚೋರಾಪುರಿ, ಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಎಂ.ಎಂ ಮೈದೂರ, ಯುವ ಒಕ್ಕೂಟದ ಗೌರವಾಧ್ಯಕ್ಷ ದರ್ಶನ ಲಮಾಣಿ, ಮಹಾವೀರ ಘನಾತೆ, ಪ್ರಮೋದ ನವಲೆ, ಉದಯ ತಾಂಗಳೆ, ಭಾಗಶ್ರೀ ಮೋರೆ, ಚಂದ್ರಶೇಖರ ಜಾಧವ, ನಾಮದೇವ ಸಿಂಪಿ, ರಮೇಶ ಮಾಳೋದೆ, ಲಕ್ಷ್ಮಣಸಿಂಗ್ ರಜಪೂತ, ಧರ್ಮರಾಜ ಕಜೂರಕರ, ದೇವರಾಜ ಗುಂಡೆ, ನಾಗೇಂದ್ರಪ್ಪ ಡಿ.ಕೆ., ವಿಶಾಲ ಸುಲಾಕೆ, ಶ್ರೀಕಾಂತ ಮಾಳದಕರ ಸೇರಿದಂತೆ ಹಿಂದೂಪರ ಸಂಘಟನೆಗಳ ಮುಖಂಡರು, ಶಿವಾಜಿ ಮಹಾರಾಜರ ಅಭಿಮಾನಿಗಳು, ಪಕ್ಷಾತೀತ ನಾಯಕರು ಭಾಗವಹಿಸಿದ್ದರು.



ಮಕ್ಕಳಲ್ಲಿ ತಂತ್ರಜ್ಞಾನ ಅರಿವು ಮೂಡಿಸಿ

ಶಿಗ್ಗಾವಿ: ಶಾಲೆಗಳಲ್ಲಿ ಆಯೋಜಿಸಲಾಗುವ ವಿದ್ಯಾರ್ಥಿಗಳ ವಸ್ತು ಪ್ರದರ್ಶನಗಳು ಮಕ್ಕಳ ಪ್ರತಿಭೆಯನ್ನು ಗುರುತಿಸಿ ವಿಜ್ಞಾನ ಮತ್ತು ತಂತ್ರಜ್ಞಾನದತ್ತ ಆಸಕ್ತಿ ಮೂಡಿಸುತ್ತವೆ ಎಂದು ಶಿಗ್ಗಾವಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಮಲ್ಲಿಕಾರ್ಜುನಯ್ಯಾ. ಎಂ.ಎಚ್ ಹೇಳಿದರು.

ಪಟ್ಟಣದ ಪೀನೀಕ್ಸ್ ಇಂಟರ್ ನ್ಯಾಷನಲ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡ 2025-26 ರ ವಿಜ್ಞಾನದ ಕ್ರೀಯಾತ್ಮಕ ಚಟುವಟಿಕೆಗಳ ಕಾರ್ಯಾಗಾರವನ್ನ (ವಸ್ತು ಪ್ರದರ್ಶನ) ಉದ್ಘಾಟಿಸಿ ಮಾತನಾಡಿದ ಅವರು, ತಂತ್ರಜ್ಞಾನದ ಬೆಳವಣಿಗೆಯ ಜೊತೆಗೆ ನಾವು ನಮ್ಮ ಮಕ್ಕಳನ್ನ ತಯಾರಿ ಮಾಡಬೇಕಿದ್ದು, ತಂತ್ರಜ್ಞಾನದ ಜ್ಞಾನವನ್ನ ನಮ್ಮ ಮಕ್ಕಳು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ಡಾ.ರಾಣಿ ತಿರ್ಲಾಪೂರ ಮಾತನಾಡಿ, ಪ್ರತಿಭೆ ಮತ್ತು ಕೌಶಲ್ಯಗಳನ್ನ ಪ್ರೇರೇಪಿಸುವ ಮೂಲಕ ಇಂದಿನ ತಂತ್ರಜ್ಞಾನದ ಮಹತ್ವದ ಜ್ಞಾನ ನಮ್ಮ ಮಕ್ಕಳಿಗೆ ಅವಶ್ಯವಾಗಿದ್ದು, ಆ ನಿಟ್ಟಿನಲ್ಲಿ ನಮ್ಮ ಪೀನೀಕ್ಸ್ ಶಾಲೆ ದಾಪುಗಾಲು ಇಟ್ಟಿದೆ, ದೇಶಾಭಿಮಾನದ ಜೊತೆಗೆ ವಿಜ್ಞಾನ ನಮ್ಮ ದೈನಂದಿನ ಜೀವನದಲ್ಲಿ ಮುಖ್ಯವಾಗಿದೆ, ನಮ್ಮ ಆರೋಗ್ಯದ ದೃಷ್ಟಿಯಿಂದಲೂ ವಿಜ್ಞಾನ ಬಹಳಷ್ಟು ಸಹಕಾರಿಯಾಗಿದೆ. ನಮ್ಮ ವಿಜ್ಞಾನದ ಜ್ಞಾನ ನಮ್ಮ ಜೀವನಕ್ಕೆ ಪೂರಕವಾಗಿರಬೇಕೆ ಹೊರತು ಮಾರಕವಾಗಿರಬಾರದು, ಇಂತಹ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕು ಎಂದರು.

ಪ್ರಾಚಾರ್ಯ ಗಿರಿಧರ ಪ್ರಾಸ್ತಾವಿಕವಾಗಿ ಮಾತನಾಡಿದರು, ನಂತರ ನಡೆದ ಶಾಲೆಯ ವಿದ್ಯಾರ್ಥಿಗಳಿಂದ ರಚನೆಗೊಂಡ ವಿಜ್ಞಾನ ವಸ್ತುಪ್ರದರ್ಶನಗಳು ಪಾಲಕರ ಮತ್ತ ನೆರೆದ ಎಲ್ಲರ ಗಮನ ಸೆಳೆದವು.

ಸಂಸ್ಥೆಯ ಅದ್ಯಕ್ಷ ಡಾ. ಎಂ ಎಂ ತಿರ್ಲಾಪೂರ, ಉಪಾದ್ಯಕ್ಷ ನರಹರಿ ಕಟ್ಟಿ, ನಿರ್ದೇಶಕರಾದ ಸಿದ್ದನಗೌಡ ಪಾಟೀಲ, ಸುಮಿತ್ರಾ ಪಾಟೀಲ, ಲಕ್ಷ್ಮೀಬಾಯಿ ಕಟ್ಟಿ, ಶಾಲೆಯ ಪಿಆರ್‌ಓ ಶಶಾಂಕ್ ಕೌಜಲಗಿ ಸೇರಿದಂತೆ ಶಾಲೆಯ ಶಿಕ್ಷಕ, ಶಿಕ್ಷಕೀಯರು ಸಿಬ್ಬಂದಿ ಇದ್ದರು.

ವಿದ್ಯಾರ್ಥಿಗಳಾದ ಹರ್ಷಿತಾ ಕಟ್ಟಿ ಸಂಗಡಿಗರು ಪ್ರಾರ್ಥಿಸಿದರು. ವಿದ್ಯಾರ್ಥಿಗಳಾದ ಅಪೂರ್ವ ಪಾಟೀಲ ಮತ್ತು ಯುಕ್ತಾ ಬಡಿಗೇರ ಕಾರ್ಯಕ್ರಮ ನಿರ್ವಹಿಸಿದರು.



ಮಾ.6ರಿಂದ ಕೃತಕ ಕೈ, ಕಾಲು ಜೋಡಣಾ ಉಚಿತ ಶಿಬಿರ: ವಜ್ರಕುಮಾರ

ಹಾವೇರಿ: ಸ್ಥಳೀಯ ರಾಜೇಂದ್ರ ನಗರದಲ್ಲಿರುವ ರೋಟರಿ ಭವನದಲ್ಲಿ ಮಾ.6ರಿಂದ 8ರವರೆಗೆ ಮೂರು ದಿನಗಳ ಕಾಲ ಬೃಹತ್ ಉಚಿತ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಅರ್ಹ ವಿಶಿಷ್ಟಚೇತನರು ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹಾವೇರಿ ರೋಟರಿ ಸಂಸ್ಥೆ ಹಾಗೂ ಜೈನ್ ಅಸೋಸಿಯೇಶನ್ ಸಂಯೋಜಕ ಎಸ್.ಎ. ವಜ್ರಕುಮಾರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ದೇವ್ ಸೇಠಿ ಅವರ ಸಹಕಾರದೊಂದಿಗೆ ರೋಟರಿ ಕ್ಲಬ್, ಇನ್ನರ್‌ವೀಲ್ ಕ್ಲಬ್, ರೊಟರ್ಯಾಕ್ಟ್ ಹಾವೇರಿ, ಕರ್ನಾಟಕ ಜೈನ್ ಅಸೋಸಿಯೇಶನ್, ಕರ್ನಾಟಕ ಮಾರ್ವಾರಿ ಯೂತ್ ಫೆಡರೇಶನ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಹಾವೇರಿ ಇವರ ಸಹಯೋಗದೊಂದಿಗೆ ಉಚಿತ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರವನ್ನು ಹಮ್ಮಿಕೊಂಡಿದೆ. ಮಾ.6ರಂದು ಶಿಬಿರದ ಉದ್ಘಾಟನೆ ನಡೆಯಲಿದೆ.

ಶಿಬಿರಕ್ಕೆ ಬರುವವರು ಕಡ್ಡಾಯವಾಗಿ ಆಧಾರಕಾರ್ಡ ತರಬೇಕು. ಜತೆಗೆ ಒಬ್ಬರು ಸಹಾಯಕರನ್ನು ಕರೆದುಕೊಂಡು ಬರಬೇಕು ಎಂದರು. ರೋಟರಿ ಸಂಸ್ಥೆಯ ಅಧ್ಯಕ್ಷ ಕಾಶಿನಾಥ ಅರವತ್ ಮಾತನಾಡಿ, ಮಾ.6ರಿಂದ 8ರವರೆಗೆ ಉಚಿತ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರ, ಮಾ.22ರಂದು ಉಚಿತ ನೇತ್ರ ತಪಾಸಣೆ ಶಿಬಿರವನ್ನು ಆಯೋಜಿಸುತ್ತಿದ್ದು, ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ದಯಾನಂದ ಯಡ್ರಾಮಿ ಮಾತನಾಡಿದರು. ಕಾರ್ಯದರ್ಶಿ ಡಾ.ಪ್ರದೀಪ ದೊಡ್ಡಗೌಡ್ರ, ಮಲ್ಲಿಕಾರ್ಜುನ ಹಂದ್ರಾಳ, ಸುರೇಶ ಕಡಕೋಳ, ಎಸ್.ವಿ. ಹಿರೇಗೌಡ್ರ, ಸುಜಿತ್ ಜೈನ್, ಶಿವಕುಮಾರ ಗೌಡರ ಉಪಸ್ಥಿತರಿದ್ದರು.



ಮಾ.3ಕ್ಕೆ ಲಿಂ.ಶಿವಲಿಂಗ ಶ್ರೀಗಳ 109ನೇ ಜಯಂತಿ

ಹಾವೇರಿ: ಹುಕ್ಕೇರಿಮಠದ ಲಿಂ.ಶಿವಲಿಂಗ ಸ್ವಾಮೀಜಿಗಳ 109ನೇ ಜಯಂತಿ ಹಾಗೂ ರಜತ ಮಹೋತ್ಸವ ಕಾರ್ಯಕ್ರಮ ಕಾರ್ಯಕರ್ತರ ಅಭಿನಂದನಾ ಸಮಾರಂಭ ಮಾ.3ರಂದು ಬೆಳಗ್ಗೆ 10.30ಕ್ಕೆ ಸ್ಥಳೀಯ ಹುಕ್ಕೇರಿಮಠದ ಶಿವಾನುಭವ ಮಂಟಪದಲ್ಲಿ ಆಯೋಜಿಸಲಾಗಿದೆ.

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಶೇಗುಣಸಿ ಡಾ.ಮಹಾಂತಪ್ರಭು ಸ್ವಾಮೀಜಿ, ವಿಜಯಪುರದ ಸಿದ್ಧಾರೂಢ ಸ್ವಾಮೀಜಿ, ಮಣಕವಾಡ ಮೃತ್ಯುಂಜಯ ಸ್ವಾಮೀಜಿ, ಅಕ್ಕಿಆಲೂರ ಶಿವಬಸವ ಸ್ವಾಮೀಜಿ, ಕೂಡಲ ಗುರುಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಹೇರೂರು ನಂಜುಂಡ ಪಂಡಿತಾರಾಧ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದಾರೆ. ಅಂತೂರ-ಬೆಂತೂರ ಕುಮಾರ ದೇವರು ಸಮ್ಮುಖ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ, ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ, ರಾಜ್ಯ ಅರಣ್ಯ ನಿಗಮದ ಅಧ್ಯಕ್ಷ, ಶಾಸಕ ಬಸವರಾಜ ಶಿವಣ್ಣನವರ, ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಉದ್ಯಮಿ ಕೆ.ಮಂಜಪ್ಪ, ಚುಟುಕು ಸಾಹಿತ್ಯ ಪರಿಷತ್ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪಾಲ್ಗೊಳ್ಳುವರು.

ಈ ಸಂದರ್ಭದಲ್ಲಿ ಆಶುಕವಿ ಅಂತುತೇಶ್ವರ ವಿರಚಿತ 'ವಚನಾನುಶೀಲತೆ' ಗ್ರಂಥವನ್ನು ಕರ್ನಾಟಕ ಜಾನಪದ ವಿವಿ ಕುಲಪತಿ ಟಿ.ಎಂ. ಭಾಸ್ಕರ್ ಬಿಡುಗಡೆಗೊಳಿಸುವರು. ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿಗೆ 'ಭಾವೈಕ್ಯಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಆದ್ಯತೆ ನೀಡಲು ಆಗ್ರಹ

ಬ್ಯಾಡಗಿ: ಶಿಕ್ಷಣದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಬಜೆಟ್‌ನ 30% ಹಣವನ್ನು ಮೀಸಲಿಡಲು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಬ್ಯಾಡಗಿ ತಾಲೂಕ ಸಮಿತಿ ನೇತೃತ್ವದಲ್ಲಿ ಶಾಸಕರ ಕಚೇರಿ ಎದುರು ಪ್ರತಿಭಟನೆ ನಡೆಸಿ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಶಾಸಕರ ಆಪ್ತ ಸಹಾಯಕರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಎಸ್‌ಎಫ್‌ಐ ಜಿಲ್ಲಾ ಮುಖಂಡ ಅರುಣ್ ನಾಗವತ್ ಮಾತನಾಡಿ, ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಮಾ.6ರಂದು ಸಿಎಂ ಸಿದ್ದರಾಮಯ್ಯನವರು ಮಂಡಿಸುವ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಶೇ.30ರಷ್ಟು ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಬೇಕು.

ಸರ್ಕಾರಿ ಇಂಜಿನಿಯರಿಂಗ್, ಮೆಡಿಕಲ್, ಪ್ಯಾರಮೆಡಿಕಲ್, ನರ್ಸಿಂಗ್, ಹಾವೇರಿ ವಿಶ್ವವಿದ್ಯಾಲಯ, ಶಿಗ್ಗಾಂವಿ ಜಾನಪದ ವಿವಿ, ಹನುಮನಮಟ್ಟಿ ಕೃಷಿ ವಿವಿಗಳು ಸೇರಿದಂತೆ ಜಿಲ್ಲೆಯ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಅನುದಾನ ಬಿಡುಗಡೆ ಮಾಡಬೇಕು. ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಸರ್ಕಾರಿ ಕಾನೂನು ವಿದ್ಯಾಲಯ ಶೀಘ್ರವಾಗಿ 3 ಮತ್ತು 5 ವರ್ಷದ ಕೋರ್ಸ್ ಗಳನ್ನು ಪ್ರಾರಂಭಿಸಬೇಕು. ಪ್ರತ್ಯೇಕ ವೃತ್ತಿಪರ ಹಾಸ್ಟೆಲ್‌ಗಳು ಮಂಜೂರು ಮಾಡಬೇಕು.

ಹಾಸ್ಟೆಲ್ ವಿದ್ಯಾರ್ಥಿಗಳ ಮಾಸಿಕ ಆಹಾರ ಭತ್ಯೆ ಯನ್ನು ಕನಿಷ್ಠ 4.500ರೂ ಗಳಿಗೆ ಹೆಚ್ಚಿಸಬೇಕು. ಬ್ಯಾಡಗಿ ತಾಲೂಕಿಗೆ ಕನಿಷ್ಠ 5 ಹಾಸ್ಟೆಲ್ ಮಂಜೂರು ಮಾಡಬೇಕು. ಎಲ್ಲ ವರ್ಗದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಮನ್ನಾ ಮಾಡಬೇಕು. ಸಮರ್ಪಕ ಸಾರಿಗೆ ವ್ಯವಸ್ಥೆ ಕಲ್ಪಿಸಲು ಹಾಗೂ ಉನ್ನತ ಶಿಕ್ಷಣದವರೆಗೂ (ಎಲ್.ಕೆ.ಜಿ ಯಿಂದ ಪಿಎಚ್.ಡಿವರೆಗೆ) ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು.

ಈ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲ ಶಾಸಕರು ವಿಧಾನ ಸಭಾ ಬಜೆಟ್ ಅಧಿವೇಶನದಲ್ಲಿ ಧ್ವನಿ ಎತ್ತಬೇಕೆಂದೂ ಒತ್ತಾಯಿಸಬೇಕು ಇಲ್ಲದಿದ್ದರೇ ವಿದ್ಯಾರ್ಥಿಗಳ ಹೋರಾಟ ತೀವ್ರಗೊಳಿಸಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಎಫ್‌ಐ ರಜಾಕ್ ಗುತ್ತಲ್, ಮಲ್ಲೇಶ್ ಬ್ಯಾಡಗಿ, ನವೀನ್ ತಳವಾರ್, ಶಿವರಾಜ್ ಹೊರ್ಗಪ್ಪ, ಸಚಿನ್ ಓಲೇಕಾರ್, ಚಂದ್ರು ಆರ್ ಕೆ, ಪ್ರಶಾಂತ ಗುಡ್ಗೂರ್, ದರ್ಶನ್ ಉದ್ಗಟ್ಟಿ, ಡಿಳ್ಳೆಪ್ಪ ಆಳಲಗಿರಿ, ಮಟ್ಟೆಪ್ ದೇವರಗುಡ್ಡ, ಪವನ್ ಬಳ್ಳಾರಿ, ಸಂಜೀವ್ ಬಾಗಮ್ಮನವರ, ಭರತ್ ಎಫ್ ಕೆ, ಗಣೇಶ್ ವಾಸ್ಟರ್, ನಾಗಪ್ಪ ಚಿಕ್ಕಣ್ಣನವರ್ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಪ್ರಮುಖ ಬೇಡಿಕೆಗಳು

ಬ್ಯಾಡಗಿ ತಾಲೂಕಿಗೆ ಸರ್ಕಾರಿ ನರ್ಸಿಂಗ್, ಪ್ಯಾರಮೆಡಿಕಲ್, ಬಿ ಫಾರ್ಮ್, ಎಮ್ ಫಾರ್ಮ, ಸರ್ಕಾರಿ ಜಿಟಿಟಿಸಿ, ಡಿಪ್ಲೊಮಾ ಸೇರಿದಂತೆ ವಿವಿಧ ರೀತಿಯ ಕೋರ್ಸಿನ ಕಾಲೇಜ್ ಗಳನ್ನು ಮಂಜೂರು ಮಾಡಬೇಕು. ರಸ್ತೆ ಅಗಲೀಕರಣ ಸೇರಿದಂತೆ ಹೈಟೆಕ್ ಬಸ್ ನಿಲ್ದಾಣ, ನಗರ ಸಾರಿಗೆ ಪ್ರಾರಂಭ ಮಾಡಬೇಕು.

ಸಮಸ್ಯೆಗೆ ಪರಿಹಾರ ಒದಗಿಸಿ: ಬಳ್ಳಾರಿ

ಹಾನಗಲ್ಲ: ರೈತ ಬಂಧುಗಳೇ ಸಾಯುವ ವಾಣಿ ನಿಮ್ಮಿಂದ ಬರಬಾರದು, ನಮ್ಮ ಸಹಾಯವಾಣಿಗೆ ಫೋನಾಯಿಸಿ ನಿಶ್ಚಿತವಾಗಿಯೂ ನಿಮ್ಮ ಸಮಸ್ಯೆಗಳಿಗೆ ನಾವು ಪರಿಹಾರ ನೀಡುತ್ತೇವೆ, ಆತ್ಮಹತ್ಯೆ ಯಾವುದಕ್ಕೂ ಪರಿಹಾರವಲ್ಲ ಎಂಬ ವಿಶ್ವಾಸ ನಿಮ್ಮಲ್ಲಿರಲಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಹೇಳಿದರು.

ಶುಕ್ರವಾರ ಹಾನಗಲ್ಲ ತಾಲೂಕಿನ ಹುಣಶೆಟ್ಟಿಕೊಪ್ಪ ಗ್ರಾಮದಲ್ಲಿ ರೈತ ಸಂಘದ ತಾಲೂಕಿನ 47ನೇ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಟಿಸಿ ಸುಟ್ಟರೆ ಹೆಸ್ಕಾಂ ಅಧಿಕಾರಿ ನೌಕರರಿಗೆ ದುಡ್ಡು ಕೊಡುವ ಹವ್ಯಾಸ ಬೇಡ. ಹಾನಗಲ್ಲ ತಾಲೂಕಿನಲ್ಲಿ ಹೆಸ್ಕಾಂ ಸಮಸ್ಯೆ ಮುಗಿದಿಲ್ಲ, ಸಭೆ ಆಗಿದೆ. ಸಂಬಂಧಪಟ್ಟವರು ಜನಪ್ರತಿನಿಧಿಗಳ ಗಮನಕ್ಕೆ ತಂದು ಪರಿಹಾರ ಒದಗಿಸಬೇಕು. ಕಾಡುಗಳಲ್ಲಿನ ಕಾಡು ಪ್ರಾಣಿಗಳು ರೈತನ ಜಮೀನಿನಲ್ಲಿನ ಪೈರು ತಿಂದು ಬದುಕುತ್ತಿವೆ. ರೈತ ನಷ್ಟದ ಕೂಪಕ್ಕೆ ಸಿಲುಕಿದ್ದಾನೆ. ಅರಣ್ಯ ಹಾಳಾಗಿದ್ದರಿಂದ ಅವು ನಾಡಿಗೆ ಬರುತ್ತಿವೆ. ಅರಣ್ಯ ಹಾಳು ಮಾಡಿದವರು ಯಾರು ಎಂಬುದಕ್ಕಿಂತ ಅದನ್ನು ರಕ್ಷಿಸಬೇಕಾದವರು ಯಾಕೆ ರಕ್ಷಿಸಲಿಲ್ಲ, ಆ ಕಾಡುಗಳನ್ನು ನಮಗೆ ದತ್ತಕ್ಕೆ ಕೊಡಿ ನಾವು ಕಾಡು ರಕ್ಷಿಸುತ್ತವೆ ಎಂದರು.

ತಾಲೂಕು ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿದರು.

ಜಿಲ್ಲಾ ಉಪಾಧ್ಯಕ್ಷ ಅಡಿವೆಪ್ಪ ಆಲದಕಟ್ಟಿ ಮಾತನಾಡಿ, ಕೃಷಿಯಲ್ಲಿ ಅತಿವೃಷ್ಟಿ ಅನಾವೃಷ್ಟಿಗೆ ಲಕ್ಷಗಟ್ಟಲೇ ಹಣ ಕಳೆದುಕೊಂಡಾಗ ಸರ್ಕಾರ ನೂರಾರು ರೂ ಪರಿಹಾರ ನೀಡುವ ಸ್ಥಿತಿ ನೋಡುತ್ತಿದ್ದೇವೆ. ರೈತರ ಬಗೆಗೆ ಸರ್ಕಾರಗಳಿಗೆ ಕಾಳಜಿ ಇಲ್ಲ, ರೈತ ಸಂಘಟನೆ ರೈತರ ನೋವಿಗೆ ಸ್ಪಂದಿಸುವ ಗಟ್ಟಿ ಸಂಘಟನೆ. ನಾವು ಎಲ್ಲ ರೀತಿಯ ಹೋರಾಟಕ್ಕೆ ಸಿದ್ಧ. ರೈತರೇ ಸಂಘಟನೆಯೊಂದಿಗಿರಿ. ಸಂಘಟನೆ ನಿಮ್ಮ ಸಮಸ್ಯೆಗಳ ಪರಿಹಾರಕ್ಕೆ ಶಕ್ತಿಯಾಗುತ್ತದೆ ಎಂದರು.

ಹುಣಸೆಟ್ಟಿಕೊಪ್ಪದ ರೈತ ಮುಖಂಡ ಶಂಕ್ರಪ್ಪ ಕರಿಯಪ್ಪನವರ ಅಧ್ಯಕ್ಷತೆವಹಿಸಿದ್ದರು. ಹುಚ್ಚಯ್ಯ ಹಿರೇಮಠ, ಮಲ್ಲೇಶಪ್ಪ ಪರಪ್ಪನವರ, ಅಜಯ ನಂದೀಕೋಲ, ರುದ್ರಪ್ಪ ಹಣ್ಣಿ, ಶ್ರೀಕಾಂತ ದುಂಡಣ್ಣನವರ ಮಾತನಾಡಿದರು.

ರೈತ ಮುಖಂಡರಾದ ಮಹೇಶ ವಿರುಪಣ್ಣನವರ, ಮಲ್ಲೇಶಪ್ಪ ಪರಪ್ಪನವರ, ಮಹಾಲಿಂಗಪ್ಪ ಅಕ್ಕಿವಳ್ಳಿ, ಎಂ.ಎಂ.ಬಡಗಿ, ಶಂಕ್ರಪ್ಪ ಕರಿಯಣ್ಣನವರ, ರವಿ ಸಂಕಪಾಳೆ, ಸೋಮಣ್ಣ ಜಡೆಗೊಂಡರ, ಗುಡ್ಡನಗೌಡ ಪ್ಯಾಟಿಗೌಡ್ರ, ಚನ್ನಬಸನಗೌಡ ಗಿರಿಗೌಡ್ರ, ರಾಘವೇಂದ್ರ ಪೂಜಾರ ಇದ್ದರು.



ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

• **ಬೆಳಗಾವಿ:** ಮಾ.1ರಂದು ಬೆಳಿಗ್ಗೆ 9ಗಂಟೆಯಿಂದ ಸಂಜೆ 5ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ಕಣಬರ್ಗಿ ಉಪಕೇಂದ್ರದಲ್ಲಿ 4ನೇ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಮುಚ್ಚಂಡಿ, ಅಷ್ಟೆ, ಕ್ಯಾಂಪ್ಬೆಲ್, ಮಾರಿಹಾಳ, ಕರಡಿಗುದ್ದಿ, ಪಂತಬಾಳೇಕುಂದ್ರಿ, ಬಾಳೇಕುಂದ್ರಿ, ಹೊನ್ನಿಹಾಳ, ಮಾವಿನಕಟ್ಟಿ, ತಾರಿಹಾಳ, ಚಂದನ ಹೊಸೂರ, ಎಮ್.ಇ.ಎಸ್, ಸಾಂಬ್ರಾ, ಮುತಗಾ, ಸುಳೇಭಾವಿ, ಪಂತ ನಗರ, ಮೋದಗಾ, ಯದ್ದಲಭಾವಿಹಟ್ಟಿ ಖನಗಾಂವ, ಚಂದೂರ, ಚಂದಗಡ, ಗಣಿಕೊಪ್ಪ, ಗುಂಜ್ಯಾನಟ್ಟಿ, ಕೇದನೂರ, ಮನ್ನಿಕೇರಿ, ಹಂದಿಗನೂರ, ಚೆಲುವ್ಯಾನಟ್ಟಿ, ಮಾಳೇನಟ್ಟಿ ಅತಿವಾಡ, ಬೋಡಕ್ಯಾನಟ್ಟಿ ಕುರಿಹಾಳ, ಕಟ್ಟಣಭಾವಿ, ನಿಂಗ್ಯಾನಟ್ಟಿ, ಗುರಾಮಟ್ಟಿ, ಹಳೆಇದ್ದಲಹೊಂಡ, ಶಿವಾಪೂರ, ಪರಶ್ಯಾನಟ್ಟಿ, ದಾಸರವಾಡಿ, ಕೆಂಚ್ಯಾನಟ್ಟಿ, ಸೋನಟ್ಟಿ, ಕಾಕತಿ, ಕಂಗ್ರಾಳಿ ಬಿ.ಕೆ, ಬೈಲೂರ, ಹೆಗ್ಗೇರಿ, ಹುಲ್ಯಾನೂರ, ಬುಡ್ರ್ಯಾನೂರ, ಧರನಟ್ಟಿ, ಭರನಟ್ಟಿ ಗೌಂಡವಾಡ, ಕಡೋಲಿ, ಆಗಸಗಾ ಹಾಗೂ ಜಾಫರವಾಡಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತಿಯುತವಾಗಿ ಹಬ್ಬ ಆಚರಿಸಿ: ಪಿಎಸ್ಐ



• **ಯರಗಟ್ಟಿ:** ಸಮೀಪದ ಗ್ರಾಮದಲ್ಲಿ ಹೋಳಿ ಹಬ್ಬ ಐತಿಹಾಸಿಕ ಮಹತ್ವ ಹೊಂದಿದ್ದು, ಯಾವುದೇ ರೀತಿಯ ಗೊಂದಲ ಗಲಾಟೆಗಳಿಗೆ ಅವಕಾಶ ನೀಡದಂತೆ ಶಾಂತಿಯುತ ಹಬ್ಬ ಆಚರಣೆ ನಡೆಯಲಿ ಎಂದು ಮುರಗೋಡ ಠಾಣೆ ಪಿಎಸ್ಐ ಡಬ್ಲ್ಯೂ.ಎಚ್.ಯಾದವಾಡ ಹೇಳಿದರು. ಗ್ರಾಮದ ಮಾರುತಿ ಮಂದಿರ ಸಭಾಭವನದಲ್ಲಿ ಹೋಳಿ ಹಾಗೂ ರಂಜಾನ ಹಬ್ಬದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಶಾಂತಿ ಪಾಲನೆ ಸಭೆಯಲ್ಲಿ ಮಾತನಾಡಿದರು. ಪಿಡಿಒ ರಾಘವೇಂದ್ರಕುಮಾರ ಎಸ್.ಪಿ, ಮಾತನಾಡಿ, ಗ್ರಾಮದ ಯುವಕರು ವಾರ್ನಿಸ ತತ್ತಿ ಎಸೆಯುವದನ್ನು ನಿಷೇಧಿಸಲಾಗಿದ್ದು, ನೈಸರ್ಗಿಕ ಬಣ್ಣಗಳನ್ನು ಉಪಯೋಗಿಸಬೇಕು. ದ್ವಿತೀಯ ಪಿಯುಸಿ ಪರೀಕ್ಷೆ ಇರುವುದರಿಂದ ಬಲವಂತವಾಗಿ ಬಣ್ಣ ಎರಚಬಾರದು ಎಂದರು. ಹುಸೇನಬಿ ಕುದರಿ, ಮಹಾದೇವ ಬೆನಕಟ್ಟಿ, ಪಕ್ರುಸಾಬ ಬಾಗವಾನ, ನೀಲಕಂಠ ಹಂಜಿ, ಬಸವಣ್ಣೆಪ್ಪ ಕಲಬಸನ್ನವರ, ಮಂಜುನಾಥ ಬಂದಕನವರ, ಅರುಣ ವನ್ನೂರ, ಪರಸಪ್ಪ ಮಾದರ ಸಂಜೀವಿನಿ ಮಹಿಳಾ ಸಂಘದ ಸದಸ್ಯರು ಇದ್ದರು.

ವಿದ್ಯುತ್ ವ್ಯತ್ಯಯ ಇಂದು

• **ಬೆಳಗಾವಿ:** ಮಾ.1 ರಂದು ಬೆಳಿಗ್ಗೆ 10ಕ್ಕೆ ಸಂಜೆ 4 ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ 4ನೇ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಬೀಡಿ ಉಪಕೇಂದ್ರದಿಂದ ಸರಬರಾಜು ಆಗುವ ಹಿಂಡಲಗಿ, ಮಂಗ್ಯಾನಕೊಪ್ಪ, ಕೇರವಾಡ, ಬೀಡಿ, ಕಕ್ಕೇರಿ, ಚುಂಚವಾಡ, ರಾಮಾಪೂರ, ಸುರಪೂರ, ಗೋಲಿಹಳ್ಳಿ, ಭುರುಣಕಿ, ಕರಿಕಟ್ಟಿ, ಗಸ್ತೋಳ್ಳಿದಡ್ಡಿ, ಗಸ್ತೊಳ್ಳಿ, ಹೊಸಟ್ಟಿ, ಶಿವಾಜಿ ನಗರ, ಹಾಲಜುಂಜವಾಡ, ಚನ್ನಕೇಬೈಲ, ಮಾಸ್ಕ್ಯಾನಟ್ಟಿ, ಹಲಸಾಳ, ಪಾದಲವಾಡಿ, ಅನಗಡಿ, ಕರಂಜಲ, ಪೋತೋಳಿ, ಕಾಪೋಲಿ, ಶಿವಠಾಣ, ಶಿಂಧೋಳ್ಳಿ ಬಿ.ಕೆ, ಶಿಂಧೋಳ್ಳಿ ಕೆ.ಎಚ್, ಗೋಸೆ ಬಿ.ಕೆ, ಗೋಸೆ ಕೆ.ಎಚ್, ಮಡವಾಲ, ಗೋಟಗಾಳಿ, ದೇವರಾಯಿ, ಜಂಬೇಗಾಳಿ, ನಂಜನಕೊಡಲ, ಸುಳೇಗಾಳಿ, ಹತ್ತರವಾಡ, ಮೇರ್ಡಾ, ಕಾರಜಗಿ, ಬಸ್ತವಾಡ, ಹಲಗಾ, ಹಂದೂರ, ಹುಲಿಕೊತ್ತಲ, ನವೋದಯ ನಗರ, ಕಸಮಳಗಿ, ಮುಗಳಿಹಾಳ, ಕಡತನಬಾಗೇವಾಡಿ, ಬಿಳಕಿ, ಅವರೊಳ್ಳಿ, ಚಿಕದಿನಕೊಪ್ಪ, ಕೊಡಚವಾಡ, ದೇಮಿನಕೊಪ್ಪ ವಡ್ಡೇಬೈಲ, ಸುರಪುರ ಕೆರವಾಡ, ಚಿಕ್ಕಅಂಗ್ರೊಳ್ಳಿ, ಕುಣಕಿಕೊಪ್ಪ, ಬೇಕವಾಡ, ಬಂಕಿ, ಬಸರಿಕಟ್ಟಿ, ಜುಂಜವಾಡ ಕೆ.ಎನ್, ಗರ್ಬಾನಟ್ಟಿ, ನಂಜನಕೊಡಲ, ಸಗರೆ, ದೊಡ್ಡೇಬೈಲ, ಚನ್ನೇವಾಡಿ, ಭುತೇವಾಡಿ, ಹಲಶಿ, ಗುಂಡಪಿ, ಬಿಜಗರ್ಣಿ, ಬಂಬರಡಾ ಹಾಗೂ ಮೆಂಡಗಾಳಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಲಕ್ಷ್ಮೀಬಾಯಿ ಕಾಮಗೌಡ



• **ಕಬ್ಬೂರು:** ಪಟ್ಟಣದ ಕಾಮಗೌಡ ತೋಟದ ನಿವಾಸಿ ಲಕ್ಷ್ಮೀಬಾಯಿ ಸಿದ್ದಪ್ಪಾ ಕಾಮಗೌಡ (95) ನಿಧನರಾದರು. ಇವರಿಗೆ ನಾಲ್ಕು ಜನ ಪುತ್ರರು, ನಾಲ್ಕು ಪುತ್ರಿಯರು ಸೇರಿದಂತೆ ಅಪಾರಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ : ಇಲ್ಲಿನ ಕೆಎಲ್ಇ ಫಾರ್ಮಸಿ ಕಾಲೇಜಿನ ಫಾರ್ಮಸಿ ಪ್ರಾಕ್ಟೀಸ್ ವಿಭಾಗವು ಎಂಪವರ್ ಎಜುಕೇಟ್ ಇಮ್ಯುನೈಸ್ ಎಂಬ ಲಸಿಕೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ.ಸುನಿಲ್ ಎಸ್. ಜಲಾಲ್ಪುರೆ ಉದ್ಘಾಟಿಸಿದರು. ಈ ವೇಳೆ ಪ್ರೊ. ಡಾ. ಸುನಿಲ್ ಎಸ್. ಜಲಾಲ್ಪುರೆ , ಡಾ.ಗಂಗಯ್ಯ ಜಿ.ವಕ್ಕುಂದಮಠ, ಸುಮಾರು 50 ಔಷಧಕಾರರು, ಅಧ್ಯಾಪಕರು, ಸೇರಿದಂತೆ ವಿದ್ಯಾರ್ಥಿಗಳು ಹಲವರು ಇದ್ದರು.

ರಸ್ತೆ ಕಾಮಗಾರಿಗೆ ಭೂಮಿಪೂಜೆ

• **ಬೆಳಗಾವಿ :** ತಾಲೂಕಿನ ಹಿರೇಬಾಗೇವಾಡಿ ಗ್ರಾಮದಲ್ಲಿ ಘಟ್ಟದ ಮಾರ್ಗ ರಸ್ತೆ ನಿರ್ಮಾಣ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಶನಿವಾರ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಅಧಿಕೃತ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಸುಮಾರು ಒಂದೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ರಸ್ತೆ ಗ್ರಾಮಕ್ಕೆ ಮಹತ್ವದ ಸಂಪರ್ಕ ಸೌಲಭ್ಯ ಒದಗಿಸಲಿದ್ದು ಗ್ರಾಮೀಣ ಅಭಿವೃದ್ಧಿಗೆ ಮತ್ತೊಂದು ಬಲವಾದ ಹೆಜ್ಜೆಯಾಗಲಿದೆ. ರಸ್ತೆ, ನೀರು, ವಿದ್ಯುತ್ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯೇ ಗ್ರಾಮೀಣ ಪ್ರಗತಿಯ ಪ್ರಮುಖ ಸೂಚಕವಾಗಿದೆ ಎಂದರು. ಲಕ್ಷ್ಮೀ ಹೆಬ್ಬಾಳ್ಕರ್ ಅವರ ನೇತೃತ್ವದಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ನಿರಂತರ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ರಸ್ತೆ ನಿರ್ಮಾಣದಂತಹ ಯೋಜನೆಗಳು ಜನರ ಜೀವನಮಟ್ಟವನ್ನು ಎತ್ತರಿಸುವುದರ ಜೊತೆಗೆ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಗುಣಮಟ್ಟದಲ್ಲಿ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಗುತ್ತಿಗೆದಾರರಿಗೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಾರ್ವಜನಿಕ ಹಣದಲ್ಲಿ ನಡೆಯುವ ಅಭಿವೃದ್ಧಿ ಕಾಮಗಾರಿಗಳು ಪಾರದರ್ಶಕವಾಗಿಯೂ, ಜನಪರವಾಗಿಯೂ ಇರಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.



ಬೆಳಗಾವಿ : ತಾಲೂಕಿನ ಹಿರೇಬಾಗೇವಾಡಿ ಗ್ರಾಮದಲ್ಲಿ ಘಟ್ಟದ ಮಾರ್ಗ ರಸ್ತೆ ನಿರ್ಮಾಣ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಶನಿವಾರ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಅಧಿಕೃತ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

ನೂತನ ಬಸ್‌ಗಳ ಲೋಕಾರ್ಪಣೆ | ಭರಮಗೌಡ (ರಾಜು) ಕಾಗೆ ಮಾಹಿತಿ

ವಿದ್ಯುತ್ ಚಾಲಿತ ಬಸ್ ಖರೀದಿ ಶೀಘ್ರ

• **ಬೆಳಗಾವಿ:** ರಾಜ್ಯದ ಎರಡನೇ ರಾಜಧಾನಿಯಾದ ಬೆಳಗಾವಿಗೆ ವಿದ್ಯುತ್ ಚಾಲಿತ ಹೊಸಬಸ್ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ವಾ.ಕ.ರ.ಸಾ.ಸಂಸ್ಥೆ ಅಧ್ಯಕ್ಷ ಭರಮಗೌಡ (ರಾಜು) ಕಾಗೆ ಹೇಳಿದರು.

ಶನಿವಾರ ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಲ್ಲಿ ಜರುಗಿದ ವಾ.ಕ.ರ.ಸಾ.ಸಂಸ್ಥೆಯ 28ನೇ ಸಂಸ್ಥಾಪನಾ ದಿನಾಚರಣೆ, ನೂತನ ಬಸ್ಸುಗಳ ಲೋಕಾರ್ಪಣೆ, ಬೆಳಗಾವಿ-1ನೇ ಘಟಕದ ನವೀಕರಣ ಕಾಮಗಾರಿ ಶಂಕುಸ್ಥಾಪನೆ, ಹೊಸದಾಗಿ ನೇಮಕಾತಿ ಹೊಂದಿದ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ವಿತರಣೆ ಅಪಘಾತ, ಅಪರಾಧ ರಹಿತ ಸೇವೆ ಸಲ್ಲಿಸಿದ ಸಂಸ್ಥೆಯ ಚಾಲನಾ ಸಿಬ್ಬಂದಿಗಳಿಗೆ ಬೆಳ್ಳಿ ಪದಕ ವಿತರಣೆ ಹಾಗೂ ನೂತನ ತಂತ್ರಾಂಶಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿ, ಸಾರಿಗೆ ಸಂಸ್ಥೆಯ ಆಧಾರ ಸ್ಥಂಭಗಳಾದ ಚಾಲಕ ಹಾಗೂ ನಿರ್ವಾಹಕರ ಕಾರ್ಯ ಶ್ಲಾಘನೀಯವಾಗಿದೆ. ಪ್ರತಿನಿತ್ಯ ಸಂಸ್ಥೆಯಿಂದ ಸರಾಸರಿ 25 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರ ಪ್ರಯಾಣ ಮಾಡುತ್ತಿದ್ದಾರೆ. ರಾಜ್ಯ ಸರಕಾರದ ಮಹತ್ವಾಕಾಂಕ್ಷೆ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯನ್ನು ಸಂಸ್ಥೆಯು ಯಶಸ್ವಿಯಾಗಿ ನಿಭಾಯಿಸಿದೆ ಎಂದರು.

ಸಾರಿಗೆ ನೌಕರ ಬಹುದಿನಗಳ ಬೇಡಿಕೆಯನ್ನು ಶೀಘ್ರವೇ ಪರಿಹರಿಸಲು ಹಾಗೂ ಸರ್ಕಾರದಿಂದ ಸಂಸ್ಥೆಗೆ ಬರಬೇಕಾದ ಬಾಕಿ 1100 ಕೋಟಿ ಮೊತ್ತ ಪಾವತಿಸಲು ಮನವಿ ಮಾಡಿದರು. ಕಿತ್ತೂರ ರಾಣಿ ಚನ್ನಮ್ಮ ಸಾರಿಗೆ ಸಂಸ್ಥೆ ಮರು ನಾಮಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿದರು.

ಶಾಸಕ ಆಸೀಫ್ ಸೇಠ ಮಾತನಾಡಿ, ವಾ.ಕ.ರ.ಸಾರಿಗೆ ಸಂಸ್ಥೆಯ 1000 ನೇಮಕಾತಿಯಿಂದ ಸಾವಿರ ಕುಟುಂಬಗಳಿಗೆ ಅನೂಕುಲವಾಗಲಿದೆ. ಸಾರಿಗೆ ಸಚಿವರು ಉತ್ತರ ಕರ್ನಾಟಕ ಭಾಗಕ್ಕೆ ಪ್ರತಿ ಸಂದರ್ಭದಲ್ಲೂ ಪ್ರಾಶಸ್ತ್ಯ ನೀಡುತ್ತಾ ಬಂದಿರುವುದು ಸಂತಸದ ಸಂಗತಿಯಾಗಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಪಂಚ ಗ್ಯಾರಂಟಿಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿವೆ. ಇದರಲ್ಲಿ ಶಕ್ತಿ ಹಾಗೂ ಗೃಹಲಕ್ಷ್ಮೀ ಯೋಜನೆಯಿಂದಾಗಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ ಎಂದರು.

ಬೆಳಗಾವಿ ನಗರ ಪ್ರದೇಶಕ್ಕೆ ಇನ್ನೂ ಹೆಚ್ಚಿನ ಬಸ್‌ಗಳನ್ನು ಒದಗಿಸಲು ಕೋರಿದರು. ರಾಜ್ಯ ಸರಕಾರದಿಂದ ಕಿತ್ತೂರ ಕರ್ನಾಟಕಭಾಗದ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿವಹಿಸಿ ಈ ಭಾಗಕ್ಕೆ ಸಿಗುವಂತಹ ಎಲ್ಲ ಸೌಲಭ್ಯಗಳು ದೊರಕುವಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿದರು.

ಈ ವೇಳೆ ಶಾಸಕರಾದ ಬಾಬಸಾಹೇಬ ಪಾಟೀಲ, ವಿಠ್ಠಲ್ ಹಲಗೇಕರ, ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಭರಮಣ್ಣ ಉಪ್ಪಾರ, ವಾ.ಕ.ರ.ಸಾ.ಸಂಸ್ಥೆ ಉಪಾಧ್ಯಕ್ಷ ಸುನೀಲ ಹಣಮನ್ನವರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ವಿನಯ ನಾವಲಗಟ್ಟಿ, ತಾಲೂಕಾ ಅಧ್ಯಕ್ಷರು, ಪೋಲಿಸ್ ಆಯುಕ್ತ ಬೊರಸೆ ಭೂಷಣ್ ಗುಲಾಬರಾವ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಪಂಚಾಯತಿಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ವಾ.ಕ.ರ.ಸಾ.ಸಂಸ್ಥೆ ವ್ಯವಸ್ಥಾಪಕರ ನಿರ್ದೇಶಕಿ ಪ್ರಿಯಾಂಗಾ ಎಂ, ವಾ.ಕ.ರ.ಸಾ.ಸಂಸ್ಥೆಯ ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.



ಗ್ರಾಮೀಣರ ಸಬಲೀಕರಣಕ್ಕೆ ಸಾರಿಗೆ ಸಿಬ್ಬಂದಿ ಕೊಡುಗೆ ಅನನ್ಯ



• **ಬೆಳಗಾವಿ :** ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಶಕ್ತಿ ಮತ್ತು ಗೃಹಲಕ್ಷ್ಮೀ ಯೋಜನೆಗಳು ಮಹಿಳೆಯರ ಸ್ವಾಭಿಮಾನ ಮತ್ತು ಸಬಲೀಕರಣದ ಸಂಕೇತಗಳಾಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೂತನ ಬಸ್ಸುಗಳ ಲೋಕಾರ್ಪಣೆ ಹಾಗೂ ಬೆಳಗಾವಿ-1ನೇ ಘಟಕದ ನವೀಕರಣ ಕಾಮಗಾರಿಯ ಶಂಕುಸ್ಥಾಪನೆ ಮತ್ತು ಹೊಸದಾಗಿ ನೇಮಕಾತಿ ಹೊಂದಿದ ಸಿಬ್ಬಂದಿಗೆ ಆದೇಶ ಪತ್ರ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು. ಗ್ರಾಮೀಣ ಮಹಿಳೆಯರ ಸಶಕ್ತೀಕರಣಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೊಡುಗೆ ಬಹಳ ದೊಡ್ಡದಿದೆ. ಗ್ರಾಮೀಣ ಜನರ ಆರ್ಥಿಕ ಸಬಲೀಕರಣಕ್ಕೆ ಕೂಡ ಬಸ್‌ಗಳ ಕೊಡುಗೆ ಮಹತ್ವದ್ದಾಗಿದೆ ಎಂದರು.

ಒಬ್ಬ ವಿದ್ಯಾರ್ಥಿನಿಯ ಶಿಕ್ಷಣದ ಕನಸು, ಒಬ್ಬ ಕಾರ್ಮಿಕನ ದುಡಿಯುವ ಬದುಕು ಇವೆಲ್ಲವನ್ನು ಗಮ್ಯಸ್ಥಾನಕ್ಕೆ ಕೊಂಡೊಯ್ಯುವ ಸೇತುವೆಯೇ ನಮ್ಮ ಸಾರಿಗೆ ವ್ಯವಸ್ಥೆ. ಭರವಸೆ, ಸುರಕ್ಷತೆ ಮತ್ತು ಸಮಯಪಾಲನೆಯನ್ನು ಸಾಗಿಸುವ ಸೇವಾ ಸಂಸ್ಥೆ ಎಂದರು.

ಪ್ರತಿಯೊಬ್ಬರನ್ನು ಸುರಕ್ಷಿತವಾಗಿ ಸಾಗಿಸುತ್ತಿರುವ ಚಾಲಕರು, ನಿರ್ವಾಹಕರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದರು. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ ಎಂದು ನಾಮಕರಣ ಮಾಡಬೇಕು ಎಂದು ಸಚಿವ ರಾಮಲಿಂಗಾ ರೆಡ್ಡಿ ಅವರಲ್ಲಿ ವಿನಂತಿಸಿದರು.

ಬಿಜೆಪಿ ವಿರುದ್ಧ ವಾಗ್ದಾಳಿ

ರಾಜ್ಯದ ಸರ್ಕಾರವು ರಾಜ್ಯದ ಜನತೆಗೆ ಕೊಡುತ್ತಿರುವ ಯೋಜನೆಗಳಿಂದ ಬಿಜೆಪಿ ನೋಡುವುದಕ್ಕೆಯಾಗುತ್ತಿಲ್ಲ ಅದಕ್ಕೆ ನಮ್ಮ ಸರಕಾರದ ಮೇಲೆ ಆರೋಪವನ್ನು ಮಾಡುತ್ತಿದ್ದಾರೆ ಎಂದು ವಿರೋಧ ಪಕ್ಷದ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಾಗ್ದಾಳಿ ನಡೆಸಿದರು. ಬಿಜೆಪಿಯವರಿಗೆ ಕೆಲಸವಿಲ್ಲ, ಧಾರವಾಡದಲ್ಲಿ ಯುವಕರ ದಿಕ್ಕು ತಪ್ಪಿಸಿ, ಸರಕಾರದ ವಿರುದ್ಧ ಹೋರಾಟ ಮಾಡಲು ಹೋಗಿ ಮುಖಕ್ಕೆ ಮಂಗಳಾತಿ ಮಾಡಿಸಿಕೊಂಡರು. ಅವರ ಅಧಿಕಾರ ಅವಧಿಯಲ್ಲಿ ಒಂದೇ ಒಂದು ಹೊಸ ಬಸ್ ಖರೀದಿಸಲಿಲ್ಲ. ರಾಮಲಿಂಗ ರೆಡ್ಡಿ ಅವರು 7,800 ಬಸ್ ಖರೀದಿಸಿದ್ದಾರೆ ಎಂದರು.

ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ

• **ಬೆಳಗಾವಿ :** ಇಲ್ಲಿನ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದಲ್ಲಿ ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಆಶಯದೊಂದಿಗೆ ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ ಆಯೋಜಿಸಲಾಯಿತು.

ಈ ವೇಳೆ ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ ರಸಾಯನಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ರಾಜೇಶ್ವರ ರಾವ್ ಎಮ್. ಮಾತನಾಡಿ, ಔಷಧ ವಿತರಣಾ ವ್ಯವಸ್ಥೆಗಳು, ನೀರು ಕೊಯ್ಲು, ವಿಶ್ಲೇಷಣ ಸಂವೇದನೆ, ಅನಿಲ ಸಂಗ್ರಹಣೆ ಮತ್ತು ಬೇರ್ಪಡಿಕೆ, ಓಎಲ್ಇಡಿಎಸ್ ಮತ್ತು ಇತರ ಸುಸ್ಥಿರ ಪರಿಹಾರಗಳಂತಹ ಪ್ರಮುಖ ಅನ್ವಯಿಕೆಗಳನ್ನು ಎತ್ತಿ ತೋರಿಸುವ ಮೇಟಲ್ ಒಕ್ಸೈಡ್ ಫ್ರೇಮ್ ವಕ್ರಲೋಹದ ಆಕ್ಸೈಡ್ ಚೌಕಟ್ಟಿನ ಅನ್ವಯಿಕೆಗಳು ಎಂಬ ವಿಷಯದ ಕುರಿತು ಒಳನೋಟವುಳ್ಳ ಉಪನ್ಯಾಸವನ್ನು ನೀಡಿದರು.

ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಥೀಮ್ನ ಅಡಿಯಲ್ಲಿ ಪಿಪಿಟಿ ಸ್ಪರ್ಧೆ ಮತ್ತು ಭಿತ್ತಿಚಿತ್ರ ಪ್ರಸ್ತುತಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪಿಪಿಟಿ ಸ್ಪರ್ಧೆಯಲ್ಲಿ ಸೋಹಮ್ ಪಾಟೀಲ ಪ್ರಥಮ, ಖುಷಿ ಕುನ್ನೆ ದ್ವಿತೀಯ ಹಾಗೂ ಪ್ರತೀಕ ಕಿಲ್ಲೇದಾರ ತೃತೀಯ ಮತ್ತು ಭಿತ್ತಿಚಿತ್ರ ಪ್ರಸ್ತುತಿ ಸ್ಪರ್ಧೆಯಲ್ಲಿ ದರ್ಶನ ಗೋಣಿಚೆ ಮತ್ತು ಅನಸ್ ತಾಳಿಕೋಟಿ ಪ್ರಥಮ, ಸಾಕ್ಷಿ ಕಳವೇಕಾಟಕರ್ ಮತ್ತು ಭೂಮಿ ಹಣಬರಟ್ಟಿ ದ್ವಿತೀಯ ಹಾಗೂ ನೇಹಾ ಪಡಘಾನ ಮತ್ತು ಪ್ರಾಚಿ ಉಚಗಾಂವಕರ ತೃತೀಯ ಬಹುಮಾನವನ್ನು ಹಂಚಿಕೊಂಡಿರುತ್ತಾರೆ.

ಸ್ನೇಹಾ ಕುಂದರನಾಡ ಪ್ರಾರ್ಥನಾ ಗೀತೆ ಹಾಡಿದರು. ಪ್ರಾಚಾರ್ಯೆ ಡಾ. ಜ್ಯೋತಿ ಎಸ್. ಕವಳೇಕರ ಪ್ರಾಸ್ತಾವಿಕ ಮಾತನಾಡಿದರು. ಖುಷಿ ಕುನ್ನೆ ಅತಿಥಿಗಳನ್ನು ಪರಿಚಯಿಸಿದರು. ದೀಪಾ ಗೌಡರ ಮತ್ತು ಕೇತನ ಮುಚಂಡಕರ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಜನಿತ ಪಾಟೀಲ ವಂದಿಸಿದರು. ಪೂರ್ವಿಕಾ ರಜಪೂತ ಕಾರ್ಯಕ್ರಮ ನಿರೂಪಿಸಿದರು. ಆಯ್ಕ್ಯುಎಸಿ ಸಂಯೋಜಕರಾದ ಡಾ. ವಿನಯ ಕುಮಾರ ಎಮ್. ಹಾಗೂ ಎಲ್ಲ ಅಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಸರ್ಕಾರಿ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಿ

• **ಯರಗಟ್ಟಿ:** ಹೈನುಗಾರಿಕೆ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ನಾನಾ ಸವಲತ್ತುಗಳನ್ನು ನೀಡುತ್ತಿದೆ. ರೈತರು ಅವುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಯರಗಟ್ಟಿ ತಾಲೂಕ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಎಂ.ವಿ.ಪಾಟೀಲ ಹೇಳಿದರು.

ಸಮೀಪದ ಜೀವಾಪೂರ ಗ್ರಾಮದಲ್ಲಿ ಗುರುವಾರ ಜಿಪಂ, ಪಶು ಪಾಲನಾ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆ, ಹಾಲು ಉತ್ಪಾದಕರ ಸಹಕಾರಿ ಸಂಘ ಜೀವಾಪೂರ ಆಶ್ರಯದಲ್ಲಿ ನಡೆದ ಹೆಣ್ಣು ಕರುಗಳ ಪ್ರದರ್ಶನ, ಹಾಲು ಕರೆಯುವ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ದೇಶಿ ಆಕಳು ಹಾಗೂ ಎಮ್ಮೆಗಳ ಸಾಕಾಣಿಕೆಯಿಂದ ಅತ್ಯುತ್ತಮ ಉತ್ಪಾದನೆಗಳು ಸಹ ಬರುತ್ತಿವೆ. ಇದರಿಂದ ರೈತರಿಗೆ ಆರ್ಥಿಕ ಶಕ್ತಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಬೈಲಹೊಂಗಲ ತಾಲೂಕ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಎಂ.ಬಿ.ಸಜ್ಜನ ಮಾತನಾಡಿ, ಕೃಷಿಕರು ಮಿಶ್ರ ತಳಿ ಹಸುಗಳನ್ನು ಸಾಕುವುದರಿಂದ ಆರ್ಥಿಕ ಸಬಲರಾಗುವ ಜತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲಿಕ್ಕೆ ಸಾಧ್ಯ ಎಂದರು. ಗ್ರಾಪಂ ಮಾಜಿ ಅಧ್ಯಕ್ಷೆ ಕವಿತಾ ಬಾಲರಡ್ಡಿ, ಹಣಮಂತ ಹೊಸಟ್ಟಿ, ಪುಟ್ಟು ಆರಳಿಕಟ್ಟಿ, ಪಿಕೆಪಿಎಸ್ ಅಧ್ಯಕ್ಷ ಬಸಪ್ಪ ನರಿ, ಮುಖಂಡ ವೇಂಕಣ್ಣ ಯರಡ್ಡಿ, ಡಾ. ಅನಿಲ ಮರಲಿಂಗಣ್ಣವರ, ಡಾ. ವಿರೂಪಾಕ್ಷ ಅಡ್ಡಣಗಿ, ಡಾ. ರಾಜೇಂದ್ರ ಮೇಳವಂಕಿ, ಡಾ.ಶಿವಪ್ರಸಾದ, ಡಾ. ವಿನಾಯಕ ಈಟಿ, ಡಾ. ಸುಮಯ್ಯಾ ಮಕ್ತುಮಣ್ಣವರ, ಡಾ. ಝಾಕೀರ ಹುಸೇನ, ಡಾ. ರಾಹುಲ ಕರೆದಿನ, ಕಸ್ತೂರಿ ನರಿ, ಗೌಡಪ್ಪ ನಾಯ್ಕರ, ನಿವೃತ್ತ ಮುಖ್ಯ ಶಿಕ್ಷಕ ಎ.ವಿ.ಇಂಗಳೆ, ಯರಗಟ್ಟಿ ವಿಸ್ತರಣಾಧಿಕಾರಿ ರವಿ ತಳವರ, ನಾರಾಯನ ಪತ್ತಾರ, ರಾಮಪ್ಪ ನರಿ, ಶ್ರೀಕಾಂತ ಯರಡ್ಡಿ, ಈರಪ್ಪ ಅರಿಬೆಂಚಿ, ರಮೇಶ ಆರಳಿಕಟ್ಟಿ, ಪಂಚಪ್ಪ ಪಟ್ಟಣಶೆಟ್ಟಿ, ಬಸವರಾಜ ಕುಳ್ಳುರ, ಶ್ರೀಧರ ನೀಲನ್ನವರ ಸೇರಿದಂತೆ ರೈತರಿದ್ದರು.



ಕಿರು ನಾಟಕದಿಂದ ಸೋಲಾರ್ ಅಳವಡಿಕೆ ಜಾಗೃತಿ

• **ಚನ್ನಮ್ಮನ ಕಿತ್ತೂರು:** ಬೆಸ್ಕಾಂ ಮತ್ತು ಹೆಸ್ಕಾಂ ಸಹಯೋಗದಲ್ಲಿ ಬೆಂಗಳೂರಿನ ಸುವರ್ಣದೀಪ್ ತಂಡದ ದೀಪಕ ಆರ್ ಸಾಗರ ಇವರ ನೇತೃತ್ವದಲ್ಲಿ ಕಿರು ಬೀದಿ ನಾಟಕದ ಮೂಲಕ ಸೋಲಾರ್ ಅಳವಡಿಕೆಯಿಂದ ಸಾರ್ವಜನಿಕರಿಗೆ ದೊರೆಯು ಪ್ರಯೋಜನೆಗಳನ್ನು ತಮ್ಮ ನಾಟಕದ ಮೂಲಕ ಪ್ರಸ್ತುತಪಡಿಸಿ ತಿಳುವಳಿಕೆ ಮೂಡಿಸಿದರು.

ಪಟ್ಟಣದ ಆರಳಿಕಟ್ಟಿ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲೆ ಯೋಜನೆಯಡಿಯಲ್ಲಿ ದೇಶದ ಜನರ ಮನೆಗಳ ಮೇಲ್ಚಾವಣಿಯಲ್ಲಿ ಸೋಲಾರ್ ಘಟಕಗಳನ್ನು ಸ್ಥಾಪಿಸುವ ಮೂಲಕ ವಿದ್ಯುತ್ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ ಸರಕಾರವು ಸೋಲಾರ ಅಡವಡಿಸಿಕೊಳ್ಳುವವರಿಗೆ ಒಂದು ಕೆವಿ ಸೋಲಾರ್ ಘಟಕಕ್ಕೆ ರೂ 30 ಸಾವಿರ ಸಬ್ಸಿಡಿ ಮೊತ್ತದ ಸೌಲಭ್ಯವನ್ನು ಒದಗಿಸಲಾಗುತ್ತದೆ. ಎಲ್ಲರೂ ಅಳವಡಿಸಿಕೊಂಡು ವಿದ್ಯುತ್ ಉತ್ಪಾದಿಸಿ ಹಣ ಉಳಿಸಿ ಆದಾಯ ಗಳಿಸಿ ಎಂಬ ಘೋಷವಾಕ್ಯದೊಂದಿಗೆ ನಾಟಕದ ಮೂಲಕ ತಿಳಿಸಿದರು. ಹೆಸ್ಕಾಂ ಎಇಇ ಶಿವಾನಂದ ಬಾಗಲಕೋಟೆ ಮಾತನಾಡಿ, ಸಬ್ಸಿಡಿ ಮೂಲಕ ದೊರೆಯುವ ಸೋಲಾರ್ ಘಟಕವನ್ನು ಪ್ರತಿಯೊಬ್ಬರು ತಮ್ಮ ಮನೆಯ ಮೇಲ್ಚಾವಣಿಗಳ ಮೇಲೆ ಅಳವಡಿಸಿಕೊಂಡು ಸೂರ್ಯನಿಂದ ಬರುವ ವಿದ್ಯುತ್‌ನ್ನು ಸಂಗ್ರಹಿಸಿಕೊಂಡು ಮುಂದಿನ ದಿನಮಾನಗಳಲ್ಲಿ ವಿದ್ಯುತ್ ಕೊರತೆಯಾಗದಂತೆ ನೋಡಿಕೊಳ್ಳುವುದರ ಜೊತೆಗೆ ವಿದ್ಯುತ್ ಉತ್ಪಾದನೆಯನ್ನು ಮಾಡಿ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಲೋಕೋಪಯೋಗಿ ಇಲಾಖೆಯ ಎಇಇ ಸಂಜೀವ ಲೋಕಾಪೂರ, ಹೆಸ್ಕಾಂ ಜೆಇ ಎಸ್.ಎಸ್. ಸವದತ್ತಿ, ಎಎಒ ಸಂಜು ಕುಂಬಾರ, ಎಇ ಅನುಪಮಾ ಗೆನ್ನೂರ, ಮೇಲ್ವಿಚಾರಕ ಎ.ವೈ. ಜಾಧವ ಸೇರಿದಂತೆ ಹೆಸ್ಕಾಂ ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.



ಅರಣ್ಯ ಸಿದ್ದೇಶ್ವರನ ಜಾತ್ರೆ ಸಂಪನ್ನ

• **ಕುಡಚಿ:** ಸುಕ್ಷೇತ್ರ ಯಲ್ಪಾರಟ್ಟಿ ಗ್ರಾಮದಲ್ಲಿ ಅರಣ್ಯ ಸಿದ್ದೇಶ್ವರ ದೇವರ ಕರಿ ಕಟ್ಟುವ ಮೂಲಕ ಚಾಲನೆಗೊಂಡ ಜಾತ್ರೆಯು ಸತತ ಐದು ದಿನಗಳಕಾಲ ವಿಜೃಂಭಣೆಯಿಂದ ಜರುಗಿತು. ನಾಲ್ಕನೇಯ ದಿನ ನೈವೇದ್ಯ, ಐದನೇಯ ದಿನ ನಿವಾಳಿಕೆ ಕರಿ ಹರಿಯುವ ಮೂಲಕ ಜಾತ್ರೆ ಸಂಪನ್ನಗೊಂಡಿತು.

ಜಾತ್ರೆಯಲ್ಲಿ ಅರಣ್ಯಸಿದ್ದೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಿತ್ಯ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನೆರೆದ ಭಕ್ತಾದಿಗಳಿಗೆ ಸಕಲ ಸುವ್ಯವಸ್ಥೆ ಮಾಡಲಾಗಿತ್ತು. ನಿತ್ಯ ಲಕ್ಷ ಲಕ್ಷ ಭಕ್ತ ಸಮೂಹವು ಸರದಿ ಸಾಲಿನಲ್ಲಿ ತಮ್ಮ ಆರಾಧ್ಯ ದೇವರ ದರ್ಶನ ಪಡೆದರು.

ತಾಲೂಕಿನಲ್ಲಿ ಎರಡನೇಯ ಅತಿ ದೊಡ್ಡ ಜಾತ್ರೆಗೆ ಖ್ಯಾತಿ ಹೊಂದಿದ ಅರಣ್ಯಸಿದ್ದೇಶ್ವರ ಜಾತ್ರೆಗೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯದಿಂದ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಜಾತ್ರೆಲ್ಲಿ ಭಾಗಿಯಾದರು. ಆಗಮಿಸುವ ಭಕ್ತರಿಗೆ ದೇವರ ರೂಪದಲ್ಲಿ ಮೊದಲು ಅತಿಥಿಗಳನ್ನು ಅಂದರೆ ವಡೇಯರನ್ನು ಬಾಳೆ ಹಣ್ಣಿನ ಸೀಕರನಿ, ಹೋಳಿಗೆ, ಅನ್ನ ಸಾರಿನೊಂದಿಗೆ ಊಟ ಬಡಿಸುವುದು, ಅವರನ್ನು ಸತ್ಕರಿಸುವ ವಿಶೇಷ ಪ್ರತಿತಿ ಬೆಳೆದು ಬಂದಿದೆ.

ಜಾತ್ರೆಯ ಕೊನೆಯ ದಿನ ಎಲ್ಲೂ ಆಗದ ಮಹತ್ವದ ಘಟ್ಟವಾದ ನಿವಾಳಿಕೆ ಜರುಗುವುದು ಭಕ್ತರು ನಿವಾಳಿಕೆಗೆ ಕೊಬ್ಬರಿ, ಖಾರೀಕ, ಬಾಳೆ ಹಣ್ಣು ಎಸೆದು ಭಕ್ತಿಯ ಪರಾಕಾಷ್ಟೇ ಮೆರೆಯುವುದು ವಿಶೇಶವಾಗಿ ಕಂಡು ಬರುತ್ತದೆ.

ಜಾತ್ರೆಯ ಕೂನೆಯ ದಿನ ಅರಣ್ಯಸಿದ್ದೇಶ್ವರ ದೇವರಿಗೆ ನೀವಾಳಿಕೆ ಮಾಡಿ ದೇವರ ಪಲ್ಲಕ್ಕಿ ಹಾಗೂ ದೇವಸ್ಥಾನ ಮೇಲೆ ಭಂಡಾರ, ಅಧಿರು ಕೊಬ್ಬರಿ, ಕಾರಿಕ, ಬಾಳೆ ಹಣ್ಣು ಹಾರಿಸಿ ನಂತರ ಕರಿ ಹರಿಯುವ ಮೂಲಕ ಐದು ದಿನಗಳ ಜಾತ್ರೆ ಸಂಪನ್ನಗೊಂಡಿತು. ನಿವಾಳಿಕೆ ನಂತರ ಲಕ್ಷಾಂತರ ಭಕ್ತರು ನಾ ಮುಂದು ತಾ ಮುಂದು ಎಂಬಂತೆ ತಮ್ಮ ತಮ್ಮ ಗ್ರಾಮ ಹಾಗೂ ಮನೆಗಳಿಗೆ ತೆರಳಿದರು.

ಸಂದರ್ಭದಲ್ಲಿ ಟ್ರಸ್ಟ್ ಕಮಿಟಿಯ ಅಧ್ಯಕ್ಷ ಅಮೀತ ಕವಟಕೋಪ್ಪ, ಸುನೀಲಗೌಡ ಪಾಟೀಲ, ಅಶೋಕ ಗುಡೋಡಗಿ, ಮಹಾದೇವ ಚೌಗಲಾ, ಚಿದಾನಂದ ಕವಟಕೋಪ, ಬಸವರಾಜ ಸನದಿ, ಲಕ್ಷ್ಮಣ ಜಯಗೊಣಿ, ಸಿದ್ದು ಸನದಿ, ಶಂಕರ ಸೌವದಿ, ವಿರೇಶ ಕವಟಕೋಪ್ಪ ವಕೀಲರು ಮಹೇಶ ಗುಡೋಡಗಿ ಸೇರಿದಂತೆ ಇನ್ನೂ ಅನೇಕ ಭಕ್ತರು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಲಿ

• **ತೆಲಸಂಗ:** ಸೋಲಿಗೆ ಹೆದರದೆ ಹೊಸ ಸಂಶೋಧನೆಗಳಲ್ಲಿ ತೊಡಗುವುದೇ ನಿಜವಾದ ವಿಜ್ಞಾನಿಯ ಲಕ್ಷಣ ಎಂದು ಮುಖ್ಯೋಪಾಧ್ಯಾಯ, ವಿಜ್ಞಾನ ಶಿಕ್ಷಕ ಗಫೂರ ಮುಲ್ಲಾ ಹೇಳಿದರು.

ಗ್ರಾಮದ ಜ್ಞಾನಭಾರತಿ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ತ ವಿದ್ಯಾರ್ಥಿಗಳಿಗೆ ವಿಶೇಷ ವಿಜ್ಞಾನ ತರಗತಿಯ ಉದ್ಘಾಟಿಸಿ ಮಾತನಾಡಿ, ಇಂದು ನಾವು ಕೇವಲ ಒಬ್ಬ ವಿಜ್ಞಾನಿಯನ್ನಷ್ಟೇ ನೆನಪಿಸಿಕೊಳ್ಳುತ್ತಿಲ್ಲ, ಬದಲಿಗೆ ನಮ್ಮಲ್ಲಿರುವ ಕುತೂಹಲವನ್ನು ಸಂಭ್ರಮಿಸುತ್ತಿದ್ದೇವೆ. ವಿಜ್ಞಾನ ಎಂದರೆ ಕೇವಲ ದಪ್ಪ ಪುಸ್ತಕಗಳ ಓದಲ್ಲ, ಅಥವಾ ಪ್ರಯೋಗಾಲಯದಲ್ಲಿ ಮಾಡುವ ಕೆಮಿಕಲ್ ಮಿಶ್ರಣಗಳಲ್ಲ. ನಿಮ್ಮ ಮನಸ್ಸಿನಲ್ಲಿ ಮೂಡುವ ಏಕೆ?, ಹೇಗೆ?, ಯಾವಾಗ? ಎಂಬ ಪ್ರಶ್ನೆಗಳು. ಕುತೂಹಲವನ್ನು ಸಾಯಿಸಬೇಡಿ. ಪ್ರಕೃತಿಯಲ್ಲಿ ನಡೆಯುವ ಪ್ರತಿ ಘಟನೆಯ ಹಿಂದೆ ಒಂದು ಕಾರಣವಿರುತ್ತದೆ. ಆ ಕಾರಣವನ್ನು ಹುಡುಕುವ ಮನಸ್ಥಿತಿಯೇ ನಿಮ್ಮನ್ನು ವಿಜ್ಞಾನಿಯನ್ನಾಗಿ ಮಾಡುತ್ತದೆ ಎಂದರು.

ಸೋಲಿಗೆ ಹೆದರಬೇಡಿ. ಬಲ್ಬ್ ಕಂಡುಹಿಡಿದ ಎಡಿಸನ್ ಸಾವಿರ ಬಾರಿ ಸೋತಿದ್ದರಂತೆ. ವಿಜ್ಞಾನದಲ್ಲಿ ಸೋಲು ಎಂಬುದು ತಪ್ಪು ದಾರಿಯ ಅಂತ್ಯವಲ್ಲ, ಬದಲಿಗೆ ಸರಿಯಾದ ದಾರಿಯ ಆರಂಭ. ಸಮಾಜಕ್ಕಾಗಿ ವಿಜ್ಞಾನ ಬೇಕು. ನೀವು ಕಲಿಯುವ ವಿಜ್ಞಾನ ದೇಶದ ಅಭಿವೃದ್ಧಿಗೆ ಮತ್ತು ಸಾಮಾನ್ಯ ಜನರ ಸಮಸ್ಯೆಗಳನ್ನು ನೀಗಿಸಲು ಬಳಕೆಯಾಗಬೇಕು. ಅದುವೇ ನಿಜವಾದ ಯಶಸ್ಸು. ವಿಜ್ಞಾನಿ ಎಂಬವನು ಆಕಾಶದಿಂದ ಇಳಿದು ಬರುವುದಿಲ್ಲ, ಅಬ್ದುಲ್ ಕಲಾಂ ಅವರು ಪೇಪರ್ ಹಂಚುತ್ತಲೇ ವಿಜ್ಞಾನಿಯಾದವರು. ನಿಮ್ಮಲ್ಲಿಯೂ ಒಬ್ಬ ಕಲಾಂ, ಒಬ್ಬ ರಾಮನ್ ಅಡಗಿದ್ದಾರೆ. ಅವರನ್ನು ಹೊರತರುವ ಕೆಲಸ ಇಂದೇ ಆರಂಭವಾಗಲಿ. ಕನಸು ಕಾಣಿ, ಆ ಕನಸನ್ನು ನನಸು ಮಾಡಲು ವಿಜ್ಞಾನದ ದಾರಿಯನ್ನು ಆಯ್ದುಕೊಳ್ಳಿ. ವಿದ್ಯಾರ್ಥಿಗಳು ತಮ್ಮ ದೈನಂದಿನ ಜೀವನದಲ್ಲಿ ಪ್ರಶ್ನಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಅಬ್ದುಲ್ ಕಲಾಂ ಮತ್ತು ಸಿ.ವಿ. ರಾಮನ್ ಅವರಂತಹ ಮಹಾನ್ ವ್ಯಕ್ತಿಗಳ ಜೀವನ ನಮಗೆ ಸದಾ ಸ್ಪೂರ್ತಿಯಾಗಲಿ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕಿರುಸುದ್ದಿ

ರೇಣುಕಾಚಾರ್ಯ ಜಯಂತಿ ಇಂದು

•ಬೈಲಹೊಂಗಲ: ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಅಂಗವಾಗಿ ಮಾ.1ರಂದು ಬೆಳಿಗ್ಗೆ 9ಕ್ಕೆ ಪಟ್ಟಣದ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಲ್ಲಿ ಭಕ್ತಿಭಾವದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವು ಶ್ರೀ ಮ.ನಿ.ಪ್ರ.ಸ್ವ. ಪ್ರಭು ನೀಲಕಂಠ ಸ್ವಾಮಿಗಳು, ಮೂರುಸಾವಿರ ಮಠ, ಬೈಲಹೊಂಗಲ ಸಾನಿಧ್ಯದಲ್ಲಿ ಜರುಗಲಿದೆ. ಜಯಂತಿ ಪ್ರಯುಕ್ತ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮಕ್ಕೆ ಸಮಸ್ತ ವೀರಶೈವ ಬಾಂಧವರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಪ್ರಸಾದ ಸ್ವೀಕರಿಸಿ, ಜಗದ್ಗುರು ರೇಣುಕಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಮುಖಂಡರಾದ ಪ್ರಮೋದಕುಮಾರ ವಕ್ಕುಂದಮಠ ಮನವಿ ಮಾಡಿದ್ದಾರೆ.

ಮದ್ಯ ನೀತಿ ಪ್ರಕರಣದ ತೀರ್ಪು ಸ್ವಾಗತಾರ್ಹ

•ಬೆಳಗಾವಿ: ದೆಹಲಿ ಎಕ್ಸೈಸ್ (ಮದ್ಯ ನೀತಿ) ಪ್ರಕರಣದಲ್ಲಿ ಅರವಿಂದ ಕ್ರೇಜಿವಾಲ್ ಹಾಗೂ ಇತರರನ್ನು ನ್ಯಾಯಾಲಯವು ವಿಮುಕ್ತಿಗೊಳಿಸಿರುವುದು ಸ್ವಾಗತ. ಈ ತೀರ್ಪು ಸತ್ಯಕ್ಕೆ ಸದಾ ಜಯ ಸಿಗುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಬೆಳಗಾವಿ ಎಎಪಿ ಜಿಲ್ಲಾ ಅಧ್ಯಕ್ಷ ವಿಜಯ್ ಎಲ್. ಪಾಟೀಲ್



ತಿಳಿಸಿದರು. ಈ ಪತ್ರಿಕಾ ಪ್ರಕಟಣೆ ನೀಡಿದ ಅವರು, ನ್ಯಾಯಾಲಯವು ಆರೋಪಗಳನ್ನು ತಳ್ಳಿ ಹಾಕಿರುವುದು ನ್ಯಾಯಾಂಗ ವ್ಯವಸ್ಥೆಯ ಮೇಲಿನ ಜನರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ ಎಂದರು. ಇದೇ ವೇಳೆ ಆಮ್ ಆದ್ಮಿ ಪಕ್ಷವು ಭ್ರಷ್ಟಾಚಾರದ ವಿರುದ್ಧ ತನ್ನ ಹೋರಾಟವನ್ನು ಮುಂದುವರಿಸುವುದರ ಜೊತೆಗೆ ದೇಶದ ಎಲ್ಲಾ ನಾಗರಿಕರ ಕಲ್ಯಾಣ ಮತ್ತು ಹಕ್ಕುಗಳಿಗಾಗಿ ಸದಾ ಬದ್ಧವಾಗಿರುತ್ತದೆ ಎಂದು ತಿಳಿಸಿದರು.

ಪ್ರವೀಣಕುಮಾರಗೆ ಪಿಎಚ್‌ಡಿ

•ಸುರೇಬಾನ: ಸ್ಥಳೀಯ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಪ್ರವೀಣ ಕುಮಾರ ಕೋಟಿ ಅವರಿಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಇವರು ಸಲ್ಲಿಸಿದ ''ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ''



ಎಂಬ ಮಹಾಪ್ರಬಂಧಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ವಾಣಿಜ್ಯಶಾಸ್ತ್ರ)ಪದವಿ ಲಭಿಸಿದೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವಾವಿದ್ಯಾಲಯ, ಬಳ್ಳಾರಿ ಪ್ರಾಧ್ಯಾಪಕ ಡಾ.ಸದ್ಯೋಜಾತಪ್ಪ ಎಸ್ ಅವರ ಮಾರ್ಗದರ್ಶನದಲ್ಲಿ ಹಂಪಿಯ ನವರಂಗ ಬಯಲು ರಂಗಮಂದಿರ ವಿದ್ಯಾರಣ್ಯದಲ್ಲಿ ಫೆ.24ರಂದು ನಡೆದ ನುಡಿಹಬ್ಬ 34ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರವೀಣ್ ಕುಮಾರ್ ಎಸ್ ಕೋಟಿ ಅವರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಿದರು.

ಮುಸ್ಲಿಂ ಯುವಕನ ಕಾರ್ಯಕ್ಕೆ ಮೆಚ್ಚುಗೆ



•ಸಾವಳಗಿ: ಗೋಕಾಕ ತಾಲೂಕಿನ ಸಾವಳಗಿ ಗ್ರಾಮದಲ್ಲಿ ನಂದಗಾಂವ ಬಸ್ ನಿಲ್ದಾಣದ ಹತ್ತಿರ ವೃತ್ತಚೌಕದಲ್ಲಿರುವ ಬಸವೇಶ್ವರ ಅವರ ಭವ್ಯ ಮೂರ್ತಿಯನ್ನು ಸ್ಥಳೀಯ ಮುಸ್ಲಿಂ ಯುವಕನು ಸ್ವಯಂಪ್ರೇರಿತವಾಗಿ ಸ್ವಚ್ಚಗೊಳಿಸಿದ ಘಟನೆ ಸಾರ್ವಜನಿಕರ ಗಮನ ಸೆಳೆದಿದೆ. ಬೆಳಗಿನ ಜಾವ ನೀರಿನ ಪೈಪ್ ಮೂಲಕ ಮೂರ್ತಿಗೆ ನೀರು ಸಿಂಪಡಿಸಿ ಶ್ರದ್ಧೆಯಿಂದ ಸ್ವಚ್ಚಗೊಳಿಸುತ್ತಿರುವ ದೃಶ್ಯ ಕಂಡು ಬಂದಿತು. ಯುವಕನ ಈ ಸೇವಾಭಾವಿ ನಡೆ ಧರ್ಮ, ಜಾತಿ ಭೇದವಿಲ್ಲದೆ ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವ ಉದಾಹರಣೆಯಾಗಿ ಪರಿಣಮಿಸಿದೆ. ಬಸವೇಶ್ವರರು ಸಾರಿದ ಸಮಾನತೆ, ಸೌಹಾರ್ದತೆ ಮತ್ತು ಮಾನವೀಯತೆಯ ಸಂದೇಶವನ್ನು ಇಂದಿನ ಯುವಪೀಳಿಗೆ ಅರ್ಥಮಾಡಿಕೊಂಡಿರುವುದಕ್ಕೆ ಇದು ಸಾಕ್ಷಿಯಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು. ಸ್ಥಳೀಯ ನಾಗರಿಕರು ಮಾತನಾಡಿ, ಇಂತಹ ಕಾರ್ಯಗಳು ಸಮಾಜದಲ್ಲಿ ಒಗ್ಗಟ್ಟು ಮತ್ತು ಸಹಬಾಳ್ವೆಯನ್ನು ಬಲಪಡಿಸುತ್ತವೆ. ಎಲ್ಲರೂ ಒಟ್ಟಾಗಿ ನಮ್ಮ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಕಾಪಾಡಬೇಕು ಎಂದು ಹೇಳಿದರು.



ಬೆಳಗಾವಿ: ರಾಜ್ಯ ಕಾಂಗ್ರೆಸ್ ಸರ್ಕಾರ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಕೆಗೆ ಮುಂದಾಗಬೇಕು. ಕಳೆದ ಬಾರಿಯೂ ನೀಡಿದ ಭರವಸೆ ಈಡೇರಿಲ್ಲ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಬೃಹತ್ ಪ್ರತಿಭಟನೆ ನಡೆಸಿದರು. ಕರ್ನಾಟಕ ರಾಜ್ಯ ಆಶಾ ಕಾರ್ಯಕರ್ತೆಯರ ಸಂಘಟನೆ, ಜಿಲ್ಲಾಧ್ಯಕ್ಷ ಲಕ್ಷ್ಮಣ ಬಡಸನ್ನವರ, ಗೀತಾ ರಾಯಗೋಳ ಜಿಲ್ಲಾ ಕಾರ್ಯದರ್ಶಿ, ಸುಜಾತಾ ಕಾಗಮರ, ರೂಪಾ ಅಂಗಡಿ, ಜಯಶ್ರೀ ಹುಕ್ಕೇರಿ, ಲತಾ ಮೇಘಾ, ಭಾರತಿ, ಗಂಗಮ್ಮ, ರೀಟಾ ಖಾನಾಪೂರ, ಸುನಂದಾ, ಕವಿತಾ ಸೇರಿದಂತೆ ಮತ್ತಿತರರು ಇದ್ದರು.

ಮಹಾಂತ ಶಿವಯೋಗಿಗಳು ದಾರಿದೀಪ

•ಅಥಣಿ: ಬಸವ ತತ್ವಗಳನ್ನು ಚಾಚು ತಪ್ಪದೆ ಪರಿಪಾಲಿಸಿ ಸರ್ವರನ್ನು ಒಂದೇ ಸೂರಿನ ಅಡಿ ಸೇರಿಸಿ ಭಾವೈಕ್ಯತೆ ಮೂಡಿಸಿದ ಕೀರ್ತಿ ಲಿಂ. ಡಾ. ಮಹಾಂತ ಶಿವಯೋಗಿಗಳವರಿಗೆ ಸಲ್ಲುತ್ತದೆಂದು ಮಾಜಿ ಶಾಸಕ ಶಹಜಾನ ಡೊಂಗರಗಾಂವ ಹೇಳಿದರು. ತಾಲೂಕಿನ ಸವದಿ ಗ್ರಾಮದಲ್ಲಿ ಜರುಗಿದ ಶರಣ ಸಂಸ್ಕೃತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ವರನ್ನು ಸಮಭಾವದಿಂದ ಕಾಣುವ ಸವದಿ ಮಠದ ಸಂಸ್ಕೃತಿ ಎಲ್ಲರಿಗೂ ಮಾದರಿಯಾಗಿದೆ. ಲಿಂ. ಡಾ. ಮಹಾಂತ ಶಿವಯೋಗಿಗಳು ಎಲ್ಲರಿಗೂ ದಾರಿದೀಪವಾಗಿದ್ದಾರೆ ಎಂದರು. ಗಂಗಾವತಿಯ ಸಾಹಿತಿ ರಾಜಶೇಖರ ನಾರನಾಳ ಮಾತನಾಡಿ, ಬಸವ ತತ್ವಗಳ ತಳಹದಿಯ ಮೇಲೆ ಸಾಗುವವರು ಎಂದಿಗೂ ದಾರಿ ತಪ್ಪುವುದಿಲ್ಲ, ಬಸವ ತತ್ವಗಳು ಸರ್ವಕಾಲಕ್ಕೂ ಸಲ್ಲುವಂತಹವು ಎಂದರು. ಸವದಿ-ಇಲಕಲ್ ಮಠದ ಗುರು ಮಹಾಂತ ಸ್ವಾಮೀಜಿ ನೇತೃತ್ವ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶಿರೂರದ ಡಾ. ಬಸವಲಿಂಗ ಸ್ವಾಮೀಜಿ, ನಿಪ್ಪಾಣಿಯ ಬಸವ ಮಲ್ಲಿಕಾರ್ಜುನ ಸ್ವಾಮೀಜಿ, ಜಮಖಂಡಿಯ ಸಾಹಿತಿ ಬಸವರಾಜ ಯಡಹಳ್ಳಿ, ಹೆಸ್ಕಾಂ ಇಲಾಖೆಯ ಅಭಿಯಂತರ ಎಸ್. ಎ. ಪಾರ್ಥನಳ್ಳಿ, ಬಳವಂತರಾವ ಪಡ್ಕರ, ಸಿ.ಎಚ್. ನಾರನಾಳ, ಕಲಾವಿದ ಶೇಖಪ್ಪ ರೂಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರಾಜ್ಯಮಟ್ಟದ ಶ್ರೀಮಹಾಂತ ಸಂಗೀತ ಪ್ರಶಸ್ತಿಯನ್ನು ಬುದನೂರಿನ ಅಂಧ ತಬಲಾ ಕಲಾವಿದ ಶೇಖಪ್ಪ ರೂಗಿ ಅವರಿಗೆ ನೀಡಲಾಯಿತು. ಜಮಖಂಡಿಯ ಕಲಾವಿದ ಸರಸ್ವತಿ ಸುಭರದ ಸಂಗೀತ ಸೇವೆ ಸಲ್ಲಿಸಿದರು.



ಅಥಣಿ: ತಾಲೂಕಿನ ಸವದಿ ಗ್ರಾಮದಲ್ಲಿ ಜರುಗಿದ ಶರಣ ಸಂಸ್ಕೃತಿ ಮಹೋತ್ಸವ ಕಾರ್ಯಕ್ರಮ ನಡೆಯಿತು. ಮಾಜಿ ಶಾಸಕ ಶಹಜಾನ ಡೊಂಗರಗಾಂವ, ಗಂಗಾವತಿಯ ಸಾಹಿತಿ ರಾಜಶೇಖರ ನಾರನಾಳ, ಸವದಿ-ಇಲಕಲ್ ಮಠದ ಗುರು ಮಹಾಂತ ಸ್ವಾಮೀಜಿ ಸೇರಿದಂತೆ ಇತರರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸಲಹೆ

ಡ್ರಗ್ಸ್ ಹಾವಳಿ, ಎಚ್ಚರಿಕೆ ಅಗತ್ಯ

•ಬೆಳಗಾವಿ : ಮಾದಕ ವಸ್ತುಗಳ ವ್ಯಸನ ಬಹುದೊಡ್ಡ ಸಮಸ್ಯೆಯಾಗಿ ಇಡೀ ದೇಶವನ್ನು ವ್ಯಾಪಿಸಿದೆ. ನಮ್ಮ ಯುವಶಕ್ತಿಯನ್ನು ಕಸಿಯುತ್ತಿರುವ ಈ ವ್ಯಸನ ಶಾಲೆಗಳನ್ನೂ ಆಕ್ರಮಿಸಿಕೊಂಡಿರುವುದು ಕಳವಳದ ವಿಷಯ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

> » ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್ ಅಂಗಾಂಗ ದಾನ ಅಭಿಯಾನ

ಬೆಳಗಾವಿ ಜಿಲ್ಲಾ ವ್ಯಾಪ್ತಿಯ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಭೋದ್ ಫೌಂಡೇಶನ್ ಮತ್ತು ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸ್ವಾಸ್ಥ್ಯ ಭಾರತ - ಶ್ರೇಷ್ಠ ಭಾರತ-ಯುವ ಶುದ್ಧಿ ಅಭಿಯಾನ ಹಾಗೂ ನಶಾಮುಕ್ತ ಭಾರತ, ನಶಾಮುಕ್ತ ಕರ್ನಾಟಕ, ನಶಾಮುಕ್ತ ಕ್ಯಾಂಪಸ್ ಮತ್ತು ಅಂಗದಾನ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು.

ಗೊತ್ತೇ ಆಗದಂತೆ ನಶಾ ಪದಾರ್ಥಗಳು ಮಕ್ಕಳು ತಿನ್ನುವ ತಿಂಡಿಗಳಲ್ಲಿ ಸೇರ್ಪಡೆಯಾಗುತ್ತಿದೆ. ಮಕ್ಕಳಿಗೆ ಚಟವಾಗಲಿ ಎನ್ನುವ ಕಾರಣಕ್ಕೆ ಮಾದಕ ಅಂಶವಿರುವ ಪದಾರ್ಥಗಳನ್ನು ತಿಂಡಿಗಳಲ್ಲಿ ಬೆರೆಸಲಾಗುತ್ತಿದೆ. ಹೀಗಾಗಿ ಪೋಷಕರು, ಶಿಕ್ಷಕರು ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ಸಲಹೆ ನೀಡಿದರು.

ನಶಾಮುಕ್ತ ಕರ್ನಾಟಕ ನಿರ್ಮಾಣ ಕೇವಲ ಸರ್ಕಾರದ ಕೆಲಸವಲ್ಲ, ನಿಮ್ಮೆಲ್ಲರ ಭಾಗವಹಿಸುವಿಕೆ, ಜಾಗೃತಿ ಮತ್ತು ದೃಢ ಸಂಕಲ್ಪದಿಂದ ಮಾತ್ರ ಸಂಪೂರ್ಣ ನಶಾಮುಕ್ತ ಕರ್ನಾಟಕ ಸಾಧ್ಯ. ಈ ಕೆಲಸ ಮೊದಲು ಮನೆಯಿಂದ ಆರಂಭವಾಗಬೇಕು. ಕಾಲೇಜುಗಳಲ್ಲಿ, ಸ್ನೇಹಿತರಲ್ಲಿ, ಬಂಧುಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.



ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ. ಮಾತನಾಡಿ, ನಮ್ಮ ದೇಶದ, ರಾಜ್ಯದ ಯುವಶಕ್ತಿಯನ್ನು ಕುಂದಿಸುತ್ತಿರುವ ಮಾದಕ ವಸ್ತುಗಳ ಹಾವಳಿಯನ್ನು ನಮ್ಮ ವಿಶ್ವವಿದ್ಯಾಲಯ ಸಹಿಸುವುದಿಲ್ಲ, ವಿದ್ಯಾರ್ಥಿಗಳನ್ನು ಈ ದಾಳಿಯಿಂದ ರಕ್ಷಿಸಲು ನಾವು ನಿರಂತರ ಮತ್ತು ಬಹಳ ಗಂಭೀರ ಹೆಜ್ಜೆಗಳನ್ನು ಇಟ್ಟಿದ್ದೇವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿ, ಮಾದಕ ವಸ್ತುಗಳ ಉಪಯೋಗ ಹಾಗೂ ಮಾರಾಟವನ್ನು ತಡೆಯುವುದು ಪ್ರತಿಯೊಬ್ಬರ ಕರ್ತವ್ಯ. ಜಿಲ್ಲೆಯಾದ್ಯಂತ ಡ್ರಗ್ ಹಾವಳಿಯನ್ನು ತಡೆಯಲು ನಾವೆಲ್ಲ ಗಂಭೀರ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಪೊಲೀಸ್ ಇಲಾಖೆ ಪ್ರತಿಯೊಂದು ಹಂತದಲ್ಲಿಯೂ ನಿಗಾ ವಹಿಸುತ್ತಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ಸುಮಾರು 700 ಕೆಜಿ ಗಾಂಜಾ ಜಪ್ತಿ ಮಾಡಲಾಗಿದೆ ಎಂದರು.

ದುಶ್ಚಟಗಳು ಯಾವಾಗಲೂ ದುಷ್ಟ ಸಹವಾಸದ ರೂಪದಲ್ಲಿ ಬಂದು ಆವರಿಸಿಕೊಳ್ಳುತ್ತವೆ. ಆದ್ದರಿಂದ ಸ್ನೇಹಿತರನ್ನು ಆರಿಸಿಕೊಳ್ಳುವಾಗ ಬಹಳ ಎಚ್ಚರಿಕೆಯಿಂದ ಇರಿ. ದಾರಿ ತಪ್ಪಿಸುವವರಿಂದ ದೂರವಿರಿ ಎಂದರು.

ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾದ ವಾಕಥಾನ್ ಕೊಲ್ಲಾಪುರ ವೃತ್ತ, ರಾಣಿ ಚನ್ನಮ್ಮ ವೃತ್ತದ ಮೂಲಕ ಸರ್ದಾರ್ ಮೈದಾನದಲ್ಲಿ ಕೊನೆಗೊಂಡಿತು. ಸುಮಾರು 7 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗಿಯಾಗಿದ್ದರು. ಈ ವೇಳೆ ಶಾಸಕ ಆಸೀಫ್ ಸೇಠ್, ರಾಮಲಿಂಗಾರೆಡ್ಡಿ, ವಿಕಾಸ್ ಸಿಂಗ್, ಡಾ. ಸಂದೀಪ್ ಪಟ್ಟಣಶೆಟ್ಟಿ, ಡಾ. ವಿಜಯಕುಮಾರ ಲಮಾಣಿ, ಜಿ.ಪಂ. ಅಧಿಕಾರಿ ರಾಹುಲ್ ಶಿಂದೆ, ಆರೋಗ್ಯಾಧಿಕಾರಿ ಡಾ. ಈಶ್ವರ್ ಗಡಾದ್, ಉಪ ಔಷಧ ನಿಯಂತ್ರಕ ಡಾ. ನಾಗರಾಜ್ ಎಸ್., ಎಸ್.ಪಿ. ಕೆ. ರಾಮರಾಜನ್, ಬಿಮ್ಸ್ ನಿರ್ದೇಶಕ ಡಾ. ಅಶೋಕ್ ಕುಮಾರ್ ಶೆಟ್ಟಿ, ಅನೇಕ ಗಣ್ಯರು ಇದ್ದರು.

ವೀರರಾಣಿ ಮಲ್ಲಮ್ಮ ಉತ್ಸವಕ್ಕೆ ಚಾಲನೆ

•ಬೈಲಹೊಂಗಲ: ತಾಲೂಕಿನ ಮಲ್ಲಮ್ಮನ ಬೆಳವಡಿ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತದಿಂದ ಶನಿವಾರ ಆಯೋಜಿಸಲಾದ ವೀರರಾಣಿ ಬೆಳವಡಿ ಮಲ್ಲಮ್ಮ ಉತ್ಸವ ಜಾನಪದ ವೈಭವದೊಂದಿಗೆ ಭರ್ಜರಿಯಾಗಿ ಆರಂಭವಾಯಿತು. ಉತ್ಸವದ ಅಂಗವಾಗಿ ನಡೆದ ಜಾನಪದ ಕಲಾವಾಹಿನಿ ಮೆರವಣಿಗೆ ಕಣ್ಮನ ಸೆಳೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಜಾನಪದ ಕಲಾತಂಡಗಳು ತಮ್ಮ ವೈಶಿಷ್ಟ್ಯಪೂರ್ಣ ಪ್ರದರ್ಶನಗಳ ಮೂಲಕ ರಾಣಿ ಮಲ್ಲಮ್ಮ ಅಭಿಮಾನಿಗಳ ಮನ ತಣಿಸಿತು. ನಾನಾ ಬಗೆಯ ಆಕರ್ಷಕ ವೇಷಭೂಷಣ ತೊಟ್ಟಿದ್ದ ನೂರಾರು ಕಲಾವಿದರು, ಜನಪ್ರತಿನಿಧಿಗಳು, ಕುಂಭ ಹೊತ್ತು ಸಾಗಿದ ಸುಮಂಗಲೆಯರು ಮೆರವಣಿಗೆಯ ಮೆರುಗು ಹೆಚ್ಚಿಸಿದರು. ಬೆಳವಡಿ ಮಲ್ಲಮ್ಮನ ವೃತ್ತದಿಂದ ಆರಂಭವಾದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ವೀರರಾಣಿ ಬೆಳವಡಿ ಮಲ್ಲಮ್ಮನ ಹುಟ್ಟೂರು ಶಿರಸಿ ಸಮೀಪದ ಸೋಂದಾದಿಂದ ಆಗಮಿಸಿದ ಬೆಳವಡಿ ಸಂಸ್ಥಾನದ ವೀರ ಜ್ಯೋತಿಯನ್ನು ಶಾಸಕ ಮಹಾಂತೇಶ ಕೌಜಲಗಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಪೂಜೆ ಸಲ್ಲಿಸಿ ಬರಮಾಡಿಕೊಂಡರು. ಬೆಳವಡಿ ಸಂಸ್ಥಾನದ ಧ್ವಜಾರೋಹಣ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ರಾಣಿ ಮಲ್ಲಮ್ಮನ ವೇಷಧಾರಿಗಳು, ಡೊಳ್ಳುಕುಣಿತ, ಗೊಂಬೆಕುಣಿತ, ವೀರಗಾಸೆ, ಕುದುರೆಕುಣಿತ, ಜನಪದ ವಾದ್ಯಗಳು, ನಗಾರಿ ವಾದನ ಹಾಗೂ ಕಥಕ್ಕಳಿ ತಂಡಗಳ ಪ್ರದರ್ಶನಗಳು, ಕುಂಭ ಮೆರವಣಿಗೆಗೆ ವಿಶೇಷ ಮೆರುಗು ನೀಡಿತು.

ಬೆಳವಡಿ ಮಲ್ಲಮ್ಮನ ಪುತ್ಥಳಿ, ಅಶ್ವಾರೂಢ ಪ್ರತಿಮೆಗೆ ಶಾಸಕ ಮಹಾಂತೇಶ ಕೌಜಲಗಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಬಸವ ಜಯಮೃತ್ಯುಂಜಯ ಮಹಾಸ್ವಾಮೀಜಿ, ಜೆಡಿಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ರೋಹಿಣಿ ಬಾಬಾಸಾಹೇಬ ಪಾಟೀಲ ಸೇರಿದಂತೆ ಅನೇಕ ಗಣ್ಯರು ಹೂಮಾಲೆ ಹಾಕಿ ಗೌರವ ನಮನ ಸಲ್ಲಿಸಿದರು. ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ, ಐಪಿಎಸ್ ಪ್ರೊಬೇಷನರಿ ಅಧಿಕಾರಿ ಡಾ. ಭಾನುಪ್ರಕಾಶ ಜೆ, ಉಪವಿಭಾಗಾಧಿಕಾರಿ ಪ್ರವೀಣ ಜೈನ್, ತಹಶೀಲ್ದಾರ್ ಹನುಮಂತ ಶಿರಹಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು, ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.



ಸಾರ್ವಜನಿಕರ ಸಮಸ್ಯೆ ಆಲಿಸಿದ ನಿಖಿಲ್ ಕತ್ತಿ

•ಸಂಕೇಶ್ವರ: ಶಾಸಕ ನಿಖಿಲ್ ಕತ್ತಿ ಅವರು ಹುಕ್ಕೇರಿ ತಾಲೂಕಿನ ಗ್ರಾಮಗಳಿಗೆ ಕಳೆದ 20 ದಿನಗಳಿಂದ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಹೆಚ್ಚಾಗಿ ಎಲ್ಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕೇಳಿಬಂದಿದ್ದು, ಹಿಡಕಲ್ ಡ್ಯಾಂ ನಿಂದ ಕುಡಿಯುವ ನೀರು ಪೂರೈಸುವ ಪೈಪ್ ಲೈನ್ ಹಳೆಯದಾಗಿದ್ದು, ಆದ ಕಾರಣ ಅದ್ದು ಹೆಚ್ಚಾಗಿ ಹಾಳಾಗುತ್ತಿದ್ದು, ಹೊಸ ಪೈಪ್ ಲೈನ್ ಮಂಜೂರು ಆಗಿದ್ದು, ಒಟ್ಟು 280 ಕೋಟಿ ರೂ. ಯೋಜನೆಯಾಗಿದ್ದು, ಇದು ಪೂರ್ಣಗೊಳ್ಳಲು ಒಂದು ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ ಎಂದರು.

ಆದರಲ್ಲಿ 175 ಕೋಟಿ ರೂ. ಹುಕ್ಕೇರಿ ಮತ ಕ್ಷೇತ್ರದಲ್ಲಿಯೇ ಕಾಮಗಾರಿ ಆಗಲಿದೆ. ಬೇಸಿಗೆ ಪ್ರಾರಂಭಿಸಿದರಿಂದ ಎಲ್ಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಗ್ಗೆ ಹೆಚ್ಚು ಒತ್ತು ನೀಡಲಾಗಿದ್ದು ಪ್ರತಿ ಮನೆಗೆ ಕುಡಿಯುವ ನೀಡು ಪೂರೈಸುವ ಜವಾಬ್ದಾರಿ ನಮ್ಮದು ಎಂದರು.

> **ತಂದೆಯವರಾದ ಉಮೇಶ ಕತ್ತಿ ಅವರ ಹಾಕಿ ಕೊಟ್ಟ ಮಾರ್ಗದಂತೆ ಪ್ರತಿ ವರ್ಷವೂ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದು ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನದ ಕೊರತೆ ಉಂಟಾಗುತ್ತಿದೆ.**
>
> **■ ನಿಖಿಲ್ ಕತ್ತಿ, ಶಾಸಕರು**

ಅಂಕಲೆ ಸಭೆಯಲ್ಲಿ ಗ್ರಾಮಸ್ಥ ಅರುಣ ಕಿವಡಾ ಹಳೆಯ ವಿಷಯವನ್ನು ಪ್ರಸ್ತಾಪಿಸಿ ಮಾತನಾಡುತ್ತಿದಂತೆ. ಶಾಸಕರು ಹಳೆ ವಿಚಾರ ಬಿಟ್ಟು ಈಗಿನ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸೋಣ ಎಂದು ಸಭೆಗೆ ತಿಳಿಸುತ್ತಿದಂತೆ ಅದಕ್ಕೆ ಕೆಲವರು ಧ್ವನಿಗೂಡಿಸಿ ಹಳೆಯ ವಿಚಾರಗಳು ಈಗ ಬೇಡ ಎಂದು ಗದರಿಸಿದರು. ಕೆಇಬಿ ನಿರ್ದೇಶಕರಾದ ಶಿವಾನಂದ ಮುಡಶಿ, ಗಜಾನನ ಕ್ವಳ್ಳಿ, ಮಾಜಿ ಗ್ರಾಪಂ ಅಧ್ಯಕ್ಷ ಭರತ ಪುಂಡೆ, ಮುಖಂಡರಾದ ರೋಹಣ ನೇಸರಿ, ಪ್ರಶಾಂತ ಪಾಟೀಲ, ಈಶ್ವರ ಬಾಡಕರ, ವಿಶ್ವನಾಥ ಪಾಟೀಲ, ಶ್ರೀಕಾಂತ ಘುಸ್ತಿ, ಪಿಡಿಒ ಕಲ್ಲಪ್ಪ ಕುರಣಿ, ಎಲ್ಲ ಇಲಾಖೆ ಅಧಿಕಾರಿಗಳು ಇದ್ದರು.




ರಾಸಾಯನಿಕ ಗೊಬ್ಬರ ಬಳಕೆಯಿಂದ ಬೆಳೆಗೆ ಹಾನಿ: ಲಕ್ಷ್ಮಣ ಸವದಿ

•ಕಕಮರಿ: ಅತಿಯಾದ ರಾಸಾಯನಿಕ ಗೊಬ್ಬರ ಬಳಕೆಯಿಂದ ಜೀವ ವೈವಿಧ್ಯ, ಬೆಳೆ ಉತ್ಪಾದನೆ ಮೇಲೆ ದೀರ್ಘ ಪರಿಣಾಮ ಬೀರುವುದರಿಂದ ರೈತರು ಸಂಕಷ್ಟಕ್ಕೆ ಸಿಲಿಕಿದ್ದಾರೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಸ್ಥಳೀಯ ಶ್ರೀ ವೇದಾಂತ ಕೇಸರಿ ಮಲ್ಲಿಕಾರ್ಜುನ ಗುರುದೇವಾಶ್ರಮದಲ್ಲಿ ಹಮ್ಮಿಕೊಂಡಿದ್ದ ರೈತಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವಣೆ ಸಲ್ಲಿಸಿದ್ದೇವೆ. ನಮ್ಮ ತಾಲೂಕಿಗೆ ಒಂದು ದಿನಕ್ಕೆ 1.50 ಮೆಗಾವ್ಯಾಟ್ ಕರೆಂಟ್ ಅವಶ್ಯಕತೆ ಇದೆ. ಆದಕ್ಕೆ ಎರಡು ಸೋಲಾರ್ ಘಟಕಗಳನ್ನು ಕೊಕಟನೂರ, ಮತ್ತು ಯಲಿಹಡಲಗಿ ಈ ಎರಡು ಗ್ರಾಮಗಳಲ್ಲಿ ಸಕಾರದಿಂದಲೇ ಮಂಜೂರಿ ತರುತ್ತೇನೆ ಎಂದರು.

ಬಾಗಲಕೋಟ ಹಣ್ಣುಶಾಸ್ತ್ರ ವಿಜ್ಞಾನಿ ಡಾ.ಸಿದ್ದಣ್ಣ ಠೋಕೆ ಮಾತನಾಡಿ, ಹವಾಮಾನ ಬದಲಾವಣೆಯಿಂದ ನಾವು ಮಾಡುವ ಖರ್ಚು ಜಾಸ್ತಿ ಆಗಿದ್ದು, ಇಳುವರಿ ಬರುತ್ತಿಲ್ಲ ಎಂದು ರೈತರು ತಮ್ಮ ಸಮಸ್ಯೆ ಹೇಳುತ್ತಿದ್ದಾರೆ. ಜೈವಿಕ ಕೃಷಿ, ಮಣ್ಣು ಪರೀಕ್ಷೆ, ಮತ್ತು ಸಮತೋಲಿತ ಗೊಬ್ಬರ ಬಳಕೆ, ರೈತರಿಗೆ ಜಾಗೃತಿ ಮೂಡಿಸಿದಾಗ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ಪೂರ್ಣ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಮೊದಲು ರೈತರು ದ್ರಾಕ್ಷಿ ಗಿಡಕ್ಕೆ ಜಾಸ್ತಿ ನೀರು ಬಿಡುವದರಿಂದ ಮಣ್ಣಿನ ಗುಣಮಟ್ಟ



ಕಳೆದುಕೊಳ್ಳುತ್ತದೆ. ಮಣ್ಣಿನ ಆರೋಗ್ಯದ ಬಗ್ಗೆ ಕಾಳಜಿ ವಹಿಸಿಕೊಳ್ಳಬೇಕು ಎಂದರು.

ವಿಜ್ಞಾನಿಗಳಾದ ಚಿಕ್ಕೋಡಿ ಕೃಷಿ ವಿಜ್ಞಾನಿ ಸುರೇಶ ದೇಸಾಯಿ, ತಿಡಗುಂದಿ ಸಸ್ಯ ಶರೀರ ವಿಜ್ಞಾನಿ ಮಲ್ಲಿಕಾರ್ಜುನ ಅವಟಿ, ರಾಘವೇಂದ್ರ ಆಚಾರಿ, ಎಂ.ಎಂ.ನಧಾಪ್, ಶ್ರೀಪಾದ ವಿಶ್ವೇಶ್ವರ ವಿಜ್ಞಾನಿಗಳು ತಮ್ಮ ತಮ್ಮ ಅನಿಸಿಕೆಗಳನ್ನು ರೈತರೊಂದಿಗೆ ಹಂಚಿಕೊಂಡರು. ಪ.ಪೂ.ಆತ್ಮಾರಾಮ್ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅದ್ವೈತಾನಂದ ಸ್ವಾಮೀಜಿ, ಬಾಬುರಾವ್ ಮಹಾರಾಜರು, ಮುತ್ತಣ್ಣಾ ಕಾತ್ರಾಳ, ಮಲ್ಲಿಕಾರ್ಜುನ ಬಿಳ್ಳೂರ, ಸಿದ್ದಣ್ಣ ಮುದಕಣ್ಣವರ, ಸಿದರಾಯ ಯಲಡಗಿ, ಗುರಪ್ಪ ದಾಶ್ಯಾಳ, ಲಕ್ಷ್ಮಣ ಗುರ್ಕಿ, ಗಿರಮಲ್ಲ ಜನಗೌಡ ಇತರರಿದ್ದರು.

ಕನ್ನಡ ಶಾಲಾ ವಾರ್ಷಿಕ ಸಮ್ಮೇಳನ

•ಖಾನಾಪುರ: 2000ರ ಕಾಲಘಟ್ಟದಲ್ಲಿ ಖಾನಾಪುರದಲ್ಲಿ ಸರ್ಕಾರಿ ಕನ್ನಡ ಪ್ರೌಢಶಾಲೆ, ಸರ್ಕಾರಿ ಪಿಯು ಕಾಲೇಜು, ಪದವಿ ಕಾಲೇಜುಗಳಿರಲಿಲ್ಲ. ಈಗ ಇಡೀ ತಾಲೂಕಿನಲ್ಲಿ ಹತ್ತಾರು ಸರಕಾರಿ ಕನ್ನಡ ಪ್ರೌಢಶಾಲೆಗಳು, ಎರಡು ಸರ್ಕಾರಿ ಪಿಯು, ಎರಡು ಪದವಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ತಾಲೂಕಿಗೆ ಕನ್ನಡ ಪೌಢಶಾಲೆ ಮತ್ತು ಕಾಲೇಜುಗಳನ್ನು ಮಂಜೂರು ಮಾಡಿಸಿಕೊಂಡು ಬಂದವರ ಶ್ರಮವನ್ನು ಸ್ಮರಿಸಬೇಕು. ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಕನ್ನಡ ಶಾಲಾ-ಕಾಲೇಜುಗಳು ಮಹತ್ತರ ಪಾತ್ರ ವಹಿಸುತ್ತಿವೆ. ಇವುಗಳನ್ನು ಉಳಿಸಿ-ಬೆಳೆಸುವ ಕೆಲಸ ಖಾನಾಪುರದ ಜನರಿಂದ ಆಗಬೇಕು ಎಂದು ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ, ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಶೋಕ ಚಂದರಗಿ ಹೇಳಿದರು.


ಪಟ್ಟಣದ ವಿದ್ಯಾನಗರ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದಶಕಗಳ ಹಿಂದೆ ಖಾನಾಪುರ ತಾಲೂಕಿನಲ್ಲಿ ಕನ್ನಡ ಮಾತನಾಡಲು ಹೆದರಬೇಕಾದ ಸನ್ನಿವೇಶವಿತ್ತು. ಸಂಪೂರ್ಣ ಮರಾಠಿಮಯ ವಾತಾವರಣದ ಜೊತೆ ಕನ್ನಡಿಗರು



ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ತಾಲೂಕಿನಲ್ಲಿ ಕನ್ನಡ ಭಾಷೆಯ ಬಳಕೆ ಹೆಚ್ಚುತ್ತಿದೆ. ಎಲ್ಲೆಡೆ ಕನ್ನಡಮಯ ವಾತಾವರಣ ನಿರ್ಮಾಣವಾಗಿದೆ. ಅಂದು ಮರಾಠಿ ಭಾಷಿಕರ ಬಿಗಿಮುಷ್ಠಿಯಲ್ಲಿದ್ದ ಖಾನಾಪುರದಲ್ಲಿ ಇಂದು ಕನ್ನಡ ಭಾಷೆ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಮೇಶ ಮಾದಾರ ಅಧ್ಯಕ್ಷತೆ ವಹಿಸಿದ್ದರು. ಸಿಆರ್‌ಪಿ ಬಸವರಾಜ ಜನಕಟ್ಟಿ, ಮುಖ್ಯ ಶಿಕ್ಷಕ ಈರಣ್ಣ ವಸ್ತ್ರದ ಗಣ್ಯರನ್ನು ಗೌರವಿಸಿದರು. ಪತ್ರಕರ್ತ ಜಗದೀಶ ಹೊಸಮನಿ, ಪಪಂ ಸಮುದಾಯ ಅಭಿವೃದ್ಧಿ ಅಧಿಕಾರಿ ರಾಜೇಶ್ವರಿ ವೇರ್ಣೇಕರ, ಶಾಲೆಯ ಶಿಕ್ಷಕರು, ಪಾಲಕರು, ಮಕ್ಕಳು, ಆಹ್ವಾನಿತರು ಇದ್ದರು.

ಮಹಾಂತ ಶಿವಯೋಗಿಗಳ ರಥೋತ್ಸವ

•ಮುರಗೋಡ: ಶ್ರೀ ಮಹಾಂತ ದುರದುಂಡೇಶ್ವರ ಮಠದ ಮಹಾಂತ ಶಿವಯೋಗಿಗಳ 54ನೇ ಪುಣ್ಯ ಸ್ಮರಣೋತ್ಸವ ಅಂಗವಾಗಿ ತ್ರಿಶಂಗಪುರ ಉತ್ಸವ ನಿಮಿತ್ತ ರಥೋತ್ಸವ ಸಂಭ್ರಮದಿಂದ ಜರಗಿತು. ಇದಕ್ಕೂ ಮೊದಲು ಬೆಳಿಗ್ಗೆ 10ಕ್ಕೆ ಶ್ರೀಮಹಾಂತ ಶಿವಯೋಗಿಗಳ ಕರ್ತೃ ಗದ್ದುಗೆ ಮಹಾರುದ್ರಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ ನೆರವೇರಿತು. ಮಧ್ಯಾಹ್ನ ಸಾಮೂಹಿಕ ವಿವಾಹ ಮಹಾಪ್ರಸಾದ ಹಳೆ ಬಸ್ ನಿಲ್ದಾಣದ ಬಸವೇಶ್ವರ ದೇವಸ್ಥಾನದಿಂದ ನಂದಿ ಕೋಲು ಹಾಗೂ ಬೃಹತ್ ಹೂಮಾಲೆ, ರುದ್ರಾಕ್ಷಿ ಮಾಲೆ, ವಾದ್ಯಮಗಳೊಂದಿಗೆ ಮೆರವಣಿಗೆ ಮುಖಾಂತರ ಆಗಮಿಸಿ ಮಹಾಂತ ಶಿವಯೋಗಿಗಳ ಮಹಾ ರಥೋತ್ಸವಕ್ಕೆ ಹಾಕಿದರು. ಸಂಜೆ 5ಕ್ಕೆ ವಿಜೃಂಭಣೆಯಿಂದ ರಥೋತ್ಸವ ನೆರವೇರಿಸಿದರು. ನೀಲಕಂಠ ಶ್ರೀಗಳು, ಮಯಸೂರು ಬೇಬಿ ಮಠದ ತ್ರಿನೇತ್ರ ಮಹಾಂತ ಸ್ವಾಮೀಜಿ, ಮುನವಳ್ಳಿಯ ಸೋಮಶೇಖರ ಮಠದ ಮುರುಗರಾಜೇಂದ್ರ ಸ್ವಾಮೀಜಿ, ಬೈಲಹೊಂಗಲ ಮೂರು ಸಾವಿರ ಮಠದ ಪ್ರಭುನೀಲಕಂಠ ಮಹಾಸ್ವಾಮಿಗಳು ಸಾನಿಧ್ಯದಲ್ಲಿ ಮಹಾಂತ ಶಿವಯೋಗಿಗಳ ಮೂರ್ತಿ ಹಾಗೂ ಪಾದುಕೆ ಪೂಜಿಸಿ ವಾದ್ಯಮೇಳಗಳೊಂದಿಗೆ ಮಹಾರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಧರ್ಮದರ್ಶಿ ವೀರಭದ್ರಪ್ಪ ದೇಸಾಯಿ, ಅಶೋಕ ಶೆಟ್ಟರ, ಮಹಾಂತೇಶ ಮೆಟಗುಡ್ಡ, ಶಿವನಗೌಡ ಪಾಟೀಲ, ಮಲ್ಲಪ್ಪ ಕುರಬೆಟ್ಟ, ಕುಮಾರ ಪೂಜೇರಿ, ಮಹಾಂತೇಶ ಗೌಡತಿ, ಸಂತೋಷ ಹಿರೇಮಠ, ವಿಜಯ ಸಾಣಿಕೊಪ್ಪ, ಮಲ್ಲಿಕಾರ್ಜುನ ಗೌಡತಿ, ಮಹಾಂತೇಶ ದಾಡಿಗುಂಡಿ, ಇತರರು ಇದ್ದರು.



ಬೃಹತ್ ಹಲಿಗೆ ಹಬ್ಬಕ್ಕೆ ಚಾಲನೆ



•ಗೋಕಾಕ: ಹಿಂದೂ ಜಾಗರಣ ವೇದಿಕೆ ಗೋಕಾಕ ಘಟಕದಿಂದ ಹಮ್ಮಿಕೊಂಡ ಬೃಹತ್ ಹಲಿಗೆ ಹಬ್ಬ ಕಾರ್ಯಕ್ರಮಕ್ಕೆ ಇಲ್ಲಿಯ ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಶ್ರೀಗಳು ಶನಿವಾರ ನಗರದ ಕೊಳವಿ ಹನುಮಾನ ದೇವಸ್ಥಾನದಿಂದ ಚಾಲನೆ ನೀಡಿದರು.

ಬೃಹತ್ ಹಲಿಗೆ ಹಬ್ಬದ ಕಾರ್ಯಕ್ರಮದಲ್ಲಿ ವಿವಿಧ ವಾದ್ಯ ಮೇಳದೊಂದಿಗೆ ಸಾಂಪ್ರದಾಯಿಕ ವೇಷಭೂಷಣದಗಳಲ್ಲಿ ಹಲಿಗೆ ಬಾರಿಸುತ್ತ ಮೆರವಣಿಗೆ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಸಾಗಿತು.

ಈ ವೇಳೆ ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ, ಯುವನಾಯಕ ಅಮರನಾಥ ಜಾರಕಿಹೊಳಿ, ಕಾಂಗ್ರೆಸ್ ಮುಖಂಡ ಅಶೋಕ ಪೂಜಾರಿ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸುಭಾಶ್ಚಂದ್ರ ಬಿ.ಪಾಟೀಲ, ಬಸವಪ್ರಭು ಸ್ವಾಮೀಜಿ, ಆರ್‌ಎಸ್‌ಎಸ್ ಪ್ರಮುಖರಾದ ಎಂ.ಐ ಹಾರುಗೇರಿ, ನಾರಾಯಣ ಮಠಾಧಿಕಾರಿ, ಎಂ.ಡಿ. ಚುನಮರಿ, ಪ್ರಕಾಶ ವರ್ಜಿ, ಹಿಂದೂ ಜಾಗರಣ ವೇದಿಕೆಯ ಪ್ರಮುಖರಾದ ಸಮರ್ಥ ಖಾಸನೀಸ, ಅಂಕುಶ ರೇಣಕೆ, ಸುನೀಲ ಬೆನವಾಡ, ಸಾಯಿ ಕೋಸಂದರ, ಕೃಷ್ಣಾ ಕುರಬಗಟ್ಟಿ, ವಿಲಾಸ ನಾಯಿಕ, ಬಸವರಾಜ ಕಾಪಶಿ, ವೈ.ಎಲ್. ದುರದುಂಡಿ, ಮಹಾಂತೇಶ ತಾಂವಶಿ ಸೇರಿದಂತೆ ನೂರಾರು ಹಿಂದು ಜಾಗರಣ ವೇದಿಕೆಯ ಕಾರ್ಯಕರ್ತರು ಇದ್ದರು.

ಮಾ.10ರಿಂದ ಜಾತ್ರಾ ಮಹೋತ್ಸವ: ವಿವಿಧ ಕಾರ್ಯಕ್ರಮ

•ಕುಡಚಿ: ಮಾ.10 ರಿಂದ 19 ರವರೆಗೆ ನಡೆಯಲಿರುವ ಈ ಜಾತ್ರಾ ಮಹೋತ್ಸವದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ವಿಶೇಷ ಪೂಜೆ, ಭಜನೆ, ವಿವಿಧ ಭಾಗಗಳಿಂದ ಆಗಮಿಸಲಿರುವ ಪೂಜ್ಯರಿಂದ ಪ್ರವಚನ ಜರುಗಲಿದ್ದು ನಿತ್ಯ ಮಹಾಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗಿದೆ ಎಂದು ಶ್ರೀಗುರು ಬ್ರಹ್ಮಾನಂದ ಆಶ್ರಮದ ಪೀಠಾಧಿಪತಿ ಡಾ. ಅಭಿನವ ಬ್ರಹ್ಮಾನಂದ ಸ್ವಾಮೀಜಿ ತಿಳಿಸಿದರು.

ಶ್ರೀಗುರುದೇವ ಬ್ರಹ್ಮಾನಂದ ಮಹಾಶಿವಯೋಗಿಗಳ 50ನೇ ಹಾಗೂ ಶ್ರೀ ಗುರುದೇವ ಸಿದ್ದೇಶ್ವರ ಮಹಾಶಿವಯೋಗಿಗಳ 20ನೇ ಮಹಾಸಮಾಧಿ ಸ್ಮರಣೋತ್ಸವದ ನಿಮಿತ್ತ ರಾಯಬಾಗ ತಾಲೂಕಿನ ಸುಕ್ಷೇತ್ರ ಪರಮಾನಂದವಾಡಿ ಗ್ರಾಮದಲ್ಲಿ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ ವತಿಯಿಂದ ಯುಗಾದಿ ಜಾತ್ರಾ ಮಹೋತ್ಸವ-2026 ಆಮಂತ್ರಣ ಪತ್ರಿಕೆ ಪೂಜೆ ಸಲ್ಲಿಸಿ ಬಿಡುಗಡೆಗೊಳಿಸಿ ಮಾತನಾಡಿದರು.

ಮಾ.10ರಿಂದ 16ರ ವರೆಗೆ ಜ್ಞಾನ ಸಪ್ತಾಹದಡಿ ಡಾ.ಅಭಿನವ ಬ್ರಹ್ಮಾನಂದ ಸ್ವಾಮಿಜಿ ಸಾನಿಧ್ಯದಲ್ಲಿ ಅಲಖನೂರ ಸಿದ್ಧಾರೂಢ ಮಠದ ಬಸಯ್ಯಾ ಸ್ವಾಮಿಜಿ ನೇತೃತ್ವ ವಹಿಸಲಿದ್ದು, ಸಿದ್ದಾಪೂರದ ಕಾಡಯ್ಯ ಸ್ವಾಮಿಜಿ ಸಮ್ಮುಖದಲ್ಲಿ ಅಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ಜರುಗಲಿದ್ದು, ಪ್ರತಿದಿನ ಬೆಳಿಗ್ಗೆ 7ರಿಂದ 8ರವರೆಗೆ ಧ್ಯಾನ ಮತ್ತು ಯೋಗ ಮಾರ್ಗ ಕುರಿತು ಪ್ರವಚನ, ಸಂಜೆ 7ರಿಂದ 9ರವರೆಗೆ ಶ್ರೀ ಮನ್ನಿಜಗುಣರ ಕೈವಲ್ಯ ಸಂದೇಶದ ಕುರಿತು ಪ್ರವಚನ ಜರುಗಲಿದ್ದು, ಮಾ.17ರಂದು ಬೆಳಿಗ್ಗೆ 6ರಿಂದ 7ರವರೆಗೆ ಕಾಯವಿಡಿದ ಆತ್ಮ ರಾಶಿಗೆ ಪರತರ ಮುಕ್ತಿಗೆ ಉಪಾಯವಿದು ನಿಜ ಶಿವಮಂತ್ರಣ್ಣ ವಿಷಯದ ಕುರಿತು ಶಿವಮಹಿಮೆ ಸ್ತೋತ್ರ, ಜಪ, ಪ್ರವಚನ, ಸಂಜೆ 6ರಿಂದ ಸಂಗೀತ ಕಾರ್ಯಕ್ರಮ, 7ರಿಂದ ಪಾಪಿಯ ಧನ ಪ್ರಾಯಶ್ಚಿತಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ ವಿಷಯ ಕುರಿತು ಪ್ರವಚನ ಜರುಗಲಿದೆ ಎಂದರು.

ಮಾ.18ರಂದು 6ಗಂಟೆಗೆ ಯಜ್ಞ ದಾನ ತಪ ಕರ್ಮ ಭಗವದ್ಗೀತೆ 18.5 ಕುರಿತು ಪ್ರವಚನ, ಸಂಜೆ 6ರಿಂದ ಸಂಗೀತ ಕಾರ್ಯಕ್ರಮ, 7ರಿಂದ ಸುಧಾರಸ ಧಾರೆ ಯಾವುದು ಮಿಗೆ ಮೃದು ವಚನ ವಿಷಯ ಕುರಿತು ಪ್ರವಚನ ಜರುಗಲಿದ್ದು, ಮಾ.19ರಂದು ಬೆಳಿಗ್ಗೆ 6ರಿಂದ 9ರ ವರೆಗೆ ಕರುಣ ವಿದ್ಯೆಗಳುಳ್ಳ ಗುರು ಭಜನೆಯನು ಕುರಿತು ಪ್ರವಚನ, ಸಂಜೆ 6ರಿಂದ 9ರ ವರೆಗೆ ಸುಧಾರಸ ಧಾರೆ ಯಾವುದು ಮಿಗೆ ಮೃದು ವಚನ ವಿಷಯ ಕುರಿತು ಪ್ರವಚನ, ನಂತರ ಮಹಾಪ್ರಸಾದ ಜರುಗಲಿದ್ದು, ಸಂಜೆ 4.30ಕ್ಕೆ ಶ್ರೀ ಗುರುದೇವ ಭಾವಚಿತ್ರದ ಪಲ್ಲಕ್ಕಿ ಗ್ರಾಮದ ಭವ್ಯ ಮೆರವಣಿಗೆ ಜರುಗಲಿದ್ದು, ಸಂಜೆ 6ರಿಂದ 7ರವರೆಗೆ ಸಂಗೀತ ಕಾರ್ಯಕ್ರಮ ನಂತರ ಗುರುವೆ ನಿಮ್ಮಯ ಕರುಣದೊಳೆನ್ನ ತತ್ವದಿರವನು ಅರಿದು ನಿತ್ಯ ಸುಖಿಯಾದೆ ವಿಷಯ ಕುರಿತು ಪ್ರವಚನ ಜರುಗಲಿದ್ದು, ನಂತರ ಮಹಾ ಮಂಗಳಾರತಿಯೊಂದಿಗೆ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ. ಎಂದರು.

ಹಿರಿಯ ಧುರೀಣ ಡಿ. ಎಸ್ ನಾಯಕ್, ಸುನೀಲಗೌಡ ಪಾಟೀಲ, ಬಸವರಾಜ ಸನದಿ, ಶ್ರೀಧರ ಮೂಡಲಗಿ, ಸದಾಶಿವ ವಾಳಕೆ, ಶಂಕರ ಹೊನವಾಡೆ, ಸಿದ್ದು ದುಪ್ಪದಾಳ, ಅಶೋಕ ವಾಳಕೆ, ವಸಂತ ಆನೇಹೊಸೂರ, ಇತರರು ಶ್ರೀ ಮಠದ ಭಕ್ತರು ಇದ್ದರು.



ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ ಇಂದು

ಕಮತಗಿ: ಪಟ್ಟಣದ ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಹಾಗೂ ಹುಚ್ಚೇಶ್ವರ ಪ್ರೌಢಶಾಲೆ, ಸೇವಾಲಾಲ ಪ್ರೌಢಶಾಲೆ, ಶಿವಶರಣೆ ಕಲ್ಯಾಣಮ್ಮ ಮಾಧ್ಯಮಿಕ ಶಾಲೆ, ಮರಡಿ ಮಲ್ಲೇಶ್ವರ ಪ್ರೌಢಶಾಲೆ ಅವರ ಸಹಯೋಗದಲ್ಲಿ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ಹೋಗಲಾಡಿಸುವ ಹಾಗೂ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ ಮಾ.1ರಂದು ಹಮ್ಮಿಕೊಳ್ಳಲಾಗಿದೆ. ಹುಚ್ಚೇಶ್ವರ ಸಂಸ್ಥಾನ ಮಠದ ಹುಚ್ಚೇಶ್ವರ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಹುಚ್ಚೇಶ್ವರ ಪ್ರೌಢಶಾಲೆಯ ಮುಖ್ಯಶಿಕ್ಷಕ ಎಚ್.ಎಂ.ಪಾಟೀಲ ಅಧ್ಯಕ್ಷತೆ ವಹಿಸುವರು. ಬಸವೇಶ್ವರ ಡಿಎಡ್ ಕಾಲೇಜಿನ ನಿವೃತ್ತ ಉಪನ್ಯಾಸಕ ಪ್ರೊ.ಜಿ.ಕೆ.ತಳವಾರ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಡಾ.ಪಿ.ಎಂ.ಗುರುವಿನಮಠ, ಬಿ.ವೈ.ಬಿಜಕಲ್, ಜಿ.ಪಿ.ಲಮಾಣಿ, ಎ.ಎಚ್.ರಾಯಬಾಗಿ ಮುಖ್ಯ ಅತಿಥಿ ಸ್ಥಾನ ವಹಿಸಲಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಶಂಕರ್ ವನಕಿ ತಿಳಿಸಿದ್ದಾರೆ.

ಇಂದು ಪ್ರವಚನ ಆರಂಭ

ಬೀಳಗಿ: ತಾಲೂಕಿನ ಬಾದರದಿನ್ನಿ ಗ್ರಾಮದ ಹಿರೇಮಠದ ನೇತೃತ್ವದಲ್ಲಿ ರೇಣುಕಾಚಾರ್ಯ ಜಯಂತ್ಯುತ್ಸವದ ಅಂಗವಾಗಿ ಗದಗ ವೀರೇಶ್ವರ ಪುಣ್ಯಾಶ್ರಮದ ನವೀನ ಶಾಸ್ತ್ರಿಗಳು ಕಲಕೇರಿಮಠ ಅವರಿಂದ ರೇಣುಕ ಲೀಲೆ ಆಧ್ಯಾತ್ಮಿಕ ಪ್ರವಚನ ಪ್ರಾರಂಭಗೊಂಡಿದೆ. ಶಶಿಕುಮಾರ ಬಳಗಾನೂರ ಸಂಗೀತ ಸೇವೆ, ವಿಕಾಸ ಹುನಗುಂದ ತಬಲಾ ಸೇವೆ ನೀಡುತ್ತಿರುವರು ಎಂದು ಪರಮಾನಂದಯ್ಯ ಹಿರೇಮಠ ಎಂದು ತಿಳಿಸಿದ್ದಾರೆ. ಮಾ.1ರಂದು ಬೆಳಗ್ಗೆ 9 ಗಂಟೆಗೆ ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವ, ಆರತಿ, ಕುಂಭದೊಂದಿಗೆ ಜರುಗುವುದು. ನಂತರ ಗ್ರಾಮದೇವತೆ ದೇವಸ್ಥಾನದಲ್ಲಿ ಮಂಗಲಗೊಳ್ಳುವುದು. ಬೆಳಗ್ಗೆ 11 ಗಂಟೆಗೆ ಧಾರ್ಮಿಕ ಸಭೆ ಹಾಗೂ ವಿವಿಧ ರಂಗಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಸಮಾರಂಭ ಜರುಗಲಿದೆ. ಚಿಮ್ಮಲಗಿ ಅರಳೆಲೇ ಕಟ್ಟಿಮನಿ ಹಿರೇಮಠದ ಸಿದ್ಧರೇಣುಕ ಶಿವಾಚಾರ್ಯ ಸ್ವಾಮೀಜಿ, ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಮಾರಂಭ ಉದ್ಘಾಟಿಸುವರು. ಕಲಾದಗಿ ಪಂಚಗ್ರಹ ಸಸ್ಥಾನ ಹಿರೇಮಠದ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ಉಪಸ್ಥಿತಿ, ಪರಮಾನಂದಯ್ಯ ಹಿರೇಮಠ ನೇತೃತ್ವ ವಹಿಸುವರೆಂದು ತಿಳಿಸಿದ್ದಾರೆ.

ಅಗ್ನಿ ಅವಘಡ ಪ್ರಾತ್ಯಕ್ಷಿಕೆ

ಬಾದಾಮಿ: ಬೇಸಿಗೆ ಕಾಲ ಆರಂಭವಾಗಿರುವುದರಿಂದ ನಗರದ ಬಸ್ ಘಟಕದಲ್ಲಿ ಎಲ್ಲ ಸಿಬ್ಬಂದಿಗಳಿಗೆ ಕೆಲಸದಲ್ಲಾಗಲಿ ಅಥವಾ ಅವರ ಮನೆಯ ಸುತ್ತಮುತ್ತ ಅಗ್ನಿ ಅವಘಡಗಳಾದರೆ ಏನು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆನ್ನುವುದರ ಬಗ್ಗೆ ಶುಕ್ರವಾರ ನಗರದ ಅಗ್ನಿಶಾಮಕ ಠಾಣಾಧಿಕಾರಿ ಸಿಬ್ಬಂದಿಗಳೊಂದಿಗೆ ಆಗಮಿಸಿ ಆಕಸ್ಮಿಕವಾಗಿ ಅಗ್ನಿ ಅವಘಡಗಳಾದರೆ ಮುನ್ನೆಚ್ಚರಿಕೆ ಕ್ರಮವಾಗಿ ಘಟಕದಲ್ಲಿ ಇರುವಂತಹ ಅಥವಾ ಬಸ್ಸಿನಲ್ಲಿ ಕಾರ್ಯಾಚರಣೆ ಮಾಡುವಾಗ ಬಸ್ಸಿನಲ್ಲಿರುವಂತಹ ಬೆಂಕಿ ನಂದಿಸುವ ಸಾಧನವನ್ನು ಬಳಸಿ ಹೇಗೆ ಉಪಯೋಗಿಸಿಕೊಂಡು ಬೆಂಕಿ ನಂದಿಸಬೇಕೆಂಬ ಪ್ರದರ್ಶನವನ್ನು ತೋರಿಸಿದರು. ಘಟಕ ವ್ಯವಸ್ಥಾಪಕ ಅಶೋಕ ಕೋರಿ ಮತ್ತು ಸಿಬ್ಬಂದಿ ಹಾಜರಿದ್ದರು.

ಚಾಲಕನ ನಿರ್ಲಕ್ಷ್ಯ: ಪ್ರಯಾಣಿಕರಿಗೆ ಗಾಯ

ಕಲಾದಗಿ: ಕೆಎಸ್ಆರ್‌ಟಿಸಿ ಬಸ್ ಚಾಲಕನ ನಿರ್ಲಕ್ಷ್ಯದಿಂದ ವೇಗವಾಗಿ ಚಲಾವಣೆ ಮಾಡುತ್ತಿದ್ದ ಬಸ್ ಚಾಲಕನ ಅಚಾತುರ್ಯಕ್ಕೆ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿರುವ ಘಟನೆ ತುಳಸಿಗೇರಿಯ ಮಾರುತೇಶ್ವರನ ದೇವಸ್ಥಾನದ ಸಮೀಪ ನಡೆದಿದೆ. ಶುಕ್ರವಾರ ಮದ್ಯಾಹ್ನದ ಸುಮಾರಿಗೆ ಬಾಗಲಕೋಟೆಯಿಂದ ಲೋಕಾಪುರಕ್ಕೆ ಬರುತ್ತಿದ್ದ ಬಸ್ ತುಳಸಿಗೇರಿಯ ಮಾರುತೇಶ್ವರ ದೇವಸ್ಥಾನದ ಹತ್ತಿರದ ರಾಜ್ಯ ಹೆದ್ದಾರಿಯ ಮೇಲೆ ಹಾಕಲಾಗಿದ್ದ ರೋಡ ಹಂಪನ್ನು ಗಮನಿಸದೇ ಜಂಪ ಮಾಡಿರುವುದರಿಂದ ಬಾಗಲಕೋಟೆಯ ನವನಗರದಿಂದ ಲೋಕಾಪುರಕ್ಕೆ ತೆರಳಬೇಕಾಗಿದ್ದ ಕಾಲೇಜು ವಿದ್ಯಾರ್ಥಿನಿ ಲೋಕಾಪುರ ಮೂಲದ ಅನುರಾಧಾ ಭಜಂತ್ರಿ ತಲೆಗೆ ಗಂಭೀರ ಗಾಯವಾಗಿದ್ದು 8ಹೊಲಿಗೆ ಹಾಕಲಾಗಿದೆ ಎಂದು ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಭಾರಿ ವೈದ್ಯಾಧಿಕಾರಿ ಡಾ.ಅನೀಲ ಬದ್ನೂರ ತಿಳಿಸಿದ್ದಾರೆ. ಚಾಲಕನ ಉದ್ದಟತನದಿಂದ ಈ ಘಟನೆ ನಡೆದಿದೆ ಎಂದು ಗಂಭೀರವಾಗಿ ಗಾಯಗೊಂಡ ವಿದ್ಯಾರ್ಥಿನಿ ತಾಯಿ ಶಾಂತವ್ವ ಭಜಂತ್ರಿ ಆರೋಪಿಸಿದ್ದು ಬಸ ಚಾಲಕ ಹಾಗೂ ನಿರ್ವಾಹಕನ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ನೀಡಲಾಗುವುದು ಎಂದು ತಿಳಿಸಿದ್ದಾರೆ.



ಬಾಗಲಕೋಟೆ: ನಗರದಲ್ಲಿ ಮಾಧವ ಸೇವಾ ಕೇಂದ್ರ ವತಿಯಿಂದ ಐತಿಹಾಸಿಕ ಹೋಳಿ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಹಲಗೆಮೇಳ ಸ್ಪರ್ಧೆಗೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಮಾಜಿ ಸಚಿವ ಎಸ್.ಆರ್.ಪಾಟೀಲ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಲ್ಲಿಕಾರ್ಜುನ ಮೇಟಿ, ನಾಗರಾಜ ಹದ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಸ್ತ್ರೀಗೆ ಪೂಜ್ಯನೀಯ ಸ್ಥಾನ

ಜಮಖಂಡಿ: ದೇಶದಲ್ಲಿ ಸ್ತ್ರೀ ಗೆ ಪೂಜ್ಯನೀಯ ಸ್ಥಾನವಿದೆ. ಮಹಿಳೆ ಪ್ರವೇಶ ಮಾಡದ ಕ್ಷೇತ್ರವಿಲ್ಲ. ಎಲ್ಲಿ ಹೆಣ್ಣು ಗುರಿಯಾಗುತ್ತಾಳೋ, ಅಲ್ಲಿ ಅವಳು ನಾಶವಾಗುತ್ತಾಳೆ ಎಂದು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕಿ ಡಾ.ಸಪನಾ ಅನಿಗೋಳ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಭೌತಶಾಸ್ತ್ರ ಮತ್ತು ವಿದ್ಯುನ್ಮಾನ ವಿಭಾಗದಿಂದ ಆಯೋಜಿಸಿದ್ದ ವಿಜ್ಞಾನದಲ್ಲಿ ಕ್ಷೇತ್ರದಲ್ಲಿ ಮಹಿಳೆಯರು ವಿಷಯದ ಮೇಲೆ ಉಪನ್ಯಾಸ ನೀಡಿದ ಅವರು, ಮಹಿಳೆಗೆ ಸಮಾಜದಲ್ಲಿ ಹತ್ತಾರು ಸವಾಲುಗಳಿವೆ. ಇವೆಲ್ಲವುಗಳನ್ನು ಮೆಟ್ಟಿ ನಿಂತು ಅನೇಕ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದರು. ಇತಿಹಾಸದುದ್ದಕ್ಕೂ ಲಿಂಗ ತಾರತಮ್ಯದ ಅಡೆತಡೆಗಳನ್ನು ಎದುರಿಸಿ ಅವರು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿ ನಿರ್ಣಾಯಕ ಕೊಡುಗೆಗಳನ್ನು ನೀಡಿದ್ದಾರೆ. ಜಗತ್ತೆ ವಿಜ್ಞಾನಕ್ಕೆ ತಲೆಬಾಗಿದೆ. ನಮ್ಮ ಮನೆಯ ಪ್ರತಿಯೊಂದು ಆಚಾರ-ವಿಚಾರಗಳಲ್ಲಿ ವಿಜ್ಞಾನವಿದೆ ಎಂದು ಹೇಳಿದರು. ಪ್ರಾಚಾರ್ಯ ಡಾ.ಪಿ.ಡಿ.ಪೋಳ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಕಸಿತ ಭಾರತ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಕೊಡುಗೆ ಅಪಾರ. ತಂತ್ರಜ್ಞಾನ ಮುಂದುವರೆದಷ್ಟು ನೈತಿಕ ಶಿಕ್ಷಣ ಕಡಿಮೆಯಾಗಿದೆ. ಇಂದಿನ ಯುವ ಪೀಳಿಗೆಗೆ ನೈತಿಕ ಮೌಲ್ಯ ಬಿಂಬಿಸುವ ಶಿಕ್ಷಣದ ಅವಶ್ಯಕತೆ ಇದೆ ಎಂದರು. ವಿಭಾಗದ ಮುಖ್ಯಸ್ಥ ಬಸವರಾಜ ರಂಗಣ್ಣವರ ಮಾತನಾಡಿದರು.



ಜಮಖಂಡಿ: ನಗರದ ಬಿಎಲ್‌ಡಿಇ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಭೌತಶಾಸ್ತ್ರ ಮತ್ತು ವಿದ್ಯುನ್ಮಾನ ವಿಭಾಗದಿಂದ ಆಯೋಜಿಸಿದ್ದ ವಿಜ್ಞಾನದಲ್ಲಿ ಕ್ಷೇತ್ರದಲ್ಲಿ ಮಹಿಳೆಯರು ವಿಷಯದ ಮೇಲೆ ಉಪನ್ಯಾಸ ನಡೆಯಿತು. ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕಿ ಡಾ.ಸಪನಾ ಅನಿಗೋಳ, ಉಪಪ್ರಾಚಾರ್ಯ ಡಾ.ರವಿಶಂಕರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಉಪನ್ಯಾಸಕ ಶಿವಾನಂದ ನೇಗಿನಾಳ, ವಿದ್ಯಾರ್ಥಿ ಪ್ರತಿನಿಧಿ ಅಭಿರ್ಶರೀ ನರೇಗಲ್ ಭಕ್ತಿ ಮೋಟೆ ಹಾಗೂ ಸಂಜನಾ ಜೋಶಿ ಇದ್ದರು.

ಹೋಳಿ ಶಾಂತಿ ಸಭೆ | 5ರಿಂದ 7ರ ವರೆಗೆ ಮೂರು ದಿನ ಹೋಳಿ ಸಂಭ್ರಮ

ಸೌಹಾರ್ದತೆಯಿಂದ ಹೋಳಿ ಆಚರಿಸಿ

ಬಾಗಲಕೋಟೆ: ಸಹೋದರತ್ವ ಮತ್ತು ಸೌಹಾರ್ದತೆಗೆ ಪ್ರತೀಕವಾದ ಹೋಳಿ ಹಬ್ಬವನ್ನು ಶಾಂತಿಯುತವಾಗಿ, ಪರಸ್ಪರ ಗೌರವದಿಂದ ಹಬ್ಬ ಆಚರಿಸಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಸಲಹೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ಹೋಳಿ ಹಬ್ಬದ ಕುರಿತು ಜರುಗಿದ ಶಾಂತತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೋಳಿ ಆಚರಣೆಯಲ್ಲಿ ಕೋಲಕತ್ತ ಹೊರತುಪಡಿಸಿದರೆ ದೇಶದಲ್ಲಿಯೇ ಬಾಗಲಕೋಟೆ ಎರಡನೇ ಸ್ಥಾನದಲ್ಲಿದೆ. ಈ ಐತಿಹಾಸಿ ಹೋಳಿಯನ್ನು ಯಾವುದೇ ಅಹಿತಕರ ಘಟನೆಗೆ ಅವಕಾಶ ಕೊಡದೇ ಶಾಂತಿ ಹಾಗೂ ಸಂಭ್ರಮದಿಂದ ಆಚರಿಸುವಂತೆ ಜಿಲ್ಲಾಧಿಕಾರಿಗಳು

ಜಿಲ್ಲಾಧಿಕಾರಿ ಸಂಗಪ್ಪ ಸಲಹೆ

ಕರೆನೀಡಿದರು. ಹಬ್ಬದ ಆಚರಣೆಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಹಬ್ಬದ ಬಂದೋಬಸ್ತ್‌ಗಾಗಿ ಹೊರಗಡೆಯಿಂದ ಬಂದ ಪೊಲೀಸ್ ಸಿಬ್ಬಂದಿಗೆ ಜೊತೆಗೆ ಸ್ಥಳೀಯ ಪೊಲೀಸ್ ಸಿಬ್ಬಂದಿಗಳನ್ನು ಸಹ ನಿಯೋಜಿಸಲಾಗುತ್ತಿದ್ದು, ಹಬ್ಬದ ಯಶಸ್ವಿಗೆ ಎಲ್ಲರೂ ಸಹಕರಿಸಬೇಕು.

ಯಾವುದೇ ಅಹಿತಕರ ಘಟನೆಗೆ ಅವಕಾಶ ಕೊಡಬಾರದು. ಹಬ್ಬದ ಆಚರಣೆ ಹಿನ್ನಲೆಯಲ್ಲಿ ನಗರಸಭೆಯಿಂದ ಅಗತ್ಯ ಸ್ವಚ್ಛಗೆ ಕ್ರಮ, ನೀರಿನ ವ್ಯವಸ್ಥೆ ಕೂಡಾ ಮಾಡಲಾಗುವುದೆಂದರು.

ಎ.ಎ.ದಂಡಿಯಾ, ಸಿಕಂದರಅಥಣಿಮಾತನಾಡಿ, ರಂಜಾನ ತಿಂಗಳು ಆರಂಬಗೊಂಡು ಇದೇ ಸಮಯದಲ್ಲಿ ಹೋಳಿ ಹಬ್ಬ ಬಂದಿರುವದರಿಂದ ಎರಡು ಹಬ್ಬಗಳನ್ನು ಸೌಹಾರ್ದಯುತವಾಗಿ ಸಂಭ್ರಮದಿಂದ ಆಚರಿಸಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಡಿವೈಎಸ್‌ಪಿ ಗಜಾನನ ಸುತಾರ, ತಹಶೀಲ್ದಾರ್ ವಾಸುದೇವ ಸ್ವಾಮಿ ಸೇರಿದಂತೆ ಹೋಳಿ ಸಮಿತಿಯ ಪ್ರತಿನಿಧಿಗಳಾದ ಕಳಕಪ್ಪ ಬಾದವಾಡಗಿ, ಅಶೋಕ ಲಿಂಬಾವಳಿ, ಸಂಜೀವ ವಾಡಕರ, ನಾಗರಾಜ ಹದ್ಲಿ, ಪ್ರವೀಣ ಖಾತೇದಾರ, ರಾಜು ನಾಯಕ, ರವಿ ಕುಮಟಗಿ ಉಪಸ್ಥಿತರಿದ್ದರು.



ಮಾ.3ರಿಂದ ಹೋಳಿ ಹಬ್ಬ ಪ್ರಾರಂಭ

ಮಾ.3ರಿಂದ ಹೋಳಿ ಹಬ್ಬ ಪ್ರಾರಂಭಗೊಳ್ಳುತ್ತಿದ್ದು, ಮಾ.4ರಂದು ಕಾಮುದಹನವಾಗುತ್ತದೆ. ಮಾರ್ಚ 5 ರಿಂದ 7 ವರೆಗೆ ಮೂರು ದಿನ ಬಣ್ಣದೋಕುಳಿ ಜರುಗಲಿದೆ. ಮಾ.5ರಂದು ಕಿಲ್ಲಾ, ನವನಗರ ಹಾಗೂ ವಿದ್ಯಾಗಿರಿ, ಮಾ.6ರಂದು ಹಳಪೇಟೆ, ಜೈನ ಪೇಟೆ ಹಾಗೂ ವೆಂಕಟಪೇಟೆ, ಮಾ.7ರಂದು ಹೊಸಪೇಟೆ ಓಣಿಯಲ್ಲಿ ಬಣ್ಣದೋಕುಳಿ ನಡೆಯಲಿದೆ. ಜೊತೆಗೆ ಸೋಗಿನ ಬಂಡಿ ಮೆರವಣಿಗೆ ಕೂಡಾ ಜರುಗಲಿದ್ದು, 4 ಕಿಲ್ಲಾ, 5 ಹಳಪೇಟೆ, 6 ಹೊಸಪೇಟೆ, 7 ಜೈನ ಪೇಟೆ, 8 ವೆಂಕಟಪೇಟೆ, ನವನಗರ ಹಾಗೂ ವಿದ್ಯಾಗಿರಿಯಲ್ಲಿ ನಡೆಯಲಿದೆ ಮಾ.6 ರಂದು ನಗರದ ಬಸವೇಶ್ವರ ವೃತ್ತದ ಬಳಿ ಇರುವ ಹೊಳೆ ಆಂಜನೇಯ
ದೇವಸ್ಥಾನದ ಆವರಣ ಹಾಗೂ ಮಾ.7 ರಂದು ಕಿಲ್ಲಾ ಅಂಬಾಭವಾನಿ ದೇವಸ್ಥಾನದ ಬಳಿ ರೇನ್‌ಡ್ಯಾನ್ಸ್ ನಡೆಯಲಿದೆ ಎಂದು ಹೋಳಿ ಸಮಿತಿಯ ಪ್ರತಿನಿಧಿ ಮಹಾಬಳೇಶ ಗುಡಗುಂಟಿ ತಿಳಿಸಿದರು.

ದೇಶಿ ತಳಿ ಬೆಳೆಸುವ ಕೆಲಸವಾಗಲಿ: ತಿಮ್ಮಾಪುರ

ಬಾಗಲಕೋಟೆ: ರೈತರು ತಲೆತಲಾಂತರದಿಂದ ಬೆಳೆಯಲಾಗುತ್ತಿರುವ ದೇಶಿ ತಳಿಗಳನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕೆಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನವನಗರದ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕೃಷಿ ಮತು ಕೃಷಿ ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನೂತನ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು ಒಂದು ಕಡೆ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಕೊಡಬೇಕು. ಇನ್ನೊಂದು ಕಡೆ ಅದಕ್ಕೆ ತಕ್ಕಂತೆ ಆಹಾರ ಉತ್ಪಾದನೆ ಮಾಬೇಕಿದೆ. ಇದರ ನಡುಗೆ ಆಹಾರಧಾನ್ಯದಲ್ಲಿ ರುಚಿಯನ್ನು ಕಳೆದುಕೊಳ್ಳಲಾಗುತ್ತಿದೆ ಎಂದರು.

ಅಂದಾಜು99.74 ಲಕ್ಷರೂ.ಗಳವೆಚ್ಚದಲ್ಲಿ ಸುಸಜ್ಜಿತವಾಗಿ ಕೃಷಿ ತರಬೇತಿ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ತರಬೇತಿ ಕೇಂದ್ರದಲ್ಲಿ ಊಟ ವಸತಿಯೊಂದಿಗೆ ತರಬೇತಿ ನೀಡಲಾಗುತ್ತದೆ. ಅಲ್ಲದೇ ಜಿಲ್ಲೆಯಲ್ಲಿ ರೈತರು ಬೆಳೆಯುವ ತರಕಾರಿ, ಹಣ್ಣು ಸೇರಿದಂತೆ ಇತರೆ ಬೆಳೆಗಳು ಹಾಳಾಗದಂತೆ ಶೇಖರಿಸಲು ನಬಾರ್ಡ ಯೋಜನೆಯಡಿ 9.51 ಕೋಟಿ ರೂ.ಗಳ ವೆಚ್ಚದಲ್ಲಿ 2500 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ಶೀತಲ ಘಟಕ ನಿರ್ಮಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಬಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಮಾತನಾಡಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಒಂದು ಜನಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಹೆಚ್ಚಿನ ಉತ್ಪಾದನೆ ಮಾಡುವದರ ಜೊತೆಗೆ ಗುಣಮಟ್ಟಕ್ಕೆ ಒತ್ತು ನೀಡಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಹಾಂತೇಶ ಹಟ್ಟಿ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ತೋವಿವಿಯ ಡೀನ್ ಡಾ.ತಮ್ಮಯ್ಯ, ಕೃಷಿ ಜಂಟಿ ನಿರ್ದೇಶಕ ರುದ್ರೇಶ ಟಿ.ಎಸ್, ಉಪ ಕೃಷಿ ನಿರ್ದೇಶಕರಾದ ಕೆ.ಎಸ್.ಅಗಸನಾಳ, ಮಂಜುಳಾ ಬಸವರಡ್ಡಿ, ಸಹಾಯಕ ಕೃಷಿ ನಿರ್ದೇಶಕ ಆರ್.ಬಿ.ಬಿದರಿ ಉಪಸ್ಥಿತರಿದ್ದರು.



ಮಕ್ಕಳಿಗೆ ಶಿಕ್ಷಣ ಕೊಡಿಸಿ: ಶಾಸಕ ಸವದಿ

ಮಹಾಲಿಂಗಪುರ: ಬಡವರ ಉದ್ದಾರವಾಗಬೇಕಾದರೆ ಅವರ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂಬ ಪಂ.ತಾರಾನಾಥ ಅವರ ಮಾತಿನಂತೆ ಎಕ್ಸಲೆಂಟ್ ಶಾಲೆಯ ಅಧ್ಯಕ್ಷ ಶಿವಲಿಂಗ ಪೋಳ ಅವರು ಅತಿ ಕಡಿಮೆ ಶುಲ್ಕದಲ್ಲಿ ಬಡ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದು ಮಾದರಿ ಕೆಲಸ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಸೈದಾಪುರ ಕ್ರಾಸ್ ಎಕ್ಸಲೆಂಟ್ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಎಕ್ಸಲೆಂಟ್ ಮೊಗ್ಗಿನ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಡತನದಲ್ಲಿ ಬೆಳೆದ ಪೋಳ ತಮ್ಮ ಜೀವನವನ್ನೇ ಇಂದು ಬಡ ಮಕ್ಕಳ ಶಿಕ್ಷಣಕ್ಕಾಗಿ ಮೀಸಲಿಟ್ಟಿದ್ದು ಉಳ್ಳವರು ಕೈಜೋಡಿಸಿ ಎಂದರು.

ಕೆಎಂಎಫ್ ಮಾಜಿ ಅಧ್ಯಕ್ಷ ರಂಗನಗೌಡ ಪಾಟೀಲ ಮಾತನಾಡಿ, ಬಡವರಿಗೆ ಶಿಕ್ಷಣವೇ ದಾರಿ, ಸಂಸ್ಕಾರ ಭರಿತ ಶಿಕ್ಷಣದಿಂದ ಅವರ ಉದ್ದಾರವಾಗುತ್ತದೆ ಅಂತಹ ಶಿಕ್ಷಣ ನೀಡುತ್ತಿರುವ ಎಕ್ಸಲೆಂಟ್ ಶಾಲೆಯ ಕಾರ್ಯ ಮಾದರಿ ಎಂದರು.

ಕಪರಟ್ಟಿಯ ಗುರುಮಹಾದೇವ ಆಶ್ರಮದ ಬಸವರಾಜ ಸ್ವಾಮೀಜಿ ಆಶೀರ್ವಚನ ನೀಡಿ, ಹಣ ಗಳಿಕೆಗಿಂತ ಮಕ್ಕಳ ಮನಸ್ಸು ಕಟ್ಟುವ ಪೋಳವರ ಕಾಯಕ ಶ್ರೇಷ್ಠ, ಸದಾ ಬಾಗಿದ ತಲೆ, ಮುಗಿದ ಕೈಯಿಂದಲೇ ಸರ್ವರ ಮನಗೆದ್ದು ಮಕ್ಕಳಿಗಾಗಿ ದುಡಿಯುತ್ತಿರುವ ಅವರ ನಡೆ ಅನುಕರಣನೀಯ ಎಂದರು.

ಅಧ್ಯಕ್ಷ ಶಿವಲಿಂಗ ಪೋಳ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಿವಲಿಂಗೇಶ್ವರ ಅರ್ಚಕ ಮಹಾಂತೇಶ ಸ್ವಾಮಿ, ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷ ಪ್ರತಾಪಗೌಡ ಪಾಟೀಲ, ಎವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಿವರಾಜ ಪಾಟೀಲ, ಪ್ರಗತಿ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷ ಬಸವರಾಜ ಮಾನೆ, ಜಿಪಂ ಮಾಜಿ ಸದಸ್ಯ ಭೀಮಶಿ ಮಗದುಮ್, ವಿನಯ ಹೆಗ್ಗಳಿಗಿ, ಶಿವಪ್ಪ ಬಾಯಪ್ಪಗೋಳ, ಬಸವಣ್ಣೆಪ್ಪ ಬ್ಯಾಳಿ, ಮಲಗೌಡ ಪಾಟೀಲ, ಪಿಯೂಷ್ ಓಸ್ವಾಲ, ಮಲ್ಲಪ್ಪ ಕೌಜಲಗಿ, ಯಮನಪ್ಪ ಉಪ್ಪಾರ, ರಾಜು ಟಂಕಸಾಲಿ, ರಾಜು ಬಿಸರಡ್ಡಿ, ಮಹಮ್ಮದ ಹುಲಿಕಟ್ಟಿ, ರವಿ ಕುರುಬರ, ಎಂ.ಎಂ.ನಾಯಿಕ, ಶಿವಲಿಂಗ ಶಿಂಧೆ, ಮಹಾಲಿಂಗ ಅರಬಾವಿ ಇತರರಿದ್ದರು.



ಎಸ್ಸೆಸ್ಸೆಲ್ಸಿ ಫಲಿತಾಂಶ ವೃದ್ಧಿಗೆ ಕ್ರಮ ವಹಿಸಿ: ಬಿಇಒ ಬಡದಾನಿ

ಕಲಾದಗಿ: ಪ್ರತಿ ಶಾಲೆಯ ಮುಖ್ಯ ಶಿಕ್ಷಕರು ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಯಲ್ಲಿ ಶಾಲೆಯ ಶೇಕಡ ನೂರರಷ್ಟು ಫಲಿತಾಂಶ ವೃದ್ಧಿಗೆ ಕ್ರಮ ವಹಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ ಹೇಳಿದರು.

ಗ್ರಾಮದ ಹಣ್ಣು ಬೆಳೆಗಾರರ ಪ್ರೌಢ ಶಾಲೆಯಲ್ಲಿ ನಡೆದ ಉತ್ತಮ ಪರೀಕ್ಷಾ ಫಲಿತಾಂಶಕ್ಕಾಗಿ ಮುಖ್ಯ ಶಿಕ್ಷಕರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಬರುವ ಎಲ್ಲ ಶಾಲೆಗಳು ಶೇಕಡ ನೂರರಷ್ಟು ಫಲಿತಾಂಶ ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಈ ವರ್ಷ ನಡೆದ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದ ಮಗುವನ್ನು ಗುರುತಿಸಿ ಹೆಚ್ಚಿನ ಗಮನ ಹರಿಸಿ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ವಿಶೇಷ ಕಾಳಜಿ ವಹಿಸಬೇಕು ಎಂದರು.



ವಿದ್ಯಾರ್ಥಿಗಳಿಗೆ ಭಯ ಹೋಗಲಾಡಿಸಲು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಲು ತಿಳಿಸುವುದು. ಶಿಕ್ಷಕರು ವಿಷಯವಾರು ಕಡಿಮೆ ಅಂಕ ಗಳಿಸಿರುವ ವಿದ್ಯಾರ್ಥಿಗಳ ಮನೆಗಳಿಗೆ ತೆರಳಿ ವಿಷಯದ ಪ್ರಶ್ನೆಗಳ ನೀಲನಕ್ಷೆ ಸಿದ್ಧಪಡಿಸಿ ಕೊಡುವುದು ಸೇರಿದಂತೆ ಮುಖ್ಯ ಪರೀಕ್ಷೆಗೆ ಉಳಿದಿರುವ ಕೆಲವೇ ದಿನಗಳ ಸಮಯವನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಯು ಉತ್ತಮ ಫಲಿತಾಂಶ ಪಡೆಯಲು ಸಮಯ ಸಾರಿಣಿಯಂತಹ ವಿಶೇಷ ಕ್ರಮಗಳನ್ನು ಅನುಸರಿಸಲು ಕ್ರಮವಹಿಸಿ ಎಂದು ಹೇಳಿದರು. ತಾಲೂಕು ಬಿಸಿ ಊಟ ಅಧಿಕಾರಿ ನಾಗರಾಜ ದೇಶಪಾಂಡೆ, ಪ್ರೌಢ ಶಾಲಾ ಮುಖ್ಯ ಶಿಕ್ಷಕರಾದ ಆರ್.ವಿ.ಜಾಧವ, ಜಿ.ಎ.ನಾಗರಾಳ, ಎಸ್.ವಿ.ಲಮಾಣಿ, ಎಂ.ಎಂ.ಮುದ್ದಾಪೂರ, ಬಂಡಿವಡ್ಡರ ಸೇರಿದಂತೆ ಇತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಮನವಿ



ಬಾದಾಮಿ: ಆಶಾ ಕಾರ್ಯಕರ್ತೆಯರು ತಮ್ಮ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ತಾಲೂಕಿನ ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಗೀತಾ ಈಳಗೇರ ಅವರ ನೇತೃತ್ವದಲ್ಲಿ ತಹಶೀಲ್ದಾರ್ ಕಚೇರಿಯ ಎದುರು ಪ್ರತಿಭಟನೆ ಮಾಡಿ ತಹಶೀಲ್ದಾರ್ ಎಸ್.ಎಫ್.ಬೊಮ್ಮನ್ನವರಗೆ ಮನವಿ ಸಲ್ಲಿಸಿದರು. ಆಶಾ ಕಾರ್ಯಕರ್ತರಿಗೆ ಮಾಸಿಕ 15 ಸಾವಿರ ರೂ ಗೌರವಧನ ನೀಡಬೇಕು. ಆಶಾ ಕಾರ್ಯಕರ್ತೆಯರು ಅಕಾಲಿಕ ಮರಣ ಹೊಂದಿದ್ದಲ್ಲಿ ಅವಲಂಭಿತರಿಗೆ ರೂ 5 ಲಕ್ಷ ಇಡಗಂಟು ನೀಡಬೇಕು. ಬಾಕಿ ಇರುವ ಪ್ರೋತ್ಸಾಹಧನ ಮತ್ತು ಗೌರವಧನಗಳನ್ನು ಕೂಡಲೇ ಪಾವತಿಸಬೇಕೆಂದು ಹಾಗೂ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನೇರವಾಗಿ ಬಾದಾಮಿ ತಹಶೀಲ್ದಾರ ಕಚೇರಿಗೆ ಬಂದು ಸಾಂಕೇತಿಕವಾಗಿ ಪ್ರತಿಭಟನೆ ಮಾಡಿ ಬಾದಾಮಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದರು. ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ರಾಶಿ, ಕಾವಡೆ ಶಾಲೆಗೆ ಅಭಿನಂದನಾ ಫಲಕ

ಗುಳೇದಗುಡ್ಡ: ಸ್ಥಳೀಯ ರಾಶಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯು 2024ರಲ್ಲಿ ನಡೆದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಪಡೆದ ಹಿನ್ನಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಕೊಡಮಾಡುವ ಅಭಿನಂದನಾ ಫಲಕವನ್ನು ಶುಕ್ರವಾರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ಶಾಲೆಯ ಮುಖ್ಯಗುರುಗಳಾದ ಆರ್.ಎಸ್.ಜಿರ್ಲಿ ಅವರಿಗೆ ನೀಡಿದರು.

ಬಾಗಲಕೋಟೆ ಡಿಡಿಪಿಐ ಮನ್ನಿಕೇರಿ ಅವರು ಉಪಸ್ಥಿತರಿದ್ದರು. ಶಾಲೆಗೆ ಪ್ರಶಸ್ತಿ ಪಡೆದ ಹಿನ್ನಲೆಯಲ್ಲಿ ಶಾಲಾ ಚೇರಮನ್ ಅಶೋಕ ಹೆಗಡೆ ಹರ್ಷ ವ್ಯಕ್ತಪಡಿಸಿದ್ದಾರೆ.



ಮಾ.11ರಿಂದ ಆರೋಗ್ಯ ಇಲಾಖೆ ನೌಕರರ ಮುಷ್ಕರ

ಜಮಖಂಡಿ: ಆರೋಗ್ಯ ಇಲಾಖೆ ಅಧಿಕಾರಿ ಹಾಗೂ ನೌಕರರ ನ್ಯಾಯಯುತ ಬೇಡಿಕೆಗಾಗಿ ಮಾ.11ರಿಂದ 15ರ ವರೆಗೆ ಕಪ್ಪು ಪಟ್ಟಿ ಧರಿಸಿ ತುರ್ತು ಸೇವೆ ನೀಡುವುದು. ನಮ್ಮ ಬೇಡಿಕೆ ಈಡೇರದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಕರ್ನಾಟಕ ರಾಜ್ಯ ಆರೋಗ್ಯ ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಸಂಘ ಆರೋಗ್ಯ ಇಲಾಖೆಯ ಎಲ್ಲ ಸಂಘಗಳ ಸಹಯೋಗದೊಂದಿಗೆ ನಗರದ ತಾಲೂಕಾಡಳಿತ ಭವನದ ಆವರಣದಲ್ಲಿ ಎಸಿ ಶ್ವೇತಾ ಬೀಡಿಕರ ಅವರಿಗೆ ಮನವಿ ಸಲ್ಲಿಸಿದರು.



ಮಾ.15ರ ಒಳಾಗಾಗಿ ನಮ್ಮ ಬೇಡಿಕೆಗಳ ಈಡೇರದಿದ್ದರೆ ಮಾ.16ರಿಂದ ಕರ್ತವ್ಯಕ್ಕೆ ಹಾಜರಗದೇ ಅನಿರ್ದಿಷ್ಟಾವಧಿ ಮುಷ್ಕರ ನಡಸಲಾಗುವುದು. ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಿಗೆ ಸಮರ್ಪಕವಾಗಿ ಔಷಧಿ ನೀಡದೇ ಇರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತದೆ. ಇದರಿಂದ ಸಾರ್ವಜನಿಕರ ಕೋಪಕ್ಕೆ ನಾವು ಈಡಾಗುತ್ತೇವೆ ಅದು ನಿಲ್ಲಬೇಕು. ನೇಮಕಾತಿಯ ಹಿಂದಿನ ಕಾನೂನು ಬದಲಾಗಿ ಪ್ರತಿ ಮೂರು ವರ್ಷಕ್ಕೊಮ್ಮೆ ಬದಲಾವಣೆಗೆ ತಿದ್ದುಪಡಿ ಮಾಡಬೇಕು. ಜೇಷ್ಠತಾ ಪಟ್ಟಿ ಪ್ರಕಟಿಸದೇ ಇರುವುದು. ಪ್ರತಿ ಐದು ವರ್ಷಕ್ಕೊಮ್ಮೆ ಮುಂಬಡತಿ ನೀಡದೇ ಇರುವದು. ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯ ತಜ್ಞ ವೈದ್ಯ, ಸಿಬ್ಬಂದಿಗಳಿಗೆ ಸಿಜಿಎಚ್ ಮತ್ತು ಎಐಸಿಟಿಇ ವೈದ್ಯಕೀಯ ಶಿಕ್ಷಣ ಮಾದರಿಯಲ್ಲಿವೇತನನೀಡುವದಕ್ಕಾಗಿ ಪ್ರತಿಭಟನೆಯನ್ನು ನಡೆಸಲಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಡಾ.ಗೈಬುಸಾಬ್ ಗಲಗಲಿ, ಡಾ.ಕೃಷ್ಣಾ ಬಣ್ಣದ, ಡಾ.ವಾಸಪ್ಪಾ ಮುದಿಗೌಡರ, ಡಾ.ಮುಕುಂದ ಕಾಂಬಳೆ, ನರೇಥಂರ್ ನಿಡೋಶಿ, ಅನಿಲಕುಮಾರ ಸುರಗೊಂಡ, ಉಮೇಶ ಜೋಶಿ, ಸಂತೋಷ ನಾಯಿಕ, ರವಿ ಕಾಂಬಳೆ, ಜಾಕೀರ ನದಾಫ, ಜೆಡಿ ಧನ್ನೂರ, ಲಲಿತಾ ಗಲಗಲಿ, ಜಗದೀಶ ಅಲಕನೂರ, ಸಂತೋಷ ಮಾಲಗತ್ತಿಮಠ, ವಿಶ್ವನಾಥ ಹರಿಜನ, ಭಾಗಣ್ಣಾ ನಾಗಠಾಣ, ಗಂಗಾಧರ ಚಾಬೂಕಸವಾರ ಸೇರಿದಂತೆ ಇನ್ನಿತರರು ಇದ್ದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಕಲಾದಗಿ: ಪ್ರತಿ ವರ್ಷ ಫೆ.28ರಂದು ಸರ ಸಿ.ವಿ.ರಾಮನ್ ರಾಮನ್ ಪರಿಣಾಮ ಅವಿಷ್ಕಾರದ ಸ್ಮರಣಾರ್ಥವಾಗಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಗುತ್ತದೆ ಎಂದು ಶಿಕ್ಷಕಿ ಎಸ್.ಜಿ.ದಾನಶೆಟ್ಟಿ ಹೇಳಿದರು. ಗ್ರಾಮದ ಸರ್ಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ತ ರಂಗೋಲಿಯಲ್ಲಿ ವಿಜ್ಞಾನದ ಜ್ಞಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ ಸಿ.ವಿ.ರಾಮನ್ ಅವರು ಏಷ್ಯಾದಲ್ಲಿಯೇ ವಿಜ್ಞಾನ ವಿಭಾಗದಿಂದ ನೊಬೆಲ್ ಪ್ರಶಸ್ತಿ ಪಡೆದ ಮೊದಲ ವಿಜ್ಞಾನಿ ಎಂಬ ಖ್ಯಾತಿ ಹೊಂದಿದ್ದಾರೆ. ಜಗತ್ತಿನಲ್ಲಿ ಮುಂದಿನ 20ವರ್ಷಗಳಲ್ಲಿ ಇಡೀ ಜಗತ್ತನ್ನು ವಿಜ್ಞಾನವೇ ಆಳಲಿದೆ. ಹಾಗಾಗಿ ಈಗಿನಿಂದಲೇ ವಿದ್ಯಾರ್ಥಿಗಳು ವಿಜ್ಞಾನದ ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಹೇಳಿದರು. ಈ ರಂಗೋಲಿ ಸ್ಪರ್ಧೆಗೆ ನಿರ್ಣಾಯಕರಾಗಿ ಶಾಲೆಯ ಮುಖ್ಯಶಿಕ್ಷಕಿ ಎಮ.ಎ.ಕುಟುಕನಕೇರಿ, ಸಿ.ಎಲ್.ಹೂಗಾರ, ಎಸ್.ಬಿ.ಬಾಗೇವಾಡಿ ಇದ್ದರು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಮಧು ಗಾಳಿ, ದ್ವಿತೀಯ ಸ್ಥಾನ ತೇಜಸ್ವಿನಿ ವಾಳದ, ಪವಿತ್ರಾ ದೇವಮಾನೆ, ತೃತೀಯ ಸ್ಥಾನ ಅಮೃತಾ ಕುರಿ ಪಡೆದುಕೊಂಡರು. ಎಂ.ಬಿ.ಅಂಬಲಿ, ಜೆ.ಬಿ.ಈಟಿ, ಜಯಶ್ರೀ ಬೋಜಗಾರ ಹಾಗೂ ಪಾಲಕರು ಇದ್ದರು.



ನಿತ್ಯ ಜೀವನದ ಅವಿಭಾಜ್ಯ ಅಂಗವೇ ವಿಜ್ಞಾನ

ಬೀಳಗಿ : ನಮ್ಮ ನಿತ್ಯ ಜೀವನವೇ ಒಂದು ವಿಜ್ಞಾನ. ನಮ್ಮ ಸುತ್ತಲಿರುವುದೆಲ್ಲವೂ ವಿಜ್ಞಾನದಿಂದಾಗಿದೆ. ಅದನ್ನು ಅರಿತರೆ ಜೀವನವು ಉತ್ತಮಗೊಳ್ಳಲಿದೆ ಎಂದು ಎಪಿಎಫ್ ತಾಲೂಕು ಸಂಯೋಜಕ ಮುಜಾಮಿಲ್ ಮಹಲ್ದಾರ್ ತಿಳಿಸಿದರು.

ತಾಲೂಕಿನ ಕೊಪ್ಪ (ಎಸ್.ಕೆ.) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ ವಿಜ್ಞಾನ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಎಪಿಎಫ್ ಸಂಪನ್ಮೂಲ ವ್ಯಕ್ತಿ ಮಹಮ್ಮದ್ ಹರ್ಷದ ಮಾತನಾಡಿ, ವಿಜ್ಞಾನ ವಸ್ತು ಪ್ರದರ್ಶನದ ಪರಿಕಲ್ಪನೆಗಳು ಕಲಿಕೆಯನ್ನು ಗಟ್ಟಿಗೊಳಿಸುವುದರ ಜೊತೆಗೆ ಹೆಚ್ಚಿನ ಓದಿಗೆ ಆಧಾರವಾಗುತ್ತದೆ. ಇಂದು 45ಕ್ಕೂ ಅಧಿಕ ವಿದ್ಯಾರ್ಥಿಗಳು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ, ಆಗಮಿಸಿದ ವೀಕ್ಷಕರಿಗೆ ಪ್ರದರ್ಶಿಸಿದ ಪರಿಕಲ್ಪನೆಗಳ ವಿವರಣೆಯನ್ನು ಅತ್ಯುತ್ತಮವಾಗಿ ನೀಡಿರುವುದು ತುಂಬಾ ಖುಷಿ ನೀಡಿದೆ. ಇದರೊಂದಿಗೆ ವಿದ್ಯಾರ್ಥಿಗಳು ಮಿನಿ ವಿಜ್ಞಾನಿಗಳಂತೆ ಗೋಚರಿಸುತ್ತಿದ್ದೀರಿ ಎಂದು ತಿಳಿಸಿದರು.



ವಿಜ್ಞಾನ ಶಿಕ್ಷಕ ಚಂದ್ರು ವೈ.ಎ, ಶಿಕ್ಷಣ ಪ್ರೇಮಿ ರಾಮಣ್ಣ ಕುಂಬಾರ, ಮುಖ್ಯ ಶಿಕ್ಷಕ ಉಮೇಶ ತಳ್ಳಿಕೇರಿ ಮಾತನಾಡಿದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿರುವ ವಿಜ್ಞಾನದ ರಂಗೋಲಿ ಸ್ಪರ್ಧೆ, ವಿಜ್ಞಾನದ ಪ್ರಬಂಧ ಸ್ಪರ್ಧೆ, ವಿಜ್ಞಾನ ಕ್ವಿಜ್, ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಇಂಡಿಯಾ ಸುಧಾರ್ ಎಜುಕೇಶನ್ ಟ್ರಸ್ಟ್ ಬೆಂಗಳೂರು ರವರು ವಿಜೇತ ವಿದ್ಯಾರ್ಥಿಗಳಿಗೆ ಮೆಡಲ್, ಪುಸ್ತಕ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಪ್ರೋತ್ಸಾಹಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ರಾಜೇಂದ್ರ ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತಾಂಜಾನಿಯಾ, ಬಸವರಾಜ ಬೆಳವಲ, ನಿಂಗರಾಜ ಬೂದಿಹಾಳ, ಶಿಕ್ಷಕಿ ಸುವರ್ಣ ಭೂಸರೆಡ್ಡಿ ಇದ್ದರು. ಜ್ಯೋತಿ ನರಗುಂದ ನಿರೂಪಿಸಿದರು. ಸವಿತಾ ಮಾಳೆದ ಸ್ವಾಗತಿಸಿದರು. ಸಕ್ಕೂಬಾಯಿ ಬೆಳ್ಳುಬ್ಬಿ ವಂದಿಸಿದರು.

ಕಿರುಸುದ್ದಿ

ಇಂದು ದತ್ತಿ ಸ್ಮರಣೆ

ಬಸವನಬಾಗೇವಾಡಿ: ತಾಲೂಕು ಶರಣ ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ಮಾ.1ರಂದು ಸಂಜೆ 6 ಗಂಟೆಗೆ ವಿಜಯಪುರ ರಸ್ತೆಯ ನಂದಿ ಬಡಾವಣೆಯಲ್ಲಿನ ಮಾರುತೇಶ್ವರ ದೇವಸ್ಥಾನ ಆವರಣದಲ್ಲಿ ಲಿಂ.ನಿಂಗವ್ವ ಈರಪ್ಪ ಮನಗೂಳಿ, ದಾನಮ್ಮ ಕಾಸಪ್ಪ ಕಲ್ಯಾಣಶೆಟ್ಟಿ ಹಾಗೂ ವಿರುಪಾಕ್ಷಪ್ಪ ಶರಣಪ್ಪ ಆಲಗೂರ ಇವರ ಸ್ಮರಣಾರ್ಥ ದತ್ತಿ ಸ್ಮರಣೆ ಕಾರ್ಯಕ್ರಮ ನಡೆಯಲಿದೆ. ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ತಾಲೂಕು ಶಸಾಪ ತಾಲೂಕಾಧ್ಯಕ್ಷ ವೀರಣ್ಣ ಮರ್ತುರ ಅಧ್ಯಕ್ಷತೆ ವಹಿಸುವರು. ಶರಣ ಸಂಸ್ಕೃತಿ–ಅರ್ಥಹೀನ ಸಂಪ್ರದಾಯಗಳು ಕುರಿತು ಶಿಕ್ಷಕ ಸಾಹಿತಿ ಡಾ.ಮಾಧವ ಗುಡಿ ಹಾಗೂ ಅಕ್ಕಮಹಾದೇವಿಯ ವಚನಗಳ ಸೌಂದರ್ಯ ವಿಷಯದ ಕುರಿತು ಶಿಕ್ಷಕಿ ಗಿರಿಜಾ ಪಾಟೀಲ ಅನುಭಾವ ಹಚ್ಚಿಕೊಳ್ಳುವರು, ಸಾಹಿತಿ ಎಂ.ಎ. ಗುಳೇದಗುಡ್ಡ, ಗಣ್ಯರಾದ ಗಂಗಾಧರ ಕುಂಟೋಜಿ, ಕದಳಿ ವೇದಿಕೆ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ, ಯುವ ಘಟಕಾಧ್ಯಕ್ಷ ಶರಣು ಬಸ್ತಾಳ, ಪ್ರ.ಕಾರ್ಯದರ್ಶಿ ಆರ್.ಜಿ ಅಳ್ಳಗಿ ಉಪಸ್ಥಿತರಿರುವರು ಎಂದು ಸಹ ಕಾರ್ಯದರ್ಶಿ ಎಸ್.ಆಯ್.ಮನಗೂಳಿ ತಿಳಿಸಿದ್ದಾರೆ.

ಸಚಿವರ ಪ್ರವಾಸ ಇಂದು

ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಮಾ.1ರಂದು ಬೆಳಗ್ಗೆ 11 ಗಂಟೆಗೆ ಜಲಸಂಪನ್ಮೂಲ ಇಲಾಖೆ, ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ ಆಶ್ರಯದಲ್ಲಿ ಆಲಮಟ್ಟಿಯಲ್ಲಿ ಜಲ ಮನೋರಂಜನಾ ಉದ್ಯಾನವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅದೇ ದಿನ ಮಧ್ಯಾಹ್ನ 2 ಗಂಟೆಗೆ ಆಲಮಟ್ಟಿಯಿಂದ ಧಾರವಾಡ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಿಯುಸಿ ಪರೀಕ್ಷೆ: 1356 ವಿದ್ಯಾರ್ಥಿಗಳು ಗೈರು

ವಿಜಯಪುರ: ಜಿಲ್ಲೆಯಲ್ಲಿ ಶನಿವಾರ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ಕನ್ನಡ ಮತ್ತು ಅರೆಬಿಕ್ ಭಾಷಾ ಪರೀಕ್ಷೆಗೆ 25,834 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, 24,478 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, 1,356 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಡಾ.ಸಿ.ಕೆ.ಹೊಸಮನಿ ತಿಳಿಸಿದ್ದಾರೆ.

ಅಭಿಷೇಕ ನಂದಪ್ಪನವರಗೆ ಪಿಎಚ್‌ಡಿ ಪ್ರದಾನ

ಮುದ್ದೇಬಿಹಾಳ: ಗುಲ್ಬರ್ಗ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿ ಅಭಿಷೇಕ ನಂದೆಪ್ಪನವರ ಅವರಿಗೆ 43ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿಶ್ವವಿದ್ಯಾಲಯ



ವಿವಿಧ ದ್ರವಗಳಲ್ಲಿನ ಹರಿವು ಹಾಗೂ ಶಾಖ ವರ್ಗಾವಣೆಯ ಸಂಕೀರ್ಣ ಗಣಿತದ ಸಮಸ್ಯೆಗಳಿಗೆ ಸಂಖ್ಯಾತ್ಮಕ ಮತ್ತು ವಿಶ್ಲೇಷಣಾತ್ಮಕ ಪರಿಹಾರಗಳ ಒಂದು ಅಧ್ಯಯನ (ಎ ಸ್ಟಡಿ ಆಫ್ ನ್ಯೂಮೆರಿಕಲ್ ಅಂಡ್ ಅನಾಲಿಟಿಕಲ್ ಸೊಲ್ಯೂಷನ್ ಆಫ್ ಬಾಂಡರಿ ವ್ಯಾಲ್ಯೂ ಪ್ರಾಬ್ಲಮ್ ಅರೈಸಿಂಗ್ ಇನ್ ಫ್ಲೋ, ಹಿಟ್ ಅಂಡ್ ಮಾಸ್ ಟ್ರಾನ್ಸಫರ್ ಇನ್ ವೇರಿಯಸ್ ಫ್ಲುಯಿಡ್) ಎಂಬ ವಿಷಯದಲ್ಲಿ ಮಂಡಿಸಿದ ಪ್ರೌಢ ಪ್ರಬಂಧವನ್ನು ಮನ್ನಿಸಿ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದೆ. ಗಣಿತ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕಿಯಾದ ಡಾ.ಸಿ.ಸುಲೋಚನಾ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ್ದಾರೆ. ಅಭಿಷೇಕ ಅವರಿಗೆ ಪ್ರಾಧ್ಯಾಪಕರು, ಕುಟುಂಬಸ್ಥರು ಹಾಗೂ ಮಿತ್ರರು ಅಭಿನಂದನೆ ಸಲ್ಲಿಸಿದ್ದಾರೆ.

ರುಕ್ಮಾಂಗದ ಪಂಡಿತರ ಆರಾಧಾನಾ ಮಹೋತ್ಸವ

ವಿಜಯಪುರ: ನಗರ ಹೊರ ವಲಯ ಉಕ್ಕಲಿ ರಸ್ತೆಯ ಬಳಿಯ ಪವಿತ್ರ ಭವರೋಗ ವೈದ್ಯ ರುಕ್ಮಾಂಗದ ಪಂಡಿತರ 316ನೇ ಆರಾಧಾನಾ ಮಹೋತ್ಸವ ಭಕ್ತಿಭಾವದಿಂದ ನಡೆಯುತ್ತಿದ್ದು, ಈ ನಿಮಿತ್ತ ಮಹಾರುದ್ರಾಭಿಷೇಕ, ಲಘುರುದ್ರ ಸ್ವಾಹಾಕಾರ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸದ್ಗುರುಗಳ ಪಾಲಕಿ ಸೇವೆ ಭಕ್ತಿಭಾವದಿಂದ



ನಡೆದಿದ್ದು, ಹಲವಾರು ಭಕ್ತಾದಿಗಳು ಈ ಪಾಲಕಿ ಸೇವೆಯಲ್ಲಿ ಪಾಲ್ಗೊಂಡಿದ್ದರು. ಶನಿವಾರ ಸಹ ಬೆಳಗ್ಗೆ ಸುಪ್ರಭಾತ, ದೇವತಾರ್ಚನೆ, ಮಹಾಭಿಷೇಕ ಹಾಗೂ ಲಲಿತಾ ಸಹಸ್ರನಾಮ ಪಠಣ ನಡೆಯಿತು. ಮಧ್ಯಾಹ್ನ ಮಹಾಪ್ರಸಾದ ವಿತರಣೆ ನಡೆಯಿತು. ಭಾನುವಾರ ಸಹ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು, ಸುಪ್ರಭಾತ, ದೇವತಾರ್ಚನೆ, ಮಹಾಭಿಷೇಕ ಹಾಗೂ ಚಂದ್ರಿಕಾ ಭಜನಾ ಮಂಡಳಿಯಿಂದ ಭಜನೆಗಳ ಗಾಯನ ನಡೆಯಲಿದೆ. ಮಧ್ಯಾಹ್ನ ನೈವೇದ್ಯ, ಮಂತ್ರಪುಷ್ಪ ವಿತರಣೆ, ಸಂಜೆ ಭಕ್ತಿಗೀತೆಗಳ ಗಾಯನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಝುಳಕಿ: ಸಮೀಪದ ಭತಗುಣಕಿ ಗ್ರಾಮದ ಸಿದ್ದೇಶ್ವರ ಪೂರ್ವ ಮತ್ತು ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಶಂಕರಲಿಂಗ ಪೆಟ್ರೋಲ್ ಬಂಕ್ ಮಾಲೀಕ ಅಂಬಣ್ಣ ಗದ್ಯಾಳ ಮಾತನಾಡಿದರು. ಸಿದ್ಧೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎಂ.ಕೋರೆ, ಮುಖ್ಯಗುರು ಎಸ್.ಎಸ್.ದಶವಂತ, ಬಸವರಾಜ ಹಳಕಿ, ಶಾಹಾಜಿ ಮಿಸಾಳೆ, ಸಿದ್ದಾರಾಮ ನಿಚ್ಚಳ, ಅಂಬಣ್ಣ ಪವಾರ, ಮಲ್ಲಿಕಪ್ಪ ಕುಂಬಾರ ಇದ್ದರು.

ಮಕ್ಕಳಿಗೆ ಸಂಸ್ಕಾರ ಮುಖ್ಯ: ಅಂಬಣ್ಣ

ಝುಳಕಿ: ಮಕ್ಕಳಿಗೆ ಶಿಕ್ಷಣ ಜೊತೆ ಸಂಸ್ಕಾರ ಮುಖ್ಯವಾದ್ದು ಎಂದು ಶಂಕರಲಿಂಗ ಪೆಟ್ರೋಲ್ ಬಂಕ್ ಮಾಲಿಕ ಅಂಬಣ್ಣ ಗದ್ಯಾಳ ಹೇಳಿದರು. ಸಮೀಪದ ಭತಗುಣಕಿ ಗ್ರಾಮದ ಸಿದ್ದೇಶ್ವರ ಪೂರ್ವ ಮತ್ತು ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೋಡುಗೆ ಸಮಾರಂಭದಲ್ಲಿ 2024–25ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 615ಅಂಕಗಳನ್ನು ಪಡೆದು ಇಂಡಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಸಾಕ್ಷಿ ಬೆನ್ನಕನಳ್ಳಿ ಹತ್ತುಸಾವಿರ ರೂಗಳ ನಗದು ಬಹುಮಾನ ರೂಪದಲ್ಲಿ ವಿತರಿಸಿ ಸನ್ಮಾನಿಸಿ ಮಾತನಾಡಿದರು. ಒಳ್ಳೆಯ ಶಿಕ್ಷಣ ಜೊತೆ ಸಂಸ್ಕಾರವು ಕಲಿಯಿರಿ. ನೀವು ಮತ್ತೆ ಶಾಲೆಯ ಗ್ರಾಮದ ಹೆಸರು ತವರುವಲ್ಲಿ ಪ್ರಯತ್ನ ಮಾಡಿ 625ಕ್ಕೆ 625 ಅಂಕ ಪಡೆದರೆ ಶಿಕ್ಷಣ ಸಚಿವರಿಂದ ಸನ್ಮಾನಿಸುತ್ತೇನೆ. ಪಾಲಕರು ಮಕ್ಕಳಿಗೆ ಕೈಯಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಿ, ಓದು ಬರಹ ಕಡೆ ಹೆಚ್ಚು ಕಾಲ ಗಮನಹರಸಿ. ನಿಮ್ಮ ಆಸ್ತಿನೆ ನಿಮ್ಮ ಮಕ್ಕಳು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಒಳ್ಳೆಯ ಸಂಸ್ಕಾರ ನೀಡಿ ಎಂದರು. ಸಿದ್ದೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎಂ. ಕೋರೆ, ಮುಖ್ಯಗುರು ಎಸ್.ಎಸ್.ದಶವಂತ, ಬಸವರಾಜ ಹಳಕಿ, ಶಾಹಾಜಿ ಮಿಸಾಳೆ, ಸಿದ್ದಾರಾಮ ನಿಚ್ಚಳ, ಅಂಬಣ್ಣ ಪವಾರ, ಮಲ್ಲಿಕಪ್ಪ ಕುಂಬಾರ, ರುಕ್ಮುದ್ದೀನ್ ತದ್ದೇವಾಡಿ, ಶಿವಪುತ್ರ ಚೇವರಗಿ, ಬಸೀರ ತಾಷವಾಲೆ, ರಾಜಶೇಖರ ದುದಗಿ, ಗಂಗಾಧರ ಫಾಟಗೆ, ರಣಜೀತ ಬಾಬರ, ಬಸವರಾಜ ಎಸ್. ಪಾಟೀಲ ಉಪಸ್ಥಿತರಿದ್ದರು.



ಸಿಂದಗಿ: ನಗರದ ರಾಗರಂಜನಿ ಸಂಗೀತ ಅಕಾಡೆಮಿ ಸಂಚಾಲಕ ಡಾ.ಪ್ರಕಾಶ ಮೂಡಲಗಿ, ಡಾ.ಪ್ರಶಾಂತ ಬಮ್ಮಣ್ಣಿ, ಪೂಜಾ ಹಿರೇಮಠ ಅವರು ಲಿಂಗೈಕ್ಯ ಶಾಂತವೀರ ಪಟ್ಟಾಧ್ಯಕ್ಷರ ಕುರಿತಾದ ಸಿಂದಗಿಯ ಸಿರಿ ಭಕ್ತಿಗೀತೆ ಸುಪ್ರಭಾತ ಧ್ವನಿ ಸುರುಳಿಯನ್ನು ಊರಿನ ಹಿರಿಯ ಮಠದ ಶಿವಾನಂದ ಶಿವಾಚಾರ್ಯರು ಹಾಗೂ ಸಂಶಯ ವಿರಕ್ತ ಮಠದ ಚನ್ನಬಸವ ದೇವರು ಬಿಡುಗಡೆಗೊಳಿಸಿದರು. ಸಾಹಿತ್ಯ, ರಾಗ ಸಂಯೋಜನೆ ಮಾಡಿದ ಗಾಯಕ ಎಂ.ಬಿ.ಅಲ್ಲಿ, ಪೂಜಾ ಹಿರೇಮಠ, ಗಂಗಾಧರ್.ಡಿ ಅವರಿಗೆ ಪೂಜ್ಯರು ಸನ್ಮಾನಿಸಿ ಗೌರವಿಸಿದರು. ವೇದಮೂರ್ತಿ ಶೇಖರಯ್ಯ ಶಾಸ್ತ್ರಿಗಳು, ಗದಗಯ್ಯ ನಂದಿಮಠ, ಸಿದ್ದಲಿಂಗ ಕಿಣಗಿ ಇದ್ದರು.

ದ್ವಿತೀಯ ಪಿಯು ಪರೀಕ್ಷೆ ಆರಂಭ | ಕಟ್ಟುನಿಟ್ಟಾಗಿ ನಿರ್ವಹಿಸಲು ಸೂಚನೆ

ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ

ವಿಜಯಪುರ: ಜಿಲ್ಲೆಯ 64 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ–1ರ ಪರೀಕ್ಷೆ ಆರಂಭಗೊಂಡಿದ್ದು, ಶನಿವಾರ ಕನ್ನಡ ಮತ್ತು ಅರೆಬಿಕ್ ಪರೀಕ್ಷೆ ನಡೆದಿದ್ದು, ಜಿಲ್ಲಾಧಿಕಾರಿ ಡಾ.ಆನಂದ ಕೆ. ವಿವಿಧ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದರು.

ನಗರದ ವಿಬಿ ದರಬಾರ ಕಾಲೇಜ್, ಎಸ್.ಎಸ್.ಪದವಿಪೂರ್ವ ಕಾಲೇಜ್ ಹಾಗೂ ಖೇಡ ಕಾಲೇಜಿನ ಪರೀಕ್ಷಾ ಕೇಂದ್ರಗಳಿಗೆ ಡಿಸಿ ಡಾ.ಆನಂದ ಕೆ. ಭೇಟಿ ನೀಡಿ, ಸುಸೂತ್ರ ಹಾಗೂ ಸುಗಮ ಪರೀಕ್ಷೆ ನಡೆಸಲು ಕೈಗೊಳ್ಳಲಾದ ವ್ಯವಸ್ಥೆ ಕುರಿತಾಗಿ ಪರಿಶೀಲನೆ ನಡೆಸಿ, ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.

ವಿದ್ಯಾರ್ಥಿಗಳು ಯಾವುದೇ ಗೊಂದಲಕ್ಕೊಳಗಾಗದೇ ಅತ್ಯಂತ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯುವ ನಿಟ್ಟಿನಲ್ಲಿ ಅಗತ್ಯ ಗಾಳಿ, ಬೆಳಕು ಕುಡಿಯುವ ನೀರು ಒದಗಿಸಬೇಕು. ಪರೀಕ್ಷೆಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ನಿರ್ವಹಿಸಬೇಕು. ಪರೀಕ್ಷೆಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಮಹತ್ವದ ಮೈಲಿಗಲ್ಲಾಗಿರುವುದರಿಂದ ಪರೀಕ್ಷಾ ಸಂದರ್ಭದಲ್ಲಿ ಯಾವುದೇ ಸಮಸ್ಯೆಗಳು ಬಾರದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು. ಯಾವುದೇ ದೂರಿಗೆ ಆಸ್ಪದ ನೀಡದೇ ಪರೀಕ್ಷಾ ನಿಯಮಗಳನ್ನುನಸರಿಸಿ, ಪರೀಕ್ಷೆಗೆ ನಿಯೋಜಿಸಿದ ಅಧಿಕಾರಿ, ಸಿಬ್ಬಂದಿ ತಮಗೆ ವಹಿಸಿದ ಪರೀಕ್ಷಾ ಕಾರ್ಯಗಳನ್ನು ಅತ್ಯಂತ ಜವಾಬ್ದಾರಿಯಿಂದ ಹಾಗೂ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಹಾಜರಾತಿ, ಪರೀಕ್ಷಾ ಕೇಂದ್ರಗಳ ಕೊಠಡಿಗಳ ಮಾಹಿತಿ,



> ಜಿಲ್ಲೆಯ ಎಲ್ಲ ಕೇಂದ್ರಗಳಿಗೆ ಭದ್ರತೆ ಒದಗಿಸಿ, ವಿದ್ಯಾರ್ಥಿಗಳು ಭಯ ಮುಕ್ತ ಮತ್ತು ಪ್ರಶಾಂತ ವಾತಾವರಣದಲ್ಲಿ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯುವಂತೆ ವ್ಯವಸ್ಥೆ ಮಾಡಬೇಕು.
> ■ ಡಾ.ಆನಂದ ಕೆ. ಜಿಲ್ಲಾಧಿಕಾರಿ

ವಿದ್ಯಾರ್ಥಿಗಳಿಗೆ ಕಲ್ಪಿಸಿರುವ ಆಸನ ವ್ಯವಸ್ಥೆ, ಪರೀಕ್ಷಾ ಕೇಂದ್ರದಲ್ಲಿ ಮೂಲಭೂತ ಸೌಲಭ್ಯ, ಪರೀಕ್ಷಾ ಕೇಂದ್ರದಲ್ಲಿ ಅಳವಡಿಸಿರುವ ಸಿಸಿಟಿವಿ ಪರಿಶೀಲಿಸಿದರು. ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಭದ್ರತಾ ಹಾಗೂ ವೈದ್ಯಕೀಯ ವ್ಯವಸ್ಥೆ ಕಲ್ಪಿಸಿರುವ ಕುರಿತು ಮಾಹಿತಿ ಪಡೆದುಕೊಂಡರು.

ಇದೇ ವೇಳೆ ಪ್ರಥಮ ಚಿಕಿತ್ಸಾ ವ್ಯವಸ್ಥೆಯ ಕಿಟ್‌ಗಳನ್ನು ಪರಿಶೀಲಿಸಿದರು. ಪರೀಕ್ಷಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳಿಗೆ ಕಲ್ಪಿಸಿರುವ ಆಸನ ವ್ಯವಸ್ಥೆ, ಪರೀಕ್ಷಾ ಕೊಠಡಿ ಮೇಲ್ವಿಚಾರಕರ ನೇಮಕ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ, ಗಾಳಿ ಹಾಗೂ ಪ್ರಥಮ ಚಿಕಿತ್ಸಾ ವ್ಯವಸ್ಥೆಗಳು ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು.

ಇನ್ನುಳಿದಂತೆ ಎಲ್ಲ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆ ಅಭಿರಕ್ಷಕರು, ಸ್ಥಾನಿಕ ಜಾಗೃತ ದಳದವರು ಹಾಗೂ ಮೊಬೈಲ್ ಸ್ವಾಧೀನಾಧಿಕಾರಿಗಳು ನಿಯಮಾನುಸಾರ ಕರ್ತವ್ಯ ನಿರ್ವಹಿಸುತ್ತಿರುವ ಕುರಿತು ಪರಿಶೀಲಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಅನ್ಯ ಹಾಗೂ ಬಾಹ್ಯ ವ್ಯಕ್ತಿಗಳು ಇಲ್ಲದೇ ಇರುವುದನ್ನೂ ಸಹ ಪರಿಶೀಲಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಸಮಸ್ಯೆಗಳು ಉಂಟಾಗದಂತೆ ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ಶಿಸ್ತಿನಿಂದ ನಡೆಸುವುದು, ವಿದ್ಯಾರ್ಥಿಗಳು ಕುಳಿತುಕೊಳ್ಳುವ ಆಸನಗಳ ಮಧ್ಯದಲ್ಲಿ ಹೆಚ್ಚಿನ ಅಂತರ ಕಾಯ್ದುಕೊಳ್ಳಬೇಕು ಸೂಚಿಸಿದರು.

ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಕೆ. ಹೊಸಮನಿ ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿ ಇದ್ದರು.

ನೀರಿನ ಮೂಲಗಳ ಬಗ್ಗೆ ನಿಗಾವಹಿಸಿ

ಇಂಡಿ: ಇಂಡಿ ನಗರ ಸೇರಿದಂತೆ ಇತರ ಗ್ರಾಮಗಳಿಗೆ ಸರಬರಾಜು ಆಗುವ ಕುಡಿಯುವ ನೀರಿನ ಮೂಲಗಳ ಬಗ್ಗೆ ಹೆಚ್ಚಿನ ನಿಗಾವಹಿಸಿ. ತಾಲೂಕಿನ 32 ಗ್ರಾಮಗಳಿಗೆ ಕೆರೆಗಳ ಮೂಲಕವೇ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಜನ ಜಾನುವಾರುಗಳಿಗೆ ಯಾವುದೇ ರೀತಿಯ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ಹಂಜಗಿ ಹಾಗೂ ಅರ್ಜನಾಳ ಗ್ರಾಮಗಳ ಕೆರೆಗಳಿಗೆ ಖುದ್ದು ಭೇಟಿ ನೀಡಿ ನೀರಿನ ಮಟ್ಟ ಪರಿಶೀಲನೆ ಮಾಡಿ ನಂತರ ಮಾತನಾಡಿದರು. ಕಳೆದ ಬಾರಿ ಕೆಲವು ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿತ್ತು. ಆದರೆ ಈ ಬಾರಿ ಯಾವುದೇ ಕಾರಣಕ್ಕೂ ಟ್ಯಾಂಕರ್ ಮೂಲಕ ಕುಡಿಯುವ ನೀರು ಒದಗಿಸುವಂತಾಗಬಾರದು. ಆ ನಿಟ್ಟಿನಲ್ಲಿ ಅಧಿಕಾರಿಗಳು ನೀರನ್ನು ಮಿತವಾಗಿ ಬಳಕೆ ಮಾಡಿದಲ್ಲಿ ಯಾವುದೇ ತೊಂದರೆಯಾಗದು. ಆದ್ದರಿಂದ ತಾಲೂಕು ಆಡಳಿತ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು ಎಂದರು.

ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ಜಿಪಂ ಗ್ರಾಮೀಣ ನೀರು ಮತ್ತು ನೈರ್ಮಲ್ಯ ವಿಭಾಗದ ಇಇ ಕೋಟ್ಟೆಣವರ, ಯುಕೆಪಿ ಎಸ್‌ಸಿ ಮನೋಜಕುಮಾರ ಗಡಬಳ್ಳಿ, ತಾಪಂ ಇಒ ಡಾ.ಭೀಮಾಶಂಕರ ಕನ್ನೂರ, ಜಿಪಂ ಪಿಆರ್‌ಇ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶಿವಾಜಿ ಬನಸೋಡೆ, ಜಿಪಂ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆರ್.ಎಸ್.ಬಂಡಿ, ಎಂಬಿ ಎಇಇ ಸಂದೀಪ ಕೂಡ್ಲೂರ, ಪೌರಾಯುಕ್ತ ಶಿವಾನಂದ ಪೂಜಾರಿ, ಯುಕೆಪಿ ಇಇ ಶ್ರೀಮಂತ ಅಂಗಡಿ, ತಾಪಂ ಯೋಜನಾಧಿಕಾರಿ ನಂದೀಪ ರಾಠೋಡ, ಮುತ್ತಪ್ಪ ಪೋತೆ, ಹುಸೇನಬಾಷಾ ತಾಂಬೆ, ಅಬ್ದುಲ ಚೌದರಿ, ಅಬ್ಬಾಸ ಜಮಖಂಡಿ, ಸಿದ್ದು ಚವ್ಹಾಣ, ಮಹಿಬೂಬ ಕುಣಬಿ, ಹಸನಸಾಬ ತಾಂಬೆ ಅನೇಕ ಗ್ರಾಮಸ್ಥರು ಸೇರಿದಂತೆ ಅಧಿಕಾರಿಗಳು ಸಿಬ್ಬಂದಿ ಉಪಸ್ಥಿತರಿದ್ದರು.



ಐದನೇ ದಿನಕ್ಕೆ ಕಾಲಿಟ್ಟ ಧರಣಿ ಸತ್ಯಾಗ್ರಹ

ತಾಳಿಕೋಟೆ: ತಾಲೂಕಿನ ಮೇಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲ್ಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ದಿಷ್ಟಅವಧಿ ಧರಣಿ ಸತ್ಯಾಗ್ರಹವು ಶನಿವಾರ ನಾಲ್ಕನೇ ದಿನದ ಸತ್ಯಾಗ್ರಹವು ತಾಳಿಕೋಠೇ ರಾಜವಾಡೆಯ ಎಲ್ಲಾ ಸಮಾಜದ ವತಿಯಿಂದ ಈ ಹೋರಾಟಕ್ಕೆ ಬೆಂಬಲಿಸಿ ಸತ್ಯಾಗ್ರಹ ನಡೆಸಿದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ ಮಾತನಾಡಿ ಈಗಾಗಲೇ ಪ್ರಜಾಸೌಧಕ್ಕೆ ನಿಗದಿ ಪಡಿಸಿರುವ ಸ್ಥಳ ತಾಳಿಕೋಟೆ ಪಟ್ಟಣದಿಂದ ನಾಲ್ಕೈದು ಕೀ ಮೀ ದೂರವಿದ್ದು ಕಾರಣ ವೃದ್ಧರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ರೈತಾಪಿ ಜನರಿಗೆ ತುಂಬಾ ಅನಾನುಕೂಲವಾಗಿರುವುದರಿಂದ ಪಟ್ಟಣದಲ್ಲಿಯೇ ಸಾಕಷ್ಟು ಸರ್ಕಾರಿ ಜಮೀನುಗಳು ಇದ್ದು ಅವುಗಳಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕು ಹಾಗೂ ಈಗ ನಿಗದಿ ಪಡಿಸಿರುವ ಸ್ಥಳ ಕೂಡಲೇ ರದ್ದು ಪಡಿಸಬೇಕು ಎಂದು ಆಗ್ರಹಿಸಿದರು. ನಮಗೆ ನ್ಯಾಯ ಸಿಗುವವರೆಗೂ ಈ ಹೋರಾಟ ನಿಲ್ಲಿಸುವುದಿಲ್ಲ ಎಂದರು. ಹಿರಿಯರಾದ ಸಿದ್ದನಗೌಡ ಸಂಗನಗೌಡ ಪಾಟೀಲ, ಬಸನಗೌಡ ಗೌಡಪ್ಪಗೌಡ ಪಾಟೀಲ ಬಸವರಾಜ ಆದಪ್ಪ ಕಶೆಟ್ಟಿ, ಅಂಬಾಜಿ ಜಾದವ, ಶರಣಗೌಡ ಗೊಟಗುಣಕಿ ಲಂಕೇಶ್ ಪಾಟೀಲ, ಶಿವಾಜಿ ಶೆವಳಕರ, ರಾಘು ಮಾನೆ, ಬಮ್ಮು ಸುರಪುರ, ಕಸ್ತೂರಿಚಂದ ಪ್ರಥಮಶೇಟ್ಟಿ, ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಆರ್.ಎಸ್.ಪಾಟೀಲ (ಕೂಚಬಾಳ)ಮುತ್ತಪ್ಪ ಚಮಲಾಪುರ, ಕಾಶಿನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ಮಸೂಮಸಾಬ್ ಕೆಂಭಾವಿ. ಮೆಹೆಬೂಬ ಚೋರಗಸ್ತಿ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಚೇರಿ, ಪ್ರಕಾಶ ಹಚೇರಿ, ಮುದಕಪ್ಪ ಬಡಿಗೇರ, ಮಹೇಶ ಚಲವಾದಿ, ಮುಸ್ತಫ ಚೌದರಿ, ಅಮಿತ್ ಮನಗೂಳಿ, ರವಿ ಕಟ್ಟಿಮನಿ, ಮಂಜುನಾಥ ಶೆಟ್ಟಿ, ತಿಪ್ಪಣ್ಣ ಸಜ್ಜನ, ಸುರೇಶ ಹಚೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೆನಾಳ, ಸದ್ದಾಮ್ ಹುಸೇನ್ ಬೀಳಗಿ, ರಾಜು ಹಚೇರಿ, ಮಾನಸಿಂಗ್ ಕೊಕಟನೂರ, ನಿಂಗನಗೌಡ ದೇಸಾಯಿ ಕೆಸರ್ ಸಿಂಗ್ ಹಚೇರಿ, ಪ್ರಸಾದ ತಿವಾರಿ, ನಿತಿನ್ ವಿಜಾಪುರ, ಸಿರಸಕುಮಾರ್ ಹಚೇರಿ, ಚಂದ್ರು ಯಮನಪ್ಪ ಗುರುಗುಂಡಗಿ ರಾಜು ದೇಗಿನಾಳ, ಹನುಮಾನ್ ಸಿಂಗ್ ದೇವಿ, ಮಲ್ಲಿಕಾರ್ಜುನ ಮದರಿ, ಚನ್ನಪ್ಪ ದೇಸಾಯಿ ಇದ್ದರು.



ಬಂಥನಾಳ ಸಂಗನಬಸವ ಶಿವಯೋಗಿಗಳ ಕೊಡುಗೆ ಅಪಾರ: ಶ್ರೀಗಳು

ಬಸವನಬಾಗೇವಾಡಿ: ಪ್ರವಚನದ ಮೂಲಕ ಧಾರ್ಮಿಕ, ಸಾಮಾಜಿಕವಾಗಿ ಶೈಕ್ಷಣಿಕ ಕ್ರಾಂತಿ ಮಾಡಿ ಶಿಕ್ಷಣ ಮತ್ತು ದಾಸೋಹಕ್ಕೆ ಬಂಥನಾಳ ಸಂಗನಬಸವ ಶಿವಯೋಗಿಗಳ ಕೊಡುಗೆ ಅಪಾರವಾಗಿದೆ ಎಂದು ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಯರನಾಳ ವಿರಕ್ತಮಠದಲ್ಲಿ ಗುರುವಾರ ಸಂಜೆ ನಡೆದ ಪಂಪಾಪತಿ ಶಿವಯೋಗಿಗಳ ಜಾತ್ರಾ ಮಹೋತ್ಸವ ನಿಮಿತ್ತ ಹಾಗೂ 125ನೇ ಲಿಂ.ಸಂಗನಬಸವ ಶಿವಯೋಗಿಗಳ ಜಯಂತೋತ್ಸವದ ಅಂಗವಾಗಿ ಬಂಥನಾಳ ಸಂಗನಬಸವ ಶಿವಯೋಗಿಗಳ ಮಹಾಪುರಾಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಯರನಾಳ ಶ್ರೀಮಠವು ಭವ್ಯ ಪರಂಪರೆ ಇತಿಹಾಸ ಹೊಂದಿದ್ದು ಶೈಕ್ಷಣಿಕವಾಗಿ ಧಾರ್ಮಿಕವಾಗಿ ಇಡೀ ವಿಜಯಪುರ ಜಿಲ್ಲೆಗೆ ಕೊಡುಗೆ ಕೊಟ್ಟಂತಹ ಕೀರ್ತಿ ಮಠಕ್ಕಿದೆ. ಮನಗೂಳಿ ಹಿರೇಮಠ ಮತ್ತು ಯರನಾಳ ಮಠ ಅವಿನಾಭಾವ ಸಹೋದರ ಸಂಬಂಧ ಹೊಂದಿದೆ ಎಂದರು.

ಪುರಾಣಿಕಬಸವನಬಾಗೇವಾಡಿಹಿರೇಮಠದಶಿವಪ್ರಕಾಶಶಿವಾಚಾರ್ಯರು ಮಾತನಾಡಿ ಬಂಥನಾಳ ಸಂಗನಬಸವ ಶಿವಯೋಗಿಗಳು ಶಿಕ್ಷಣ ಮತ್ತು ದಾಸೋಹಕ್ಕೆ ಮಹತ್ವ ನೀಡಿದ್ದಾರೆ.ಶೈಕ್ಷಣಿಕ ಕ್ರಾಂತಿ ಮಾಡಿ ಬಡಮಕ್ಕಳ ಬಾಳಿಗೆ ಬೆಳಕಾಗಿದ್ದಾರೆ. ಬಂಥನಾಳ ಶ್ರೀಗಳ ಪುರಾಣ ಹೇಳುವುದು ನನ್ನ ಭಾಗ್ಯ ಇಡೀ ಜಿಲ್ಲೆಯಲ್ಲಿಯೇ ಶಿಸ್ತು ಬದ್ಧವಾಗಿ ಮಠ ಕಟ್ಟಿದ ಕೀರ್ತಿ ಯರನಾಳ ಶ್ರೀಗಳಿಗೆ ಸಲ್ಲುತ್ತದೆ ಎಂದು ಹೇಳಿದರು.



ಯರನಾಳ ವಿರಕ್ತಮಠದ ಗುರು ಸಂಗನಬಸವ ಸ್ವಾಮೀಜಿ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರವಚನದ ಮೂಲಕ ಭಕ್ತರು ಕೊಟ್ಟಿರುವ ಕಾಣಿಕೆಯನ್ನು ಶಿಕ್ಷಣದ ದಾಸೋಹಕ್ಕೆ ನೀಡಿದವರು ಬಂಥನಾಳದ ಸಂಗನಬಸವ ಶ್ರೀಗಳು. ಅಜ್ಞಾನ ಅಂಧಕಾರದಲ್ಲಿದ್ದ ಹಳ್ಳಿಗಳನ್ನು ಜ್ಞಾನಜ್ಯೋತಿಯ ಮೂಲಕ ಸುಗ್ರಾಮಗಳನ್ನಾಗಿ ಪರಿವರ್ತಿಸಿದ್ದಾರೆ ಎಂದು ಹೇಳಿದರು.

ಬಂಥನಾಳದ ಸಂಗನಬಸವ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಪಿಕೆಪಿಎಸ್ ಅಧ್ಯಕ್ಷ ಸಂಗನಬಸು ತಳೇವಾಡ, ವಿಶ್ವ ಬಂಧು ಬಸವ ಸಮಿತಿ ಅಧ್ಯಕ್ಷ ಡಾ.ಅಮರೇಶ ಮಿಣಜಗಿ, ಮಾಜಿ ಗ್ರಾಪಂ ಅಧ್ಯಕ್ಷ ಬಸವರಾಜ ಚಾಲಗೇರಿ, ಬಸವರಾಜ ಬ್ಯಾಕೋಡ, ಬಸವರಾಜ ಮರನೂರ, ಪ್ರಕಾಶ ಕೋಲಕಾರ, ನಾಗನಗೌಡ ಪಾಟೀಲ, ಶರಣು ಹಳೇಮನಿ ಚಂದ್ರು ನರಗುಂದ ಚಾಂದಸಾ ನದಾಫ ಇದ್ದರು.

ಸತ್ಯ ಸಾಧಿಸುವುದೇ ವೈಜ್ಞಾನಿಕ ಮನೋಭಾವ

ಮುದ್ದೇಬಿಹಾಳ: ಶಿಕ್ಷಕರಿಂದ ಕಲಿಯುವುದು ತಿಳುವಳಿಕೆಯಾದರೆ, ಕುತೂಹಲ ಮತ್ತು ಪ್ರಶ್ನೆ ಮಾಡುವುದರ ಮೂಲಕ ತಿಳಿಯುವುದೇ ಜ್ಞಾನವಾಗುತ್ತದೆ. ಪ್ರಶ್ನಿಸಿ, ಪ್ರಯೋಗ ಮಾಡದೆ ಅಳವಡಿಸಿಕೊಳ್ಳುವ ಯಾವುದೇ ವಿಷಯವು ವಿಜ್ಞಾನ ಆಗುವುದಿಲ್ಲ ಎಂದು ಸರ್ಕಾರಿ ಪದವಿ ಕಾಲೇಜಿನ ಸಮಾಜಶಾಸ್ತ್ರ ಪ್ರಾಧ್ಯಾಪಕ ಹಂಪಣ್ಣ ಹೇಳಿದರು.

ಕಾಲೇಜಿನ ಭೌತಶಾಸ್ತ್ರ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಜ್ಞಾನ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, ಅಪಶಕುನ, ಮೂಢನಂಬಿಕೆಗಳ ಹೆಸರಿನಲ್ಲಿ ಅವೈಜ್ಞಾನಿಕ ವಿಚಾರಗಳನ್ನು 12ನೇ ಶತಮಾನದ ಶರಣರು ವಿರೋಧಿಸಿದ್ದರು. ಅದು ಕೂಡ ವೈಜ್ಞಾನಿಕತೆ ಎನಿಸುತ್ತದೆ. ಪ್ರತಿಯೊಂದನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಲ್ಲಿ ಅದು ವೈಜ್ಞಾನಿಕತೆ. ತಿಳುವಳಿಕೆ ಸತ್ಯವನ್ನು ಯಾವಾಗಲೂ ಪೂರ್ಣಗೊಳಿಸುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು ಎಂದು ಹೇಳಿದರು.

ಹಾನಗಲ್ ಸರಕಾರಿ ಪದವಿ ಕಾಲೇಜಿನ ಬೌತಶಾಸ್ತ್ರ ಪ್ರಾಧ್ಯಾಪಕ ಪ್ರೊ. ಮನು ಜಿ ಎ.ಮಾತನಾಡಿ, ಭಾರತ ಹಳ್ಳಿಗಳ ದೇಶವಾಗಿದ್ದು ಬಡತನ, ಕೃಷಿ



ಹಿನ್ನೆಲೆಯಲ್ಲಿ ಬಂದ ವಿದ್ಯಾರ್ಥಿಗಳು ವಿಜ್ಞಾನಿಗಳಾಗಬೇಕು ಎಂದರೆ ವೈಜ್ಞಾನಿಕ ಮನೋಭಾವದಿಂದ ಮಾತ್ರ ಸಧ್ಯ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ದೇಶದ ನಿರ್ಮಾತರು ಆಗಬಹುದು ಎಂದರು.

ಭೌತಶಾಸ್ತ್ರ ಪ್ರಾಧ್ಯಾಪಕಿ ಜ್ಯೋತಿ ಕೆ., ಪ್ರೊ.ಪ್ರಕಾಶ ಕಾರ್ಯಕ್ರಮ ಆಯೋಜಿಸಿದ್ದರು. ಪ್ರಾಂಶುಪಾಲ ಡಾ.ಎಚ್.ಎ.ಕಟಗೂರು ಅಧ್ಯಕ್ಷತೆ ವಹಿಸಿದ್ದರು. ಎಲ್.ಎಚ್.ಮಮದಾಪುರ, ಮುತ್ತಣ್ಣ ಗೌಡರ, ವನಿತಾ ದೊಡಮನಿ, ಶೋಭಾ ಸುಭಾಸ್ ಸೇರಿದಂತೆ ಹಲವು ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಗೌರಿ ಬಡಿಗೇರ, ಶ್ವೇತಾ ನಿರೂಪಿಸಿದರು.

ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿಗೆ ಮನವಿ

ಚಡಚಣ: ಜಯ ಕರ್ನಾಟಕ ಸಂಘಟನೆಯ ವತಿಯಿಂದ ರಾಜ್ಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರಿ ಉದ್ಯೋಗ ನೇಮಕಾತಿಗಾಗಿ ಒತ್ತಾಯಿಸಿ ಚಡಚಣ ತಹಶೀಲದಾರ ಸಂಜಯ ಇಂಗಳೆ ಅವರಿಗೆ ಮನವಿ ಸಲ್ಲಿಸಿದರು.

ಜಯ ಕರ್ನಾಟಕ ಸಂಘಟನೆಯ ಚಡಚಣ ತಾಲ್ಲೂಕಾಧ್ಯಕ್ಷ ಭೀಮನಗೌಡ ಪಾಟೀಲ (ಧುಮಕನಾಳ) ಮಾತನಾಡಿ, ರಾಜ್ಯದಲ್ಲಿ 2.73ಲಕ್ಷ ಹುದ್ದೆಗಳು ಖಾಲಿ ಇದ್ದು, ಲಕ್ಷಾಂತರ ನಿರುದ್ಯೋಗಿಗಳು ಉದ್ಯೋಗ ನೇಮಕಾತಿಗೆ ಎದುರು ನೋಡುತ್ತಿದ್ದಾರೆ, ಆದರೆ ಸರ್ಕಾರ ಈ ವಿ?ಯದಲ್ಲಿ ಯಾವ ಗಂಭೀರ ಹೆಜ್ಜೆಯನ್ನೂ ಇರಿಸುತ್ತಿಲ್ಲ, ರಾಜ್ಯದಲ್ಲಿ ಉದ್ಯೋಗ ಭರ್ತಿಗಾಗಿ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ 69,800, ಆರೋಗ್ಯ ಇಲಾಖೆಯಲ್ಲಿ 34,908, ಗೃಹ ಇಲಾಖೆಯಲ್ಲಿ 23,580 ಹೀಗೆ ಅನೇಕ ಇಲಾಖೆಯಲ್ಲಿ ಉದ್ಯೋಗ ಖಾಲಿ ಇವೆ. ಅತ್ತ ಖಾಲಿ ಹುದ್ದೆಗಳಿಂದಾಗಿ ಆಡಳಿತ ಯಂತ್ರವೂ ಸೂಸೂತ್ರವಾಗಿ ನಡೆಯುತ್ತಿಲ್ಲ ಎಂದರು.

ಸರ್ಕಾರ ವ್ಯರ್ಥವಾಗಿ ಕಾಲಹರಣ ಮಾಡದೇ ಆದ್ಯತೆ ಮೇರೆಗೆ ಉದ್ಯೋಗ ಭರ್ತಿಗೆ ಆದ್ಯತೆ ನೀಡುವ ಭರ್ತಿ ಮಾಡದೆ ಯುವಕರ ಮತ್ತು ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುತ್ತಿದೆ. ಕೇವಲ ಪಂಚ ಗ್ಯಾರಂಟಿ



ಯೋಜನೆಯಗಳನ್ನು ಮುಂದಿಟ್ಟುಕೊಂಡು ಕಾಲ ಹರಣ ಮಾಡಿ ಲಕ್ಷಾಂತರ ಯುವಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕೆಲಸ ಸಿದ್ದರಾಮಯ್ಯ ಸರ್ಕಾರಕ್ಕೆ ಆಗುತ್ತಿಲ್ಲ ಮುಂದಿನ ದಿನಮಾನಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಮಾಡದೆ ಇದ್ದಲ್ಲಿ ಜಯ ಕರ್ನಾಟಕ ಸಂಘಟನೆಯ ವತಿಯಿಂದ ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಅವರು ಸರ್ಕಾರಕ್ಕೆ ಎಚ್ಚರಿಸಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ನಾಗೇಶ ಗಾಯಕೊಡ, ಸದಸ್ಯರಾದ ಗಜಾನಂದ ಕುಂಬಾರ ಗಂಗಾಧರ ಬಳಗಾನೂರ, ಯಲಗೊಂಡ ಪೂಜಾರಿ ಬಾಬಾಸಾಹೆಬ ಎಳಗಿ, ಹಣಮಂತ ಮಣಂಕಲಗಿ, ರಾಜುಗೌಡ ಪಾಟೀಲ, ವಿಠ್ಠಲ ರಾಠೋಡ, ಸುಭಾಸ ಚಂದನಶಿವೆ ಸೇರಿದಂತೆ ಮತ್ತಿತರರು ಇದ್ದರು.

ಮಹಾತ್ಮ ತತ್ವಾದರ್ಶ ಅಳವಡಿಸಿಕೊಳ್ಳಿ

ವಿಜಯಪುರ: ಮಕ್ಕಳು ಉತ್ತಮ ನಾಗರಿಕರಾಗಿ ಬೆಳೆಯಬೇಕಾದರೆ ಮಹಾನ್ ಆದರ್ಶ ವ್ಯಕ್ತಿಗಳ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಕ, ಸಾಹಿತಿ ಆರ್.ಎಸ್. ಪಟ್ಟಣಶೆಟ್ಟಿ ಹೇಳಿದರು.

ತಾಲೂಕಿನ ಕತಕನಹಳ್ಳಿಯ ಮಾತೋಶ್ರೀ ಶಂಕ್ರೆಮ್ಮತಾಯಿ ಪ್ರಾಥಮಿಕ ಶಾಲೆಯ 7ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಅವರು ಮಾತನಾಡಿದರು. ಸಿದ್ಧೇಶ್ವರ ಶ್ರೀಗಳ ಸೇರಿದಂತೆ ಭಗತ್‌ಸಿಂಗ್, ರಾಜಗುರು, ಸುಖದೇವ ಅವರಂತಹ ಮಹಾನ್ ನಾಯಕರ ತತ್ವಾದರ್ಶ ಅಳವಡಿಸಿಕೊಳ್ಳಬೇಕು ಎಂದರು.

ಸಮೂಹ ಸಂಪನ್ಮೂಲ ವ್ಯಕ್ತಿ ಕೆ.ಎಸ್.ಚಿತ್ತರಗಿ ಮಾತನಾಡಿ, ಇವತ್ತಿನ ಜೀವನದಲ್ಲಿ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳಾದ ಸೈನಿಕ, ಕಿತ್ತೂರ, ನವೋದಯ ಪ್ರವೇಶ ಪರೀಕ್ಷೆಗಳ ತರಬೇತಿ ಪಡೆದು ಅಂತಹ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆಯುವುದರ ಮೂಲಕ ಶುಲ್ಕರಹಿತ ಶಾಲೆಗೆ ಪ್ರವೇಶ ಪಡೆಯಲು ಪ್ರಯತ್ನ ಮಾಡಬೇಕು ಎಂದರು. ಗ್ರಾಮದ ಹಿರಿಯರಾದ ಅಪ್ಪಾಸಾಹೇಬ ಕೊಪ್ಯಾಳ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಗುರು ಅರವಿಂದ ಪವಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಳಿಕ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶಿಕ್ಷಕಿ ಇಂದುಮತಿ ಪತ್ತಾರ, ಕವಿತಾ ಬೆಳ್ಳುಂಡಗಿ ಇತರರು ಇದ್ದರು.



ಸ್ಮಾರ್ಟ್ ತರಗತಿಗಳು ಮಕ್ಕಳ ಭವಿಷ್ಯದ ವೃದ್ಧಿಗೆ ಸಹಕಾರಿ

ಸಿಂದಗಿ: ಡಿಜಿಟಲ್ ಸ್ಮಾರ್ಟ್ ತರಗತಿಗಳು ಮಕ್ಕಳ ಭವಿಷ್ಯದ ವೃದ್ಧಿಗೆ ತುಂಬಾ ಸಹಕಾರಿ. ವಿದ್ಯಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳುವ ಮೂಲಕ ಇಂದಿನ ತಾಂತ್ರಿಕ ಯುಗಕ್ಕೆ ಹೊಂದಿಕೊಂಡು ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳಬೇಕು ಎಂದು ಅಂಜುಮನ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಪಾಟೀಲ, ಗಣಿಹಾರ ಹೇಳಿದರು.

ಪಟ್ಟಣದ ಅಂಜುಮನ್ ಐಟಿಐ ಕಾಲೇಜಿನಲ್ಲಿ ನಡೆದ ಡಿಜಿಟಲ್ ಸ್ಮಾರ್ಟ್ ಕ್ಲಾಸ್ ಹಾಗೂ ಸೇವಿಂಗ್ ಟೆಕ್ನಾಲಜಿ ಕೊಠಡಿಗಳ ಉದ್ಘಾಟಿಸಿ ಮಾತನಾಡಿದ ಅವರು, ಅಂಜುಮನ್ ಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಒಂದಾದ ಐಟಿಐ ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ಸಿಗುವಂತಹ ವಾತಾವರಣ ನಿರ್ಮಾಣಮಾಡವ ನಿಟ್ಟಿನಲ್ಲಿ ಸಂಸ್ಥೆ ಶ್ರಮವಹಿಸಿದೆ. ಈ ಭಾಗದ ವಿದ್ಯಾರ್ಥಿಗಳಿಗೂ



ಪ್ರಸ್ತುತ ಡಿಜಿಟಲ್ ಶಿಕ್ಷಣ ತುಂಬಾ ಅವಶ್ಯವಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಝುಡ್.ಐ.ಅಂಗಡಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಡಿಜಿಟಲ್ ಸ್ಮಾರ್ಟ್ ಕ್ಲಾಸ್‌ಗಳು ಮಕ್ಕಳ ಭವಿಷ್ಯಕ್ಕೆ ತುಂಬಾ ಸಹಕಾರಿಯಾಗಿವೆ. ಇದನ್ನು ಸಂಸ್ಥೆಯ ಆಡಳಿತ ಮಂಡಳಿಯವರು ವಿದ್ಯಾರ್ಥಿಗಳಿಗೆ ಡಿಜಿಟಲ್ ಸ್ಮಾರ್ಟ್ ಕ್ಲಾಸ್, ಕಂಪ್ಯೂಟರ್ ಲ್ಯಾಬ್ ಹಾಗೂ ಸೇವಿಂಗ್ ಟೆಕ್ನೋಲಜಿ ಗಳಿಗೆ 'ಸ್ಮಾರ್ಟ್ ಸ್ಪರ್ಶ ಒದಗಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರ ಸದುಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು. ಆಡಳಿತ ಮಂಡಳಿಯ ನಿರ್ದೇಶಕರ ಎ.ಐ.ಮುಲ್ಲಾ, ಮಹಿಬೂಬ್ ಹಸರಗುಂಡಗಿ, ಝುಡ.ಐ.ಅಂಗಡಿ, ನಗರಸಭೆ ನಾಮನಿರ್ದೇಶಿತ ಸದಸ್ಯ ರಹೀಂ ದುದನಿ. ತರಬೇತಿ ಅಧಿಕಾರಿ ಎಚ್.ಎ.ಪಠಾಣ, ಕಿರಿಯ ತರಬೇತಿ ಅಧಿಕಾರಿ ಎಸ್.ಆರ್.ಕುಲಕರ್ಣಿ, ಎಸ್.ಜಿ.ಕುಂಬಾರ, ಐ.ಎಚ್. ಬಂಥನಾಳ, ವಾಯ್.ಆರ್.ಪಂಚಾಳ, ಎಸ್.ಎಸ್.ಜನಾದ್ರಿ, ಆರ್.ಬಿ.ಶೆಟ್ಟಿ, ಮಧುಮತಿ ಕೋಮಾರ, ಎಸ್.ಎನ್.ಅವಟಿ, ಸಂತೋಷಕುಮಾರ, ಎಂ.ವಿ.ಪಟ್ಟಣಶೆಟ್ಟಿ, ಕಚೇರಿ ಅಧೀಕ್ಷಕ ಅಲ್ತಾಫ್ ಅಂಗಡಿ, ಧರ್ಮೇಂದ್ರ ನಾರಾಯಣಕರ್, ಎಸ್.ಆರ್. ರಾಠೋಡ, ಪ್ರಮುಖರು ಇದ್ದರು.

ಕಿರುಸುದ್ದಿ

ಕೂಸಿನ ಮನೆಗೆ ಉಮಾ ಮಹಾದೇವನ್ ಭೇಟಿ

ಯಲಬುರ್ಗಾ: ತಾಲೂಕಿನ ಬೇವೂರ ಗ್ರಾಮ ಪಂಚಾಯತಿಯ ಕೂಸಿನ ಮನೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಅವರು ಭೇಟಿ ನೀಡಿ ಪರಿಶೀಲಿಸಿದರು. ಕೂಸಿನ ಮನೆಯಲ್ಲಿನ ಮಕ್ಕಳ ಆಟ, ಗೋಡೆ ಬರಹ, ಆಟಿಕೆ ಸಾಮಗ್ರಿ, ಅಡುಗೆ ಮನೆ ವೀಕ್ಷಿಸಿ ಕೂಸಿನ ಮನೆಯನ್ನು ಚನ್ನಾಗಿ ಅಭಿವೃದ್ಧಿ ಪಡಿಸಿದ್ದೀರಿ ಎಂದು ಪಿಡಿಓಗೆ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಪಂ ಸಿಇಒ ವರ್ಣಿತ್ ನೇಗಿ ಸರ್, ಕಾರ್ಯನಿರ್ವಾಹಕ ಅಧಿಕಾರಿ ನೀಲಗಂಗಾ ಬಬಲಾದ, ಪಿಡಿಒರಾದ ಅಬ್ದುಲ್ ಗಫಾರ, ಗ್ರಾಪಂ ಸಿಬ್ಬಂದಿ, ಕೂಸಿನ ಮನೆ ಕೇರ್ ಟೇಕರ್, ಅಂಗನವಾಡಿ ಮೇಲ್ವಿಚಾರಕರು, ಅಧಿಕಾರಿಗಳು, ತಾಲೂಕು ಐಇಸಿ ಸಂಯೋಜಕರಿದ್ದರು.

ಗಣಿತಶಾಸ್ತ್ರ ವಿಭಾಗದಿಂದ ವಿಶೇಷ ಉಪನ್ಯಾಸ



ಕೊಪ್ಪಳ: ಗಂಗಾವತಿ ನಗರದ ಶ್ರೀಕೊಲ್ಲಿ ನಾಗೇಶ್ವರರಾವ್ ಗಂಗಯ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶದ ಸಹಯೋಗದಡಿ ಗಣಿತಶಾಸ್ತ್ರ ವಿಭಾಗದಿಂದ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಸಹಪ್ರಾಧ್ಯಾಪಕ ಡಾ.ಬಿ.ಪರ್ವತಲು ವಿಶೇಷ ಉಪನ್ಯಾಸ ನೀಡಿ, ಗಣಿತಶಾಸ್ತ್ರದ ಸ್ಪರ್ಧಾತ್ಮಕ ಸವಾಲುಗಳು ಹಾಗೂ ಇರುವ ಉದ್ಯೋಗಾವಕಾಶಗಳನ್ನು ಸವಿಸ್ತಾರವಾಗಿ ವಿವರಿಸಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಶಿವರಾಜ ಗುರಿಕಾರ ವಹಿಸಿದ್ದರು. ಆಂತರಿಕ ಗುಣಮಟ್ಟ ಭರವಸಾ ಕೋಶದ ಸಂಯೋಜಕ ಮಂಜುನಾಥ ಕೆ.ಎಚ್, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಅಣ್ಣೋಜಿರಡ್ಡಿ ಉಪಸ್ಥಿತರಿದ್ದರು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ.ಕೆ, ಪ್ರಾಸ್ತಾವಿಕ ಮಾತನಾಡಿದರು. ಅತಿಥಿ ಉಪನ್ಯಾಸಕರಾದ ನಿರೋಷ ಎನ್. ಸ್ವಾಗತಿಸಿದರು. ಶರಣಬಸವ ಅತಿಥಿ ಪರಿಚಯ ಮಾಡಿದರು. ನೇತ್ರಾ ಸಜ್ಜನ್ ವಂದಿಸಿದರು. ಕಾಲೇಜಿನ ವಿದ್ಯಾರ್ಥಿಗಳು ಸಮಾರಂಭದಲ್ಲಿ ಹಾಜರಿದ್ದು, ಕಾರ್ಯಕ್ರಮದ ಪ್ರಯೋಜನ ಪಡೆದರು. ಉಪನ್ಯಾಸದ ನಂತರ ಡಾ.ಬಿ.ಪರ್ವತಲು ಅವರನ್ನು ಸತ್ಕರಿಸಿ, ಗೌರವಿಸಲಾಯಿತು.

ಪಕ್ಷ ಬೇದ ಮರೆತು ಅಭಿವೃದ್ಧಿಗೆ ಆದ್ಯತೆ ನೀಡಿ

ಕುಕನೂರು: ಪಟ್ಟಣದಲ್ಲಿ ಪಕ್ಷ ಬೇದ ಮರೆತು ಅಭಿವೃದ್ಧಿ ಮಾಡುತ್ತೇನೆ ಎಂದು ಹೇಳುವವರು ಅದನ್ನೇ ಮುಂದುವರೆಸಿರುವವರು ಸೂಚನಿಯ ಸಂಗತಿ ಎಂದು 15ನೇ ವಾರ್ಡಿನ ಸದಸ್ಯ ಫಿರದೋಶ್ ಬೇಗಂ ಖಾಜಿ ಹೇಳಿದರು.



ಪಟ್ಟಣದಲ್ಲಿ ಪತ್ರಿಕೆಯೊಂದಿಗೆ ಮಾಯಾನಾಡಿದ ಅವರು, 15ನೇ ವಾರ್ಡ್‌ನಲ್ಲಿ 70ರಷ್ಟು ಅಲ್ಪಸಂಖ್ಯಾತರನ್ನು ಹೊಂದಿದ್ದು ಅಲ್ಲಿ ಬಳಕೆಯಾಗಬೇಕಿದ್ದ ಅಲ್ಪ ಸಂಖ್ಯಾತರ ಅನುದಾನವನ್ನು ಕೇವಲ 30ರಷ್ಟು ಅಲ್ಪಸಂಖ್ಯಾತರನ್ನು ಹೊಂದಿರುವ ವಾರ್ಡ್‌ನಲ್ಲಿ ಅನುದಾನವನ್ನು ಬಳಕೆ ಮಾಡುತ್ತಿದ್ದಾರೆ. ಇದು ಅಲ್ಪಸಂಖ್ಯಾತರಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ತಾಲೂಕಿನ ಶಾಸಕರು ಮಾತ್ರ ಯಾವುದೇ ಪಕ್ಷ ಬೆದಭಾವ ಮಾಡದೇ ಅಭಿವೃದ್ಧಿ ಮಾಡಲು ನಾನು ಸಿದ್ಧ ಎಂದು ಹೇಳುತ್ತಾರೆ. ಪಟ್ಟಣದಲ್ಲಿ ಮಾತ್ರ ಕೇವಲ ಕಾಂಗ್ರೆಸ್ ವಾರ್ಡ್‌ಗಳು ಅಭಿವೃದ್ಧಿಯಾಗುತ್ತಿವೆ. ವಿನಃ ಯಾವುದೇ ಉಭಯ ಪಕ್ಷಗಳಿಂದಗೆದ್ದ ವಾರ್ಡ್‌ಗಳು ಅಭಿವೃದ್ಧಿಯಾಗಿಲ್ಲ. ತಾಲೂಕಿನ ಶಾಸಕರು ಆದಷ್ಟು ಶೀಘ್ರ, ಎಲ್ಲ ವಾರ್ಡ್‌ಗಳ ಅಭಿವೃದ್ಧಿ ಹಿತದೃಷ್ಟಿ ಇಟ್ಟುಕೊಂಡು ಎಲ್ಲಾ ವಾಡ್‌ಗಳಿಗೆ ವಿಶೇಷ ಅನುದಾನ ನೀಡಿ ಅಭಿವೃದ್ಧಿ ಮಾಡಲು ಮುಂದಾ ಗಬೇಕು. ಇಲ್ಲಾದಿಂದ್ದರೆ ಮುಂದಿನ ದಿನಗಳಲ್ಲಿ ಸದಸ್ಯರು ಅಷ್ಟೇ ಅಲ್ಲಾ ವಾರ್ಡಿನ ಸಾರ್ವಜನಿಕರು ಸೇರಿ ಕಛೇರಿಯಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.



ಯಲಬುರ್ಗಾ: ತಾಲೂಕಿನ ಬೇವೂರ ಗ್ರಾಮ ಪಂಚಾಯತಿಯ ಕೂಸಿನ ಮನೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಅವರು ಭೇಟಿ ನೀಡಿ ಪರಿಶೀಲಿಸಿದರು.

ನೂತನ ಪದಾಧಿಕಾರಿಗಳ ನೇಮಕ

ಮಸ್ಕಿ: ಚಲವಾದಿ ಮಹಾಸಭಾದ ಮಸ್ಕಿ ತಾಲೂಕು ಸಮಿತಿಯ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ನೇಮಕ ಮಾಡಲಾಗಿದೆ ಎಂದು ಚಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷರಾದ ಕೆ.ನಾಗಲಿಂಗಸ್ವಾಮಿ ತಿಳಿಸಿದರು.

ಪಟ್ಟಣದ ಸರ್ಕಿಟ್ ಹೌಸ್ ನಲ್ಲಿ ಸಭೆ ನಡೆಸಿ ಮಸ್ಕಿ ತಾಲೂಕು ಚಲವಾದಿ ಮಹಾಸಭಾದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ನೇಮಕ ಮಾಡಲಾಯಿತು.

ಮಲ್ಲಪ್ಪ ಎಸ್ ಗೋನಾಳ (ಗೌರವಾಧ್ಯಕ್ಷ), ಮೌನೇಶ ದೊಡ್ಡಮನಿ (ಅಮೀನಗಡ) (ಅಧ್ಯಕ್ಷ), ಯಂಕೋಬ ಯದ್ದಲದಿನ್ನಿ, ಶಿವಪ್ಪ ಯಕ್ಲಾಸಪೂರು (ಉಪಾಧ್ಯಕ್ಷರಾಗಿ), ಹುಲಗಪ್ಪ ಹಸಮಕಲ್ (ಪ್ರಧಾನ ಕಾರ್ಯದರ್ಶಿ), ರವಿ ಗೌಡನಬಾವಿ (ಖಜಾಂಚಿಯಾಗಿ), ವಿನೋದ ಗೋನಾಳ (ಸಹ ಕಾರ್ಯದರ್ಶಿ), ಹುಚ್ಚರೆಡ್ಡಿ ಮೆದಿಕಿನಾಳ (ಸಂಘಟನೆ ಕಾರ್ಯದರ್ಶಿ), ಯಮನಪ್ಪ ಮಸ್ಕಿ (ಹಿರಿಯ ಸಲಹೆಗಾರರಾಗಿ), ನೀಲಕಂಠ ರಂಗಾಪೂರು, ಮೌನೇಶ ಬೆಂಚಮರಡಿ, ರಾಜು ತೋರಣದಿನ್ನಿ, ನಾಗಲಿಂಗಪ್ಪ ಪಾಮನಕಲ್ಲೂರು, ಶಿವಪುತ್ರಪ್ಪ ಹಾಗೂ ಬಸಲಿಂಗಪ್ಪ ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಪಾಧ್ಯಕ್ಷರಾದ ಹನುಮಂತಪ್ಪ ಗೋಮರ್ಸಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ನರಸಪ್ಪ ಕಟ್ಟಿಮನಿ, ಬಸವರಾಜ ಇರಕಲ್, ಹುಚ್ಚರೆಡ್ಡಿ ಹಿರೇದಿನ್ನಿ, ವಿರುಪಣ್ಣ ಬೂದಿವಾಳ ಹಾಗೂ ತಾಲೂಕಿನ ನಾಗರತ್ನ ಕಟ್ಟಿಮನಿ, ಅಮರೇಶ್ ಪಾಮನಕಲ್ಲೂರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಮಸ್ಕಿ: ಪಟ್ಟಣದ ಸರ್ಕಿಟ್ ಹೌಸ್ ನಲ್ಲಿ ಸಭೆ ನಡೆಸಿ ಮಸ್ಕಿ ತಾಲೂಕು ಚಲವಾದಿ ಮಹಾಸಭಾದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ನೇಮಕ ಮಾಡಲಾಯಿತು.

2 ವರ್ಷದ ಬಳಿಕ ದಿಶಾ ಸಭೆ | ಆನ್‌ಲೈನ್ ಮೂಲಕ ಸಂಸದರು ಭಾಗಿ

ಕುಡಿಯುವ ನೀರು ಯೋಜನೆಗೆ ಒಪ್ಪಿಗೆ

ಕಲಬುರಗಿ: ಕಲಬುರಗಿ ಮತ್ತು ಬೀದರ ಜಿಲ್ಲೆಯ ಗ್ರಾಮಗಳಿಗೆ ನಾರಾಯಣಪುರ ಡ್ಯಾಂನಿಂದ ನೀರು ತಂದು ಬಹುಗ್ರಾಮ ಯೋಜನೆಯಡಿ ಜಿಲ್ಲೆಯ ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ 50-50 ಅನುದಾನದಡಿ ಯೋಜನೆ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಮೇಲ್ವಿಚಾರಣೆ (ದಿಶಾ) ಸಭೆ ಒಪ್ಪಿಗೆ ಸೂಚಿಸಲಾಯಿತು.

ನಗರದ ನೂತನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಮೇಲ್ವಿಚಾರಣೆ (ದಿಶಾ) ಸಭೆಯಲ್ಲಿ ಯೋಜನೆ ಅನುಷ್ಠಾನ ಮತ್ತು ಆರಂಭಿಕ 5 ವರ್ಷದ ನಿರ್ವಹಣೆಗೆ ಒಟ್ಟಾರೆ 7,200 ಕೋಟಿ ರೂ. ಅವಶ್ಯಕತೆ ಇದ್ದು, ಕೇಂದ್ರ ತನ್ನಪಾಲಿನ ಹಣ ನೀಡಲು ಸಭೆಯಲ್ಲಿ ಕುಲಂಕುಷವಾಗಿ ಚರ್ಚಿಸಲಾಗಿ ಈಗಾಗಲೆ ಬೀದರ ದಿಶಾ ಸಭೆ ಒಪ್ಪಿಗೆ ಸೂಚಿಸಿದ್ದು,ಇಲ್ಲಿಯೂ ಅನುಮೋದನೆ ನೀಡಲಾಯಿತು.

ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತವಿರುವ 11 ಎಂ.ವಿ.ಎಸ್. ಯೋಜನೆಗಳಿದ್ದಾಗಿಯೂ ಬೇಸಿಗೆ ನೀರಿಗೆ ಹಾಹಾಕಾರ ಇದೆ. ಜಿಲ್ಲೆಯಲ್ಲಿ ಪಂಚ ನದಿಗಳಿದ್ದರು ನೀರಿನ ಅಭಾವ ತುಂಬಾ ಹೆಚ್ಚಿದೆ. ಜಿಲ್ಲೆ ಮಳೆಯಾಶ್ರಿತ ಪ್ರದೇಶವಾಗಿರುವುದಿಂದ ಈ ಯೋಜನೆ ವರದಾನವಾಗಲಿದೆ. ಕಲಬುರಗಿ ಜಿಲ್ಲೆಯ 1,235 ಮತ್ತು ಬೀದರ ಜಿಲ್ಲೆಯ 900 ಸೇರಿ ಒಟ್ಟು 2,135 ಜನವಸತಿಗಳಿಗೆ ನೀರು ಪೂರೈಸುವ ಯೋಜನೆ ಇದಾಗಿದ್ದು, ಮುಂದಿನ 2,058 ಜನಸಂಖ್ಯೆ ಅನುಗುಣವಾಗಿ ಡಿ.ಪಿ.ಆರ್. ತಯಾರಿಸಿದೆ ಎಂದು ಸಭೆಗೆ ಮಾಹಿತಿ ನೀಡಿದರು.



ಸೂರತ್-ಚೆನ್ನೈ ರಸ್ತೆ ಆಗಸ್ಟ್‌ನಲ್ಲಿ ಪೂರ್ಣ

ಎನ್.ಹೆಚ್.ಎ.ಐ.ನ ನವೀನ್ ಮಾತನಾಡಿ, ಕಲಬುರಗಿ ರಿಂಗ್ ರೋಡಲ್ಲಿ ಸರ್ವಿಸ್ ರೋಡ್ 27 ಕೀ.ಮೀ.ಇದ್ದು,12ರಲ್ಲಿ 8 ಕೀ.ಮೀ. ಮುಗಿದಿದೆ. ಹಾಗರಗಾ ಕ್ರಾಸ್ನಿಂದ ಮದರ್ ಹೂಡ್ ಹಾಸ್ಪಿಟಲ್, ವರೆಗೆ ಬಾಕಿಯಿದೆ. ಮಾರ್ಚ್ ಕೊನೆಗೆ ಪೂರ್ಣಗೊಳ್ಳಲಿದೆ. ಅದೇ ರೀತಿ ಸೂರತ್ ಚೆನ್ನೈ ಪ್ರೊಜೆಕ್ಟ್ 71 ಕೀ.ಮೀ.ಯಿದ್ದು, ಈಗಾಗಲೇ 55 ಕೀ.ಮೀ ರಸ್ತೆ ಕಾಮಗಾರಿಯಾಗಿದೆ.15 ಕೀ.ಮೀ.ಮಾತ್ರ ಬಾಕಿಯಿದೆ.ಯಾವುದೇ ಲ್ಯಾಂಡ್ ಹಾಗೂ ಫಾರೆಸ್ಟ್ ಜಾಗದ ತಕರಾರಿಲ್ಲ.ಮುಂದಿನ ಆಗಸ್ಟ್ ತಿಂಗಳಲ್ಲಿ ಕಾಮಗಾರಿ ಮುಗಿಯಲಿದೆ ಎಂದು ಸಭೆಯ ಗಮನಕ್ಕೆ ತಂದರು.

> ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಪ್ರಪೋಸಲ್ ಆಗಲಿ ಸಂಬಂಧ ಪಟ್ಟ ಅಧಿಕಾರಿಗಳ ಮೂಲಕ ನಮಗೆ ಸಲ್ಲಿಸಿ,ಕೇಂದ್ರ ಸಚಿವರ ಗಮನಕ್ಕೆ ತರುವ ಕೆಲಸ ಮಾಡಲಾಗುವುದು.
> ■ ರಾಧಾಕೃಷ್ಣ ದೊಡ್ಡಮನಿ, ಸಂಸದ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ, ಮಳೆಯಿಂದ ತೊಗರಿ ಬೆಳೆ ವಿವಿಧ ರೋಗಕ್ಕೆ ತುತ್ತಾಗಿದ್ದರಿಂದ ರೈತರು ಹೈರಾಣಾಗಿದ್ದಾರೆ.ಪ್ರತಿ ವರ್ಷ ಹೀಗೆ ಆದರೆ ರೈತ ಬದುಕು ಕಟ್ಟಿಕೊಳ್ಳೋದು ಹೇಗೆ.?ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಯಾವ ತಳಿಯ ಬೀಜ ಬಿತ್ತಬೇಕೆಂದು ರೈತರಿಗೆ ಬಿತ್ತನೆ ಪೂರ್ವ ಮಾಹಿತಿ ನೀಡಿ. ಬೆಳೆ ವಿಮೆ ಯೋಜನೆಯಡಿ ಬೆಳೆ ಕಟಾವು ನಂತರ ಬರಬೇಕಾದ ಬೆಳೆ ವಿಮೆ ಸಹ ಸಕಾಲದಲ್ಲಿ ರೈತರಿಗೆ ಪಾವತಿಯಾಗುವಂತೆ ನೋಡಿಕೊಳ್ಳಬೇಕು ಎಂದರು.

ನ್ಯಾಯ ಸಮ್ಮತ ಬೇಡಿಕೆ ಈಡೇರಿಕೆಗೆ ಪ್ರಯತ್ನ

ಯಲಬುರ್ಗಾ: ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಸಂಘದ ರಾಜ್ಯ ಉಪಾಧ್ಯಕ್ಷ ಆದೆಪ್ಪ ಬಾಗ್ಲಿ ಹೇಳಿದರು.

ಪಟ್ಟಣದ ಸಾಯಿ ಪ್ಯಾಲೇಸ್‌ನಲ್ಲಿ ಶನಿವಾರ ಯಲಬುರ್ಗಾ ಮತ್ತು ಕುಕನೂರು ತಾಲೂಕಿನ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ, ನಿವೃತ್ತ ಬೋಧಕೇತರ ನೌಕರರಿಗೆ ಗೌರವ ಸನ್ಮಾನ, ಪ್ರತಿಭಾ ಪುರಸ್ಕಾರ ಹಾಗೂ ಬೋಧಕೇತರ ನೌಕರರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಇಲಾಖೆಯ ಗ್ರೂಪ್ ಡಿ ಹಾಗೂ ವಾಹನ ಚಾಲಕರ ಮನವಿ ಮೇರೆಗೆ ಸಂಘವನ್ನು ಅಸ್ತಿತ್ವಕ್ಕೆ ತಂದಿದೆ. ಸಂಘದ ಬಹು ದಿನದ ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಶ್ರಮಿಸಲಾಗುತ್ತಿದೆ. ಅದರಂತೆ ಸಂಘದ ಎಲ್ಲಾ ಸದಸ್ಯರು ಮೇಲಿಂದ ಮೇಲೆ ಸಭೆ ಸೇರಿ ನೌಕರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಚರ್ಚಿಸಿ, ಒಗ್ಗಟ್ಟಿನ ಬಲ ಪ್ರದರ್ಶಿಸಬೇಕು ಎಂದರು.

ಸಂಘದ ತಾಲೂಕು ಘಟಕದ ಅಧ್ಯಕ್ಷ ಮಲ್ಲಪ್ಪ ಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬೋಧಕೇತರ ನೌಕರರಿಗೆ ಸನ್ಮಾನಿಸಿ, ಗೌರವಿಸಲಾಯಿತು. ಮಾಹಿತಿ ಹಕ್ಕು ಹಾಗೂ ಹೆಚ್.ಆರ್.ಎಂ.ಎಸ್. 2.0 ವಿಷಯ ಕುರಿತು ಕಾರ್ಯಾಗಾರ ನಡೆಯಿತು.

ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಚಂದ್ರಮೌಳಿ, ಜಿಲ್ಲಾಧ್ಯಕ್ಷ ಅಯ್ಯಣ್ಣ ಮರದೂರ, ನಿವೃತ್ತ ಎಸ್ ಎಡಿಪಿಐ ವಿರೂಪಾಕ್ಷಯ್ಯ ಹಿರೇಮಠ ಬೆಳಗಾವಿ, ವಿಜಯ ನಗರ ಪ್ರತಾಂತ್ರಿಕ ಸಹಾಯಕ ವೆಂಕಟೇಶ ದೇಶಪಾಂಡೆ, ಪ್ರತಾಂತ್ರಿಕ ವ್ಯವಸ್ಥಾಪಕರಾದ ಎನ್ .ಪದ್ಮನಾಭರಾವ್, ಸೂರ್ಯನಾರಾಯಣ, ಜಿ.ಸೋಮ ಶೇಖರ್, ಶಿವಪ್ರಸಾದ್ ಸ್ವಾಮಿ, ಶಿವಶಂಕರ, ರಾಯಚೂರು ಜಿಲ್ಲಾಧ್ಯಕ್ಷ ಇಮ್ಯಾನುವೇಲ್, ಕುಷ್ಟಗಿ ಘಟಕದ ಅಧ್ಯಕ್ಷ ಶ್ರೀಧರ, ಕೊಪ್ಪಳ ಘಟಕದ ಅಧ್ಯಕ್ಷ ಗೋಪಾಲರಾವ್, ಗಂಗಾವತಿ ಘಟಕದ ಅಧ್ಯಕ್ಷ ಶಶಿಕಾಂತ, ಪ್ರಮುಖರಾದ ಯಮನೂರಪ್ಪ ಗದಾರಿ, ಮಹೇಶ ಆಸೂಟಿ, ಬಿ.ಫಾರೂಖ್ ಖಾನ್, ಬಿ.ಎಸ್ .ಪುರಾಣಿಕಮಠ, ಶರಣಪ್ಪ ಹಳ್ಳಿಕೇರಿ, ಸವಿತಾಭಾಯಿ, ಸಂತೋಷಗೌಡ, ಶಶಿಧರಗೌಡ ಗೌಡ್ರು, ಶಿವಪ್ಪ ಲಮಾಣಿ ಮತ್ತಿತರರು ಇದ್ದರು.



ಹದಗೆಟ್ಟ ರಸ್ತೆ: ಸಂಚಾರಕ್ಕೆ ಪರದಾಟ

ಹನುಮಸಾಗರ: ಸಮೀಪದ ಹೂಲಗೇರಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಅಧಿಕಾರಿಗಳು ತೋರುತ್ತಿರುವ ನಿರ್ಲಕ್ಷ್ಯದಿಂದಾಗಿ ಗುಂಡಿ ಸಮಸ್ಯೆಯು ಗ್ರಾಮದ ಜನರನ್ನು ಬೆಂಬಿಡದೆ ಕಾಡುತ್ತಿದ್ದು, ಹಿಡಿ ಶಾಪ ಹಾಕುತ್ತಿದ್ದಾರೆ.



ಗ್ರಾಮದ ದ ಮುಖ್ಯ ರಸ್ತೆಗಳು ತೀವ್ರ ಹದಗೆಟ್ಟಿದ್ದು, ರಸ್ತೆಯಲ್ಲಿನ ಗುಂಡಿಗಳು ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತಿವೆ. ಗ್ರಾಮದ ಸರ್ಕಾರಿ ಆಸ್ಪತ್ರೆಯ ಮುಂಭಾಗ ಮಾರ್ಗವಾಗಿ ಇಲ್ಕಲ್ ಸೇರುವ ರಸ್ತೆ ಮತ್ತು ಹನುಮಸಾಗರ ಹೋಗುವ ರಸ್ತೆ, ಸೇರಿದಂತೆ ಬಹಳಷ್ಟು ಒಳ ರಸ್ತೆಗಳು ಗುಂಡಿ ಬಿದ್ದಿದ್ದು ಜನರು ಭಯದಲ್ಲಿ ಓಡಾಡುವಂತಾಗಿದೆ.

ದಿನದಿನದಿಂದ ದಿನಕ್ಕೆ ಗ್ರಾಮವು ಸಾಕಷ್ಟು ಬೆಳೆಯುತ್ತಿದೆ. ಹೀಗಾಗಿ ಗ್ರಾಮದಲ್ಲಿ ವಾಹನ ದಟ್ಟಣೆ ಸಾಮಾನ್ಯ. ಆದರೆ ಗ್ರಾಮದ ರಸ್ತೆಯಲ್ಲಿ ಸೃಷ್ಟಿಯಾಗಿರುವ ದೊಡ್ಡ ಗುಂಡಿಗಳಿಂದ

ವಾಹನಗಳು ಪಲ್ಟಿಯಾದ ಘಟನೆಗಳು ಸಂಭವಿಸುತ್ತಿವೆ. ಇತ್ತೀಚೆಗೆ ಆಟೋವೊಂದು ಗುಂಡಿಗೆ ಸಿಲುಕಿ ಪಲ್ಟಿಯಾದ ಘಟನೆ ಗ್ರಾಮದಲ್ಲಿ ನಡೆದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ, ಚಾಲಕರು ಜೀವಭಯದಿಂದ ವಾಹನ ಚಾಲನೆ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಪ್ರಮುಖ ರಸ್ತೆಗಳು ಸೇರಿದಂತೆ ಒಳ ರಸ್ತೆಗಳಲ್ಲಿ ರಸ್ತೆಗಳನ್ನು ಹುಡುಕಿ ವಾಹನ ಸಂಚಾರ ಮಾಡಬೇಕಾದ ಪರಿಸ್ಥಿತಿ ಇದೆ. ರಸ್ತೆ ಹಾಳಾಗಿ ವರ್ಷಗಳೇ ಕಳೆದರೂ ದುರಸ್ತಿಗೆ ಗ್ರಾಪಂ ಅಧಿಕಾರಿಗಳು ಇನ್ನೂ ಮನಸ್ಸು ಮಾಡಿಲ್ಲ, ಹೀಗಾಗಿ ರಸ್ತೆ ಮಧ್ಯೆ ದೊಡ್ಡ ಗುಂಡಿಗಳು ನಿರ್ಮಾಣವಾಗಿ ಸಂಚಾರಕ್ಕೆ ಅಸಾಧ್ಯದ ಪರಿಸ್ಥಿತಿ ತಂದೊಡ್ಡಿವೆ. ನೀರು ಹರಿದುಹೋಗಲು ಜಾಗವಿಲ್ಲದೆ ರಸ್ತೆಯಲ್ಲೇ ನೀರು ನಿಲ್ಲುತ್ತಿದೆ ಇದ್ದರಿಂದ ಗಲೀಜು ನೀರು ತುಂಬಿ ದುರ್ಗಂಧ ಬೀರುತ್ತಿದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿ ಜ್ವರ, ಕೆಮ್ಮು ಸೇರಿದಂತೆ ವಿವಿಧ ರೋಗಗಳು ಹೆಚ್ಚುತ್ತಿರುವುದು ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ.

ಈ ಸಮಸ್ಯೆ ಕುರಿತು ಹೂಲಗೇರಿ ಗ್ರಾಪಂ ಪಿಡಿಒ ಅವರಿಗೆ ಗ್ರಾಮಸ್ಥರು ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಶಾಶ್ವತ ಪರಿಹಾರ ಕೈಗೊಳ್ಳಲಾಗಿಲ್ಲ. ಪಂಚಾಯಿತಿ ಆಡಳಿತದ ನಿರ್ಲಕ್ಷ್ಯದ ವಿರುದ್ಧ ಗ್ರಾಮದ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. 'ನಮ್ಮ ಊರಿನಲ್ಲಿ ರಸ್ತೆ ದುರಸ್ತಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಕೇವಲ ಭರವಸೆ ನೀಡುತ್ತಿದ್ದಾರೆ. ಆದರೆ ಕಾರ್ಯರೂಪಕ್ಕೆ ಬರುತ್ತಿಲ್ಲ' ಎಂದು ರಂಜಾನ್ ಬೇವಿನಗಿಡದ ಬೇಸರ ವ್ಯಕ್ತಪಡಿಸಿದ್ದರು.

ಉದ್ಯೋಗ ಕಲ್ಪಿಸುವಂತೆ ಆಗ್ರಹ

ಸಿಂಧನೂರು: ಸರ್ಕಾರ ನೀಡುವ ಬಿಟ್ಟಿ ಭಾಗ್ಯ ನಮಗೆ ಬೇಕಾಗಿಲ್ಲ, ನಮಗೆ ಉದ್ಯೋಗ ಬೇಕು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ನಮಗೆ ಸುಳ್ಳು ಭರವಸೆ ನೀಡಿ, ಇದುವರೆಗೆ ನಮಗೆ ಯಾವುದು ಉದ್ಯೋಗಕ್ಕೆ ಕರೆ ನೀಡದೆ ಕಾಲಹರಣ ಮಾಡುತ್ತಿದೆ ಎಂದು ಪ್ರವೀಣ್ ದುಮತಿ ಆರೋಪಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ತಾಲೂಕಿನ ತಹಶೀಲ್ದಾರ್ ಕಚೇರಿಗೆ ಕಾಲ್ನಡಿಗೆಯ ಮೂಲಕ ಆಗಮಿಸಿದ ಖಾಸಗಿ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಉದ್ಯೋಗ ಆಕಾಂಕ್ಷಿಯುವ ಜನತೆ ನಮಗೆ ಉದ್ಯೋಗಬೇಕು ಎಂದು ತಹಶೀಲ್ದಾರ್ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸಿದ ಹೋರಾಟದ ನೇತೃತ್ವವನ್ನು ವಹಿಸಿ ಮನವಿ ಸಲ್ಲಿಸಿ ಮಾತನಾಡಿದ ಅವರು, ನಿಮ್ಮ ಕುರ್ಚಿ ಗದ್ದುಗೆಗಾಗಿ ಜಗಳ ಮಾಡೋದು ಬಿಟ್ಟು, ನಿರುದ್ಯೋಗಿಗಳ ಸಮಸ್ಯೆ ಗಮನಿಸಿ, ನಾವು ತುಂಬಾ ಬಡತನದಲ್ಲಿ ಬೆಳೆದು ಕಷ್ಟ ಪಟ್ಟು ನಮ್ಮ ತಂದೆ, ತಾಯಿಗಳು ಕೂಲಿ ನಾಲಿ ಮಾಡಿ ಸಾಲ ಮಾಡಿ ನಮ್ಮನ್ನ ಓದಲಿಕ್ಕೆ ಕಳಿಸಿದ್ದಾರೆ ದಯವಿಟ್ಟು ಕಷ್ಟ ಪಟ್ಟು ನಾವು ಓದಿದರೂ ನಮಗೆ ಉದ್ಯೋಗ ಪಡೆಯಲು ಆಗುತ್ತಿಲ್ಲ ನೀವು ನಮ್ಮ ತಾಳ್ಮೆ ಪರೀಕ್ಷೆ ಮಾಡಬೇಡಿ ದಯವಿಟ್ಟು ಸರಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ನೋಟಿಫಿಕೇಶನ ಹೊರಡಿಸಿ ನೇಮಕಾತಿ ಮಾಡಬೇಕು ಹಾಗೂ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಪರಿಹರಿಸಲು ತುರ್ತು ಕ್ರಮ ಕೈಗೊಳ್ಳಬೇಕೆಂದರು.



ನಂತರ ಇರ್ಫಾನ್ ಸಾಲಗುಂದ ಮಾತನಾಡಿದರು. ಬಸವರಾಜ ರೈತ ಸಂಘ, ನೀರುಪಾದಿ ಕೆಆರ್‌ಎಸ್, ಪರಶುರಾಮ, ಭೀರಪ್ಪ, ನಾಗರಾಜ, ಬಾಲರಾಜ, ಶಬ್ಬೀರ್, ಸೇರಿದಂತೆ ನಗರದ ಎಕ್ಸ್‌ಲೆಂಟ್, ಆಕ್ಸ್‌ಫರ್ಡ್, ನೋಬೆಲ್, ನ್ಯಾಷನಲ್, ಸಾರ್ವಜನಿಕ ಗ್ರಂಥಾಲಯದ ವಿದ್ಯಾರ್ಥಿಗಳು, ಸಂಘಟನೆಯ ಅಧ್ಯಕ್ಷ, ಉಪಾಧ್ಯಕ್ಷರ, ಪದಾಧಿಕಾರಿಗಳು ಮತ್ತಿತರರಿದ್ದರು.

ಮಕ್ಕಳ ವಿದ್ಯಾಭ್ಯಾಸಕ್ಕೆ ಶ್ರಮಿಸಿ: ಶರಣಪ್ಪ

ಕುಕನೂರು: ಮಕ್ಕಳ ವಿದ್ಯಾಭ್ಯಾಸಕ್ಕೆ ಪಾಲಕರು ಶ್ರಮಿಸಬೇಕು ಎಂದು ನಿವೃತ್ತ ಶಿಕ್ಷಕ ಶರಣಪ್ಪ ಕೊಪ್ಪದ್ ಹೇಳಿದರು.

ತಾಲೂಕಿನ ಬಿನ್ನಾಳ ಗ್ರಾಮದಲ್ಲಿ ಶಾರದಾ ಮಹಿಳಾ ಸಂಘ ಹಾಗೂ ಬಸವೇಶ್ವರ ಪೂರ್ವ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಹಾಗೂ ಸ್ಮಾರ್ಟ್‌ಕ್ಲಾಸ್ ರೂಮ್ ಉದ್ಘಾಟನೆ, ಸರಸ್ವತಿ ಪೂಜಾ ಕಾರ್ಯಕ್ರಮ ಮತ್ತು 5ನೇ ತರಗತಿ ವಿದ್ಯಾರ್ಥಿಗಳಿಂದ ಪಾಲಕರಿಗೆ ಪಾದಪೂಜೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂದಿನ ಆಧುನಿಕ ಜಗತ್ತಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಶಿಕ್ಷಕರ ಜೊತೆಗೆ ಪಾಲಕರು ಕೂಡ ಶ್ರಮಿಸಬೇಕು ಅಂದಾಗ ಮಕ್ಕಳ ಭವಿಷ್ಯ ಉಜ್ವಲ ವಾಗುತ್ತದೆ ಎಂದು ಹೇಳಿದರು.

ನಂತರ ಕಾರ್ಯಕ್ರಮ ಉದ್ಘಾಟಿಸಿದ ತಾಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಮಾತನಾಡಿ, ಇಂದಿನ ಯುವ ಗ್ರಾಮೀಣಮಟ್ಟದಲ್ಲಿ ಶಿಕ್ಷಣವನ್ನು ರಾಷ್ಟ್ರಮಟ್ಟದಲ್ಲಿ ಬೆಳೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಿದ್ದಲಿಂಗಯ್ಯ ಹಿರೇಮಠ, ಚನ್ನಯ್ಯ ತೋಟಯ್ಯ ಹಿರೇಮಠ, ಗುರುನಾಥಯ್ಯ ಶೇಖರಯ್ಯ ಪೂಜಾರ, ಫಕೀರಯ್ಯ ವೀರಯ್ಯ ಭದ್ರಾಪೂರ, ಶ್ರೀಕಾಂತಯ್ಯ ಕಾಳಯ್ಯ ಹಿರೇಮಠ, ರುದ್ರಮಣಿಸ್ವಾಮಿ ಬಸಯ್ಯ ಪೂಜಾರ, ಸಿದ್ದಯ್ಯ ಹಿರೇಮಠ, ಕಳಕಯ್ಯ ಹಿರೇಮಠ ಶಿವಣ್ಣ ದೇವೇಂದ್ರಪ್ಪ ಕಂಬಳಿ ಹಾಗೂ ಸಹೋದರರು ಶಾಲಾ ನಿವೇಶನ ದಾನಿಗಳು ಹಾಗೂ ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು, ಮಹಾದೇವಪ್ಪ ಶಿ.ಕಂಬಳಿ ಹಾಗೂ ಸಹೋದರರು ಶಾಲಾ ನಿವೇಶನ ದಾನಿಗಳು, ದ್ರಾಕ್ಷಯಣಿ ಸಂಗಪ್ಪ ತಹಶೀಲ್ದಾರ್ ಗ್ರಾಪಂ ಅಧ್ಯಕ್ಷರು, ಯರೇಹಂಚಿನಾಳ, ಜ್ಯೋತಿ ದೊಡ್ಡಮನಿ, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಶರಣಯ್ಯ ಹಿರೇಮಠ, ಡಾ.ಪ್ರಿಯಾಂಕಾ ಬರಸಾನೂರ ವೈದ್ಯಾಧಿಕಾರಿಗಳು, ಶರಣಪ್ಪ ಶಿವಬಸಪ್ಪ ಕೊಪ್ಪದ ನಿವೃತ್ತ ಶಿಕ್ಷಕರು, ಗುರುಸಿದ್ದಯ್ಯ ನಾಗಯ್ಯ ಹಿರೇಮಠ ನಿವೃತ್ತ ಶಿಕ್ಷಕರು, ಮಹಾಂತಯ್ಯ ಸಿದ್ದಲಿಂಗಯ್ಯ ಕಾಶಿಮಠ ಮತ್ತಿತರರಿದ್ದರು.



ನಾನು ಅಭಿವೃದ್ಧಿ ವಿರೋಧಿ ಅಲ್ಲ: ಹೇಮಲತಾ

ಕೊಪ್ಪಳ: ನಾನು ಅಭಿವೃದ್ಧಿ ವಿರೋಧಿ ಅಲ್ಲ, ಸಂಸದರ ಕಳ್ಳತನದ ಕೆಲಸ ಮತ್ತು ಲೂಟಿ, ಒಲ್ಲೆಕೆ ರಾಜ ಕಾರಣ ನೀತಿಯ ವಿರೋಧಿ. ಲಾಭದ ದೃಷ್ಟಿ ಇದ್ದರೆ ಮಾತ್ರ ಯಾರಿಗೂ ಗೊತ್ತಾಗದಂತೆ ರಾತ್ರೋರಾತ್ರಿ ಕೆಲಸ ಮಾಡಲು ಸಾಧ್ಯ ಎಂದು ಎಂಎಲ್ಸಿ ಹೇಮಲತಾ ನಾಯಕ ತಿರುಗೇಟು ನೀಡಿದ್ದಾರೆ.

ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಪ್ರಾಚೀನ ಕೆರೆ ಹಾಳು ಮಾಡುವುದು ಅಭಿವೃದ್ಧಿ ಅಲ್ಲ. ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗ ಕೆರೆ ಒತ್ತಾಯವರಿ ಆಗಿದ್ದು ಇವರಿಗೆ ಕಾಣಿಸಲಿಲ್ಲವೇ? ಎಂಎಲ್ಸಿ ಮಲಗಿದ್ದರೇನು? ಎಂದು ಸಂಸದರು ಪ್ರಶ್ನೆ ಮಾಡಿದ್ದಾರೆ. ಅಥ್ಲೆಟಿಕ್ ಅಸೋಸಿಯೇಶನ್ ನಿಂದ ಆಯೋಜನೆ ಮಾಡಿದ್ದ ಕಾರ್ಯಕ್ರಮದಲ್ಲಿ ನಾನು ಭಾಗಿ ಆಗಿಲ್ಲ, ಶಿವರಾತ್ರಿಗಿಂತ ಮೂರು ದಿನ ಮೊದಲು ನಾನು ಶಿವರಾತ್ರೇಶ್ವರ ದೇವಸ್ಥಾನಕ್ಕೆ ಹೋಗಿದ್ದೆ. ಅದನ್ನು ಬಿಟ್ಟರೆ ಶಿವರಾತ್ರಿ ದಿನ ರಾತ್ರಿ ಕೆಕ್ಕ ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದು ಬಂದಿದ್ದೇನೆ. ನಾನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಗ್ಗೆ ಒಂದು ಫೋಟೊ ತೋರಿಸಲಿ ನೋಡೋಣ ಎಂದು ಸವಾಲು ಹಾಕಿದರು.

ಶಿವರಾತ್ರಿ ದಿನ ರಾತ್ರಿ ಕೆರೆ ಗೋಡೆ ಒಡೆದು, ನೀರು ಹೊರಗೆ ಹರಿಸಿದ್ದಾರೆ. ಹಗಲು- ರಾತ್ರಿ ಕೆಲಸ ಮಾಡಿ ಕೇವಲ ಮೂರು ದಿನದಲ್ಲಿ ಭಾರಿ ಪ್ರಮಾಣದಲ್ಲಿ



ಕೆರೆ ಒತ್ತವರಿ ಮಾಡಿ, ಮಸೀದಿಗೆ ರಸ್ತೆ ನಿರ್ಮಾಣ ಮಾಡಲಾಗಿತ್ತು. ಈ ಬಗ್ಗೆ ಜಿಲ್ಲಾಧಿಕಾರಿಗಳು, ಕೊಪ್ಪಳ ನಗರಸಭೆ ಪೌರಾಯುಕ್ತರು ಇಬ್ಬರಿಗೂ ಫೋನ್ ನಲ್ಲಿ ಮಾತನಾಡಿದ್ದೇನೆ. ಇಬ್ಬರೂ ನಮಗೆ ಮಾಹಿತಿಯೇ ಇಲ್ಲ ಎಂದು ಹೇಳಿದ್ದಾರೆ. ಆಗ ನಾವು ಕೆರೆ ದಂಡೆ ಮೇಲೆ ಹೋರಾಟ ಮಾಡಿದ್ದೇವೆ. ನಗರಸಭೆ ಪೌರಾಯುಕ್ತ, ಜಿಲ್ಲಾಧಿಕಾರಿ ಎಲ್ಲರೂ ಸುಳ್ಳು ಹೇಳುತ್ತಿದ್ದಾರೆ. ನಮಗೆ ಇವರ ಮೇಲೆ ನಂಬಿಕೆ ಇಲ್ಲ, ಅದಕ್ಕೆ ರಾಜ್ಯಪಾಲ, ಸಿಎಂ, ಸಣ್ಣ ನೀರಾವರಿ ಸಚಿವರಿಗೆ ಪತ್ರ ಬರೆದು, ತನಿಖೆಗೆ ಒತ್ತಾಯಿಸಿದ್ದೇನೆ ಎಂದರು.

ಕೆರೆ ಸಂರಕ್ಷಣೆ ಕಾಯ್ದೆ ಸಂಪೂರ್ಣ ಉಲ್ಲಂಘನೆ ಮಾಡಿ, ಕಾಮಗಾರಿ ಕೈಗೊಂಡಿದ್ದಾರೆ. ಕೇವಲ ಮೂರು ದಿನದಲ್ಲಿ ಹಗಲು- ರಾತ್ರಿ ಕೆಲಸ ಮಾಡಿದ್ದಾರೆ. ನಾನು ಮಲಗಿಲ್ಲ, ಎಚ್ಚರ ಇದ್ದಿದ್ದಕ್ಕೆ ಸಂಸದರು ಮಾಡಿದ ತಪ್ಪನ್ನು ಜನರಿಗೆ ತೋರಿಸಿದ್ದೇನೆ. ಇಲ್ಲವಾದರೆ ಇಷ್ಟೊತ್ತಿಗೆ ಕೆರೆ ನುಂಗಿ ಬಿಡುತ್ತಿದ್ದರು. ಸಂಸದರಿಗೆ ನೈತಿಕತೆ ಇಲ್ಲ, ಒಂದೊಮ್ಮೆ ಸಂಸದರು ತಪ್ಪು ಮಾಡಿಲ್ಲ ಎಂದರೆ ಕೆರೆಯಲ್ಲಿ ರಸ್ತೆ ನಿರ್ಮಾಣ ಮಾಡಿದ್ದರ ಬಗ್ಗೆ ತನಿಖೆ ಮಾಡಿಸಲಿ ಎಂದು ಸವಾಲು ಹಾಕಿದರು.

> ಎಂಎಲ್ಸಿ ಮಲಗಿದ್ರಾ? ಎಂಬ ಸಂಸದ ರಾಜಶೇಖರ ಹಿಟ್ನಾಳ ಮಾತಿನಿಂದ ನೋವಾಗಿದೆ. ಮಹಿಳೆಯರ ವಿಚಾರದಲ್ಲಿ ಅತ್ಯಂತ ಲಘುವಾಗಿ ಮಾತನಾಡುವುದು ಸಂಸದರಿಗೆ ಹೊಸದಲ್ಲ. ವಿದೇಶ ಮಹಿಳೆ ಮೇಲಿನ ಅತ್ಯಾಚಾರವನ್ನು ಸಣ್ಣ ಘಟನೆ ಎಂದಿದ್ದ ಸಂಸದರು, ಈಗ ನನಗೆ ಕೆರೆ ಒತ್ತುವರಿ ಮಾಡುವಾಗ ಮಲಗಿದ್ದರೇನು? ಎಂದು ಪ್ರಶ್ನೆ ಮಾಡಿದ್ದಾರೆ. ತಮ್ಮ ಮನೆಯಲ್ಲೂ ಹೆಣ್ಣು ಮಕ್ಕಳಿದ್ದಾರೆ ಎಂಬುದು ಸಂಸದರಿಗೆ ನೆನಪಿರಲಿ.
> ■ ಹೇಮಲತಾ ನಾಯಕ, ಎಂಎಲ್ಸಿ

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಗಣೇಶ ಹೊರತಟ್ನಾಳ, ಮಹೇಶ ಅಂಗಡಿ, ನಗರ ಘಟಕದ ಅಧ್ಯಕ್ಷ ಅಮರೇಶ ಮುರಳಿ ಇದ್ದರು. ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಗಣೇಶ ಹೊರತಟ್ನಾಳ, ಮಹೇಶ ಅಂಗಡಿ, ನಗರ ಘಟಕದ ಅಧ್ಯಕ್ಷ ಅಮರೇಶ ಮುರಳಿ ಇದ್ದರು.

ವ್ಯಕ್ತಿತ್ವ ವಿಕಾಸಕ್ಕೆ ಸಾಂಸ್ಕೃತಿಕ ಚಟುವಟಿಕೆಗಳು ಸಹಕಾರಿ

ಕುಷ್ಟಗಿ: ಪಟ್ಟಣದ ಬಾಲಕಿಯರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಅಂಗವಾಗಿ ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮವು ಶುಕ್ರವಾರ ಸಂಭ್ರಮ, ಸಾಂಸ್ಕೃತಿಕ ವೈಭವ ಮತ್ತು ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನದೊಂದಿಗೆ ನೆರವೇರಿತು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಹಿರಿಯ ಮುಖ್ಯೋಪಾಧ್ಯಾಯ ಸಿದ್ಧಾರಾಮಪ್ಪ ಅಮರಾವತಿ ಅವರು, ಶಿಕ್ಷಣದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಅತ್ಯಂತ ಅಗತ್ಯವೆಂದು ತಿಳಿಸಿದರು.

ಇಂತಹ ವೇದಿಕೆಗಳು ವಿದ್ಯಾರ್ಥಿಗಳಲ್ಲಿರುವ ಅಡಗಿದ ಪ್ರತಿಭೆ ಹೊರಹೊಮ್ಮಲು ಸಹಕಾರಿಯಾಗುತ್ತವೆಎಂದ ಅವರು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಉಮಾದೇವಿ ಬಸಾಪುರ ಮಾತನಾಡಿ, ಶಾಲೆ ಎಂಬುದು ಕೇವಲ ಪಾಠ ಕಲಿಸುವ ಸ್ಥಳವಲ್ಲದೆ ವಿದ್ಯಾರ್ಥಿಗಳ ಪ್ರತಿಭೆ ಅರಳುವ ಪವಿತ್ರ ಕೇಂದ್ರವಾಗಿದೆ ಎಂದು ಹೇಳಿದರು. ನೃತ್ಯ, ಸಂಗೀತ ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದ ಅವರು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶಿಸ್ತು ಮತ್ತು ಸಂಸ್ಕಾರಗಳನ್ನು ಅಳವಡಿಸಿಕೊಂಡು ಉತ್ತಮ ನಾಗರಿಕರಾಗಿ ಬೆಳೆಬೇಕು ಎಂದು ಸಲಹೆ ನೀಡಿದರು.



ಅಧ್ಯಕ್ಷೀಯ ಭಾಷಣದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಪವಾಡೆಪ್ಪ ಚೌಡ್ಕಿ ಅವರು, ವಾರ್ಷಿಕ ಸ್ನೇಹ ಸಮ್ಮೇಳನವು ವಿದ್ಯಾರ್ಥಿಗಳ ವರ್ಷದ ಸಾಧನೆಗಳನ್ನು ಸಮಾಜದ ಮುಂದೆ ಪ್ರದರ್ಶಿಸುವ ಮಹತ್ವದ ವೇದಿಕೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಶಾಲೆ ಅಭಿವೃದ್ಧಿಯ ದಾರಿಯಲ್ಲಿ ಸಾಗುತ್ತಿದೆ ಎಂದು ಹೇಳಿದರು.

ಶೈಕ್ಷಣಿಕ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಯಿತು. ವಿದ್ಯಾರ್ಥಿನಿಯರು ನಡೆಸಿದ ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕಲಾ ಪ್ರದರ್ಶನಗಳು ಸಭಿಕರ ಮನಸೆಳೆದವು.

ಇಸಿಒ ರಾಘಪ್ಪ ಶ್ರೀರಾಮ, ಸಿಆರ್‌ಪಿ ದಂಡಪ್ಪ ಹೊಸಮನಿ, ಪತ್ರಕರ್ತರಾದ ರವೀಂದ್ರ ಬಾಕಳೆ, ಶರಣಪ್ಪ ಲೈನದ್, ಸಂಗಮೇಶಸ್ವಾಮಿ ಲೂತಿಮಠ, ಮೈಲಾರಪ್ಪ ಮಂತ್ರಿ ಹಾಗೂ ಪೋಷಕರಾದ ಹನುಮಂತ ಬಂಡಿವಡ್ಡರ, ಸುರೇಶ ಕೌದಿ, ಮಲ್ಲಪ್ಪ ಕಂಜಿ, ಮಂಜುನಾಥ ಚೂರಿ ಸೇರಿದಂತೆ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು, ಶಿಕ್ಷಕ-ಶಿಕ್ಷಕಿಯರು, ಪೋಷಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕಿರುಸುದ್ದಿ

ಡಾ.ಸುಂದರ್‌ಗೆ ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ಪ್ರದಾನ

ಬಳ್ಳಾರಿ: ಶ್ರೀರಾಘವೇಂದ್ರ ಸ್ವಾಮಿಗಳವರ ವರ್ಧಂತಿ ಮಹೋತ್ಸವ ಹಾಗೂ 431ನೇ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆ ನಗರದ ಹೆಸರಾಂತ ವೈದ್ಯ ಡಾ.ಬಿ.ಕೆ.ಸುಂದರ್ ಅವರಿಗೆ ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಪವಿತ್ರ ಧಾರ್ಮಿಕ ಕ್ಷೇತ್ರ ಮಂತ್ರಾಲಯದಲ್ಲಿ ಆಯೋಜಿಸಿದ್ದ ಸುವರ್ಣ ಮಹೋತ್ಸವದಲ್ಲಿ ಶ್ರೀಮಠದ ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು, ಬಳ್ಳಾರಿಯ ಡಾ.ಬಿ.ಕೆ. ಸುಂದರ್ ಅವರಿಗೆ, ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ನೀಡಿ, ದಂಪತಿಗಳನ್ನು ಸನ್ಮಾನಿಸಿ ಗೌರವಿಸಿದರು. ಶ್ರೀಮಠದ ವಿವಿಧ ಪಂಡಿತರು, ವಿವಿಧ ಗಣ್ಯರು ಇತರರು ಉಪಸ್ಥಿತರಿದ್ದರು. ನಂತರ ಡಾ.ಬಿ.ಕೆ. ಸುಂದರ್ ಮಾತನಾಡಿ, ಶ್ರೀರಾಘವೇಂದ್ರ ಸ್ವಾಮಿಗಳವರ ವರ್ಧಂತಿ ಮಹೋತ್ಸವ ಹಾಗೂ 431ನೇ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆಯಲ್ಲಿ ವರ್ಷ ಶ್ರೀಮಠದಿಂದ ಕೊಡಲಾಗುವ ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿಯನ್ನು ಈ ಬಾರಿ ನಮ್ಮನ್ನು ಗುರುತಿಸಿ ಶ್ರೀಮಠದ ಸ್ವಾಮಿಗಳು ಪ್ರಧಾನ ಮಾಡಿರುವುದು ಅತ್ಯಂತ ಸಂತಸ ಮೂಡಿಸಿದೆ. ಕಲಿಯುಗದ ಕಾಮಧೇನು, ಕಲ್ಪವೃಕ್ಷ ಶ್ರೀಗುರುರಾಯರು ಎಲ್ಲರಿಗೂ ಒಳಿತನ್ನು ಮಾಡಲಿ, ಸೇವೆಯನ್ನು ಮಾಡುವ ಸೌಭಾಗ್ಯ ಕಲ್ಪಿಸಲಿ ಎಂದು ಪ್ರಾರ್ಥಿಸುವೆ ಎಂದರು.



ಕರೂರು: ಸಮೀಪದ ಹೆಚ್ಚು ಹೊಸಹಳ್ಳಿ ಗ್ರಾಮದಲ್ಲಿ ಬೆಳಿಗ್ಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಇತರರಿದ್ದರು.

ಬುಡಾ ಅಧ್ಯಕ್ಷರಾಗಿ ಜೆ.ಎಸ್.ಆಂಜನೇಯಲು ಮುಂದುವರಿಕೆ

ಬಳ್ಳಾರಿ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅಧ್ಯಕ್ಷ ಜೆ.ಎಸ್.ಆಂಜನೇಯಲೂ ಅವರೇ ಮುಂದುವರೆದಿದ್ದಾರೆ. ಈ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು ಕುಳಿತವರಿಗೆ ನಿರಾಶೆಯಾಗಿದ್ದು, ಮತ್ತೆ ಮರು ನೇಮಕಗೊಂಡ ಅಧ್ಯಕ್ಷ ಜೆ.ಎಸ್.ಆಂಜನೇಯಲು ಅವರಿಗೆ ಅಭಿನಂದನೆಗಳ ಮಹಾಪೂರವೇ ಹರಿದು ಬಂದಿದೆ. ಡಿಸಿಎಂ ಡಿ.ಕೆ.



ಶಿವಕುಮಾರ್ ಅವರೊಂದಿಗೆ ಗುರುತಿಸಿಕೊಂಡಿದ್ದ ಇವರು, ಎರಡನೇ ಬಾರಿ ತಮ್ಮ ಸ್ಥಾನವನ್ನು ಭದ್ರ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸಿ.ಎಂ. ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಎರಡುವರೆ ವರ್ಷ ಕಳೆದ ಬಳಿಕ, ಈ ಹಿಂದೆ ನೇಮಕಗೊಂಡಿದ್ದ ನಿಗಮ ಮಂಡಳಿ, ಪ್ರಾಧಿಕಾರದ ಅಧ್ಯಕ್ಷರ ಅವಧಿ ಮುಗಿಯಲು ಬಂದಿತ್ತು. ಈ ವೇಳೆ ಸರ್ಕಾರ ಈ ಹಿಂದೆ ನೇಮಕ ಮಾಡಿದವರನ್ನು ಮುಂದಿನ ಆದೇಶದವರೆಗೆ ಮುಂದುವರೆಯಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲು ಅವರೇ ಮುಂದುವರಿಯಲಿದ್ದಾರೆ. ಈ ಅಧ್ಯಕ್ಷ ಸ್ಥಾನ ತೆರವಾಗಲಿದೆ ಎಂದು ಕಣ್ಣಿಟ್ಟು ಕಾದೂ ಕುಳಿತಿದ್ದ ಜಿಲ್ಲೆಯ ಅನೇಕ ನಾಯಕರ ಆಸೆಗೆ ಸದ್ಯಕ್ಕೆ ಬ್ರೇಕ್ ಬಿದ್ದಿದೆ.

ವಿಜ್ಞಾನ ವಸ್ತು ಪ್ರದರ್ಶನ

ಕುರುಗೋಡು: ಪಟ್ಟಣ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಉಜ್ಜಲಪೇಟೆಯ ಶಾಲೆಯಲ್ಲಿ ಶನಿವಾರ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನ ಜರುಗಿತ . ಈ ವಸ್ತು ಪ್ರದರ್ಶನ ದಲ್ಲಿ ಮಕ್ಕಳಿಂದ ಹಲವು ಮಾದರಿಗಳ ಶಾಲೆ ಮಕ್ಕಳ



ಳಿಂದ ವಿವಿಧ ನೋಡುಗರ ಗಮನಸೆಳೆಯುವ ಮೆಚ್ಚುಗೆ ವ್ಯಕ್ತವಾಗಿತು. ಈ ವೇಳೆ ಶಾಲೆಯ ಮುಖ್ಯ ಶಿಕ್ಷಕಿ ಎಸ್. ಎಸ್.ಎಂ.ಅನಿತಾ, ಸಹ ಶಿಕ್ಷಕಿಯರಾದ ವಾಣಿ ವಿ., ಸುರೇಖಾ, ಪಿ.ಮೌಲಾ ಸಾಹೇಬ್, ರೇಷ್ಮಾ ಬಾನು, ಶೇಖಮ್ಮ್, ಎ.ಪಿ.ಎಫ್. ಶಿಕ್ಷಕರಾದ ನವೀನ್ ಮೇಟಿ ಹಾಗೂ ನಾಗಲತಾರೂ ಸಹ ಇದ್ದರು.



ಬಳ್ಳಾರಿ: ಶ್ರೀರಾಘವೇಂದ್ರ ಸ್ವಾಮಿಗಳವರ ವರ್ಧಂತಿ ಮಹೋತ್ಸವ ಹಾಗೂ 431ನೇ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆ ನಗರದ ಹೆಸರಾಂತ ವೈದ್ಯ ಡಾ.ಬಿ.ಕೆ.ಸುಂದರ್ ಅವರಿಗೆ ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ

ಹೂವಿನಹಡಗಲಿ: ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಿ ಎಂದು ವಿಜ್ಞಾನ ಶಿಕ್ಷಕಿ ಗೀತಾ ಪಿ.ಎಂ.ಹೇಳಿದರು. ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ ಶನಿವಾರ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಪ್ರಶ್ನೆ ಮಾಡುವುದರ ಮೂಲಕ ತಾರ್ಕಿಕತೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು, ಮೌಢ್ಯತೆ ಮತ್ತು ಅಂಧಕಾರದಿಂದ ದೂರ ಉಳಿಯಬೇಕು. ಸಿ ವಿ ರಾಮನ್, ಮೇಡಂ ಕ್ಯೂರಿ, ಐಸಾಕ್ ನ್ಯೂಟನ್, ಅಬ್ದುಲ್ ಕಲಾಂ ರವರ ಜೀವನ ನಿಮಗೆ ಆದರ್ಶ ಆಗಲಿ ಎಂದು ತಿಳಿಸಿದರು. ಹಿರಿಯ ಶಿಕ್ಷಕಿ ಜಯಮ್ಮ ವೈ. ಮಾತನಾಡಿ, ವಿದ್ಯಾರ್ಥಿಗಳು ವೈಜ್ಞಾನಿಕ ತಳಹದಿಯ ಮೇಲೆ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಹೇಳಿದರು. ಆಂಗ್ಲ ವಿಷಯ ಶಿಕ್ಷಕರಾದ ಲಂಬಾಣಿ ಗಿಡ್ಡಾನಾಯ್ಕ್, ಸಿ.ವಿ.ರಾಮನ್ ಆವಿಷ್ಕಾರ ಕುರಿತು ಮಾಹಿತಿ ಹಂಚಿಕೊಂಡರು. ಅಧ್ಯಕ್ಷತೆ ವಹಿಸಿದ್ದ ಮುಖ್ಯ ಗುರುಗಳಾದ ಸುರೇಶ ಅಂಗಡಿ ವಿಜ್ಞಾನ ಸತ್ಯ ಪ್ರತಿಪಾದಿಸುತ್ತದೆ. ವೈಚಾರಿಕತೆಯ ಅರಿವು ಮೂಡಿಸುವುದು ವಿಜ್ಞಾನ ದಿನದ ಮಹತ್ವ ಎಂದರು. ಕವಿ ಬಿ.ಆರ್.ಲಕ್ಷ್ಮಣರಾವ್ ಅವರು 'ಮೂಢನಂಬಿಕೆ ಅನಾದಿ ಮೂಢನಂಬಿಕೆ' ಸೇರಿದಂತೆ ವೈಚಾರಿಕತೆ ಬಿಂಬಿಸುವ ವಿಜ್ಞಾನ ಗೀತೆಗಳನ್ನು ಹಾಡಿದರು. ಶಿಕ್ಷಕರಾದ ಸ್ವಾಮಿನಾಥ ರಾಮಸ್ವಾಮಿ, ಬಸಪ್ಪ ಕೆ., ಪ್ರತಿಮಾ ಎನ್., ರೇಖಾ ಎಸ್., ಆನಂದ್ ಜಿ., ಸಂಗಮೇಶ ಸುಂಕದ, ಪ್ರಸಾದ್, ರಾಕೇಶ್‌ಕುಮಾರ್ ಇತರರು ಉಪಸ್ಥಿತರಿದ್ದರು. ಮಾನಸ ಕೊಂಚಿಗೇರಿ ರಾಷ್ಟ್ರೀಯ ವಿಜ್ಞಾನ ದಿನದ ಬಗ್ಗೆ ಭಾಷಣ ಮಾಡಿದರು.



ಹೂವಿನಹಡಗಲಿ: ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ವಿಜ್ಞಾನ ಶಿಕ್ಷಕಿ ಗೀತಾ ಪಿ.ಎಂ. ಮಾತನಾಡಿದರು. ಶಿಕ್ಷಕರಾದ ಸ್ವಾಮಿನಾಥ ರಾಮಸ್ವಾಮಿ, ಬಸಪ್ಪ ಕೆ., ಪ್ರತಿಮಾ ಎನ್., ರೇಖಾ ಎಸ್., ಆನಂದ್ ಜಿ., ಸಂಗಮೇಶ ಸುಂಕದ, ಪ್ರಸಾದ್, ರಾಕೇಶ್ ಕುಮಾರ್ ಇತರರು ಉಪಸ್ಥಿತರಿದ್ದರು.

ತ್ರಿಚಕ್ರ ವಾಹನ ವಿತರಣೆ | ಶಾಸಕಿ ಈ.ಅನ್ನಪೂರ್ಣ ಹೇಳಿಕೆ

ವಿಶಿಷ್ಟ ಚೇತನರನ್ನು ಪ್ರೋತ್ಸಾಹಿಸಿ

ಬಳ್ಳಾರಿ: ದೈಹಿಕ ಅಂಗವೈಕಲ್ಯಕ್ಕಿಂತ ಮಾನಸಿಕ ವೈಕಲ್ಯತೆ ದೊಡ್ಡದು. ವಿಶೇಷ ಚೇತನರನ್ನು ಕೀಳರಿಮೆಯಿಂದ ನೋಡದೆ, ಅವರಲ್ಲಿರುವ ವಿಶೇಷ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಸಂಡೂರು ಶಾಸಕಿ ಈ.ಅನ್ನಪೂರ್ಣ ಹೇಳಿದರು.

ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಕಾರ್ಮಿಕ ಇಲಾಖೆ ಹಾಗೂ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ಇಲಾಖೆ ಹಾಗೂ ವಿಶಿಷ್ಟಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಆಶ್ರಯದಲ್ಲಿ ಜಿಲ್ಲೆಯ ವಿವಿಧ ಕೈಗಾರಿಕೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ(ಸಿಎಸ್ ಆರ್)ಅಡಿ ಶುಕ್ರವಾರ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲೆಯ ವಿಶಿಷ್ಟಚೇತನರಿಗೆ ಮೋಟಾರ್ ಚಾಲಿತ ತ್ರಿಚಕ್ರ ವಾಹನಗಳನ್ನೂ ವಿತರಿಸಿ ಮಾತನಾಡಿದರು.

ದೇವರು ಒಂದು ಅಂಗವನ್ನು ವಿಕಲತೆ ಮಾಡಿದಾಗ ಮತ್ತೊಂದು ವಿಶೇಷ ಸಾಮರ್ಥ್ಯವನ್ನು ನೀಡಿರುತ್ತಾನೆ, ಅದನ್ನು ಗುರುತಿಸಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯ. ಪೋಷಕರು ಮತ್ತು ಕುಟುಂಬದ ಸದಸ್ಯರು ವಿಶೇಷಚೇತನರನ್ನು ಮೂಲೆ ಗುಂಪು ಮಾಡದೆ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ಸರ್ಕಾರವು ಇವರ ಅಭಿವೃದ್ಧಿಗೆ ಸದಾ ಬೆಂಬಲ ನೀಡುತ್ತಿದೆ ಎಂದರು.

ಜಿಲ್ಲೆಯಲ್ಲಿ ದೃಷ್ಟಿಹೀನರಿಗಾಗಿ ಬ್ರೈಲ್ ಲಿಪಿ ಕಲಿಸುವ ಶಿಬಿರಗಳನ್ನು ಆಯೋಜಿಸುವ ಅಗತ್ಯವಿದೆ. ಶ್ರವಣ ದೋಷವುಳ್ಳವರಿಗೆ ಅಗತ್ಯ ಉಪಕರಣಗಳನ್ನು ಒದಗಿಸುವ ಕಾರ್ಯಗಳು ನಿರಂತರವಾಗಿ ನಡೆಯಬೇಕು. ಮಕ್ಕಳಿಗೆ ಆರಂಭಿಕ ಹಂತದಲ್ಲೇ ಬ್ರೈಲ್ ಲಿಪಿಯ ತರಬೇತಿ ನೀಡುವುದರಿಂದ ಅವರ ಭವಿಷ್ಯಕ್ಕೆ ಅನುಕೂಲವಾಗಲಿದೆ ಎಂದು



> ವಿಶಿಷ್ಟಚೇತನರಿಗೆ ಸೌಲಭ್ಯಗಳನ್ನು ನೀಡುವಾಗ ಅಧಿಕಾರಿಗಳು ವಿಶೇಷ ಆದ್ಯತೆ ನೀಡಬೇಕು. ಧನಾತ್ಮಕ ಕಾಳಜಿಯ ಮೂಲಕ ಅವರಿಗೆ ಹೆಚ್ಚಿನ ಸೌಲತ್ತುಗಳನ್ನು ನೀಡಿದಾಗ ಮಾತ್ರ ಅವರು ಸಮಾಜದಲ್ಲಿ ಸಮಾನವಾಗಿ ಬದುಕಲು ಸಾಧ್ಯ.
> ■ ನಾಗೇಂದ್ರ ಪ್ರಸಾದ್ ಕೆ., ಜಿಲ್ಲಾಧಿಕಾರಿ

ಅಭಿಪ್ರಾಯಪಟ್ಟರು. ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿ ಮಾಡುವ ಮೂಲಕ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ-ಯುವತಿಯರ ಭವಿಷ್ಯ ಉಜ್ವಲವಾಗಲಿದೆ. ಜಿಲ್ಲೆಯನ್ನು ಹಸಿರುಕರಣ ಮಾಡುವಲ್ಲಿ ಹೆಚ್ಚು ಹೆಚ್ಚು ಗಿಡ ನೆಡಬೇಕಾಗಿದೆ. ತ್ರಿಚಕ್ರ ವಾಹನ ಬಳಸುವವರು ರಸ್ತೆ ಸಂಚಾರ ನಿಯಮ ಪಾಲಿಸುವ ಮೂಲಕ ನಿಧಾನವಾಗಿ ಸಂಚರಿಸಬೇಕು ಎಂದು ಆಶಿಸಿದರು.

ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿನ ವಿಶಿಷ್ಟಚೇತನರು ಸರ್ಕಾರದಿಂದಿರುವ ಸೌಲಭ್ಯಗಳು ವಂಚಿತರಾಗಿದ್ದಲ್ಲಿ ಕಚೇರಿಗೆ ಭೇಟಿ ನೀಡಿದರೆ ಅಗತ್ಯ ನೆರವು ನೀಡಲಾಗುವುದು ಎಂದು ತಿಳಿಸಿದರು. ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಮಾತನಾಡಿದರು.

ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಯೋಜನೆಯಡಿ ಸುಮಾರು 53 ವಿಕಲಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ವಿತರಿಸುವ ಗುರಿ ಹೊಂದಲಾಗಿದ್ದು, ಸಾಂಕೇತಿಕವಾಗಿ ಕೆಲವರಿಗೆ ಪ್ರಮಾಣಪತ್ರ ಹಾಗೂ ವಾಹನಗಳನ್ನು ಹಸ್ತಾಂತರಿಸಲಾಯಿತು.

ಸಂಡೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನೂರುದ್ದೀನ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ದಾವಣಗೆರೆಯ ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ.ಅವಿನಾಶ ನಾಯ್ಕ, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕ ವರುಣ ಆರ್., ಬಳ್ಳಾರಿ ಉಪವಿಭಾಗದ ಕಾರ್ಮಿಕ ಅಧಿಕಾರಿ ಎಸ್.ಜಿ.ಖೈನೂರು, ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ್ ಇತರರಿದ್ದರು.

ಕನ್ನಡ ಸಾಹಿತ್ಯಕ್ಕೆ ರತ್ನತ್ರಯರ ಕೊಡುಗೆ ಅಪಾರ

ಕೊಟ್ಟೂರು: ಹಳೆ ಕನ್ನಡದಲ್ಲಿ ಸಾಹಿತ್ಯ ರಚಿಸಿದ್ದ ರನ್ನ, ಪೊನ್ನ, ಕುಮಾರವ್ಯಾಸರು ನಮ್ಮ ನಾಡಿನ ಹೆಮ್ಮೆಯ ರತ್ನತ್ರಯರಾಗಿದ್ದಾರೆಂದು ಎಂದು ನಿವೃತ್ತ ಪ್ರೌಢ ಶಾಲೆ ಮುಖ್ಯ ಶಿಕ್ಷಕ ಎಚ್.ಎನ್ .ಪ್ರಭಾಕರ ಹೇಳಿದರು.

ಪಟ್ಟಣದ ಸರಕಾರಿ ನಿವೃತ್ತ ನೌಕರರ ಸಂಘದ ಸಭಾಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ನಾಲ್ಕು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

ಹಳೆಗನ್ನಡದ ಮಹತ್ವದ ಕವಿಗಳಾಗಿದ್ದ ಇವರು ಕ್ರಮವಾಗಿ ಆದ ಕವಿ ಸಾಹಸಭೀಮ ಮತ್ತು ರೂಪಕ ಸಾಮಾಟ್ರರೆಂದು ಪ್ರಸಿದ್ಧರಾಗಿದ್ದರು. 10ನೇ ಶತಮಾನದಲ್ಲಿನ ಪಂಪರನ್ನು ಕನ್ನಡದ ಆದಿಕವಿ ಎಂದು ಕರೆಯಾಲಾಗುತ್ತಿದೆ ಎಂದರು.

ಮತ್ತೊಬ್ಬ ಉಪನ್ಯಾಸಕ ಹಿರೇಹೆಗ್ಡಾಳ್ ಪ್ರೌಢ ಶಾಲೆ ಶಿಕ್ಷಕ ಕೆ.ಎ.ಕೊಟ್ರೇಶಪ್ಪ ಮಾತನಾಡಿ, 2 ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆಯಲ್ಲಿ ಆದಿಕವಿ ಪಂಪ ರನ್ನ ಕುಮಾರವ್ಯಾಸರಿಂದ ಹಿಡಿದು ಇಂದಿನ ಪೀಳಿಗೆಯ ಕವಿಗಳೆಲ್ಲರೂ ಅತ್ಯಮೂಲ್ಯ ಕೊಡುಗೆಗಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ಆಡುಭಾಷೆ, ಭಾವಗೀತೆ, ಕಾದಂಬರಿ ಮತ್ತು ವಾಸ್ತವಿಕತೆಯತ್ತ ಮುಖ ಮಾಡಿದ ನವೋದಯದೊಂದಿಗೆ ಪ್ರಾರಂಭವಾಗಿ ಪ್ರಗತಿಶೀಲ ಮತ್ತು ನವ್ಯ ಪಂಥಗಳ ಮೂಲಕ ವಿಕಸಗೊಂಡಿತು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ ಮಾತನಾಡಿ, ನಮ್ಮ ಕಸಾಪ ತಾಲೂಕು ಘಟಕಕ್ಕೆ ಅನೇಕರು ತಮ್ಮ ಹಿರಿಯರ ಸ್ಮರಣೆಗಾಗಿ ದತ್ತಿ ನೀಡಿ ಪೋಷಿಸಿದ್ದಾರೆ. ದತ್ತಿ ಉಪನ್ಯಾಸದೊಂದಿಗೆ ಅನೇಕ ಕನ್ನಡ ಕಾರ್ಯಗಳನ್ನು ಪರಿಷತ್ ನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ನಿವೃತ್ತ ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ಬಿ.ಕೆಂಚಪ್ಪ, ಸನ್ಮಾನಿತರಾದ ದತ್ತಿ ದಾನಿಗಳಾದ ಎಂ.ಶಿವಣ್ಣ, ಜೆಎಂ ಧನಂಜಯ, ಜೆಎಂ ಶಶಿಕುಮಾರ ಮಾತನಾಡಿದರು. ಕಸಾಪದ ಎಸ್. ರಾಜಣ್ಣ, ಶಸಾಪ ಅಧ್ಯಕ್ಷ ದೇವರಮನಿ ಕರಿಯಪ್ಪ, ಶಿಕ್ಷಕ ಅಜ್ಜಯ್ಯ ಇತರರು ಇದ್ದರು. ಕಸಾಪ ಗೌರವ ಖಜಾಂಚಿ ಈಶ್ವರಪ್ಪ ತುರಕಾಣಿ ಪ್ರಾಸ್ತಾವಿಕ ಮಾತನಾಡಿದರು. ಆರ್.ಪಿ.ವೀರಣ್ಣ ನಿರ್ವಹಿಸ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ದತ್ತಿ ದಾನಿಗಳನ್ನು ಸನ್ಮಾನಿಸಲಾಯಿತು.



ಇಲಾಖೆಗಳ ಮಧ್ಯೆ ಸಮನ್ವಯತೆ ಅಗತ್ಯ

ವಿಜಯನಗರ: ಜಿಲ್ಲೆಯಲ್ಲಿ ಮಾದಕ ವಸ್ತುಗಳ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಪೊಲೀಸ್, ಅಬಕಾರಿ ಮತ್ತು ಶಿಕ್ಷಣ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 'ಜಿಲ್ಲಾ ಮಟ್ಟದ ನಾರ್ಕೋಟಿಕ್ಸ್ ಸಮನ್ವಯ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕು ಸೇವನೆಯಿಂದ ದೈಹಿಕವಾಗಿ ಮಾನಸಿಕವಾಗಿ ಸಾಕಷ್ಟು ದುಷ್ಪರಿಣಾಮ ಬೀರಲಿದೆ. ಇದರಿಂದ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಸಂಕಷ್ಟಕ್ಕೆ ಸಿಲುಕಿ ಕುಟುಂಬ ಬೀದಿಗೆ ಬರಲಿದೆ. ಈ ನಿಟ್ಟಿನಲ್ಲಿ ಮದ್ಯ ಮಾದಕ ವಸ್ತುಗಳಿಂದ ದೂರವಿದ್ದು, ಮೌಲ್ಯಯುತವಾದ ಜೀವನ ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು.

ಶಾಲಾ ಮತ್ತು ಕಾಲೇಜುಗಳ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ತಂಬಾಕು ಅಥವಾ ಮಾದಕ ಪದಾರ್ಥಗಳ ಮಾರಾಟ ನಡೆಯದಂತೆ ನೋಡಿಕೊಳ್ಳಬೇಕು. ಶಾಲಾ ಕಾಲೇಜುಗಳ ತಡೆಗೋಡೆ ಅಥವಾ ಸೂಚನಾ ಫಲಕಗಳಲ್ಲಿ ತಂಬಾಕು ನಿಯಂತ್ರಣ ಕುರಿತು ಅಳವಡಿಸಬೇಕು. ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕಾರ್ಯಾಗಾರ ಆಯೋಜಿಸಿ ಜಾಗೃತಿ ಮೂಡಿಸಲು ತಿಳಿಸಿದರು.

ಜಿಲ್ಲೆಯಲ್ಲಿ ಔಷಧಿ ಅಂಗಡಿಗಳ ತಪಾಸಣೆ ನಡೆಸಬೇಕು. ಈ ವೇಳೆ ಯಾವುದೇ ರೀತಿಯ ಕಾನೂನು ಬಾಹಿರವಾಗಿ ಅಕ್ರಮವಾಗಿ ಮಾದಕ ವಸ್ತುಗಳ ಮಾರಾಟ ಮಾಡುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಸಾರಿಗೆ ಬಸ್‌ಗಳಲ್ಲಿ, ಬಸ್ ನಿಲ್ದಾಣ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಟ ಬಗ್ಗೆ ಎಚ್ಚರ ವಹಿಸಬೇಕು ಎಂದ ಅವರು, ಮಾದಕ ಮುಕ್ತ ಸಮಾಜ ನಿರ್ಮಾಣ ಒಂದು ಇಲಾಖೆಯ ಜವಾಬ್ದಾರಿಯಲ್ಲ, ಪ್ರತಿಯೊಬ್ಬರೂ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಎಎಸ್ಪಿ ಮಂಜುನಾಥ್, ಅಬಕಾರಿ ಉಪ ಆಯುಕ್ತ ಮಾದೇಶ್, ಆರೋಗ್ಯ ಇಲಾಖೆ ಅಧಿಕಾರಿ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಕೋರ್ಟ್ ಕಲಾಪ ವೀಕ್ಷಿಸಿದ ಶಾಲಾ ವಿದ್ಯಾರ್ಥಿಗಳು

ಹಗರಿಬೊಮ್ಮನಹಳ್ಳಿ: ಶಾಲೆಗಳ ವಿದ್ಯಾರ್ಥಿಗಳು ಸಿನಿಮಾದಲ್ಲಿ ಧಾರಾವಾಹಿಗಳಲ್ಲಿ ಬರುವ ಪೊಲೀಸ್ ಸ್ಟೇಶನ್, ಕೋರ್ಟ್ ಮತ್ತು ಬ್ಯಾಂಕ್ ಗಳನ್ನು ನೋಡಿರುತ್ತಾರೆ. ನಿಜ ಜೀವನದಲ್ಲಿ ಪೊಲೀಸ್, ಕೋರ್ಟ್ ಅಂದ್ರೆ ಭಯ ಪಡುತ್ತಾರೆ.

ಮಕ್ಕಲ್ಲಿರುವ ಭಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಗುರುವಾರ ತಾಲೂಕಿನ ಪಿಂಜಾರ್ ಹೆಗ್ಡಾಳು ಪಿ.ಎಂ.ಶ್ರೀ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಹಗರಿಬೊಮ್ಮನಹಳ್ಳಿ ನ್ಯಾಯಾಲಯಕ್ಕೆ ಕರೆದುಕೊಂಡು ಬರಲಾಗಿತ್ತು.

ಪಿಂಜಾರ್ ಹೆಗ್ಡಾಳು ಪಿ.ಎಂ.ಶ್ರೀ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಸುರೇಶ್ ಗೌಡ ಪಿ.ಜಿ. ಮಾತನಾಡಿ, ಪೊಲೀಸ್ ಸ್ಟೇಷನ್ ಮತ್ತು ಕೋರ್ಟ್ ಬಗ್ಗೆ

ವಿದ್ಯಾರ್ಥಿಗಳಲ್ಲಿರುವ ಭಯ ನಿವಾರಣೆಗೆ ಪ್ರತಿಕ್ಷತೆಯೊಂದಿಗೆ ನಮ್ಮ ಶಾಲೆಯ 108 ವಿದ್ಯಾರ್ಥಿಗಳಿಗೆ ನ್ಯಾಯಾಲಯದ ಕಲಾಪ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ಮೂಲಕ ವಿವಿಧ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯ ಒದಗಿಸುವ ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಸಿವಿಲ್ ಮತ್ತು ಕ್ರಿಮಿನಲ್ ಕೇಸ್ ದಾಖಲು ಇತರ ಕೋರ್ಟ್ ಮಾಹಿತಿ ಮತ್ತು ತೆರೆದ



ಮನೆ ಯೋಜನೆ ಅಡಿ ಮಕ್ಕಳಿಗೆ ಪೊಲೀಸ್ ಸ್ಟೇಷನ್ ಪರಿಚಯ ಪೊಲೀಸರ ಕಾರ್ಯನಿರ್ವಹಣೆ ಕೇಸ್ ದಾಖಲಿಸುವ ಕುರಿತು ಬಂದಿಖಾನೆ ಮಾಹಿತಿ ನೀಡಲಾಯಿತು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್ ಮಾತನಾಡಿ, ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಕೋರ್ಟ್ ಪೊಲೀಸ್ ಸ್ಟೇಷನ್‌ಗಳ ಪರಿಚಯಿಸುವ ಮೂಲಕ ಶಾಲಾ ಮಕ್ಕಳಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸುವುದರಿಂದ ಅಪರಾಧ ಕೃತ್ಯ ತಡೆಗೆ ಸಹಕಾರಿಯಾಗುತ್ತದೆ ಎಂದರು.

ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಕೆ.ಪ್ರಹ್ಲಾದ್, ವಕೀಲರಾದ ಶಿವಾನಂದ, ಬಸವರಾಜ, ಗುರುಬಸವರಾಜ, ಶಾಲೆಯ ಶಿಕ್ಷಕರಾದ ಆಂಜನೇಯ ಕೆಬಿ ಬಸವರಾಜ ಉದಯಕುಮಾರ ಶೋಭಾ ಇತರರಿದ್ದರು.

ಎಬಿವಿಪಿ ವರ್ತನೆ ಸರಿಯಲ್ಲ: ಕೆ.ಶ್ರೀಕಾಂತ್

ಬಳ್ಳಾರಿ: ಸಮೀಪದ ಶ್ರೀಧರಗಡ್ಡೆ ಗ್ರಾಮದ ಬಳಿಯ ಪ್ಯೂಪಿಲ್ ಟ್ರೀ ಶಾಲೆ-ಕಾಲೇಜು ಆವರಣದಲ್ಲಿ ಎಬಿವಿಪಿ ಸಂಘಟನೆಯು ಪ್ರತಿಭಟನೆ ಹೆಸರಿನಲ್ಲಿ ಶಾಲೆಯ ಕಿಟಕಿ, ಇತರೆ ಸಾಮಗ್ರಿಗಳನ್ನು ಧ್ವಂಸ ಮಾಡಿರುವುದು ಸರಿಯಲ್ಲ ಎಂದು ಬಳ್ಳಾರಿ ನಗರ ಯುವ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಕೆ.ಶ್ರೀಕಾಂತ್ ಆಕ್ರೋಶ ವ್ಯಕ್ತಪಡಿಸಿದರು. ನಗರದ ಕಾಂಗ್ರೆಸ್ ಜಿಲ್ಲಾ ಸಮಿತಿ (ನಗರ) ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪ್ಯೂಪಿಲ್ ಟ್ರೀ ಶಾಲೆಯ ವಿದ್ಯಾರ್ಥಿಗಳದ್ದು ಎನ್ನಲಾದ ವೀಡಿಯೊ ವೈರಲ್ ಆಗಿದ್ದು, ಅದರಲ್ಲಿ ಮಾದಕ ದ್ರವ್ಯ ಸೇವನೆಯ ದೃಶ್ಯ ಇವೆ ಎಂಬುದು ಎಬಿವಿಪಿ ಆರೋಪ. ಆದರೆ, ವೈರಲ್ ಆದ ವೀಡಿಯೊ ಅದೇ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳದ್ದೇ? ಅಥವಾ ಬೇರೆಯವರದ್ದೇ? ಈಗಿನದೇ? ಅಥವಾ ಹಳೆಯದೇ? ಎಂಬ ಬಗ್ಗೆ ಖಚಿತತೆ ಇಲ್ಲ, ಪರಿಸ್ಥಿತಿ ಹೀಗಿರುವಾಗ ಎಬಿವಿಪಿ ಕಾರ್ಯಕರ್ತರು ಏಕಾಏಕಿ ಶಾಲೆಗೆ ನುಗ್ಗಿ ಪ್ರತಿಭಟನೆಗೆ ಇಳಿದದ್ದು, ವಿವಿಧ ಅನುಮಾನಗಳಿಗೆ ಕಾರಣವಾಗಿದೆ. ಜಿಲ್ಲೆಯಲ್ಲಿ ಅಶಾಂತಿ ಮೂಡಿಸುವ, ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡುವ ಉದ್ದೇಶ ಇವರದ್ದಾಗಿದೆ



ಎಂಬುದು ಅನುಮಾನ ಮೂಡಿಸಿದೆ ಎಂದರು.

ನಗರ ವಿಧಾನಸಭಾ ಕ್ಷೇತ್ರದ ಸಮಿತಿ ಅಧ್ಯಕ್ಷ ಖಾದರ್ ಮಾತನಾಡಿ, ಮಾದಕ ದ್ರವ್ಯ ಸೇವಿಸಿದ ಆರೋಪ ಇದ್ದರೆ ಪೊಲೀಸ್ ಠಾಣೆಗೆ ದೂರು ನೀಡಬೇಕಿತ್ತು. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಗಮನಕ್ಕೆ ತರಬೇಕಿತ್ತು, ಆದರೆ, ಹೀಗೆ ಗಲಾಟೆ ಮಾಡಿರುವುದು ತಪ್ಪು ಎಂದರು. ಧರ್ಮಶ್ರೀ, ತಬರೇಜ್, ಗೋಪಾಲ್, ಫೈಜಲ್, ಫರಾಜ್, ಅಬ್ದುಲ್ ಬಾರಿ, ಅಂಜನಿ, ಕವಿತಾ, ಶಶಿಕುಮಾರ್, ಚರಣರಾಜ್ ಇತರರಿದ್ದರು.

ಹಿಂಗಾರಿನ ಬೆಳೆಗೂ ಖರೀದಿ ಕೇಂದ್ರ ತೆರೆಯಿರಿ

ಹಗರಿಬೊಮ್ಮನಹಳ್ಳಿ: ಈ ಭಾಗದಲ್ಲಿ ರಾಗಿ ಬೆಳೆಯುವ ರೈತರ ಸಂಖ್ಯೆ ಹೆಚ್ಚಾಗಿರುವುದರಿಂದ ಮುಂಗಾರಿ ಬೆಳೆಗಗಳಿಗೆ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆದಂತೆ ಹಿಂಗಾರಿನ ಬೆಳೆಗಳಿಗೂ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆದು ಒಬ್ಬ ರೈತರಿಗೆ 10 ಕ್ವಿಂಟಾಲ್ ನಿಗದಿಪಡಿಸುವುದನ್ನು 15 ಕ್ವಿಂಟಾಲ್ ವರೆಗೆ ತೆಗೆದುಕೊಂಡರೆ ರೈತರಿಗೆ ಅನುಕೂಲವಾಗಲಿದೆ ಸಂಬಂಧಿಸಿದವರ ಜೊತೆ ಚರ್ಚಿಸುವುದಾಗಿ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಶನಿವಾರದಂದು ಪಟ್ಟಣದ ಎಪಿಎಂಸಿ ಆವರಣದಲ್ಲಿ ಆಯೋಜಿಸಿದ್ದ 2025-26ನೇ ಸಾಲಿನ ಕೇಂದ್ರ ಸರ್ಕಾರವು ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ ಬೆಳೆ ಯೋಜನೆಯಡಿ ಭತ್ತ,ರಾಗಿ ಹಾಗೂ ಬಿಳಿ ಜೋಳದ ಬೆಳೆಗಳಿಗೆ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ರಾಗಿ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕ್ವಿಂಟಾಲ್ ರಾಗಿಗೆ 4886 ರೂ. ಖರೀದಿಸುವ ನೀವು ರೈತರಿಗೆ ಹಣವನ್ನು ನೀಡುವಾಗ ತಡ ಮಾಡಬೇಡಿ ಟೋಕನ್ ವ್ಯವಸ್ಥೆ ಮಾಡಿ ದಿನಕ್ಕೆ ಎಷ್ಟು ನಿಭಾಯಿಸುವುದು ಆಗುತ್ತೋ ಅಷ್ಟೆ ಕ್ವಿಂಟಾಲ್ ತೆಗೆದುಕೊಳ್ಳಿ ಕೆಲಸ ಕಾರ್ಯ ಬಿಟ್ಟು ಬಂದು ರೈತರು ನೀವು ತೂಕ ಹಾಕಿಕೊಳ್ಳಲು ಕಾಯುವಂತಾಗಬಾರದು ಕಡಿಮೆ ಟೋಕನ್ ಕೊಟ್ಟು ಅವಧಿ ಮುಗಿಯಿತು ಎಂದು ಹೇಳಬಾರದು ಎಂದು



ಅಧಿಕಾರಿಗೆ ಸೂಚಿಸಿದರು.

ವರಲಹಳ್ಳಿ ಸಹಕಾರಿ ಸಂಘದ ವ್ಯವಸ್ಥಾಪಕ ಬಸವರಾಜ ಮಾತನಾಡಿ, ಈಗಾಗಲೇ ತಾಲೂಕಿನ 1200 ರೈತರು 34 ಸಾವಿರ ಕ್ವಿಂಟಾಲ್ ನೋಂದಾಯಿಸಿದ್ದು 50 ಕೆ.ಜಿ ತೂಕಕ್ಕೆ 600 ಗ್ರಾಂ ಬಾಜು ತೆಗೆದುಕೊಳ್ಳಲಾಗುತ್ತದೆ. ರೈತರಿಗೆ ಆನ್‌ಲೈನ್‌ನಲ್ಲಿ ತಂಬು ತೆಗೆದುಕೊಂಡು ರೈತರ ಅಕೌಂಟ್ ಗಳಿಗೆ ಹಣವನ್ನು ಜಮ ಮಾಡಲಾಗುವುದು ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ, ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು ತಾಲೂಕ ಅಧ್ಯಕ್ಷ ವೈ ಮಲ್ಲಿಕಾರ್ಜುನ, ಮುಖಂಡರಾದ ಕಿನ್ನಾಳ ಸುಭಾಷ್, ಮೈನಹಳ್ಳಿ ಕೊಟ್ರೇಶಪ್ಪ, ಇಟಗಿ ಕೊಟ್ರೇಶ್, ಸಹಕಾರಿ ಸಂಘದ ಅಧ್ಯಕ್ಷ ಜೆ.ಎಂ ವಿನಾಯಕ ಪಿ. ಕೊಟ್ರೇಶಪ್ಪ,ಉದಯಕುಮಾರ ಕೊಟ್ರಗೌಡ ವೀರನಗೌಡ ಎಪಿಎಂಸಿ ಕಾರ್ಯದರ್ಶಿ ಎನ್ ಶೈಲಾ ,ಅಧಿಕಾರಿ ಮಂಜುನಾಥ ಸೇರಿದಂತೆ ರೈತರು ಮುಖಂಡರು ಸಿಬ್ಬಂದಿ ಇದ್ದರು.

ಸರ್ವಧರ್ಮ ಸಮನ್ವಯ ರಥೋತ್ಸವ

ವಿಜಯನಗರ: ಹೊಸಪೇಟೆ ನಗರದ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಸರ್ವ ಧರ್ಮ ಸಮನ್ವಯ ಮಹಾರಥೋತ್ಸವ ಶುಕ್ರವಾರ ಸಂಜೆ ಸಂಭ್ರಮ, ಸಡಗರದಿಂದ ನೆರವೇರಿತು.

ಕಳೆದ 9 ವರ್ಷಗಳಿಂದ ನಡೆಯುತ್ತಿರುವ ಸರ್ವಧರ್ಮ ರಥೋತ್ಸವದಲ್ಲಿ ದೇವರ ಮೂರ್ತಿ ಬದಲಿಗೆ ರಥದಲ್ಲಿ ಸರ್ವಧರ್ಮ ಗ್ರಂಥಗಳನ್ನಿರಿಸಿ ಸಮಾಳ, ನಂದಿಕೋಲು, ಚಂಡೆ, ಮದ್ದಳೆ ಮತ್ತಿತರೆ ಮಂಗಳ ವಾದ್ಯಗಳೊಂದಿಗೆ ಅದ್ದೂರಿಯಾಗಿ ತೇರು ಎಳೆಯಲಾಯಿತು.

ಶ್ರೀಮಠದ ಬಳಿ ಮೇನ್ ಬಜಾರ್‌ನಿಂದ ಪಾದಗಟ್ಟೆ ಆಂಜನೇಯ ದೇವಸ್ಥಾನದ ವರೆಗೆ ಸಾಗಿದ ಬಳಕ ಮತ್ತೆ ತನ್ನ ಮೂಲ ಸ್ಥಾನಕ್ಕೆ ಮರಳಿ ಸಂಪನ್ನಗೊಂಡಿತು.

ವಳಬಳ್ಳಾರಿಯ ಶ್ರೀಸುವರ್ಣಗಿರಿಯ ವಿರಕ್ತಮಠದ ಸಿದ್ಧಲಿಂಗ ಮಹಾಸ್ವಾಮಿಗಳು ರಥೋತ್ಸವಕ್ಕೆ ಚಾಲನೆ ನೀಡಿದರು. ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹಾಗೂ ವಿವಿಧ ಮಠಾಧೀಶರರು ಮತ್ತು ಗಣ್ಯರು ಪಾಲ್ಗೊಂಡಿದ್ದರು.



2040ಕ್ಕೆ ಮಾನವನನ್ನು ಚಂದಿರನೆಡೆಗೆ ಯೋಜನೆ

ವಿಜಯನಗರ: 2040ರ ವೇಳೆಗೆ ಮಾನವನನ್ನು ಚಂದಿರನೆಡೆಗೆ ಕಳಿಸುವ ಮಹತ್ವದ ಯೋಜನೆಯನ್ನು ಹೊಂದಿದ್ದೇವೆ ಎಂದು ಇಸ್ರೋದ ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರದ ವಿಜ್ಞಾನಿ ಡಾ.ಬಿ.ಎಚ್.ಎಂ.ದಾರುಕೇಶ್ ಹೇಳಿದರು.

ಹೊಸಪೇಟೆಯ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಉದ್ಘಾಟಿಸಿದ ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಅಂತರಿಕ್ಷ ಸಂಶೋಧನೆಯಲ್ಲಿ ಈಗಾಗಲೇ ಇಸ್ರೋ ಹಲವು ಮೈಲುಗಲ್ಲುಗಳನ್ನು ದಾಖಲಿಸಿದೆ. ಆದರ ಮುಂದುವರಿದ ಅಧ್ಯಯನಗಳು ನಿರಂತರವಾಗಿವೆ. ಭಾರತ ಸರ್ಕಾರವೂ ಕಾಲಕಾಲಕ್ಕೆ ಬೇಕಾದಷ್ಟು ಅನುದಾನವನ್ನೂ ನೀಡಿ ಪ್ರೋತ್ಸಾಹಿಸುತ್ತಿದ್ದು, ಅನುದಾನದ ಸಮಸ್ಯೆಯಿಲ್ಲ, ಅನ್ಯಗ್ರಹ ಜೀವಿಗಳ ಬಗ್ಗೆ ಇನ್ನೂ ಸಂಶೋಧನೆ ನಡೆಯುತ್ತಿದ್ದು, ಅದರ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರು. 'ಸೂಕ್ಷ್ಮ ಗುರುತ್ವಾಕರ್ಷಣ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ನೀಡಿದರು. ವಿದ್ಯಾರ್ಥಿಗಳನ್ನು ಕುರಿತು ಶೈಕ್ಷಣಿಕ, ವಿಜ್ಞಾನ, ಕೈಗಾರಿಕಾ ಕ್ಷೇತ್ರದ ಹಾಗೂ ನವೋದ್ಯಮಗಳಲ್ಲಿನ ಅವಕಾಶಗಳ ಬಗ್ಗೆ ಚರ್ಚಿಸಿದರು. ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮೂಲಭೂತ ವಿಜ್ಞಾನ ವಿಭಾಗದ ಡೀನ್ ಹಾಗೂ ಪ್ರಾಧ್ಯಾಪಕರಾದ ಡಾ.ಖಡ್ಕೆ ಉದಯ ಕುಮಾರ್, ಪಿ.ಡಿ.ಐ.ಟಿ ಕಾಲೇಜಿನ ಪ್ರಾಂಶುಪಾಲ ಡಾ.ಯು.ಎಂ.ರೋಹಿತ್ ಮಾತನಾಡಿದರು. ಉಪಪ್ರಾಂಶುಪಾಲ ಡಾ.ಪಾರ್ವತಿ ಕಡ್ಲಿ,



> ಅಂತರಿಕ್ಷಾ ಅಧ್ಯಯನ ಹಾಗೂ ಸಂಶೋಧನೆಯಲ್ಲಿ ಎಐ ತಂತ್ರಜ್ಞಾನ ನೆರವಾಗಲಿದೆ. ಎಐ ತಂತ್ರಜ್ಞಾನವನ್ನು ರೂಪಿಸಿಕೊಂಡು ಡಾಟಾ ಅನಾಲಿಸಿಸ್ ಮಾಡಬಹುದು ಉಪಗ್ರಹದಿಂದ ತೆಗೆದ ಛಾಯಾಚಿತ್ರದಲ್ಲಿ ಮೋಡ ಹಾಗೂ ಮಂಜುಗಡ್ಡೆಯು ಒಂದೇ ರೀತಿಯಲ್ಲಿ ಕಂಡರೂ ಅವುಗಳ ನಡುವಿನ ವ್ಯತ್ಯಾಸವನ್ನು ಎಐ ತಂತ್ರಜ್ಞಾನದ ಮೂಲಕ ಅರಿಯಬಹುದು.
> ■ ಡಾ.ಬಿ.ಎಚ್.ಎಂ ದಾರುಕೇಶ್, ಇಸ್ರೋದ ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರದ ವಿಜ್ಞಾನಿ

ಐಕ್ಯೂಎಸಿಯ ಸಂಚಾಲಕ ಡಾ.ಶಿವಕೇಶವ್ ಕುಮಾರ್, ಡೀನ್ ಡಾ.ಮಂಜುಳಾ ಎಸ್.ಡಿ, ಕಾರ್ಯಕ್ರಮದ ಸಂಚಾಲಕ ಡಾ.ಎನ್ ಪ್ರಭುದೇವ್, ಡಾ.ನಾಗರಾಜ್ ಎಂ.ಕೆ., ವಿವಿಧ ವಿಭಾಗದ ಮುಖ್ಯಸ್ಥರು ಹಾಗೂ ಬೋಧಕರು ಉಪಸ್ಥಿತರಿದ್ದರು.